"ತಿದ್ದುಪಡಿಯಾಗದ ಪ್ರತಿ/**unedited copy**/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

**(159ನೇ ಅಧಿವೇಶನ)**

**ಸೋಮವಾರ, 24ನೇ ಆಗಸ್ಟ್ 2026**

## ವಿಷಯಾನುಕ್ರಮಣಿಕೆ (INDEX)

1. **ವಿರೋಧ ಪಕ್ಷದ ಸದಸ್ಯರಿಂದ ಸದನದ ಕಾರ್ಯಕಲಾಪಗಳಿಗೆ ಅಡಚಣೆಯಾಗುತ್ತಿರುವುದರಿಂದ ನಿಯಮ 327ರ ಅಡಿಯಲ್ಲಿ ಕ್ರಮಕ್ಕೆ ಆಡಳಿತ ಪಕ್ಷದ ಸದಸ್ಯರಿಂದ ಒತ್ತಾಯ.**

- ಶ್ರೀ ಐವನ್ ಡಿ'ಸೋಜಾ
- ಡಾ: ಯತೀಂದ್ರ. ಎಸ್ (ಸಭಾನಾಯಕರು)

2. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**880 – ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಸಿಂಧನೂರು ತಾಲ್ಲೂಕಿಗೆ ಹೆಚ್ಚುವರಿ ವಸತಿ ನಿಲಯಗಳನ್ನು ಮಂಜೂರು ಮಾಡುವ ಬಗ್ಗೆ**

- ಶ್ರೀ ಬಸನಗೌಡ ಬಾದರ್ಲಿ
- ಶ್ರೀ ಶಿವರಾಜ ಎಸ್.ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**925 – ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳಲ್ಲಿನ ಶೈಕ್ಷಣಿಕ ಯೋಜನೆಗಳ ಬಗ್ಗೆ**

- ಶ್ರೀ ಶಿವಕುಮಾರ್ ಕೆ.
- ಶ್ರೀ ಕೆ.ಹೆಚ್.ಮುನಿಯಪ್ಪ (ಸಮಾಜ ಕಲ್ಯಾಣ ಸಚಿವರು)

**891 – ತಾಲ್ಲೂಕು ಮಟ್ಟದ ವಾಲ್ಮೀಕಿ ಭವನಗಳ ಬಗ್ಗೆ**

- ಶ್ರೀ ಎನ್.ಎಸ್.ಬೋಸರಾಜು
- ಶ್ರೀ ಬಿ.ರಘುಮೂರ್ತಿ (ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು)

**806 – ಕಲಬುರಗಿ ಜಿಲ್ಲೆಯ ಶಾಲಾ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿರುವ ಕುರಿತು**

- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**949 – ಪರಿಸರ ಪರಿಹಾರ ನಿಧಿಯನ್ನು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ**

– ಡಾ: ಕೆ.ಗೋವಿಂದರಾಜ್

– ಶ್ರೀ ರಾಮಲಿಂಗಾರೆಡ್ಡಿ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

**ಆ) ತಡೆಹಿಡಿಯಲಾದ ಪ್ರಶ್ನೆ**

**52 – ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಹಂತದವರೆಗೆ ಭಾರತದ ಸಂವಿಧಾನವನ್ನು ಕಡ್ಡಾಯ ಪಠ್ಯಕ್ರಮವಾಗಿ ಅಳವಡಿಸುವ ಕುರಿತು**

– ಶ್ರೀ ಶಿವಣ್ಣ ಬಿ.ಎಸ್.

– ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

೩. ನಿಯಮ 5೮ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು

**ಅ) ಕರಾವಳಿ ಭಾಗದ ಕ್ರೈಸ್ತ ಸಮುದಾಯದವರು 'ತೆನೆ ಹಬ್ಬ' ಆಚರಿಸುವ ಸಂದರ್ಭದಲ್ಲಿ ಸರ್ಕಾರಿ ರಜೆ ಘೋಷಣೆ ಮಾಡುವ ಕುರಿತು.**

– ಶ್ರೀ ಐವನ್ ಡಿ'ಸೋಜಾ

– ಡಾ: ಯತೀಂದ್ರ. ಎಸ್ (ಸಭಾನಾಯಕರು)

**ಆ) ಕಲ್ಯಾಣ ಕರ್ನಾಟಕ ಹಾಗೂ ವಾಯುವ್ಯ ಕರ್ನಾಟಕ ಭಾಗಗಳಲ್ಲಿ ಹಳೆಯ/ಅಸುರಕ್ಷಿತ ಬಸ್‌ಗಳ ಸಂಚಾರ ಮತ್ತು ಮಾಸಿಕ ಬಸ್ ಪಾಸ್ ದರದಲ್ಲಿನ ತಾರತಮ್ಯವನ್ನು ಸರಿಪಡಿಸುವ ಕುರಿತು.**

– ಶ್ರೀ ತಿಪ್ಪಣ್ಣಪ್ಪ ಕಮಕನೂರ

– ಡಾ: ಯತೀಂದ್ರ. ಎಸ್ (ಸಭಾನಾಯಕರು)

**ಇ) ಅಭಯಾರಣ್ಯ ವ್ಯಾಪ್ತಿಯಲ್ಲಿರುವ ವಸತಿ ಪ್ರದೇಶಕ್ಕೆ ವಿನಾಯಿತಿ ನೀಡುವ ಕುರಿತು.**

– ಶ್ರೀ ಮಂಜುನಾಥ್ ಭಂಡಾರಿ

– ಶ್ರೀ ರಾಮಲಿಂಗಾರೆಡ್ಡಿ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

**ಈ) ರಾಯಚೂರು ಜಿಲ್ಲೆಯಲ್ಲಿ ಒಂದೇ ತಿಂಗಳಲ್ಲಿ ಮೂವರು ಪರಿಶಿಷ್ಟ ಜಾತಿ ಸಮುದಾಯದವರು ಕೊಲೆಯಾಗಿದ್ದು, ಈ ಕುಟುಂಬಗಳಿಗೆ ಸೂಕ್ತ ಪರಿಹಾರ ಒದಗಿಸುವ ಕುರಿತು.**

– ಶ್ರೀ ಬಸನಗೌಡ ಬಾದರ್ಲಿ

– ಡಾ: ಯತೀಂದ್ರ. ಎಸ್ (ಸಭಾನಾಯಕರು)

**ಉ) ರಾಜ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟುವ ಕುರಿತು.**

– ಶ್ರೀ ಕೆ.ಅಬ್ದುಲ್ ಜಬ್ಬರ್

– ಡಾ: ಯತೀಂದ್ರ. ಎಸ್ (ಸಭಾನಾಯಕರು)

**ಊ) ಶಿವಮೊಗ್ಗ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದು, 04 ವರ್ಷಗಳಿಂದ ವಸೂಲಿಯಾಗದೇ ಬಾಕಿ ಉಳಿದಿರುವ ರೂ.121 ಕೋಟಿಯನ್ನು ವಸೂಲಿ ಮಾಡುವ ಕುರಿತು.**

- ಶ್ರೀಮತಿ ಬಲ್ಕೀಸ್ ಬಾನು
- ಡಾ: ಯತೀಂದ್ರ. ಎಸ್ (ಸಭಾನಾಯಕರು)

**ಖ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ವ್ಯವಸ್ಥೆಯಲ್ಲಿ ತೆಗೆದುಕೊಳ್ಳುವ ದಿಡೀರ್ ನಿರ್ಧಾರಗಳಿಂದ ಶಿಕ್ಷಕರು ಗೊಂದಲಕ್ಕೆ ಈಡಾಗಿರುವ ಕುರಿತು.**

- ಶ್ರೀ ಕೆ.ಅಬ್ದುಲ್ ಜಬ್ಬರ್
- ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**4. ಕಾರ್ಯದರ್ಶಿಯವರ ವರದಿ**

**5. ಚುನಾವಣಾ ಪ್ರಸ್ತಾವ**

**6. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಮುನ್ಸಿಪಾಲಿಟಿಗಳ (ತಿದ್ದುಪಡಿ) ವಿಧೇಯಕ, 2026**

- ಶ್ರೀ ಹೆಚ್.ಸಿ.ಬಾಲಕೃಷ್ಣ (ಪೌರಾಡಳಿತ ಸಚಿವರು)
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್.)
- ಶ್ರೀ ರಾಮೋಜಿಗೌಡ
- ಶ್ರೀ ಐವನ್ ಡಿ'ಸೋಜಾ
- ಶ್ರೀ ಯು.ಟಿ.ಖಾದರ್ (ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
- ಡಾ: ಯತೀಂದ್ರ ಎಸ್. (ಸಭಾನಾಯಕರು)
- ಶ್ರೀ ಶಿವಕುಮಾರ್ ಕೆ.

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಆ) ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2026**

- ಡಾ: ಯತೀಂದ್ರ.ಎಸ್ (ನಗರಾಭಿವೃದ್ಧಿ ಸಚಿವರು)
- ಶ್ರೀ ಐವನ್ ಡಿ'ಸೋಜಾ
- ಶ್ರೀಮತಿ ಬಲ್ಕೀಸ್ ಬಾನು

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಇ) ಕರ್ನಾಟಕ ಅಪಾರ್ಟ್‌ಮೆಂಟ್ (ಮಾಲೀಕತ್ವ ಮತ್ತು ನಿರ್ವಹಣೆ) ವಿಧೇಯಕ, 2026**

- ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)
- ಡಾ: ಯತೀಂದ್ರ. ಎಸ್ (ಸಭಾನಾಯಕರು)
- ಶ್ರೀ ಶಿವಕುಮಾರ್ ಕೆ.
- ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್.)

- ಶ್ರೀ ರಾಮೋಜಿಗೌಡ
- ಶಿವಣ್ಣ ಬಿ.ಎಸ್.
- ಶ್ರೀಮತಿ ಬಲ್ಕೀಸ್ ಬಾನು

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**7. ವರದಿಗಳನ್ನೊಪ್ಪಿಸುವುದು**

**8. ಗಮನ ಸೆಳೆಯುವ ಸೂಚನೆಗಳು**

**ಅ) ರಾಜ್ಯದಲ್ಲಿ ಗೊಲ್ಲ ಸಮುದಾಯಕ್ಕೆ ಪ್ರತ್ಯೇಕ ಯಾದವ (ಗೊಲ್ಲ) ನಿಗಮ ಸ್ಥಾಪಿಸುವ ಕುರಿತು**

- ಶ್ರೀ ಎಂ.ನಾಗರಾಜು
- ಶ್ರೀ ಶಿವರಾಜ ಎಸ್.ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**(ಭೋಜನ ವಿರಾಮ)**

**9. ಪ್ರಕಟಣೆ**

**"ಕರ್ನಾಟಕ ವಿಧಾನ ಸಭೆಯು ಅಂಗೀಕರಿಸಿರುವ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ಕೋರಿರುವ ಕುರಿತು."**

**10. ಕಾರ್ಯಕಲಾಪಗಳ ಸಲಹಾ ಸಮಿತಿ ನಿರ್ಣಯದನ್ವಯ ವಿಧೇಯಕಗಳ ಪರಿಶೀಲನೆ ಹಾಗೂ ಚರ್ಚೆಗೆ ಸಮಯ ನಿಗದಿ ಮಾಡುವುದು ಹಾಗೂ ನಿಯಮಾವಳಿಯನ್ವಯ ಚರ್ಚೆಗೆ ಅವಕಾಶ ಮಾಡಿಕೊಡಬೇಕೆನ್ನುವ ಕುರಿತು**

- ಶ್ರೀ ಎಸ್.ಎಲ್.ಭೋಜೇಗೌಡ
- ಡಾ: ಯತೀಂದ್ರ ಎಸ್. (ಸಭಾನಾಯಕರು)
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಯು.ಟಿ.ಖಾದರ್ (ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
- ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು)

**11. ಗಮನ ಸೆಳೆಯುವ ಸೂಚನೆ**

**ಅ) ಕರಾವಳಿ ಕರ್ನಾಟಕ ಭಾಗದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ಕೈಗೊಂಡಿರುವ ವಿವಿಧ ಅಭಿವೃದ್ಧಿ ಯೋಜನೆಗಳ ಬಗ್ಗೆ.**

- ಶ್ರೀ ಐವನ್ ಡಿ'ಸೋಜಾ
- ಡಾ: ಯತೀಂದ್ರ. ಎಸ್ (ಸಭಾನಾಯಕರು) (ಇಂಧನ ಹಾಗೂ ಪ್ರವಾಸೋದ್ಯಮ ಸಚಿವರ ಪರವಾಗಿ)

ಶ್ರೀ ಪಿ.ವಿ.ಮೋಹನ್

**12. ವರದಿಯನ್ನೊಪ್ಪಿಸುವುದು**

**13. ನಿಯಮ 330ರ ಮೇರೆಗೆ ಚರ್ಚೆ**

**"ಬೀದರ್ ಜಿಲ್ಲೆ ಸೇರಿದಂತೆ ಗಡಿ ಭಾಗದ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಮರಾಠಿ ಮಾಧ್ಯಮದ ಭಾಷಿಕ ಶಿಕ್ಷಕರಿಗೆ ಅವಕಾಶ ನೀಡುವ ಕುರಿತು."**

- ಶ್ರೀಮತಿ ಬಲ್ಕೀಸ್ ಬಾನು
- ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)
- ಶ್ರೀ ಎಂ.ನಾಗರಾಜು
- ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್.)

**14. ಕಾರ್ಯದರ್ಶಿಯವರ ವರದಿ**

**15. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2026**

- ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಆ) ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2026**

- ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಇ) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2026**

- ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಉಪ ಮುಖ್ಯಮಂತ್ರಿಗಳು ಮತ್ತು ಕಂದಾಯ ಸಚಿವರ ಪರವಾಗಿ)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಈ) ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2026**

- ಶ್ರೀ ಕೃಷ್ಣ ಬೈರೇಗೌಡ (ಬೆಂಗಳೂರು ನಗರಾಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರ ಪರವಾಗಿ)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಉ) ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕ, 2026**

ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಊ) ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕ, 2026**

ಡಾ॥ ಯತೀಂದ್ರ ಎಸ್. (ನಗರಾಭಿವೃದ್ಧಿ ಸಚಿವರು) (ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರ ಪರವಾಗಿ)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಋ) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ, 2026**

– ಡಾ॥ ಯತೀಂದ್ರ ಎಸ್. (ನಗರಾಭಿವೃದ್ಧಿ ಸಚಿವರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

16. ನಿಯಮ 72ಎ ಅಡಿಯಲ್ಲಿ ಪ್ರಸ್ತಾಪಿಸಿದ ಶೂನ್ಯವೇಳೆ ಸೂಚನೆಗಳಿಗೆ ಸರ್ಕಾರದ ಲಿಖಿತ ಉತ್ತರಗಳು

ಅ) ಶಿಕ್ಷಣದಿಂದ ಮಕ್ಕಳು ವಂಚಿತರಾಗಬಾರದೆಂಬ ದೃಷ್ಟಿಯಿಂದ ನಿರಂತರ ಆಪ್ ಮೂಲಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿಯನ್ನು ಹೆಚ್ಚಿಸುವ ಕುರಿತು.

– ಡಾ॥ ಯತೀಂದ್ರ ಎಸ್ (ಸಭಾನಾಯಕರು)

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾಗಶಃ ಅರಣ್ಯ ಬಿಕ್ಕಟ್ಟಿಗೆ ಶಾಶ್ವತ ಪರಿಹಾರ ಒದಗಿಸುವ ಕುರಿತು.

– ಡಾ॥ ಯತೀಂದ್ರ ಎಸ್ (ಸಭಾನಾಯಕರು)

ಇ) ಎಲ್ ನಿನೋ ಮತ್ತು ಲಾನಿನಾ ಸೇರಿದಂತೆ ಹವಾಮಾನ ವೈಪರೀತ್ಯದ ಹಿನ್ನೆಲೆಯಲ್ಲಿ ಕರಾವಳಿ ಕರ್ನಾಟಕದಲ್ಲಿ ಉಳಿದ ಮಳೆ ನೀರನ್ನು ಸಂರಕ್ಷಿಸಿ ಅಂತರ್ಜಲ ಮರುಪೂರ್ಣಗೊಳಿಸುವ ಕುರಿತು.

– ಡಾ॥ ಯತೀಂದ್ರ ಎಸ್ (ಸಭಾನಾಯಕರು)

ಈ) ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜನ್ನು ಮಂಜೂರು ಮಾಡುವ ಕುರಿತು.

– ಡಾ॥ ಯತೀಂದ್ರ ಎಸ್ (ಸಭಾನಾಯಕರು)

17. ನಿಯಮ 330ರ ಮೇರೆಗೆ ಚರ್ಚೆ

ಅ) "ರಾಜ್ಯದಲ್ಲಿನ ಕಲ್ಲು ಗಣಿಗಾರಿಕೆಯಲ್ಲಿ ಅನಧಿಕೃತವಾಗಿ ಸಾದಾ ಕಟ್ಟಡ ಕಲ್ಲು ಸಾಗಾಣಿಕೆ ಮಾಡುವವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮದ ಕುರಿತು."

– ಶ್ರೀ ಎಫ್.ಹೆಚ್. ಜಕ್ಕಪ್ಪನವರ್

– ಡಾ॥ ಯತೀಂದ್ರ ಎಸ್ (ಸಭಾನಾಯಕರು) (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರ ಪರವಾಗಿ)

**18. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಎ) ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2026**

- ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಕಾರ್ಮಿಕ ಮತ್ತು ಉದ್ಯೋಗ ಸಚಿವರ ಪರವಾಗಿ)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**19. ನಿಯಮ 330ರ ಮೇರೆಗೆ ಚರ್ಚೆ**

**ಆ) ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣಕ್ಕಾಗಿ ಕರ್ನಾಟಕ ರಾಜ್ಯದ ಲಕ್ಷಾಂತರ ಭಕ್ತಾದಿಗಳು ನೀಡಿದ ದೇಣಿಗೆ ಹಾಗೂ ಕಾಣಿಕೆಯನ್ನು ದುರುಪಯೋಗ ಪಡಿಸಿಕೊಂಡಿರುವ ಕುರಿತು.**

- ಶ್ರೀ ಕೆ. ಶಿವಕುಮಾರ್
- ಶ್ರೀ ಎನ್.ಎಸ್.ಬೋಸರಾಜು
- ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು)
- ಡಾ: ಯತೀಂದ್ರ ಎಸ್. (ಸಭಾನಾಯಕರು)
- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಶ್ರೀ ಬಸನಗೌಡ ಬಾದರ್ಲಿ
- ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್.)
- ಶ್ರೀ ಎಫ್.ಹೆಚ್.ಜಕ್ಕಪ್ಪನವರ್
- ಶ್ರೀ ಎಂ.ನಾಗರಾಜು
- ಶ್ರೀ ಶಿವಣ್ಣ ಬಿ.ಎಸ್.

**19. ಪ್ರಕಟಣೆ**

**"ಕರ್ನಾಟಕ ವಿಧಾನ ಸಭೆಯು ಅಂಗೀಕರಿಸಿರುವ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ಕೋರಿರುವ ಕುರಿತು."**

**20 ಕಾರ್ಯದರ್ಶಿಯವರ ವರದಿ**

**21. ಸಭೆಯ ಮುಂದಿಡಲಾದ ಕಾಗದಪತ್ರಗಳು**

**22. ವಿತ್ತೀಯ ಕಾರ್ಯಕಲಾಪ**

**23. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಏ) ಕರ್ನಾಟಕ ಧನವಿನಿಯೋಗ (ಸಂಖ್ಯೆ: 03) ವಿಧೇಯಕ, 2026**

– ಶ್ರೀ ಡಿ.ಕೆ. ಶಿವಕುಮಾರ್ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಐ) ಕರ್ನಾಟಕ ಸಕಾಲ ಸೇವೆಗಳ (ತಿದ್ದುಪಡಿ) ವಿಧೇಯಕ, 2026**

– ಶ್ರೀ ಡಿ.ಕೆ. ಶಿವಕುಮಾರ್ (ಮುಖ್ಯಮಂತ್ರಿಗಳು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**24. ರಾಜ್ಯದ ಬರ ಪರಿಸ್ಥಿತಿಯ ಕುರಿತು ಉಪ ಮುಖ್ಯಮಂತ್ರಿಗಳ ಹೇಳಿಕೆ**

– ಡಾ: ಜಿ.ಪರಮೇಶ್ವರ (ಉಪ ಮುಖ್ಯಮಂತ್ರಿಗಳು)

**25. ರಾಜ್ಯದ ಹಿತಾಸಕ್ತಿ ಹಾಗೂ ಬರದ ನಿರ್ವಹಣೆ ಕುರಿತು ಮುಖ್ಯಮಂತ್ರಿಗಳ ಹೇಳಿಕೆ**

**26. ಸಾರಾಂಶ**

<<<<>>>>

(822) 24-8-2026 11.00 ಡಿಎಸ್-ಎಂಡಿ

# ಕರ್ನಾಟಕ ವಿಧಾನ ಪರಿಷತ್ತು

ಸೋಮವಾರ, 24ನೇ ಆಗಸ್ಟ್ 2026

ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಬೆಳಗ್ಗೆ 11 ಗಂಟೆ 05 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿಯವರಾದ ಶ್ರೀ ಸಲೀಂ ಅಹ್ಮದ್ ಅವರು ಪೀಠದಲ್ಲಿ ಉಪಸ್ಥಿತರಾದರು.

**(ಸದನ ಪ್ರಾರಂಭವಾಗುತ್ತಿದ್ದಂತೆ ವಿರೋಧ ಪಕ್ಷದ ಮಾನ್ಯ ಸದಸ್ಯರು ತಮ್ಮ ಸ್ಥಾನದಿಂದ ಎದ್ದು ನಿಂತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

1. **ವಿರೋಧ ಪಕ್ಷದ ಸದಸ್ಯರಿಂದ ಸದನದ ಕಾರ್ಯಕಲಾಪಗಳಿಗೆ ಅಡಚಣೆಯಾಗುತ್ತಿರುವುದರಿಂದ ನಿಯಮ 327ರ ಅಡಿಯಲ್ಲಿ ಕ್ರಮಕ್ಕೆ ಆಡಳಿತ ಪಕ್ಷದ ಸದಸ್ಯರಿಂದ ಒತ್ತಾಯ.**

- - - - -

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿಯಮ 327ರ ಅನ್ವಯ ನಾನು ಈಗಾಗಲೇ ಸಭಾನಾಯಕರಿಗೆ ಪತ್ರ ಕೊಟ್ಟಿದ್ದೇನೆ. ಯಾರು ಗಲಾಟೆ ಮಾಡುತ್ತಿದ್ದಾರೆ, ಅವರನ್ನು ಒಂದು ದಿವಸದ ಮಟ್ಟಿಗೆ ಸದನದಲ್ಲಿ ತಡೆಯಬಹುದು ಅಥವಾ ಸದನದಿಂದ ಹೊರಗೆ ಹಾಕಬಹುದು ಅಲ್ಲವೇ.

**ಸಭಾಪತಿಯವರು:-** ಒಂದು ನಿಮಿಷ ಕುಳಿತುಕೊಳ್ಳಿ. ತಮಗೆ ಅವಕಾಶ ಕೊಡುತ್ತೇವೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಮ್ಮ ಯಾವ ಪ್ರಶ್ನೆಗಳಿಗೂ ಉತ್ತರ ಕೊಡುವುದಕ್ಕಾಗುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೆ, ನಾನು ಒಂದು ಬಾರಿ ಹೇಳಿದ ಮೇಲೆ ಕುಳಿತುಕೊಳ್ಳಬೇಕು. ದಯವಿಟ್ಟು ಕುಳಿತುಕೊಳ್ಳಿ. ಸದನ ಸರಿಯಾಗಿ ನಡೆಯಬೇಕು ಎಂದು ಮೊನ್ನೆ ಕಾರ್ಯಕಲಾಪಗಳ ಸಲಹಾ ಸಮಿತಿ ಮೀಟಿಂಗ್‌ನಲ್ಲಿ ಚರ್ಚೆ ಕೂಡ ಆಯಿತು. ನಾನು ಮನವಿ ಮಾಡಿಕೊಂಡೆ. ನಮ್ಮ ಸಂಸದೀಯ ವ್ಯವಹಾರಗಳ ಸಚಿವರಾದ ಮಾನ್ಯ ಕೃಷ್ಣ ಬೈರೇಗೌಡರು ಕೂಡ ಮನವಿ ಮಾಡಿಕೊಂಡರು. ನಾನು ಇವತ್ತು ಬೆಳಗ್ಗೆ 10 ಗಂಟೆಗೆ Floor Leaders meeting ಕೂಡ ಕರೆದಿದ್ದೆ. ಆ ಮೀಟಿಂಗ್‌ಗೆ ನಮ್ಮ ವಿರೋಧ ಪಕ್ಷದ ನಾಯಕರಿಗೆ, ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ, ಮತ್ತು ಭೋಜೇಗೌಡರಿಗೂ ಕೂಡ ನಾನು ಕರೆದಿದ್ದು, ಬೆಳಗ್ಗೆ 10 ರಿಂದ 11 ಗಂಟೆಯವರೆಗೂ ನಾನು ಕಾಯುತ್ತಿದ್ದೆ. ಆದರೂ ಯಾರೂ ಕೂಡ ಬರಲಿಲ್ಲ. ನಮ್ಮ ರೂಲಿಂಗ್ ಪಾರ್ಟಿಯವರು ಬಂದಿದ್ದರು. ಸಭಾನಾಯಕರು, ಶ್ರೀ ಹರಿಪ್ರಸಾದ್‌ರವರು, ಶ್ರೀ ಎನ್. ಎಸ್. ಬೋಸರಾಜ್ ರವರು, ಶ್ರೀ ಎಸ್.ರವಿಯವರು, ಶ್ರೀ ಐವನ್ ಡಿ'ಸೋಜಾರವರು ಕೂಡ ಬಂದಿದ್ದರು. ಆದರೆ ವಿರೋಧ ಪಕ್ಷದವರು ಯಾರೂ ಬರಲಿಲ್ಲ. ಬೆಳಗ್ಗೆ 7 ಗಂಟೆ 52 ನಿಮಿಷಕ್ಕೆ ನಾನು ವಿರೋಧ ಪಕ್ಷದ ನಾಯಕರಾದ ಛಲವಾದಿ ನಾರಾಯಣಸ್ವಾಮಿ ಅವರಿಗೆ ಕೂಡ ನಾನು ಫೋನ್ ಮಾಡಿದ್ದೆ, 7 ಗಂಟೆ 54

ನಿಮಿಷಕ್ಕೆ ವಿರೋಧ ಪಕ್ಷದ ಮುಖ್ಯ ಸಚೇತಕರಾದ ರವಿಕುಮಾರ್ ಅವರಿಗೂ ಕೂಡ ನಾನು ಕರೆದಿದ್ದೆ. ಇಲ್ಲಿಯವರೆಗೂ ಈ ಸಭೆಗೆ ಬರುವುದಿಲ್ಲ ಎಂದು ಯಾರೂ ಕೂಡ ನನಗೆ ಫೋನ್ ಮಾಡಲಿಲ್ಲ. ಸದನ ಪ್ರಾರಂಭಿಸಲು ನಾವು 11 ಗಂಟೆಗೆ ಬೆಲ್ ಹಾಕಬೇಕಾಗುತ್ತದೆ. ಆದರೂ ಕೂಡ ಯಾರೂ ಬರಲಿಲ್ಲ. ಆದ್ದರಿಂದ ನಾನು ಸದನ ನಡೆಸಬೇಕಾಗುತ್ತದೆ. ನಮ್ಮ ಆಡಳಿತ ಪಕ್ಷದ ಸದಸ್ಯರುಗಳು ಕೂಡ ನಮ್ಮ ಹಕ್ಕಿಗೆ ಚ್ಯುತಿ ಬರುತ್ತಿದೆ ನಮ್ಮ ಪ್ರಶ್ನೆಗಳಿಗೆ, ಗಮನ ಸೆಳೆಯುವ ಸೂಚನೆಗಳಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲವೆಂದು ಒಂದು ಮನವಿಯನ್ನು ಸಹ ಕೊಟಿದ್ದಾರೆ. ಆದರೆ ನಾವು ಸದನವನ್ನು ನಡೆಸಬೇಕಾಗುತ್ತದೆ. ಆದ್ದರಿಂದ ನಾನು ಈಗ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳುತ್ತಿದ್ದೇನೆ. ಅದಕ್ಕೂ ಮೊದಲು ಮಾನ್ಯ ಸಭಾನಾಯಕರು ಏನಾದರೂ ಹೇಳಬೇಕೆಂದರೆ ಹೇಳಬಹುದು.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ನಮಗೆ ಮಾತನಾಡಲು ಅವಕಾಶ ಮಾಡಿಕೊಡಿ ಎಂದು ಕೇಳಿದ್ದೆ.

**ಶ್ರೀ ಯತೀಂದ್ರ ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಬೇಕಾದಷ್ಟು ಸಮಸ್ಯೆಗಳಿವೆ. ಇವತ್ತು ರಾಜ್ಯ ಹಿಂದೆಂದೂ ಕಾಣದೇ ಇರುವಂಥ ಬರದ ಪರಿಸ್ಥಿತಿಯಲ್ಲಿ ನರಳುತ್ತಿದೆ. ಇವತ್ತು ಜನರು ಬರದ ಪರಿಸ್ಥಿತಿಯಿಂದ ತತ್ತರಿಸಿ ಹೋಗಿದ್ದಾರೆ. ಕುಡಿಯುವ ನೀರಿನ ಸಮಸ್ಯೆ ಎಲ್ಲಾ ಕಡೆ ಜಾಸ್ತಿ ಆಗುತ್ತಿದೆ. ಅದರ ಬಗ್ಗೆ ಚರ್ಚೆ ಮಾಡಬೇಕು. ಶಿಕ್ಷಣ ಕ್ಷೇತ್ರದಲ್ಲಿ ಬಹಳಷ್ಟು ಸಮಸ್ಯೆಗಳಿವೆ. ಎಲ್ಲಾ ಎಂ.ಎಲ್.ಸಿ.ಗಳು ಕೂಡ ಅವರವರ ಕ್ಷೇತ್ರದಲ್ಲಿ ಬೇಕಾದಷ್ಟು ಸಮಸ್ಯೆಗಳಿವೆ, ಅದನ್ನು ಸದನದಲ್ಲಿ ಚರ್ಚಿಸಬೇಕು ಎಂದು ಕಾಯುತ್ತಿದ್ದಾರೆ. ಆದರೆ ಇವತ್ತು ವಿರೋಧ ಪಕ್ಷದವರು ಇದ್ಯಾವುದರ ಬಗ್ಗೆಯೂ ಕೂಡ ಚಿಂತೆ ಇಲ್ಲದೆ, ರಾಜ್ಯದ ಬಗ್ಗೆ ಚಿಂತೆ ಇಲ್ಲದೆ, ರಾಜ್ಯದ ಜನರ ಬಗ್ಗೆ ಚಿಂತೆ ಇಲ್ಲದೆ ಸದನ ನಡೆಯೋದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲ. ನೀವು ಕೂಡ ಪರಿಪರಿಯಾಗಿ ಅವರನ್ನು ಕೇಳಿಕೊಂಡಿರಿ. ಕಳೆದ ಒಂದು ವಾರದಿಂದಲೂ ಕೂಡ, ಕಳೆದ ಐದು ದಿವಸಗಳಿಂದ ಏನು ಸದನ ನಡೆಯಿತೋ, ಆಗ ಪರಿಪರಿಯಾಗಿ ಕೇಳಿಕೊಂಡೆವು.

**ಡಾ|| ಟಿ.ಎ.ಶರವಣ:-** ಮಾನ್ಯ ಸಭಾನಾಯಕರೇ, ಕುಡಿಯುವ ನೀರಿನ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ನೀವು ನೀರು ಕೊಡಿ, ಯಾರು ಬೇಡವೆಂದು ಹೇಳಿದ್ದಾರೆ.

**ಸಭಾಪತಿಯವರು:-** ನಾನು ಅವರಿಗೆ ಅವಕಾಶ ಕೊಟ್ಟಿದ್ದೀನಿ. ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

**ಶ್ರೀ ಯತೀಂದ್ರ ಎಸ್:-** ಮಾನ್ಯ ಸಭಾಪತಿಯವರೇ, ಅವರನ್ನ ಪರಿಪರಿಯಾಗಿ ಸದನ ನಡೆಸಿಕೊಡಬೇಕು ಎಂದು ಹೇಳಿ ಮೊನ್ನೆ ಬಿ.ಎ.ಸಿ. ಮೀಟಿಂಗ್‌ನಲ್ಲೂ ಕೂಡ ನೀವು ಎಲ್ಲರನ್ನೂ ಕರೆದು ಅಧಿಕೃತವಾಗಿ ಅವರಲ್ಲಿ ಮನವಿ ಮಾಡಿಕೊಂಡಿದ್ದೀರಿ. ರಾಜ್ಯದ ಮುಖ್ಯಮಂತ್ರಿಗಳೂ ಆ ಮನವಿ ಮಾಡಿಕೊಂಡಿದ್ದಾರೆ. ನಮ್ಮ ಸಂಸದೀಯ ವ್ಯವಹಾರಗಳ ಸಚಿವರೂ ಅವರಲ್ಲಿ ಮನವಿ ಮಾಡಿಕೊಂಡಿದ್ದಾರೆ. ಇವತ್ತು ಕೂಡ ನೀವು Floor Leaders meeting ಕರೆದಿದ್ದೀರಿ. ಒಬ್ಬರೂ ಕೂಡ ಬರಲಿಲ್ಲ. ಮುಕ್ಕಾಲು ಗಂಟೆ ನೀವು ಮತ್ತೆ ಸಂಸದೀಯ ವ್ಯವಹಾರಗಳ ಸಚಿವರು ಅವರಿಗೋಸ್ಕರ ಕಾಯ್ದಿದ್ದಾರೆ. ಬೆಳಗ್ಗೆ ಖುದ್ದಾಗಿ ನೀವು ವಿರೋಧ ಪಕ್ಷದ ನಾಯಕರಿಗೆ ಫೋನ್ ಮಾಡಿ ಅವರಿಗೆ ವಿನಂತಿ ಮಾಡಿಕೊಂಡಿದ್ದೀರಾ ಸಭೆಗೆ ಬಂದು ಮಾಡಿ ಚರ್ಚೆ ಮಾಡೋಣ ಎಂದು ಹೇಳಿದ್ದೀರಿ. ಆದರೂ ಇದ್ಯಾವುದರ ಬಗ್ಗೆಯೂ ಪರಿವೆ ಇಲ್ಲ ಅವರಿಗೆ. ಇವರಿಗೆ ಸದನ ನಡೀಬೇಕಾಗಿಲ್ಲ, ಜನರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗಿಲ್ಲ, ಕೇವಲ ರಾಜಕೀಯ ಮಾಡಬೇಕು. ಇವತ್ತು ವಿಧಾನಸಭೆ ಚಲೋ ಮಾಡಿದ್ದಾರೆ, ಏತಕ್ಕೆ? ಮೊನ್ನೆ ಶನಿವಾರ, ಭಾನುವಾರ ಸದನ ನಡೆಯುತ್ತಿರಲಿಲ್ಲ, ಅವತ್ತು ಮಾಡಬಹುದಾಗಿತ್ತು. ಆದರೆ ಇವತ್ತು ಸದನ ನಡೆಯುವ ದಿನ ಮಾಡುತ್ತಿದ್ದಾರೆ. ರಾಜಕೀಯ ಮಾಡುತ್ತಿದ್ದಾರೆಂದು ಗೊತ್ತಾಗುತ್ತದೆ. ದಯವಿಟ್ಟು ಇವರ tactics ಗಳಿಗೆ ನೀವು ಬಗ್ಗಬೇಡಿ, ಸದನವನ್ನು ನಡೆಸಿ. ಸಾಧ್ಯವಾದರೆ ಯಾರು ಹೆಚ್ಚು ಗಲಾಟೆಯನ್ನು ಮಾಡುತ್ತಾರೆ, ಅವರಿಗೆ ನಿಯಮ 327ರ ಅನ್ವಯ ಒಬ್ಬೊಬ್ಬರನ್ನು ಹೊರಗಡೆ ಹಾಕಿ ಜನಗಳ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಿ. ಇದು ಶಾಸಕರ ಹಕ್ಕಿಗೆ ಚ್ಯುತಿಯಾಗುತ್ತದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಿಯಮ 327ರ ಪ್ರಕಾರ "ಸದಸ್ಯರನ್ನು ಕೆಲಕಾಲ ಸದನಕ್ಕೆ ಬರದಂತೆ ತಡೆ ಹಿಡಿಯುವುದು:- ಸಭಾಪತಿಯವರು ತಾವು ಅವಶ್ಯವೆಂದು ಭಾವಿಸಿದ ಪಕ್ಷದಲ್ಲಿ ಯಾರೇ ಸದಸ್ಯರು ಸಭಾಪತಿಯವರ ಅಧಿಕಾರದ ವಿಷಯದಲ್ಲಿ ಲಕ್ಷ್ಯವಿಲ್ಲದೆ ತಿರಸ್ಕಾರ ಮಾಡುತ್ತಾರೋ ಅಥವಾ ಸದನದ ಕಾರ್ಯಕಲಾಪಗಳಿಗೆ ಒಂದೇ ಸಮನಾಗಿ ಮತ್ತು ಉದ್ದೇಶಪೂರ್ವಕವಾಗಿ ಅಡಚಣೆಯನ್ನುಂಟು ಮಾಡುವುದರ ಮೂಲಕ ಸದನದ ನಿಯಮಗಳಿಗೆ ವಿರೋಧವಾಗಿ ವರ್ತಿಸುತ್ತಾರೋ ಆ ಸದಸ್ಯರ ಹೆಸರನ್ನು ಸದನಕ್ಕೆ ತಿಳಿಸಿ ಹೊರಗಡೆ ಹಾಕಬೇಕು" ಎಂದು ಇದೆ. ಅವರನ್ನು ಹೊರಗಡೆ ಹಾಕಿ. ನಿಯಮ 327ರ ಪ್ರಕಾರ ಸದನದಿಂದ ಹೊರಗಡೆ ಹಾಕಲಿಕ್ಕೆ ಅವಕಾಶವಿದೆ. ಮಾನ್ಯ ಸಭಾನಾಯಕರು ಸಹ ಬಹಳಷ್ಟು ಹೇಳಿದ್ದಾರೆ. ನಾನು ವಿನಂತಿ ಮಾಡುತ್ತೇನೆ, ನಿಯಮ 327ರ ಪ್ರಕಾರ ಅವರನ್ನು ಸದನದಿಂದ ಹೊರಗಡೆ ಹಾಕಬೇಕೆಂದು ನಾನು ಕೋರುತ್ತೇನೆ. This is the rule of the law. ಅವರನ್ನು ಹೊರಗಡೆ ಹಾಕಿ.

(ಮುಂದು)

**(823) 24/08/2026 11:10 ಎಸ್‌ಪಿಆರ್/ಎಂಡಿ (ಸಭಾಪತಿಯವರ ಉಪಸ್ಥಿತಿ)**

**ಡಾ॥ ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ನೀವು ವಿರೋಧ ಪಕ್ಷದವರಿಗೆ ಬಹಳಷ್ಟು ಸಹಾನುಭೂತಿಯಿಂದ ಅವರನ್ನು ಹೊರಗೆ ಕಳುಹಿಸದೆ ಇದ್ದೀರಿ. ಆದರೂ ಕೂಡ ಅವರಿಗೆ ನಿಮ್ಮ ಬಗ್ಗೆ ಒಂದಿಷ್ಟು ಗೌರವವಿಲ್ಲದೇ, ಸದನದ ಬಗ್ಗೆ ಗೌರವವಿಲ್ಲದೇ, ಹೀಗೆ ಪ್ರತಿಭಟನೆ ಮಾಡುತ್ತಲೇ ಇದ್ದಾರೆ. ನೀವು ಅವರಿಗೆ ಯಾವುದೇ ವಸ್ತುಗಳನ್ನು ಅಥವಾ placard ಗಳನ್ನು ಸದನದೊಳಗೆ ತರಬಾರದು ಎಂದು ಹೇಳಿದರೂ ಸಹ, placard ಗಳನ್ನು ತಂದು ನಿಯಮಗಳ ಉಲ್ಲಂಘನೆ ಮಾಡುತ್ತಲೇ ಇದ್ದಾರೆ. ದಯಮಾಡಿ ತಾವು ಅವರಿಗೆ ಅವಕಾಶವನ್ನು ಮಾಡಿ ಕೊಡಬೇಡಿ.

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಸರ್ಕಾರದ ವಿರುದ್ಧ ನಿರಂತರವಾಗಿ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ನಾವು ಈ ಸದನಕ್ಕೆ ಬರುವ ಮೂಲ ಉದ್ದೇಶ ಏನೆಂದರೆ, ಜನರ ಹಾಗೂ ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚಿಸುವುದಕ್ಕಾಗಿ ನಾವು ಇಲ್ಲಿಗೆ ಬರುತ್ತೇವೆ. ಪ್ರಜಾಪ್ರಭುತ್ವ ಎಂದರೆ, ಕೇವಲ ಚುನಾವಣೆಗಳು ಹಾಗೂ ಇವುಗಳಲ್ಲಿ ಗೆದ್ದು ಸರ್ಕಾರವನ್ನು ಮಾಡುವುದು ಅಥವಾ ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುವುದೇ ಅಲ್ಲ. ಪ್ರಭಾಪ್ರಭುತ್ವದ ನಿಜವಾದ ಅರ್ಥವೆಂದರೆ, ಮುಕ್ತವಾದ ಚರ್ಚೆ ಆಗಬೇಕು. ವಿಚಾರ ವಿಮರ್ಶೆಯಾಗಬೇಕು ಹಾಗೂ ಭಿನ್ನಾಭಿಪ್ರಾಯಗಳಿಗೆ ಗೌರವ ಮತ್ತು ಎಲ್ಲರ ಅಭಿಪ್ರಾಯಗಳನ್ನು ಆಲಿಸಿ, ಸಮಗ್ರ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು ಎನ್ನುವುದೇ ಪ್ರಜಾಪ್ರಭುತ್ವದ ಆಶಯಗಳಾಗಿವೆ. ಚರ್ಚೆ ನಮ್ಮನ್ನು ವಿರೋಧಿಸುವುದಲ್ಲ. ಸರಿಯಾದ ದಾರಿಯನ್ನು ಕಂಡುಕೊಳ್ಳುವುದಕ್ಕಾಗಿ ವಿಚಾರ ವಿಮರ್ಶೆ ಸಂಘರ್ಷಕ್ಕೆ ಅಲ್ಲ. ಸತ್ಯವನ್ನು ಅರಿಯುವುದಕ್ಕಾಗಿ ನಿರ್ಧಾರ, ಯಾರೋಬ್ಬರದ್ದು ಆಗಿರದೇ, ಸಾಮೂಹಿಕ ಚಿಂತನೆಯ ಫಲವಾಗಿರಬೇಕು. ನಾವು ಭಿನ್ನಾಭಿಪ್ರಾಯಗಳಿಗೆ ಭಯಬೀಳಬಾರದು. ಭಿನ್ನಾಭಿಪ್ರಾಯ ಪ್ರಜಾಪ್ರಭುತ್ವದ ಜೀವಾಳ. ಭಿನ್ನಾಭಿಪ್ರಾಯದ ನಂತರವೂ ಒಗ್ಗಟ್ಟಿನಿಂದ ನಿರ್ಧಾರವನ್ನು ತೆಗೆದುಕೊಳ್ಳುವುದೇ ಅನುಷ್ಠಾನಗೊಳಿಸುವ ಮನೋಭಾವನೆ ನಮ್ಮಲ್ಲಿ ಇರಬೇಕು. ಚರ್ಚೆಯಿಲ್ಲದ ನಿರ್ಧಾರ ಏಕಪಕ್ಷೀಯವಾಗಿರಬಾರದು. ವಿಚಾರ ವಿಮರ್ಶೆ ಇಲ್ಲದೇ ನಿರ್ಧಾರ ಅಪೂರ್ಣವಾಗಬಾರದು. ಆದರೆ, ಮುಕ್ತ ಚರ್ಚೆ ಮತ್ತು ಆಳವಾದ ವಿಚಾರ ವಿಮರ್ಶೆಯ ನಂತರ ಕೈಗೊಳ್ಳುವ ನಿರ್ಧಾರ ಹೆಚ್ಚು ಪರಿಣಾಮಕಾರಿಯಾಗಿ ಹಾಗೂ ಜವಾಬ್ದಾರಿಯುತವಾಗಿ ಇರುತ್ತದೆ ಎನ್ನುವುದು ಮಾತು. ಆದ್ದರಿಂದ

ಪ್ರಜಾಪ್ರಭುತ್ವವನ್ನು ಮತ್ತಷ್ಟು ಬಲಪಡಿಸಲು ಚರ್ಚೆ, ವಿಚಾರ ವಿಮರ್ಶೆ, ನಿರ್ಧಾರ, ಅನುಷ್ಠಾನ ಎಂಬ ನಾಲ್ಕು ಹಂತಗಳನ್ನು ನಾವು ಪಾಲಿಸಬೇಕಾಗುತ್ತದೆ. ಇವರಿಗೆ ಏನಾದರೂ ಗಂಭೀರವಾದ ವಿಚಾರಗಳಿದ್ದರೆ, ಯಾರಾದರೂ ಅಪರಾಧಿಗಳಿದ್ದರೆ ಅಥವಾ ಭ್ರಷ್ಟಾಚಾರದಲ್ಲಿದ್ದರೆ, ಅದರ ಬಗ್ಗೆ ಒಂದು ನೋಟೀಸ್ ಅನ್ನು ಕೊಟ್ಟು, ಈ ಕುರಿತಾಗಿ ಕೂಲಂಕಷವಾಗಿ ಚರ್ಚೆ, ವಿಮರ್ಶೆಗಳನ್ನು ಮಾಡೋಣ. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು; ಅದಕ್ಕೆ ನಾವೂ ಸಹ ಒಪ್ಪುತ್ತೇವೆ. ಚರ್ಚೆಯಾಗದೇ ಅಥವಾ ಯಾವುದೇ ಒಂದು ರೀತಿಯ ನೋಟೀಸ್ ಅನ್ನು ಕೊಡದೇ, ಚರ್ಚೆಯಾಗಬೇಕು ಎಂದು ಇಲ್ಲಸಲ್ಲದ ಆರೋಪಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಈ ಸದನದ ಗೌರವವನ್ನು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಇದು 'ಚಿಂತಕರ ಚಾವಡಿ' ಹಾಗೂ 'ಹಿರಿಯರ ಮನೆ' ಎಂದು ಹೇಳಿಸಿಕೊಂಡಿದೆ. ಈ ಸದನದ ಸದಸ್ಯರಾದ ನಾವು ಬಾಲಿಶ ಚರ್ಚೆಗಳನ್ನು ಅಥವಾ ಘೋಷಣೆಗಳನ್ನು ಕೂಗಿದರೆ ಏನೂ ಆಗುವುದಿಲ್ಲ. ಆದ್ದರಿಂದ ತಮ್ಮ ಮೂಲಕ ಮನವಿ ಮಾಡಿಕೊಳ್ಳುವುದು ಏನೆಂದರೆ, ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಪ್ರಸ್ತಾಪಿಸಿದ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡಳಿಕೆಯ ನಿಯಮಗಳ ನಿಯಮ 320 ರ ಮೂಲಕ ಹಾಗೂ ಸಭಾನಾಯಕರು ಏನು ಹೇಳಿದ್ದಾರೆ ಅದರಂತೆ, ಸದನವನ್ನು ನಡೆಸಿಕೊಡುವುದಕ್ಕೆ ಅವಕಾಶ ಮಾಡಿಕೊಡುವಂತೆ ನಾನು ತಮ್ಮಲ್ಲಿ ವಿನಂತಿಯನ್ನು ಮಾಡುತ್ತೇನೆ.

**ಸಭಾಪತಿಯವರು:-** ಶ್ರೀ ಡಿ.ಎಸ್.ಅರುಣ್ ರವರೇ ನೀವು ಮಾತನಾಡಬೇಕೆಂದರೆ, ನಿಮ್ಮ ಕಡೆಯವರು ಕುಳಿತುಕೊಳ್ಳಬೇಕು ಹಾಗೂ ಘೋಷಣೆಗಳನ್ನು ಕೂಗುವುದನ್ನು ನಿಲ್ಲಿಸಬೇಕು. ಇಲ್ಲವೆಂದಾದರೆ ನಿಮಗೆ ಮಾತನಾಡಲು ಅವಕಾಶವನ್ನು ನೀಡುವುದಿಲ್ಲ. ಹೀಗೆ ಮಾಡಿದರೆ ಏನು ಪ್ರಯೋಜನ ಎಂದು ಹೇಳಿ. ನಿಮ್ಮ ಪಕ್ಷದವರೇ ಪ್ರಶ್ನೆಗಳನ್ನೂ ಸಹ ಕೇಳುತ್ತಾರೆ; ಅವರೇ ಘೋಷಣೆಗಳನ್ನು ಕೂಗುತ್ತಾರೆ, ಮಾತನಾಡಲು ಅವಕಾಶವನ್ನೂ ಕೇಳುತ್ತಾರೆ.

**ಡಾ॥ ಯತೀಂದ್ರ ಎಸ್.(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಅವರು ತಮ್ಮ ಪಕ್ಷದವರಿಗಾದರೂ ಸಹ ಸಹಕಾರವನ್ನು ಮಾಡಲಿ.

**ಸಭಾಪತಿಯವರು:-** ಸದನವನ್ನು ನಡೆಯುವುದಕ್ಕೆ ಬಿಡುವುದಿಲ್ಲ. ಸಭಾನಾಯಕರೇ ಒಂದು ನಿಮಿಷ ಕುಳಿತುಕೊಳ್ಳಿ. ನೀವೇ ಘೋಷಣೆಗಳನ್ನು ಕೂಗುತ್ತೀರಿ, ಮಾತನಾಡಲು ಅವಕಾಶವನ್ನೂ ಕೇಳುತ್ತೀರಿ. ಎರಡೂ ಆಗುವುದಿಲ್ಲ. ನಾನು ಆರನೇಯ ದಿನ ಇದನ್ನು ಕೇಳುತ್ತಿದ್ದೇನೆ. ನಿಮಗೆಲ್ಲಾ ಕೈಮುಗಿದು ಕೇಳುತ್ತೇನೆ. (ಈ ಹಂತದಲ್ಲಿ ಸಭಾಪತಿಯವರು ಕೈ ಮುಗಿದರು) ದಯಮಾಡಿ ನೀವುಗಳೆಲ್ಲಾ ಕುಳಿತುಕೊಂಡು, ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ. ನೀವುಗಳು ಕೇಳಿರುವ ಪ್ರಶ್ನೆಗಳು ಬಂದಿವೆ. ಇವತ್ತಿನ ಕಲಾಪದಲ್ಲಿ ಗಮನ ಸೆಳೆಯುವ ಸೂಚನೆಗಳಿವೆ.

**ಶ್ರೀ ಶರಣಗೌಡ ಬಯ್ಯಾಪುರ:-** ಮಾನ್ಯ ಸಭಾಪತಿಯವರೆ, ಚರ್ಚೆಯಲ್ಲಿ ಭಾಗವಹಿಸಲು ಅವರಿಗೆ ಅವಕಾಶವಿದ್ದು, ಅದರಲ್ಲಿ ಅವರು ಭಾಗಿಯಾಗಲಿ. ಇಲ್ಲವೆಂದಾದರೆ, ಹೊರಗಡೆ ಹೋಗಲಿ, ಸುಮ್ಮನೆ ಏಕೆ

ಅಡ್ಡಿಪಡಿಸುತ್ತಾರೆ? ಇಲ್ಲವೆಂದಾದರೆ, ಅವರು boycott ಮಾಡಲಿ; ಸದನದಿಂದ ಹೊರಗಡೆ ಹೋಗಲಿ; ಸದನವು ನಡೆಯುವಂತಾಗಲಿ.

**ಸಭಾಪತಿಯವರು:–** ನೀವು ಹೀಗೆ ಏಕೆ ಹಠ ಮಾಡುತ್ತಿದ್ದೀರಾ ಎಂಬುದು ಅರ್ಥವಾಗುತ್ತಿಲ್ಲ. ಇವತ್ತು ಬೆಳಗ್ಗೆ ನಾನು ಸಭೆ ಕರೆದರೆ, ಅದಕ್ಕೆ ಯಾರೂ ಸಹ ಬರಲಿಲ್ಲ; ಇವರು ಏಕೆ ಹೀಗೆ ಮಾಡಿದರು ಎನ್ನುವುದು ನನಗೆ ಅರ್ಥವೂ ಆಗಲಿಲ್ಲ.

**(ಗೊಂದಲ)**

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದವರು ದಿನವೂ ಹೀಗೆ ಮಾಡಿದರೆ ಹೇಗೆ? ಅವರುಗಳೇ ಕುಳಿತುಕೊಂಡು, ಅವರೇ ಮಾತನಾಡಲಿ; ನಾವೇ ಕೇಳಿಸಿಕೊಳ್ಳುತ್ತೇವೆ.

**ಡಾ॥ ಯತೀಂದ್ರ ಎಸ್.:–** ಮಾನ್ಯ ಸಭಾಪತಿಯವರೆ, ಹೈ ಕಮ್ಯಾಂಡ್ **(ಗೊಂದಲ)** ಅವರು ಚರ್ಚೆಯಲ್ಲಿ ಭಾಗವಹಿಸಲಿ.

**ಸಭಾಪತಿಯವರು:–** ಸಭಾನಾಯಕರೇ ಒಂದು ನಿಮಿಷ. ಶ್ರೀ ಟಿ.ಎ.ಶರವಣ ರವರೇ ನೀವು ಮಾತನಾಡಿ. ನೀವು ಮಾತನಾಡಬೇಕೆಂದರೆ, ನಿಮ್ಮ ಪಕ್ಷದವರು ಸುಮ್ಮನೆ ಕುಳಿತುಕೊಳ್ಳಬೇಕು. ನೀವು ಮಾತನಾಡುವುದು, ಅವರು ಘೋಷಣೆಗಳನ್ನು ಕೂಗುವುದು ಇದು ಸರಿಯಲ್ಲ. ಹೀಗಾಗಿ ನೀವು ಮಾತನಾಡಬೇಕೆಂದರೆ, ಅವರುಗಳು ಸುಮ್ಮನೆ ಕುಳ್ಳಿತುಕೊಳ್ಳಬೇಕು. ನೀವು ಮಾತನಾಡುವುದಿಲ್ಲವೇ? ನಾನು ಶ್ರೀ ಟಿ.ಎ.ಶರವಣ ರವರನ್ನು ಮಾತನಾಡಲು ಅವರ ಹೆಸರನ್ನು ಕರೆದಿದ್ದೇನೆ. ಅವರು ಮಾತನಾಡಬೇಕೆಂದರೆ, ವಿರೋಧ ಪಕ್ಷದವರೆಲ್ಲಾ ಸುಮ್ಮನಿರಬೇಕು.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೆ, ಬರದ ಅಧ್ಯಯನಕ್ಕಾಗಿ ವಿರೋಧ ಪಕ್ಷದವರೇ ಹೋಗಿದ್ದಾರೆ. ಇವರುಗಳೇ ಬರದ ಬಗ್ಗೆ ಎಲ್ಲಾ ಕಡೆಗಳಲ್ಲಿ ಹೋಗಿ inspection ಮಾಡಿದ್ದಾರೆ. ಇವರುಗಳೇ ಒಂದು ಸಮಿತಿಯನ್ನು ಮಾಡಿ ರಾಜ್ಯದಾದ್ಯಂತ ಓಡಾಡಿದ್ದಾರೆ; ಇದರ ಬಗ್ಗೆಯಾದರೂ ಸಹ ಅವರು ಇಲ್ಲಿ ಹೇಳಬೇಕಿತ್ತು. ವಿರೋಧ ಪಕ್ಷದವರೇ ತಾಲ್ಲೂಕು ಕೇಂದ್ರಗಳಿಗೆ ಹೋಗಿ, ಬರ ಅಧ್ಯಯನ ಮಾಡಿದ್ದಾರೆ. ವಿರೋಧ ಪಕ್ಷದ ನಾಯಕರು, ಮುಖಂಡರುಗಳು ಸಮಿತಿಯನ್ನು ಮಾಡಿಕೊಂಡು ಅಧ್ಯಯನಕ್ಕಾಗಿ ಹೋಗಿದ್ದರು. ಇದರ ಬಗ್ಗೆ ಏನು ಮಾಡಿದ್ದಾರೆ ಹಾಗೂ ರಾಜ್ಯದಲ್ಲಿ ಏನು ಆಗಿದೆ ಎನ್ನುವುದಾದರೂ ಅವರು ಹೇಳಬೇಕು. ಇರುವ ಸಮಸ್ಯೆಗಳ ಬಗ್ಗೆ ನಾವು ಆಡಳಿತ ಪಕ್ಷದವರು ಮಾತನಾಡುವುದಿಲ್ಲ; ವಿರೋಧ ಪಕ್ಷದವರೇ ಮಾತನಾಡಲಿ. ಶ್ರೀ ಟಿ.ಎ.ಶರವಣ ರವರೂ ಸಹ ಬರದ ಬಗ್ಗೆ ಮಾತನಾಡಲಿ. ವಿರೋಧ ಪಕ್ಷದವರು ಹೀಗೆ ಮಾಡುವುದು ಬೇಡ. ಇವರುಗಳು ಹೀಗೆ ಸುಮ್ಮನೆ ಸಮಯವನ್ನು ವ್ಯರ್ಥ ಮಾಡುವುದು ಬೇಡ; ಏಕೆಂದರೆ ಇದು ಬಹಳ ಅಮೂಲ್ಯವಾದುದು. ಒಂದೊಂದು ನಿಮಿಷಗಳ ಕಾಲ ಸದನವನ್ನು ನಡೆಸುವುದಕ್ಕೆ ಲಕ್ಷಾಂತರ ರೂಪಾಯಿಗಳಷ್ಟು ಹಣ ಖರ್ಚಾಗುತ್ತದೆ. ಇಡೀ ರಾಜ್ಯದ ಅಧಿಕಾರಿಗಳೆಲ್ಲರೂ ಇಲ್ಲಿಗೆ ಬಂದು ಕುಳಿತುಕೊಳ್ಳುತ್ತಾರೆ. ಸಮಸ್ಯೆಗಳ ಬಗ್ಗೆ ಅವರು ಏನು ಹೇಳುತ್ತಾರೋ, ಹೇಳಲಿ,

ಅದನ್ನು ನಾವು ಕೇಳುತ್ತೇವೆ. ಇದಕ್ಕೆ ಸರ್ಕಾರದಿಂದ ಉತ್ತರವನ್ನು ಪಡೆಯಲಿ. ಇವರ ವರ್ತನೆ ಒಳ್ಳೆಯದಾದುದಲ್ಲ ಹಾಗೂ ಗೌರವಯುತವಾದುದಲ್ಲ.

**ಸಭಾಪತಿಯವರು:–** ಶ್ರೀ ಎಸ್.ರವಿಯವರೇ, ಶ್ರೀ ಬಸವರಾಜ ರಾಯರೆಡ್ಡಿಯವರು ಒಂದು ನಿಮಿಷ ಮಾತನಾಡುತ್ತಾರೆ, ಅವರಿಗೆ ಬಿಡಿ.

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ಸದನದಲ್ಲಿ ಹೇಗೆ ನಡೆದುಕೊಳ್ಳಬೇಕು ಎನ್ನುವುದರ ಬಗ್ಗೆ ತಾವು ಈಗಾಗಲೇ ಸ್ಪಷ್ಟವಾಗಿ ಎಲ್ಲಾ ಸದಸ್ಯರುಗಳಿಗೆ ತಿಳಿಸಿದ್ದೀರಿ.

**ಸಭಾಪತಿಯವರು:–** ಇವತ್ತಿನ ದಿವಸ ಬೆಳಗ್ಗೆ ನಾನು ಸಭೆ ಕರೆದಿದ್ದೆನು.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಲೇ ಬೇಕಾಗುತ್ತದೆ. ತಾವು ಎಲ್ಲರಿಗೂ ಸಹ ಕೈಯನ್ನು ಮುಗಿದಿದ್ದೀರಿ. ಇದರಿಂದ ನಮಗೆ ಬಹಳ ನೋವಾಯಿತು. ವಿರೋಧ ಪಕ್ಷದವರು ಗೌರವವನ್ನು ನೀಡಬೇಕು. ಸಭಾಪತಿಯವರು ಕೈ ಮುಗಿದು ಸದನವನ್ನು ನಡೆಸಿಕೊಡಿ ಎಂದು ಕೇಳುತ್ತಾರೆ ಎಂದರೆ, ವಿರೋಧ ಪಕ್ಷದವರಿಗೆ ಸ್ವಲ್ಪನೂ ಕಾಳಜಿ, ಗೌರವಗಳಿಲ್ಲ ಎಂದರೆ, ನನಗೆ ಅವರ ಬಗ್ಗೆ ಬಹಳ ಕೆಟ್ಟದು ಅನ್ನಿಸುತ್ತದೆ. ಈಗಾಗಲೇ ಸಭಾನಾಯಕರು ಹಾಗೂ ಹಿರಿಯ ಸದಸ್ಯರಾದ ಶ್ರೀ ಬಿ.ಕೆ.ಹರಿಪ್ರಸಾದ್, ಶ್ರೀ ಐವನ್ ಡಿ'ಸೋಜಾ, ಶ್ರೀ ಎಸ್.ರವಿ ರವರುಗಳೆಲ್ಲಾ, ವಿರೋಧ ಪಕ್ಷದವರಲ್ಲಿ ಮನವಿಯನ್ನು ಮಾಡಿಕೊಂಡಿದ್ದಾರೆ. ಹಾಗೂ ಸದನದ ನಿಯಮಾವಳಿಗಳನ್ನು ತಿಳಿಸಿ, ಸದನದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದರ ಬಗ್ಗೆ ಸಭಾನಾಯಕರು ಹಾಗೂ ಶ್ರೀ ಬಿ.ಕೆ.ಹರಿಪ್ರಸಾದ್ ರವರೂ ಸಹ ಹೇಳಿದ್ದಾರೆ. ಹೀಗಾಗಿ ನಾನು ಈ ಬಗ್ಗೆ ಪುನಃ ಪುನಃ ಹೇಳುವುದಕ್ಕೆ ಇಚ್ಛಿಸುವುದಿಲ್ಲ. ಮೊನ್ನೆಯ ದಿನ ತಾವು ಈಗಾಗಲೇ ರೂಲಿಂಗ್ ಅನ್ನು ನೀಡಿದ್ದೀರಿ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡಳಿಕೆಯ ನಿಯಮಗಳ ನಿಯಮ 68 ಅನ್ನು ನಾನು ಮತ್ತೆ ಓದಲಿಕ್ಕೆ ಹೋಗುವುದಿಲ್ಲ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡಳಿಕೆಯ ನಿಯಮಗಳ ನಿಯಮ 68 ಮತ್ತು 69 ಗಳ ಪ್ರಕಾರ ಅವರುಗಳು ಸದನಕ್ಕೆ ಸೂಚನೆ ಕೊಟ್ಟು ಮಾತನಾಡಬೇಕು. ಈ ರೀತಿಯಾಗಿ ಮಾತನಾಡುವ ನಿಯಮಾವಳಿಗಳ ಬಗ್ಗೆ ಅವರಿಗೆ ಗೊತ್ತಿಲ್ಲವೇ? ಇದು ಸರಿಯಲ್ಲ. ವಿರೋಧ ಪಕ್ಷದವರು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡಳಿಕೆಯ ನಿಯಮಗಳ ನಿಯಮ 303 ಅನ್ನು ಓದಬೇಕು. ಇದು ಏನು ಹೇಳುತ್ತದೆ ಎಂದರೆ, ಈ ರೀತಿಯಾಗಿ ತಮಗೆ ಹಾಗೂ ಇಡೀ ಸದನಕ್ಕೆ ಅಗೌರವವನ್ನು ವಿರೋಧ ಪಕ್ಷದವರು ತೋರಿಸುತ್ತಿದ್ದಾರೆ ಎಂದರೆ, ನಿಜವಾಗಿಯೂ ಸಹ ಇದು ಅವರಿಗೆ ಗೌರವವನ್ನು ತರುವಂಥಹದ್ದಲ್ಲ. ರಾಜಿನಾಮೆಯ ವಿಚಾರವನ್ನು ಬೇರೆ ನಿಯಮಾವಳಿಗಳಲ್ಲಿ ಮಾಡಲಿ.

**ಡಾ॥ ಯತೀಂದ್ರ ಎಸ್.:–** ಮಾನ್ಯ ಸಭಾಪತಿಯವರೆ, ನೀವು ಬಹಳ ತಾಳ್ಮೆಯಿಂದ ಅವರಿಗೆ ಪದೇ ಪದೇ ಅವಕಾಶವನ್ನು ಕೊಡುತ್ತಿದ್ದೀರಿ. ಇನ್ನು ಜಾಸ್ತಿ ಅವರ ಬಗ್ಗೆ lenient ಆಗಿರಬೇಡಿ. ನಿಮಗೂ ಹಾಗೂ ಸದನಕ್ಕೂ ಸಹ

ಅಗೌರವನ್ನು ತೋರಿಸುತ್ತಿದ್ದಾರೆ. ದಯಮಾಡಿ ತಾವು ಅವರ ಮೇಲೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಿ ಹಾಗೂ ಸದನ ನಡೆಯುವುದಕ್ಕೆ ಅವಕಾಶವನ್ನು ಮಾಡಿಕೊಡಿ.

**ಸಭಾಪತಿಯವರು:–** ಒಂದು ನಿಮಿಷ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಸಭಾನಾಯಕರೂ ಸಹ ಮನವಿಯನ್ನು ಮಾಡಿಕೊಂಡಿದ್ದಾರೆ. ಅವರನ್ನು ಹೊರಗಡೆ ಹಾಕಿ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ತಾವು ಕೈ ಮುಗಿದಿದ್ದರೂ ಸಹ ನಿಯಮಾವಳಿಗಳನ್ನು ಪಾಲಿಸುವ ಅರ್ಹತೆ ಇವರಿಗೆ ಇಲ್ಲ ಎನ್ನುವ ಮಾತನ್ನು ನಾನು ಹೇಳುತ್ತೇನೆ. ದಯಮಾಡಿ ತಾವು ಪ್ರಶ್ನೋತ್ತರ ಕಲಾಪವನ್ನು ತೆಗೆದುಕೊಂಡು ಅವಕಾಶ ಮಾಡಿಕೊಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಶ್ರೀ ಕೆ.ಹೆಚ್.ಮುನಿಯಪ್ಪನವರೇ ಮಾತನಾಡಿ.

**ಶ್ರೀ ಕೆ.ಹೆಚ್.ಮುನಿಯಪ್ಪ (ಸಮಾಜ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ಸದಸ್ಯರಲ್ಲಿ ಒಂದು ಮನವಿಯನ್ನು ಮಾಡುತ್ತೇನೆ. ಸದನದ ನಿಯಮಾವಳಿಗಳ ಪ್ರಕಾರ, ಸದನದಲ್ಲಿ ಇಲ್ಲದವರ ಹೆಸರನ್ನು ತೆಗೆದುಕೊಳ್ಳಬಾರದು. ಆದರೆ, ಇವರು **[XXX]** ಹೆಸರನ್ನು ತೆಗೆದುಕೊಳ್ಳುತ್ತಿದ್ದಾರೆ. ಹೀಗಾಗಿ ಇದನ್ನು ಕಡತದಿಂದ ತೆಗೆಯಬೇಕು.

**ಸಭಾಪತಿಯವರು:–** ಅದು ಯಾವುದೂ ಸಹ ಕಡತಕ್ಕೆ ಹೋಗುವುದಿಲ್ಲ. ವಿರೋಧ ಪಕ್ಷದ ಸದಸ್ಯರೇ, ನಾನು ಹೇಳುವುದನ್ನು ಒಂದು ನಿಮಿಷ ಕೇಳಿ. ಈಗಾಗಲೇ ಆರು ದಿನಗಳಾಗಿವೆ. ನಾನು ನಿಮಗೆ ಹೇಳುವುದೇನೆಂದರೆ, ಶ್ರೀ ಕೇಶವ ಪ್ರಸಾದ್ ರವರೇ ಒಂದು ನಿಮಿಷ ಕುಳಿತುಕೊಳ್ಳಿ; ನಾನು ಹೇಳುವುದನ್ನು ಕೇಳಿ. ಸಭಾನಾಯಕರೇ ನೀವೂ ಸಹ ಕುಳಿತುಕೊಳ್ಳಿ. ನಾನು ಹೇಳುವುದನ್ನು ಒಂದು ನಿಮಿಷ ಕೇಳಿ. ನನ್ನ ಸೌಮ್ಯ ಸ್ವಭಾವ ನನ್ನ ದೌರ್ಬಲ್ಯ ಅಲ್ಲ; ಇದನ್ನು ನೀವುಗಳು ತಿಳಿದುಕೊಳ್ಳಿ. My goodness cannot be my weakness. Don't let me to take hard decisions. We will not do it. ದಯಮಾಡಿ ನಾನು ಹೇಳುವುದನ್ನು ಕೇಳಿಸಿಕೊಳ್ಳಿ. ನಾನು ಕಳೆದ ಆರು ದಿನಗಳಿಂದ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ನಿಮ್ಮನ್ನು ಕೈಮುಗಿದೂ ದಯಮಾಡಿ ಈ ಸದನ ನಡೆಯಲು ಅವಕಾಶ ಮಾಡಿಕೊಡಿ ಎಂದು ನಾನು ಕೇಳಿದ್ದೇನೆ. ಆದರೆ ಇದನ್ನು ನೀವು ಮಾಡುತ್ತಿಲ್ಲ. ಈಗ ಪ್ರಶ್ನೋತ್ತರ ಕಲಾಪವನ್ನು ತೆಗೆದುಕೊಳ್ಳುತ್ತಿದ್ದೇನೆ. ಶ್ರೀ ಬಸನಗೌಡ ಬಾದರ್ಲಿ ರವರೇ ನಿಮ್ಮ ಪ್ರಶ್ನೆಯನ್ನು ಕೇಳಿ. ಸಭಾನಾಯಕರೇ, ಇವರ ಪ್ರಶ್ನೆಗೆ ಯಾರು ಉತ್ತರ ಕೊಡುತ್ತಾರೆ? ಸಂಬಂಧಿತ ಸಚಿವರು ಬಂದಿಲ್ಲವೇ?

(ಮುಂದು)

(824)24-06-2026/11-20/bkp-ak (ಸಭಾಪತಿಯವರ ಉಪಸ್ಥಿತಿ)

## 2. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ ರವರ ಪ್ರಶ್ನೆ ಸಂಖ್ಯೆ 880ಕ್ಕೆ ಉತ್ತರಿಬೇಕಾದ ಮಾನ್ಯ ಸಚಿವರು ಸದನದಲ್ಲಿ ಹಾಜರಿರಲಿಲ್ಲ)**

**Mr. CHAIRMAN:** The session will not wait for a minister. You (Leader of the House) should direct the minister to come and give answers. ಒಂದು ನಿಮಿಷ ಕುಳಿತುಕೊಳ್ಳಿ. ಈ ಸದನ ಯಾವ ಮಂತ್ರಿಗಳನ್ನೂ ಸಹ ಕಾಯುವುದಿಲ್ಲ. ಮಂತ್ರಿಗಳು ಬಂದು ಸದನಕ್ಕೆ ಕಾಯಬೇಕು. ಅವರು ಸಮಯಕ್ಕೆ ಸರಿಯಾಗಿ ಬರುವಂತೆ ಸಭಾನಾಯಕರು, you should warn him. You warn the Minister for Backward Classes Welfare and Kannada & Culture, Mr. Tangadagi Shivaraj Sangappa. I will not take it lightly. ಇನ್ನು ಮುಂದೆ ಸಚಿವರು ಇಲ್ಲಿಗೆ ಬಂದು ಕಾಯಬೇಕು. ಪ್ರಶ್ನೆಯನ್ನು ತೆಗೆದುಕೊಂಡಾಗ ಸಂಬಂಧಪಟ್ಟ ಮಂತ್ರಿಗಳು ಇಲ್ಲವೆಂದರೆ, this should not happen next time.

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):** ಮಾನ್ಯ ಸಭಾಪತಿಯವರೆ, ಈ ಬಗ್ಗೆ ಮಂತ್ರಿಗಳಿಗೆ ಸೂಚನೆಯನ್ನು ಕೊಡೋಣ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, point of order. ನಾವೆಲ್ಲರೂ ನಿಯಮ 327 ರಡಿಯಲ್ಲಿ ಸಹಿ ಮಾಡಿ ಒಂದು ನೋಟೀಸ್ ಅನ್ನು ಕೊಟ್ಟಿರುತ್ತೇವೆ. ಆ ನೋಟಿಸ್‌ನ ಕತೆ ಏನೆಂದು ಹೇಳಿ, ಅದರ ಬಗ್ಗೆ ತಾವು ರೂಲಿಂಗ್ ಕೊಡಿ.

**ಸಭಾಪತಿಯವರು:-** ಈಗಾಗಲೇ ಆ ಒಂದು ನೋಟಿಸ್ ನನಗೆ ಬಂದಿದೆ. ಪ್ರಶ್ನೋತ್ತರ ಮತ್ತು ಶೂನ್ಯವೇಳೆ ಮುಗಿದ ಮೇಲೆ ನಾನು ಅದನ್ನು ತೆಗೆದುಕೊಳ್ಳುತ್ತೇನೆ.

**ಸಭಾಪತಿಯವರು:-** ಈಗ ಶ್ರೀಮತಿ ಹೇಮಲತಾ ನಾಯಕ್‌ರವರು ತಮ್ಮ ಪ್ರಶ್ನೆಯನ್ನು ಕೇಳಬೇಕು.

**ಪ್ರಶ್ನೆ ಸಂಖ್ಯೆ ೯೦೩**

**(ಈ ಹಂತದಲ್ಲಿ ಶ್ರೀಮತಿ ಹೇಮಲತಾ ನಾಯಕ್‌ರವರು ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

**( ಈ ಹಂತದಲ್ಲಿ ಮಾನ್ಯ ಸಚಿವರಾದ ಶ್ರೀ ತಂಗಡಗಿ ಶಿವರಾಜ ಸಂಗಪ್ಪ ಅವರು ಸದನಕ್ಕೆ ಆಗಮಿಸಿದರು)**

**ಸಭಾಪತಿಯವರು:-** ಮಾನ್ಯ ಸಚಿವರೆ, ನೀವು ಸರಿಯಾದ ಸಮಯಕ್ಕೆ ಸದನಕ್ಕೆ ಬರಬೇಕು. ಈ ಸದನ ನಿಮಗೆ ಕಾಯುವುದಿಲ್ಲ. ನೀವು ಬಂದು ಸದನವನ್ನು ಕಾಯಬೇಕು, ಗೊತ್ತಾಯಿತು ಅಲ್ಲವೇ? I will not tolerate it. ನೀವು ಅರ್ಧ ಗಂಟೆ ಮೊದಲು ಬಂದು ಸದನದಲ್ಲಿ ಕುಳಿತುಕೊಳ್ಳಬೇಕು. ಇದು ನಿಮಗೆ ಮೊದಲನೆಯ ಬಾರಿ ನಾನು ಕೊಡುತ್ತಿರುವ warning ಆಗಿದೆ.

**ಶ್ರೀ ತಂಗಡಗಿ ಶಿವರಾಜ ಸಂಗಪ್ಪ (ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು):-** ಮಾನ್ಯ ಸಭಾಪತಿಯವರೆ, ನಾನು traffic ನಲ್ಲಿ ಸಿಕ್ಕಿಹಾಕಿಕೊಂಡಿದ್ದೆ. ಇನ್ನು ಮುಂದೆ ಈ ರೀತಿಯಲ್ಲಿ ಆಗದಂತೆ ನೋಡಿಕೊಳ್ಳುತ್ತೇನೆ.

**ಸಭಾಪತಿಯವರು:-** ಸದನದಲ್ಲಿ ನಿಮ್ಮ ಪ್ರಶ್ನೆ ಬರುವುದಕ್ಕಿಂತ ಮುಂಚಿತವಾಗಿ ಸದನದಲ್ಲಿ ಹಾಜರಿರಬೇಕು.

**ಪ್ರಶ್ನೆ ಸಂಖ್ಯೆ ೪೨೦**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇವತ್ತು ಏನು 2026-27ನೇ ಸಾಲಿನಲ್ಲಿ ಸಿಂಧನೂರು ತಾಲ್ಲೂಕಿನ ಒಟ್ಟು 6 ಹಾಸ್ಟೆಲ್‌ಗಳಲ್ಲಿ ದಾಖಲಾತಿಯನ್ನು ಕೋರಿ ಬಂದ ಹೊಸ ಅರ್ಜಿಗಳ ಸಂಖ್ಯೆ 1689 ಎಂದು ಹೇಳಿ ಕೊಟ್ಟಿದ್ದಾರೆ. ಆದರೆ, ಅಲ್ಲಿನ 6 ಹಾಸ್ಟೆಲ್‌ಗಳಲ್ಲಿ ಸುಮಾರು 693 ಸೀಟುಗಳಿಗೆ ಮಾತ್ರವೇ ಅವಕಾಶ ಇದೆ. ಆದ್ದರಿಂದ, ಉಳಿದ ವಿದ್ಯಾರ್ಥಿಗಳಿಗೆ ಇವತ್ತು ತೊಂದರೆಯಾಗುತ್ತಿದೆ. ಈ ವಿಷಯವಾಗಿ ನಾನು ಕಳೆದ ಅಧಿವೇಶನದ ಸಮಯದಲ್ಲಿಯೂ ಕೂಡ ಸಚಿವರಿಗೆ ಪ್ರಶ್ನೆಯನ್ನು ಕೇಳಿದ್ದೆ. ಇವತ್ತು ಅಲ್ಲಿ ಬಡ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ಗಳ ಸಂಖ್ಯೆ ಬಹಳ ಕಡಿಮೆ ಇದೆ. ಬಾಲಕರಿಗೆ ಮತ್ತು ಬಾಲಕಿಯರಿಗೆ ತಲಾ 3 ಹಾಸ್ಟೆಲ್‌ಗಳ ಸಂಖ್ಯೆ ಕಡಿಮೆ ಇದೆ. ಇದನ್ನು ಕೂಡಲೇ ಮಾಡಿಕೊಡಬೇಕೆಂದು ಹೇಳಿ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ತಂಗಡಗಿ ಶಿವರಾಜ ಸಂಗಪ್ಪ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೆ, ಕಳೆದ 3 ವರ್ಷದ ಇತಿಹಾಸದಲ್ಲಿ ಕನಿಷ್ಟ ಯಾವ ಸರ್ಕಾರವೂ ಕೊಡಲಾರದಷ್ಟು ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳನ್ನು ಕೊಡುವಂತಹ ಕೆಲಸವನ್ನು ನಾನು ಮಾಡಿದ್ದೇನೆ. ಆದರೆ, ಈ ವರ್ಷ ನಮಗೆ ನಿಗದಿತ ಜಿಲ್ಲೆಗಳಿಗೆ ಮಾತ್ರ ಕೊಡುವಂತಹ ಅವಕಾಶಗಳನ್ನು ಬಜೆಟ್‌ನಲ್ಲಿ ಮಾಡಿಕೊಟ್ಟಿದ್ದಾರೆ. ಬೆಳಗಾವಿ, ಧಾರವಾಡ, ಮೈಸೂರು ಜಿಲ್ಲೆಗಳಿಗೆ ಮಾತ್ರ ಅವಕಾಶಗಳನ್ನು ಮಾಡಿಕೊಟ್ಟಿದ್ದಾರೆ. ಅವರ ಬೇಡಿಕೆ ನಿಜವಾಗಿಯೂ ಸತ್ಯ ಇದೆ. ಕನಿಷ್ಟ ರಾಜ್ಯದಲ್ಲಿ 1,40,000 ಮಕ್ಕಳ ಪ್ರವೇಶಾವಕಾಶಕ್ಕೆ ಅರ್ಜಿಗಳು ಬಂದರೂ ಸಹ ನಾವು ಹಾಸ್ಟೆಲ್ ಅನ್ನು ಕೊಡುವಂತಹ ಕೆಲಸ ಮಾಡುತ್ತಿಲ್ಲ. ಅದಕ್ಕಾಗಿ, ವಿದ್ಯಾಶ್ರೀ ಯೋಜನೆಯಡಿಯಲ್ಲಿ ಒಂದು ವರ್ಷಕ್ಕೆ 15,000 ರೂಪಾಯಿಗಳಂತೆ ನಾವು ಅವಕಾಶವನ್ನು ಮಾಡಿಕೊಡುತ್ತೇವೆ. ನಿಮ್ಮಲ್ಲಿಯೂ ಮಾಡಿಕೊಡುತ್ತೇವೆ. ಮಾನ್ಯ ಸದಸ್ಯರು ಹಾಸ್ಟೆಲ್‌ಗಳನ್ನು ಕೇಳುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಈ ಬಗ್ಗೆ ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡಿ, ನಮ್ಮ ಇಲಾಖೆಗೆ ಹಾಸ್ಟೆಲ್‌ಗಳ ಬೇಡಿಕೆ ಜಾಸ್ತಿ ಇದೆ, ಇದಕ್ಕೆ ಅವರಿಂದ ಅನುಮತಿಯನ್ನು ತೆಗೆದುಕೊಂಡು ಅಲ್ಲಿ ಎಷ್ಟು ಬೇಡಿಕೆ ಇದೆ, ಅದನ್ನು ನಾನು ಮಾಡಿಕೊಡುತ್ತೇನೆ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೆ, ಜಿಲ್ಲಾ ಮಟ್ಟದಲ್ಲಿ ಮಾತ್ರ ಹಾಸ್ಟೆಲ್‌ಗಳು ಮಂಜೂರಾಗಿವೆ ಎಂದು ಮಾನ್ಯ ಸಚಿವರು ಹೇಳಿದರು. ಆದರೆ, ಇವತ್ತು ನಮ್ಮ ವಿಧಾನಸಭಾ ಕ್ಷೇತ್ರದಲ್ಲಿ ಬೇರೆ ಬೇರೆ ತಾಲ್ಲೂಕುಗಳಿಂದ ಬಂದು ವಾಸ ಮಾಡುತ್ತಿದ್ದಾರೆ. ಅಲ್ಲಿ ಅನೇಕ ತೊಂದರೆಗಳು ಸಹ ಇವೆ. ಇವತ್ತು ಜಿಲ್ಲಾ ಮಟ್ಟ ಏನಿದೆ, ಸಿಂಧನೂರು ಜಿಲ್ಲಾ ಮಟ್ಟವಾಗಲಿಕ್ಕೆ ಸೂಕ್ತ ಸ್ಥಳವಿದೆ. ಆದರೆ, ಇವತ್ತು ಮಂತ್ರಿಗಳು ಈ ಬಗ್ಗೆ ಸರಿಯಾದ

ಉತ್ತರವನ್ನು ಕೊಡುತ್ತಿಲ್ಲ. ಮಾನ್ಯ ಮಂತ್ರಿಗಳು ಅಲ್ಲಿಯೇ ಪಕ್ಕದ ಕ್ಷೇತ್ರದಲ್ಲಿರುತ್ತಾರೆ. ನಮ್ಮಲ್ಲಿ ಸಮಸ್ಯೆಗಳು ಬಹಳ ಗಂಭೀರವಾಗಿವೆ. ಇವತ್ತು ಮಕ್ಕಳು ಬೀದಿಗೆ ಬಂದು ಮಲಗುವಂತಹ ಪರಿಸ್ಥಿತಿ ಇದೆ. ಇದನ್ನು ಮಂತ್ರಿಗಳು ಸರಿ ಮಾಡಬೇಕು.

**ಶ್ರೀ ತಂಗಡಗಿ ಶಿವರಾಜ ಸಂಗಪ್ಪ:-** ಮಾನ್ಯ ಸಭಾಪತಿಯವರೆ, ಇದು ಕೇವಲ ಸಿಂಧನೂರಿನಲ್ಲಿ ಮಾತ್ರವಲ್ಲದೇ, ಎಲ್ಲಾ ತಾಲ್ಲೂಕುಗಳಲ್ಲಿಯೂ ಹಾಸ್ಟೆಲ್‌ಗಳ ಬೇಡಿಕೆ ಇದೆ. ಅದಕ್ಕಿಂತ ಮುಖ್ಯವಾಗಿ ಜಿಲ್ಲಾ ಕೇಂದ್ರದಲ್ಲಿ ಬೇಡಿಕೆ ಇರುವುದಕ್ಕೆ ಅಲ್ಲಿಗೆ ಈ ಬಾರಿ ಅವಕಾಶ ಮಾಡಿಕೊಟ್ಟಿದ್ದೇವೆ. ಮುಂದಿನ ದಿನಗಳಲ್ಲಿ ತಾಲ್ಲೂಕು ಕೇಂದ್ರಗಳಿಗೂ ನಾವು ಅವಕಾಶ ಮಾಡಿಕೊಡುವಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವಂತಹ ಕೆಲಸವನ್ನು ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರು ಈ ವಿಚಾರದಲ್ಲಿ ಕೆಲಸ ಮಾಡುತ್ತಾರೆ. ತಾವು ಕುಳಿತುಕೊಳ್ಳಬೇಕು.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೆ, ಈ ಸಂಬಂಧ ಬಾಡಿಗೆ ಕಟ್ಟಡವನ್ನಾದರೂ ತೆಗೆದುಕೊಂಡು ಅಲ್ಲಿನ ಸಮಸ್ಯೆಯನ್ನು ಪರಿಹರಿಸುವಂತಹ ಕೆಲಸವನ್ನು ಮಾಡಬೇಕು. ಇವತ್ತು ಸುಮಾರು 1,000 ವಿದ್ಯಾರ್ಥಿಗಳು ಹೊರಗಡೆ ಇದ್ದಾರೆ.

**ಶ್ರೀ ತಂಗಡಗಿ ಶಿವರಾಜ ಸಂಗಪ್ಪ:-** ಮಾನ್ಯ ಸಭಾಪತಿಯವರೆ, ಶ್ರೀಮಾನ್ ಬಸನಗೌಡ ಬಾದರ್ಲಿಯವರು ಕೇಳುತ್ತಿರುವುದು 100ಕ್ಕೆ 100 ರಷ್ಟು ಸತ್ಯ ಇದೆ. ಇಡೀ ತಾಲ್ಲೂಕು ಕೇಂದ್ರದಲ್ಲಿ ಅತಿ ಹೆಚ್ಚು ಬೇಡಿಕೆ ಇರುವಂತಹದ್ದು ಸತ್ಯ ಇದೆ. ಈ ಸಾಲಿನ ಬಜೆಟ್‌ನಲ್ಲಿ ಕೇವಲ 50 ಹಾಸ್ಟೆಲ್‌ಗಳನ್ನು ಕೊಟ್ಟಿರುವುದರಿಂದ, ಆ 50 ಹಾಸ್ಟೆಲ್‌ಗಳನ್ನು ಕೇವಲ ಜಿಲ್ಲಾ ಕೇಂದ್ರಗಳಿಗೆ ಕೊಡಬೇಕೆಂದು ಹೇಳಿ ಹಂಚಿಕೆಯಾಗಿದೆ, ಮುಂದಿನ ಬಜೆಟ್‌ನಲ್ಲಿ ಪ್ರತಿಯೊಂದು ತಾಲ್ಲೂಕುಗಳಿಗೆ ಹಾಸ್ಟೆಲ್ ಅನ್ನು ಹಂಚಿಕೆ ಮಾಡುವ ಬಗ್ಗೆ ನಿಶ್ಚಿತವಾಗಿಯೂ ನಾನು ಪ್ರಯತ್ನವನ್ನು ಮಾಡುತ್ತೇನೆ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೆ, ನಾನು ನನ್ನ ಕೊನೆಯ ಪ್ರಶ್ನೆಯನ್ನು ಕೇಳಲಿಕ್ಕೆ ಬಯಸುತ್ತೇನೆ. ಮೊನ್ನೆ ನಮ್ಮ ಹಾಸ್ಟೆಲ್‌ನಲ್ಲಿ food poison ಆಗಿ ಸುಮಾರು 50 ವಿದ್ಯಾರ್ಥಿಗಳು ಅಸ್ವಸ್ಥರಾದರು. ಇದು ಹಿಂದುಳಿದ ವರ್ಗಗಳ ಹಾಸ್ಟೆಲ್‌ನಲ್ಲಿ ಮತ್ರವೇ ಆಗಿರುವುದಿಲ್ಲ. ಇದು ಮುರಾರ್ಜಿ ಹಾಸ್ಟೆಲ್‌ನಲ್ಲಿ ಆಗಿರುತ್ತದೆ. ಇದು ಬಹಳ ಮಹತ್ವವಾದ ವಿಷಯವಾಗಿದೆ.

**ಸಭಾಪತಿಯವರು:-** ಶ್ರೀಯುತ ಬಸನಗೌಡ ಬಾದರ್ಲಿಯವರೆ, ನಾನು ಹೇಳುವುದನ್ನು ಒಂದು ನಿಮಿಷ ಕೇಳಿ. ನೀವು supplementary question ಅನ್ನು ಕೇಳಿದ ಮೇಲೆ ಅದಕ್ಕೆ ಸಚಿವರು ಉತ್ತರ ಕೊಡುತ್ತಾರೆ.

ಅದಕ್ಕೆ ಒಂದೆರಡು ನಿಮಿಷ ಅವಕಾಶವನ್ನು ಕೊಡಬಹುದು. ಆದ್ದರಿಂದ, ನೀವು ಪದೇ ಪದೇ ಎದ್ದು ನಿಂತುಕೊಂಡು ಮಾತನಾಡಬಾರದು. ಏನಾದರೂ ಇದ್ದಲ್ಲಿ ಈಗ ಕೇಳಿ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೆ, ಮೊನ್ನೆ ಬೇರೆ ಹಾಸ್ಟೆಲ್‌ಗಳಲ್ಲಿ food poison ಆಗಿರುತ್ತದೆ. Food poison ಆದಂತಹ ಸಂದರ್ಭದಲ್ಲಿ ಸುಮಾರು 50 ಜನ ವಿದ್ಯಾರ್ಥಿಗಳು ಅಸ್ವಸ್ಥರಾದರು. ಅವರನ್ನು ಆಸ್ಪತ್ರೆಗೆ ಸೇರಿಸುವಂತಹ ಕೆಲಸವಾಯಿತು. ತಕ್ಷಣ ವಿದ್ಯಾರ್ಥಿಗಳನ್ನು ನೋಡಿಕೊಳ್ಳಲು ಅಲ್ಲಿ ವೈದ್ಯಾಧಿಕಾರಿಗಳು ಇರುವುದಿಲ್ಲ. ಮತ್ತೆ, ಅಲ್ಲಿ ಬೇರೆ ಸಮಸ್ಯೆಗಳಿವೆ. ನಾನು ಈ ಬಗ್ಗೆ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳಲ್ಲಿ ಪ್ರತಿ ತಿಂಗಳು ಆರೋಗ್ಯ ತಪಾಸಣೆ ಕೆಲಸ ಆಗುವಂತಹ ಏರ್ಪಾಡು ಮಾಡಬೇಕು. ಈ ಬಗ್ಗೆ ಸಂಬಂಧಪಟ್ಟ ಆರೋಗ್ಯ ಸಚಿವರ ಜೊತೆಯಲ್ಲಿ ಮಾತನಾಡುವುದರ ಮೂಲಕ ಈ ಕೆಲಸವನ್ನು ಮಾಡಿಕೊಡಬೇಕೆಂದು ಕೇಳುತ್ತೇನೆ.

**ಶ್ರೀ ತಂಗಡಗಿ ಶಿವರಾಜ ಸಂಗಪ್ಪ:-** ಮಾನ್ಯ ಸಭಾಪತಿಯವರೆ, ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳಲ್ಲಿ ಈ ರೀತಿಯ ಸಮಸ್ಯೆ ಆಗಿರುವುದಿಲ್ಲ. ಅದು ಬೇರೆ ಹಾಸ್ಟೆಲ್‌ನಲ್ಲಿ ಆಗಿದೆ. ಆದರೆ, ಅದರ ಬಗ್ಗೆ ನಾನು ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರೊಂದಿಗೆ ಮಾತನಾಡಿ, ನಾವಿಬ್ಬರು ಆರೋಗ್ಯ ಇಲಾಖೆಯ ಮಂತ್ರಿಗಳ ಜೊತೆ ಈ ಬಗ್ಗೆ ಮಾತನಾಡಿ, ವೈದ್ಯಾಧಿಕಾರಿಗಳ ವ್ಯವಸ್ಥೆಯನ್ನು ಮಾಡುವಲ್ಲಿ ಪ್ರಯತ್ನ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ 925**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ನಾನು ಕರ್ನಾಟಕದ K.R.E.I.S. (Karnataka Residential Educational Institutions Society) ಶಾಲೆಗಳ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. K.R.E.I.S. ಶಾಲೆಗಳಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಸಾವನ್ನಪ್ಪಿದ್ದಾರೆ? ಆಕಸ್ಮಿಕವಾಗಿ ಆರೋಗ್ಯದ ಕಾರಣದಿಂದ ಎಷ್ಟು ಜನರು ಸಾವನ್ನಪ್ಪಿದ್ದಾರೆ ಉತ್ತರದಲ್ಲಿ 17 ಪ್ರಕರಣಗಳು ದಾಖಲಾಗಿದ್ದು, ಇಷ್ಟು ಸಂಖ್ಯೆಯ ಜನರು ಸತ್ತಿದ್ದಾರೆಂದು, ಇವರುಗಳಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವವರು, ಆಕಸ್ಮಿಕ ಪ್ರಕರಣಗಳು ಮತ್ತು ವೈದ್ಯಕೀಯ ಪ್ರಕರಣಗಳ ವಿವರವನ್ನು ಕೊಟ್ಟಿದ್ದಾರೆ.

ಮಾನ್ಯ ಸಭಾಪತಿಯವರೆ, 17 ಜನ ಮಕ್ಕಳು ಏನು ಸಾವನ್ನಪ್ಪಿದ್ದಾರೆ, ಅದು ಸಣ್ಣ ಸಂಖ್ಯೆಯಲ್ಲ. ಏಕೆಂದರೆ, ಇವತ್ತು ಹಾಸ್ಟೆಲ್‌ಗಳಿಗೆ ಮಕ್ಕಳನ್ನು ಸೇರಿಸುತ್ತಿದ್ದಾರೆ. ನಾವೆಲ್ಲರೂ ಸಹ ಹಾಸ್ಟೆಲ್‌ಗಳಲ್ಲಿಯೇ ಓದಿದ್ದೇವೆ. ಮಕ್ಕಳನ್ನು ಹಾಸ್ಟೆಲ್‌ಗೆ ಕಳುಹಿಸುತ್ತಾರೆಂದರೆ ಅಲ್ಲಿನ ಶಿಕ್ಷಕರನ್ನು ನಂಬಿ, ಅಲ್ಲಿ ಇರತಕ್ಕಂತಹ ವಾತಾವರಣವನ್ನು ನಂಬಿ, ಅಲ್ಲಿನ ವಾರ್ಡನ್ ಅನ್ನು ನಂಬಿ ಮಕ್ಕಳನ್ನು ಕಳುಹಿಸುತ್ತಾರೆ. ಅದರಲ್ಲಿ 17 ಜನರು ಸತ್ತಿರುವುದು ಬಹಳ ದುರದೃಷ್ಟಕರ. ಅದೇ ರೀತಿಯಲ್ಲಿ ಇನ್ನೊಂದು ಪ್ರಶ್ನೆಯನ್ನು ಕೇಳಿದ್ದೆ. ಕ್ರೈಸ್ತ ಶಾಲೆಯಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಸತ್ತಿದ್ದಾರೆ, ಅಲ್ಲಿ Teaching Facultyಯಲ್ಲಿ ಎಷ್ಟು ಜನ ಇದ್ದಾರೆ ಮತ್ತು ಬೋಧಕೇತರ ಸಿಬ್ಬಂದಿ ಎಷ್ಟು ಜನ ಇದ್ದಾರೆಂದು ಪ್ರಶ್ನೆಯನ್ನು ಕೇಳಿದ್ದೆ. ಅದರಲ್ಲಿ ಸುಮಾರು 5,742 ಹುದ್ದೆಗಳು ಖಾಲಿ ಇರುತ್ತವೆ. 4,326 ಶಿಕ್ಷಕರ ಹುದ್ದೆಗಳು ಖಾಲಿ ಇದ್ದರೆ, ಯಾವ ರೀತಿಯ ಶಿಕ್ಷಣ ವ್ಯವಸ್ಥೆ ಇದೆ ಎಂದು ನೋಡಬೇಕಾಗಿದೆ. ಇವತ್ತು ಇಷ್ಟು ಜನ ಶಿಕ್ಷಕರನ್ನು ನೇಮಕಾತಿ ಮಾಡಬೇಕಾಗಿತ್ತು. ಮತ್ತೆ ಅಲ್ಲಿ ಯಾರು Guest Faculty ತೆಗೆದುಕೊಂಡಿದ್ದಾರೆ, ಅವರು qualified ಇರುವವರನ್ನು ತೆಗೆದುಕೊಳ್ಳುತ್ತಿಲ್ಲ. ಆದ್ದರಿಂದ ಈ ಹುದ್ದೆಗಳನ್ನು ಜರೂರಾಗಿ ತುಂಬಬೇಕಾಗಿದೆ. ಮತ್ತೆ ಆಹಾರಕ್ಕೆ ಸಂಬಂಧಪಟ್ಟಂತೆ ಕೆಲವು ಪ್ರಶ್ನೆಗಳನ್ನು ಕೇಳಿದ್ದೆ. ಅದಕ್ಕೆ ಸಂಬಂಧಪಟ್ಟಂತೆ 31 ಪ್ರಕರಣಗಳಾಗಿದ್ದು, ಈ ಬಗ್ಗೆ ಕೆಲವು ಪ್ರಕರಣಗಳಲ್ಲಿ ಎಚ್ಚರಿಕೆಯನ್ನು ಕೊಟ್ಟಿದ್ದೇವೆ. ಮೌಖಿಕವಾಗಿ ಎಚ್ಚರಿಕೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. K.R.E.I.S. ಶಾಲೆಗಳು ಆರಂಭವಾದಾಗಿನಿಂದ ಇಲ್ಲಿ ನಡೆದಿರುವಂತಹ ಹಗರಣಗಳನ್ನು ನೋಡಿಬಿಟ್ಟರೆ ಎಲ್ಲಾ ಸರ್ಕಾರದ ಅವಧಿಯಲ್ಲಿಯೂ ಸಹ ಈ ವಿಚಾರದಲ್ಲಿ ತಪ್ಪಾಗುತ್ತಿದೆ. ಆದ್ದರಿಂದ, ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುವುದೇನೆಂದರೆ ಯಾರು ಕಳಪೆ ಸಾಮಗ್ರಿಗಳನ್ನು ಕೊಡುತ್ತಾರೆ. ಅವರುಗಳನ್ನು ನೀವು ಕಪ್ಪು ಪಟ್ಟಿಗೆ ಸೇರಿಸಿ, ಅವರನ್ನು ವಜಾ ಮಾಡಿ. ಇದನ್ನು ಬೇರೆಯವರಿಗೆ ಅವಕಾಶ ಕೊಡಬೇಕು. ಈ ಬಗ್ಗೆ ಬಹಳ ವರ್ಷಗಳಿಂದ ಟೆಂಡರ್ ಅನ್ನೇ ಕರೆದಿಲ್ಲ. ಆದರೆ, ಈಗ ಟೆಂಡರ್ ಅನ್ನು ಕರೆದಿದ್ದಾರೆ. ಚಾಮರಾಜ ನಗರ, ಮೈಸೂರು ಮತ್ತು ಬೆಂಗಳೂರಿನಲ್ಲಿ ಯಾರನ್ನು ಕರೆದಿದ್ದಾರೆಂದು ನಾನು ನೋಡಿದೆ. ಹೀಗಾಗಿ, ಒಳ್ಳೆಯ ಗುಣ ಮಟ್ಟದ ಸಾಮಗ್ರಿಗಳನ್ನು ಯಾರು ಸರಬರಾಜು

ಮಾಡುತ್ತಾರೆ, ಅವರಿಗೆ ಕೊಡಬೇಕೆಂದು ನಾನು ಕೇಳುತ್ತಿದ್ದೇನೆ. ತದನಂತರ ಮುಂದಿನ supplementary ಪ್ರಶ್ನೆಯನ್ನು ಕೇಳುತ್ತೇನೆ.

**ಸಭಾಪತಿಯವರು:–** ಮಂತ್ರಿಗಳು ಈ ಬಗ್ಗೆ ಉತ್ತರ ಕೊಡುತ್ತಾರೆ, ನಂತರ ನೀವು ಉಪ ಪ್ರಶ್ನೆಯನ್ನು ಕೇಳಿ.

**ಶ್ರೀ ಕೆ.ಹೆಚ್. ಮುನಿಯಪ್ಪ (ಸಮಾಜ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೆ, ಮಕ್ಕಳ ಆತ್ಮಹತ್ಯೆ ಬಗ್ಗೆ ವಿವರವಾಗಿ ನಾನು ಉತ್ತರವನ್ನು ಕೊಟ್ಟಿದ್ದೇನೆ. ಕೆಲವರು ಆತ್ಮಹತ್ಯೆ ಮಾಡಿಕೊಂಡಿದ್ದರೆ, ಇನ್ನೂ ಕೆಲವರಿಗೆ electric shock ಆಗಿದೆ, ಮತ್ತೆ ಕೆಲವರಿಗೆ heart attack ಆಗಿದೆ, ಈ ಎಲ್ಲಾ ವಿವರಗಳನ್ನು ನಾನು ಕೊಟ್ಟಿದ್ದೇನೆ.

**(ಮುಂದು)**

**(825) 24.08.2026 11.30 ಎಸ್‌ವಿ–ಎಕೆ (ಸಭಾಪತಿಯವರ ಉಪಸ್ಥಿತಿ)**

**(ವಿರೋಧ ಪಕ್ಷದ ಮಾನ್ಯ ಸದಸ್ಯರು ನಿರಂತರವಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಕೆ.ಹೆಚ್.ಮುನಿಯಪ್ಪ (ಮುಂದು):–**

ಕ್ರೈಸ್ ಸಂಸ್ಥೆಯಲ್ಲಿ ಬೋಧಕರ ವಿಷಯಕ್ಕೆ ಸಂಬಂಧಿಸಿದಂತೆ, 9,756 ಬೋಧಕರ ಹುದ್ದೆಗಳು ಮಂಜೂರಾಗಿದ್ದು, 8092ರ ಪೈಕಿ 5,430 ಹುದ್ದೆಗಳು ಭರ್ತಿಯಾಗಿವೆ. 4326 ಹುದ್ದೆಗಳು ಖಾಲಿಯಿವೆ. ಕಡೆಯದಾಗಿ ದಿನಾಂಕ 23.06.2017ರಂದು ನೇಮಕಾತಿ ಅಧಿಸೂಚನೆಯನ್ನು ಹೊರಡಿಸಿ 1484 ಶಿಕ್ಷಕರಿಗೆ ನೇಮಕಾತಿ ಆದೇಶ ಪತ್ರ ನೀಡಲಾಗಿರುತ್ತದೆ. ಕೆ.ಇ.ಎ. ಮೂಲಕ 1,110 ಬೋಧಕರ ನೇಮಕಾತಿಗೆ ಪ್ರಕಟಣೆ ಮಾಡಲಾಗಿದೆ. ಪ್ರಸ್ತುತ 5,141 ಖಾಯಂ ಶಿಕ್ಷಕರು ಹಾಗೂ 289 ಖಾಯಂ ಉಪನ್ಯಾಸಕರು ಒಟ್ಟು 5,430 ಬೋಧಕ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. 3201 ಶಿಕ್ಷಕರು, ಅತಿಥಿ ಉಪನ್ಯಾಸಕರು ಹಾಗೂ 480 ಹೊರ ಸಂಪನ್ಮೂಲ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಒಟ್ಟು 3681 (ಚಿತ್ರಕಲೆ ಮತ್ತು ಸಂಗೀತ ಶಿಕ್ಷಕರನ್ನು ಹೊರತುಪಡಿಸಿ) ರಾಜ್ಯದ ವಸತಿ ಶಿಕ್ಷಣ ಸಂಸ್ಥೆಗಳ ಸಂಸ್ಥೆಗಳ ವ್ಯಾಪ್ತಿಯ ವಸತಿ ಶಾಲೆಗಳ ಈ ಒಂದು ಕಾರ್ಯಕ್ರಮದ ಬಗ್ಗೆ ನಾನು ಸದನಕ್ಕೆ ತಿಳಿಸುವುದಕ್ಕೆ ಬಯಸುತ್ತೇನೆ. ಕ್ರೈಸ್ ವಿದ್ಯಾಸಂಸ್ಥೆಗಳ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗಿಂತಲೂ ಅತ್ಯುತ್ತಮವಾದ ಅಂಕ ಗಳಿಸಿದ್ದಾರೆ. 100 ಕ್ಕೆ 94 ರಿಂದ 98 ಅಂಕಗಳನ್ನು ತೆಗೆದುಕೊಂಡು ಗುಣಮಟ್ಟದ ವಿದ್ಯಾಭ್ಯಾಸ ಪಡೆದಿದ್ದಾರೆ. ಕೆಲವು ಹುದ್ದೆಗಳು ಬಾಕಿಯಿವೆ. ಅದನ್ನು ಕೆ.ಇ.ಎ. ಮುಖಾಂತರವಾಗಲೀ ಅಥವಾ ಬೇರೆ ಯಾವುದಾದರೂ ರೂಪದಲ್ಲಿ ಆಗಲೀ ಅದನ್ನು ಕರೆದು ಪೂರ್ಣಗೊಳಿಸುತ್ತೇವೆ ಎಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

**ಶ್ರೀ ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೆ, ಇಲ್ಲಿ ಹೇಳುತ್ತಾರೆ, ಲೋಕಾಯುಕ್ತದವರು ಸ್ವಯಂಪ್ರೇರಿತರಾಗಿ ಪ್ರಕರಣವನ್ನು ದಾಖಲು ಮಾಡಿಕೊಂಡಿರುತ್ತಾರೆ. ಅದನ್ನು address ಮಾಡುತ್ತಿದ್ದೇವೆ. ನಾನು ಮಾನ್ಯ ಮಂತ್ರಿಗಳಿಗೆ ಹೇಳುವುದೇನೆಂದರೆ ಹಾಸ್ಟೆಲ್‌ಗಳಿಗೆ ಓಂಬುಡ್ಸ್‌ಮನ್‌ಗಳನ್ನು ದಯಮಾಡಿ ನೇಮಕ ಮಾಡಬೇಕು. ಸಮಾಜ ಕಲ್ಯಾಣ ಇಲಾಖೆಯ ಕ್ರೈಸ್ ಹಾಸ್ಟೆಲ್‌ಗಳಿಗೆ ಓಂಬುಡ್ಸ್‌ಮನ್ ಇರಬೇಕು. ಅವರಿಗೆ ದೂರನ್ನು ಪಡೆದು ವಿಚಾರಣೆ ಮಾಡುವ ಅಧಿಕಾರವನ್ನು ಕೊಡಬೇಕು. ಏಕೆಂದರೆ ಎಲ್ಲಾ ವಾರ್ಡನ್‌ಗಳಿಗೆ ಅಥವಾ ಅಧಿಕಾರಿಗಳಿಗೆ ಇಷ್ಟೊಂದು ಶಾಲೆಗಳನ್ನು ನಿಭಾಯಿಸಲು ಸಾಧ್ಯವಿಲ್ಲ. ಹಾಗಾಗಿ ಓಂಬುಡ್ಸ್‌ಮನ್ ನೇಮಕ ಮಾಡಿ ಅವರಿಗೆ ಅಧಿಕಾರವನ್ನು ಕೊಡಬೇಕು. ಕೆ.ಪಿ.ಎಸ್.ಸಿ.ಯಲ್ಲಿ ಬಾಕಿಯಿರುವ 2486 ಹುದ್ದೆಗಳ ಬಗ್ಗೆ ಕೆ.ಪಿ.ಎಸ್.ಸಿ.ಯವರ ಜೊತೆ ಮಾತನಾಡಿ ಇವರಿಗೆಲ್ಲಾ ರಿಪೋರ್ಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು.

ಮಾನ್ಯ ಸಭಾಪತಿಯವರೆ, ಮಂತ್ರಿಗಳಲ್ಲಿ ನನ್ನದೊಂದು ಮನವಿ. ನಿಮ್ಮಲ್ಲಿ ತಾತ್ಕಾಲಿಕವಾಗಿ ಚಿತ್ರಕಲೆ ಮತ್ತು ಸಂಗೀತ ಶಿಕ್ಷಕರು, ಕ್ರೀಡಾ ಶಿಕ್ಷಕರನ್ನು ತೆಗೆದುಕೊಂಡಿದ್ದಾರೆ? 1 ಲಕ್ಷ, 75,000, 50,000ಗಳಿಗೆ ಏಕೆ ಕೊಡುತ್ತಿದ್ದಾರೆ? ಭಾರತೀಯ ಕ್ರೀಡಾ ಪ್ರಾಧಿಕಾರದಲ್ಲಿಯೇ ಅಷ್ಟು ಕೊಡುತ್ತಿಲ್ಲ. ಅಂಥದ್ದಕ್ಕೆಲ್ಲಾ ದಯಮಾಡಿ ದುಡ್ಡನ್ನು ಖರ್ಚು ಮಾಡದೆ ಶಿಕ್ಷಣಕ್ಕೆ ಮತ್ತು ಅವರ ಆರೋಗ್ಯಕ್ಕೆ ಗಮನ ಕೊಡಬೇಕು. 6 ತಿಂಗಳಿಗೊಮ್ಮೆ ಮಕ್ಕಳಿಗೆ worm tablet ಕೊಡಬೇಕು. ಅವರ ಆರೋಗ್ಯ ತಪಾಸಣೆ ಮಾಡಿಸಬೇಕು. ಅವರ ರಕ್ತದ ಗುಂಪನ್ನು ಅವರ ಗುರುತಿನ ಚೀಟಿಯಲ್ಲಿ ನಮೂದಿಸಿರಬೇಕು. ಖಾಸಗಿ ಆಸ್ಪತ್ರೆಯವರ ಜೊತೆಯಲ್ಲಿ ಒಡಂಬಡಿಕೆ ಮಾಡಿಕೊಳ್ಳಬೇಕು. ಅವರ ಆರೋಗ್ಯ ತಪಾಸಣೆ ಮಾಡಿ ಜಂತುಹುಳು ನಿವಾರಣೆ ಮಾತ್ರೆಯನ್ನು ಕೊಟ್ಟು ಅವರ ಆರೋಗ್ಯ ನೋಡಿಕೊಳ್ಳಬೇಕು ಮತ್ತು ಅವರಿಗೆ ಒಳ್ಳೆಯ ಪುಸ್ತಕ, ಬಟ್ಟೆ ಕೊಟ್ಟು, ಅವರಿಗೆ ಒಳ್ಳೆಯ ಶಿಕ್ಷಣ ಕೊಡಬೇಕು. ಮಾನ್ಯ ಸಚಿವರಾಗಲೀ, ಮಾನ್ಯ ಮಹದೇವಪ್ಪನವರಾಗಲೀ ಎಲ್ಲರೂ ಕಷ್ಟದಿಂದ ಬಂದಿರುವವರು. ಹಾಗಾಗಿ ಅವರ ಕಾಲದಲ್ಲಿ ಸುಧಾರಣೆಯಾದರೆ ಬಹಳಷ್ಟು ಒಳ್ಳೆಯದಾಗುತ್ತದೆ. ಅನಗತ್ಯವಾಗಿ ಕ್ರೈಸ್ ಶಾಲೆಗಳಲ್ಲಿ ಹಣ ಖರ್ಚು ಮಾಡುವುದು ಬೇಡ. ಬಹಳಷ್ಟು ಜನರನ್ನು ಅಲ್ಲಿ ಇಟ್ಟುಕೊಂಡಿದ್ದಾರೆ. ಎಲ್ಲರನ್ನೂ relieve ಮಾಡಿ ಅಗತ್ಯವಿರುವವರನ್ನು ಮಾತ್ರ ಇಟ್ಟುಕೊಳ್ಳಬೇಕು. ಶಾಲೆಗಳು ಚೆನ್ನಾಗಿ ನಡೆಯಬೇಕು. ಇಲ್ಲವಾದರೆ ಮಕ್ಕಳು ಬಹಳ ತೊಂದರೆಗೆ ಸಿಲುಕುತ್ತಾರೆ. ಇಂಥ ಸಾವಿನ ಪ್ರಕರಣಗಳು ಜಾಸ್ತಿಯಾಗಬಾರದು. ಯಾರು ಕಂಟ್ರಾಕ್ಟರ್‌ಗಳಿದ್ದಾರೋ ಅವರನ್ನು ಬ್ಲಾಕ್‌ಲಿಸ್ಟ್‌ಗೆ ಹಾಕಬೇಕು. ಅವಲಕ್ಕಿ ಸರಿಯಿರಲಿಲ್ಲ, ಹಾಗಾಗಿ ನಾವು ವಾಪಸ್ ಕಳಿಸಿದ್ದೇವೆಂದು ಅವರು ಹೇಳಿದರು. ವಾಪಸ್ ಕಳುಹಿಸುವುದಲ್ಲ, ಅಂಥ ಅಧಿಕಾರಿಗಳನ್ನು ವಜಾ ಮಾಡಬೇಕು. ಅವರೇನು ದನಗಳಲ್ಲ, ಮಕ್ಕಳು. ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

**ಶ್ರೀ ಕೆ.ಹೆಚ್.ಮುನಿಯಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿರುವ ಎಲ್ಲಾ ವಿಷಯಗಳನ್ನು ಗಮನದಲ್ಲಿ ಇಟ್ಟುಕೊಂಡು ನಾವು ಸರಿಪಡಿಸುತ್ತೇವೆ.

**ಪ್ರಶ್ನೆ ಸಂಖ್ಯೆ 816**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ರಘು ಆರ್ ಅವರು ಸದನದಲ್ಲಿ ಹಾಜರಿರಲಿಲ್ಲ)**

**ಪ್ರಶ್ನೆ ಸಂಖ್ಯೆ 798**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಶಶೀಲ್ ಜಿ. ನಮೋಶಿ ಅವರು ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

**ಪ್ರಶ್ನೆ ಸಂಖ್ಯೆ 891**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಮಂತ್ರಿಗಳು ಎಲ್ಲಿದ್ದಾರೆ?

**ಡಾ: ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮೈಸೂರಿನಲ್ಲಿ ಬುಡಕಟ್ಟು ಭಾಷೆಗಳ ಒಂದು conclave ಇದ್ದು, ಕೇಂದ್ರ ಮಂತ್ರಿಗಳು ಬರುತ್ತಿರುವುದರಿಂದ ಮಾನ್ಯ ಸಚಿವರು ಅಲ್ಲಿ ಭಾಗವಹಿಸಬೇಕಾಗಿದೆ ಎನ್ನುವ ಕಾರಣಕ್ಕಾಗಿ ನನಗೆ ಉತ್ತರ ಕೊಡಲು ಹೇಳಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಮುಂದಿನ ಬಾರಿ ಅವರಿಗೆ ಹೇಳಬೇಕು. ಸದನ ನಡೆಯುವಾಗ ಯಾವುದೇ ಕಾರ್ಯಕ್ರಮಕ್ಕೆ ಹೋಗಬಾರದು. ಸದನದ ಕಲಾಪಗಳಲ್ಲಿ ಭಾಗಿಯಾಗಿ, ಅವರಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರ ಕೊಡಲೇಬೇಕು. ಈ ಸಲ allow ಮಾಡುತ್ತೇನೆ. ಮುಂದಿನ ಬಾರಿ ಅವರಿಗೆ ಹೇಳಿಬಿಡಿ.

**ಡಾ: ಯತೀಂದ್ರ ಎಸ್.:-** ಮಾನ್ಯ ಸಭಾಪತಿಯವರೆ, ತಾವು ಹೇಳಿದ್ದನ್ನು ಖಂಡಿತವಾಗಿಯೂ ಮಾನ್ಯ ಸಚಿವರಿಗೆ ತಿಳಿಸುತ್ತೇನೆ.

ಮಾನ್ಯ ಸಭಾಪತಿಯವರೆ, ಮಾನ್ಯ ಎನ್. ಎಸ್. ಬೋಸರಾಜು ಅವರ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದೇವೆ.

**ಶ್ರೀ ಎನ್. ಎಸ್. ಬೋಸ್‌ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಿಗೆ ಹೇಳುವಂತೆ ಮಾನ್ಯ ಸಭಾನಾಯಕರನ್ನು ಕೋರುತ್ತೇನೆ. ಈ ಕಾಮಗಾರಿ ಅನೇಕ ವರ್ಷಗಳಿಂದ ನಡೆಯುತ್ತಿದೆ. ತಕ್ಷಣ ರೂ. 200 ಲಕ್ಷ ಮಂಜೂರು ಮಾಡಿ ಅವರಿಗೆ ಅವಕಾಶ ಮಾಡಿಕೊಡಬೇಕು.

**ಡಾ: ಯತೀಂದ್ರ ಎಸ್:-** ಮಾನ್ಯ ಸಭಾಪತಿಯವರೆ, ಈಗಾಗಲೇ ಮಾನ್ವಿ ತಾಲ್ಲೂಕಿನಲ್ಲಿ ತಾಲ್ಲೂಕು ಮಟ್ಟದ ವಾಲ್ಮೀಕಿ ಭವನ ಕಟ್ಟುವುದಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆತಿದೆ. ರೂ.2 ಕೋಟಿ ವೆಚ್ಚದಲ್ಲಿ ಮಂಜೂರಾಗಿದೆ. ಇನ್ನೇನು ಕೆಲವು ದಿನಗಳಲ್ಲಿ ಪ್ರಾರಂಭವಾಗುತ್ತದೆ. ಅಲ್ಲಿ ಖಂಡಿತ ವಾಲ್ಮೀಕಿ ಭವನ ನಿರ್ಮಾಣವಾಗುತ್ತದೆ.

**ಪ್ರಶ್ನೆ ಸಂಖ್ಯೆ 839**

**ಸಭಾಪತಿಯವರು:-** ಮಾನ್ಯ ರಾಮೋಜಿ ಗೌಡರೆ, ತಮ್ಮ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ.

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನನ್ನ ಮೂರು ಪ್ರಶ್ನೆಗಳಿಗೆ ಸಮಯ ಕೇಳಿದ್ದಾರೆ. ಬರುವುದೇ 4 ಪ್ರಶ್ನೆ, ಅದರಲ್ಲಿ 3 ಪ್ರಶ್ನೆಗೆ ಟೈಮ್ ತೆಗೆದುಕೊಂಡಿದ್ದಾರೆ.

**ಸಭಾಪತಿಯವರು:-** ನಾನು ಪರಿಶೀಲನೆ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ 953**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್. ಎಸ್. ಗೋಪಿನಾಥ್ ಅವರು ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

**ಪ್ರಶ್ನೆ ಸಂಖ್ಯೆ 822**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಿವೇಕಾನಂದ ಅವರು ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

**ಪ್ರಶ್ನೆ ಸಂಖ್ಯೆ ೮೦೬**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಸಂಗೋಳಗಿ (ಸಿ) ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡದ ತಾರಸಿಯ ಗಾರೆ ಕುಸಿದು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಭಾನುವಾರ ರಜೆ ಇದ್ದುದರಿಂದ ಅನಾಹುತ ತಪ್ಪಿರುವುದು ನಿಜವೇ ಎಂದು ಕೇಳಿದ್ದೇನೆ. ಇದು ನಿಜ ಎಂದು ಉತ್ತರದಲ್ಲಿ ತಿಳಿಸಿರುತ್ತಾರೆ. ಅದೃಷ್ಟವಶಾತ್ ರವಿವಾರವಿತ್ತು. ಒಂದು ವೇಳೆ working day ಇದ್ದಿದ್ದರೆ ಅಲ್ಲಿದ್ದಂಥ ನೂರಾರು ಮಕ್ಕಳು ಸತ್ತು ಹೋಗುತ್ತಿದ್ದರು. ಇದಕ್ಕೆ ಸಚಿವರು "ನಮ್ಮ ಗಮನಕ್ಕೆ ಬಂದಿದೆ" ಎಂದು ಹೇಳಿದ್ದಾರೆಯೇ ವಿನಃ ಏನು ಕ್ರಮ ಕೈಗೊಳ್ಳಲಾಗಿದೆ ಎಂಬುದನ್ನು ಹೇಳಿರುವುದಿಲ್ಲ. ಕೇವಲ ಉತ್ತರದಲ್ಲಿ "ಹೌದು" ಎಂದು ಹೇಳಿದ್ದಾರೆ.

ಕಲಬುರಗಿ ನಗರದ ಸರ್ಕಾರಿ ಮಹಿಳಾ ಪಿ.ಯು. ಕಾಲೇಜಿನ ಕಟ್ಟಡವನ್ನು 2015-16ನೇ ಸಾಲಿನಲ್ಲಿ ನಿರ್ಮಿತಿ ಕೇಂದ್ರದಿಂದ ನಿರ್ಮಿಸಲಾಗಿದ್ದರೂ, ಕೇವಲ ೮-೯ ವರ್ಷಗಳಲ್ಲಿ ಛಾವಣಿ ಕುಸಿದು ಬಿದ್ದಿದೆ. ಕಳಪೆ ಕಾಮಗಾರಿ ನಡೆಸಿದ ವ್ಯಕ್ತಿಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ? ಹಿಂದಿನ ಕಾಲದಲ್ಲಿ ಒಂದು ಕಟ್ಟಡ ಕಟ್ಟಿದರೆ ನೂರಾರು ವರ್ಷಗಳ ಕಾಲ ಇರುತ್ತಿತ್ತು. ೫೦-೬೦ ವರ್ಷಗಳ ಕಾಲ ಇರುತ್ತಿತ್ತು. ಕೇವಲ ೮-೯ ವರ್ಷಗಳಲ್ಲಿ ಮೇಲ್ಛಾವಣಿ ಬಿದ್ದಿದ್ದರಿಂದ ಆ ನಿರ್ಮಿತಿ ಕೇಂದ್ರದವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ. ಅವರನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆಯೇ ಅಥವಾ ಅವರ ಮೇಲೆ ತನಿಖೆ ಪ್ರಾರಂಭಿಸಲಾಗಿದೆಯೇ? ಅದನ್ನು ಉತ್ತರದಲ್ಲಿ ಹೇಳಿರುವುದಿಲ್ಲ. ಸದರಿ ಮೇಲ್ಛಾವಣಿಯನ್ನು ನಿರ್ಮಿತಿ ಕೇಂದ್ರ, ಕಲಬುರಗಿ ಇವರು ತಾತ್ಕಾಲಿಕವಾಗಿ ಸರಿಪಡಿಸಿರುತ್ತಾರೆ ಎಂದು ತಿಳಿಸಿದ್ದಾರೆ. ವಿದ್ಯಾರ್ಥಿನಿಯರ ಪ್ರಾಣ ರಕ್ಷಣೆ ವಿಷಯದಲ್ಲಿ ಈ ತಾತ್ಕಾಲಿಕ ದುರಸ್ತಿ ಸುರಕ್ಷಿತವೇ? ಪೂರ್ಣಪ್ರಮಾಣದ ಭದ್ರತಾ ತಪಾಸಣೆ, structural audit ನಡೆಸಲಾಗಿದೆಯೇ ಎಂದು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

**ಸಭಾಪತಿಯವರು:-** ಮಂತ್ರಿಗಳು ಉತ್ತರ ಕೊಡಲಿ ಇರಿ..

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಸಂಗೋಳಗಿ ಶಾಲೆಯ 11 ಕಟ್ಟಡಗಳಲ್ಲಿ 5 ಕೊಠಡಿಗಳು ಸಂಪೂರ್ಣವಾಗಿ ಅಪಾಯಕಾರಿಯಾಗಿದ್ದು ಪ್ರಸ್ತುತ ಮಕ್ಕಳು ಅಭದ್ರತೆಯಲ್ಲಿ ಕಲಿಯುತ್ತಿದ್ದಾರೆ. ಇದಕ್ಕೆ 2026-27ನೇ ಸಾಲಿನ ಬಜೆಟ್‌ವರೆಗೆ ಕಾಯುವುದು ಸರಿಯೇ? ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ತುರ್ತುನಿಧಿ ಮೂಲಕ ಈ ಶಾಲೆಯನ್ನು ದುರಸ್ತಿ ಮಾಡುವುದಕ್ಕಾಗುತ್ತದೆಯೇ ಎಂದು ಮಾನ್ಯ ಸಚಿವರು ತಿಳಿಸಬೇಕು.

**(ಮುಂದು)**

(826) ದಿ: 24-08-2026, (12.40), ಕೆಜಿ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಮಾನ್ಯ ಸದಸ್ಯರು ಸ್ವಸ್ಥಾನಗಳಲ್ಲಿ ನಿಂತು ನಿರಂತರವಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವುದು ನಿಜ. ಅವರು accountability ಕೇಳುತ್ತಿದ್ದಾರೆ. ಅವರು K.K.R.D.B., ಯಲ್ಲಿ ಯಾವಾಗ ಯಾವುದಕ್ಕೆ ಎಷ್ಟು ಖರ್ಚು ಆಗಿದೆ ಕೇಳಿದ್ದಾರೆ. ನಾನು accountability ಗೆ ಆದಷ್ಟು ಬೇಗ ಹೇಳುತ್ತೇನೆ. ಇವತ್ತೇ ಹೇಳುತ್ತೇನೆ. Accountability ಗೆ ಏನಾಗುತ್ತದೆ ಎಂದರೆ, ನಮಗೆ ಬೇರೆಯವರು ಕಟ್ಟಡವನ್ನು ಕಟ್ಟಿ ಕೊಡುತ್ತಾರೆ. ಅವರು ಕಟ್ಟಿಕೊಟ್ಟ ಮೇಲೆ ಲೋಕೋಪಯೋಗಿ ಇಲಾಖೆಯವರೋ, Agency ಯವರೋ ಇದು occupancy ಗೆ qualified ಎಂದು ಹೇಳಬೇಕಾಗುತ್ತದೆ. ಮಾನ್ಯ ಸದಸ್ಯರು ಅದನ್ನು ಯಾರು ಯಾರಿಗೆ construct ಮಾಡಿದ್ದಾರೆಂದು ಕೇಳಿದ್ದಾರೆ. ಅದಕ್ಕೆ ಅದು ಎಷ್ಟು ವರ್ಷ ಬಾಳಿಕೆ ಬರಬೇಕಾಗಿತ್ತು, ಅವರಿಂದ ಏನಾದರೂ ತಪ್ಪಾಗಿದೆಯೇ ಎಂದು ಗೊತ್ತಾದರೆ, ಅವರಿಗೆ ನಾನು ಇವತ್ತೇ ನಿರ್ದೇಶನ ಕೊಡುತ್ತೇನೆ. ಲೋಕೋಪಯೋಗಿ ಇಲಾಖೆಯವರೋ ಅಥವಾ ಅವರು handover ಮಾಡಿದ್ದರೆ, ಅವರು ಯಾರು contractor ಇದ್ದಾರೆ ಅವರ ಮೇಲೆ ನಿರ್ದಾಕ್ಷಿಣ್ಯ ಕ್ರಮವನ್ನು ತೆಗೆದುಕೊಳ್ಳುವುದು ಒಂದು ಭಾಗ.

ಮಾನ್ಯ ಸಭಾಪತಿಯವರೇ, ಇನ್ನೊಂದು ವಿಚಾರವನ್ನು ಹೇಳುತ್ತೇನೆ. ನಾವು ಇಡೀ ರಾಜ್ಯದಲ್ಲಿ ಈ ಘಟನೆಯಾದ ಮೇಲೆ, ಏಕೆಂದರೆ, ಅದನ್ನು ನಾನು ಟಿವಿಯಲ್ಲಿ ನೋಡಿದ್ದೇನೆ. By chance ಏನಾದರೂ ಮಕ್ಕಳು ಶಾಲೆಯಲ್ಲಿ ಇದ್ದಂತಹ ಸಂದರ್ಭದಲ್ಲಿ ಅದು ಆಗಿದ್ದರೆ, ನಿಜವಾಗಲೂ ಸಹ ಅದು ಬಹಳ ದೊಡ್ಡ ದುರಂತ ಆಗುತ್ತಿತ್ತು. ನಾನು ಆ ಸಂದರ್ಭದಲ್ಲಿಯೇ ಅಧಿಕಾರಿಗಳಿಗೆ ಹೇಳಿದ್ದೇನೆ. ಈ ಮಧ್ಯೆ two months gap ಬೇರೆ ಬಂತು. ಆದರೂ ಸಹ, ನಾನು ಅದನ್ನು ಇಲಾಖೆಯವರಿಗೂ ಹೇಳಿದ್ದೇನೆ. ನಮ್ಮ ಇಡೀ ರಾಜ್ಯದಲ್ಲಿರುವಂತಹ ಯಾವುದೇ ಶಾಲೆಗಳು ಈ ತರಹ ದುಸ್ಥಿತಿಯಲ್ಲಿದ್ದರೆ, ಅದನ್ನು ಅಲ್ಲಿರುವಂತಹ B.E.O., D.D.P.I., ರವರಿಗೆ ನಮ್ಮ ಅಧಿಕಾರಿಗಳಿಗೆ ಕ್ರಮತೆಗೆದುಕೊಳ್ಳುವುದಕ್ಕೆ ಹೇಳಿದ್ದೇನೆ. ಅದು ಏನಾದರೂ ಸುರ್ಜಿತವಾಗಿಲ್ಲ, safety ಇಲ್ಲವೆಂದರೆ, ಅದರ security ಅನ್ನು ನೋಡಿಕೊಂಡು ಮಕ್ಕಳನ್ನು ತರಗತಿಗೆ ಸೇರಿಸಬೇಕೆಂದು ಹೇಳಿದ್ದೇನೆ. ಈ ವಿಚಾರದ ಜೊತೆಗೆ ಯಾರು ಈ construction ಮಾಡಿದ್ದಾರೆ, ಅದು ಅವಧಿಗೆ ಮುಂಚೆ ಏನಾದರೂ ಹಾಳಾಗಿದೆ

ಎಂದರೆ, ಅಂತಹ ಗುತ್ತಿಗೆದಾರರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರಿಗಳಿಗೆ ತಿಳಿಸಿದ್ದೇನೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ಇನ್ನು ಎರಡು ನಿಮಿಷ ಮಾತನಾಡುತ್ತೇನೆ. ಈಗ ಸಚಿವರ ಗಮನಕ್ಕೆ ಒಂದು ವಿಷಯವನ್ನು ತರಯಬಯಸುತ್ತೇನೆ. ನಮ್ಮ K.K.R.D.B., ಯದ್ದು 'ಅಕ್ಷರ ಆವಿಷ್ಕಾರ ಯೋಜನೆಗೆ' ಸಾವಿರ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ, ಆ ಹಣ ಎಲ್ಲಿ ಉಳಿದಿದೆ ಎಂದು ಗೊತ್ತಾಗಲಿಲ್ಲ. 2026-2027ನೇ ಸಾಲಿನಲ್ಲಿ ಶೌಚಾಲಯಗಳಿಗೆ 75 ಕೋಟಿ ರೂಪಾಯಿಗಳನ್ನು ಹಾಗೂ ಪೀಠೋಪಕರಣಗಳಿಗೆ 25 ಕೋಟಿ ರೂಪಾಯಿಗಳನ್ನು ಕಾಯ್ದಿರಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ, ರಾಜ್ಯದಲ್ಲಿ ಶೇಕಡಾ 30 ಕ್ಕೂ ಹೆಚ್ಚು ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಹಾಗೂ ಕುಳಿತುಕೊಳ್ಳಲು desk ಗಳ ಕೊರತೆ ಇದೆ. ಇದನ್ನು ನಿವಾರಿಸಲು ರಾಜ್ಯದ್ಯಾಂತ ಇರುವ ನಿಖರವಾದ ಪ್ರಮಾಣವನ್ನು ಮಾನ್ಯ ಸಚಿವರು ಹೇಳಿಲ್ಲ. ಅದಕ್ಕೆ ಮಾನ್ಯ ಸಚಿವರು ಉನ್ನತ ಮಟ್ಟದ ಅಧಿಕಾರಿಗಳನ್ನು ಗುಲ್ಬರ್ಗಾ ಜಿಲ್ಲೆಗೆ ಕಳುಹಿಸಿ ಎಷ್ಟು ಶಾಲೆಗಳು ಸುಸ್ಥಿತಿಯಲ್ಲಿವೆ ಹಾಗೂ ಎಷ್ಟು ಶಾಲೆಗಳು ದುಸ್ಥಿತಿಯಲ್ಲಿವೆ, ಎಷ್ಟು ಶಾಲೆಗಳ ಛಾವಣಿ ಕುಸಿದಿದೆ, ಅದಕ್ಕೆ ಯಾವ ಯಾವ ಕ್ರಮಗಳನ್ನು ಕೈಗೊಳ್ಳಬೇಕೆಂದು ಅಧ್ಯಯನ ಮಾಡಿಸಿ ಅವರಿಂದ ಒಂದು ವರದಿಯನ್ನು ತೆಗೆದುಕೊಂಡು ಅವರ ಮೇಲೆ ಮಾನ್ಯ ಸಚಿವರು ನಿರ್ಧಾರ ತೆಗೆದುಕೊಂಡರೆ ಅನುಕೂಲವಾಗುತ್ತದೆ ಎಂಬುದು ನನ್ನ ಸಲಹೆ.

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುವುದು ಸರಿ ಇದೆ. ಏಕೆಂದರೆ, ಎಲ್ಲೆಲ್ಲಿ ಮಕ್ಕಳಿಗೆ ಸವಲತ್ತುಗಳು ಕಡಿಮೆ ಇವೆ, ಅದರ ಬಗ್ಗೆ ಒಂದು assess ಅನ್ನು ಮಾಡಿಸಬೇಕಾಗುತ್ತದೆ. ಮಾನ್ಯ ಸದಸ್ಯರು ನಮ್ಮ head office ನಿಂದಲೇ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಎಂದು ಹೇಳಿದ್ದಾರೆ. ಅಧಿಕಾರಿಗಳು ಇಲ್ಲಿಯೇ ಇದ್ದು, ಅವರ ಬಳಿ ಮಾತನಾಡಿ ಆದಷ್ಟು ಬೇಗ ಕ್ರಮತೆಗೆದುಕೊಳ್ಳುತ್ತೇವೆ. ನಮ್ಮಲ್ಲಿ ಅದನ್ನು ನೋಡುವಂತಹ structure ಕೂಡ ಇದೆ. ನಾನು ಆದಷ್ಟು ಬೇಗ ಮಾಡಿಸುತ್ತೇನೆ.

## ಪ್ರಶ್ನೆ ಸಂಖ್ಯೆ 942

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಚಿದಾನಂದ್ ಎಂ.ಗೌಡರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಚಿದಾನಂದ್ ಎಂ.ಗೌಡರವರು ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

**ಪ್ರಶ್ನೆ ಸಂಖ್ಯೆ 952**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರರವರು ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

**ಪ್ರಶ್ನೆ ಸಂಖ್ಯೆ 853**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪರವರು ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

**ಪ್ರಶ್ನೆ ಸಂಖ್ಯೆ 849**

ಸಭಾಪತಿಯವರು:- ಮಾನ್ಯ ಸದಸ್ಯರಾದ ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) ರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) ರವರು ಸದನದಲ್ಲಿ ಉಪಸ್ಥಿತರಿರಲಿಲ್ಲ)**

**ಪ್ರಶ್ನೆ ಸಂಖ್ಯೆ 949**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ॥ ಕೆ.ಗೋವಿಂದರಾಜ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಸುಧೀರ್ಘವಾಗಿ ಮತ್ತು ಸಮರ್ಪಕವಾದ ಉತ್ತರನವನ್ನು ನೀಡಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಸಾಧನೆ ಮತ್ತು ಇತರೆ ಬಗ್ಗೆ ಮಾಹಿತಿ ಒದಗಿಸಬೇಕೆಂದು ಕೋರುತ್ತೇನೆ. ಇನ್ನು ಪರಿಸರ ಸಂರಕ್ಷಣೆ ನಿಟ್ಟಿನಲ್ಲಿ ಮಂಡಳಿಯ ಕಾರ್ಯ ನಿಯಮ ಏನು ಮತ್ತು ಹೇಗೆ ಎನ್ನುವ ಬಗ್ಗೆ ಜನ ಸಾಮನ್ಯರಿಗೆ ಅರ್ಥವಾಗುತ್ತಿಲ್ಲ. ಇನ್ನೂ ಪರಿಸರಕ್ಕೆ ಹಾನಿ ತರುವಂತಹ ಕೈಗಾರಿಕೆಗಳ ಮತ್ತು ಇತರ ಸಂಸ್ಥೆಗಳ ವಿರುದ್ಧ ಏನು ಕ್ರಮವಾಗುತ್ತಿದೆ ಎಂದು ತಿಳಿಸಬೇಕೆಂಬುದು ನನ್ನ ಮನವಿಯಾಗಿದೆ. ಪರಿಸರ ಹಾನಿ ಮಾಡಿದಂತಹ ಸಂದರ್ಭದಲ್ಲಿ ವಿಧಿಸಲಾದ ಮತ್ತು ಸಂಗ್ರಹಿಸಲಾದ ಪರಿಸರ ಹಾನಿ ನಿಧಿಯ ಮಾರ್ಗಸೂಚಿ ಅನುಸಾರ ಬಳಕೆ ಮಾಡಲು ವಿಫಲವಾಗಿರುವ ಮಂಡಳಿಯ ಕುರಿತಾಗಿ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಮುಖ್ಯ ಪೀಠವು Karnataka State Pollution Control Board (KSPCB) ಸಂಗ್ರಹಿಸಿದ ಪರಿಸರ ಹಾನಿ ನಿಧಿಯ ಬಳಕೆ ಕುರಿತಾಗಿ ವಿವರ ಸಲ್ಲಿಸುವಂತೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದರ ಬಗ್ಗೆ Karnataka State Pollution Control Board ನಿರ್ಲಕ್ಷತೆ ಬಗ್ಗೆ ಸರ್ಕಾರ ಯಾವ ಕ್ರಮವನ್ನು ಜರುಗಿಸಿದೆ ಎಂಬುದನ್ನು ತಿಳಿಸಿ ಎಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ. ಮಂಡಳಿ **ಅಸ್ತಿತ್ವ,** ಪರಿಸರ ಕಾಳಜಿ ಮತ್ತು ಹಾನಿ ಆಗಿರುವ ವಿಚಾರಗಳನ್ನು ತಿಳಿಸಿ ಎಂದು ಕೇಳಿದ್ದೆ. ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ.

**ಶ್ರೀ ರಾಮಲಿಂಗ ರೆಡ್ಡಿ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):–** ಮಾನ್ಯ ಸಭಾಪತಿಯವರೇ, ಬಹಳ ಸವಿಸ್ತಾರವಾಗಿ ಉತ್ತರಗಳನ್ನು ನೀಡಿದ್ದೇನೆ. ನಮ್ಮಲ್ಲಿ ಇದರಲ್ಲಿನ ಹಣವನ್ನು ಖರ್ಚು ಮಾಡಿಲ್ಲ. ಆದರೆ, ಬೇರೆ ಹಣವನ್ನು ಖರ್ಚು ಮಾಡಿದ್ದೇವೆ. ಈ ಪರಿಸರಕ್ಕೆ ಸಂಬಂಧಪಟ್ಟಂತೆ, ಯಾವ ಯಾವ ಇಲಾಖೆ ಏನೇನು ಕೆಲಸ ಮಾಡಬೇಕೆಂಬುದರ ಬಗ್ಗೆ ವಿವರವಾಗಿ ಉತ್ತರವನ್ನು ಕೊಟ್ಟಿದ್ದೇನೆ. ವಾಯು ಕಾಯಿದೆ ಅಡಿಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಮತ್ತು ವಾಯು ಮಾಲಿನ್ಯ ತಡೆಗೆ ಕೈಗೊಂಡ ಕ್ರಮಗಳ ಬಗ್ಗೆ ತಿಳಿಸಲಾಗಿದೆ. ನಾವು ಸಲಹೆಗಳನ್ನು ಕೊಡುತ್ತಿರುವಂತಹದ್ದರ ಬಗ್ಗೆ ಮತ್ತು ಜಲ ಕಾಯ್ದೆ ಅಡಿಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಹೇಳಿದ್ದೇವೆ. ಈ ಎಲ್ಲಾದರ ಬಗ್ಗೆ ಸವಿಸ್ತಾರವಾಗಿ ಮತ್ತು detail ಆಗಿ ಉತ್ತರವನ್ನು ನೀಡಿದ್ದೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಆಗಬಹುದೇ?

**ಡಾ॥ ಕೆ.ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ಆಯಿತು.

**ಆ) ತಡೆಹಿಡಿಯಲಾದ ಪ್ರಶ್ನೆಗಳು**

**ಪ್ರಶ್ನೆ ಸಂಖ್ಯೆ 18**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡರವವರು ಘೋಷಣೆ ಕೂಗುವುದರಲ್ಲಿ ನಿರತರಾಗಿದ್ದರು)**

**ಪ್ರಶ್ನೆ ಸಂಖ್ಯೆ 52**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಶಿವಣ್ಣ ಬಿ.ಎಸ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಸ್ನಾತಕೋತ್ತರ ಪದವಿಯವರೆಗಿನ ಎಲ್ಲಾ ಹಂತಗಳ ಶಿಕ್ಷಣದಲ್ಲಿ 'ಭಾರತದ ಸಂವಿಧಾನದ' ದ ಕುರಿತಾದ ಪಾಠಗಳನ್ನು ಕಡ್ಡಾಯವಾಗಿ ಪಠ್ಯಕ್ರಮದಲ್ಲಿ ಅಳಡಿಸುವ ಪ್ರಸ್ತಾವನೆ ಸರ್ಕಾರದ ಮುಂದದಿಯೇ ಎಂದು ಮಾನ್ಯ ಸಚಿವರರಲ್ಲಿ ಕೇಳಿದ್ದೆ.

**ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಶಿವಣ್ಣ ಬಿ.ಎಸ್ ರವರು ಸಂವಿಧಾನ ವಿಚಾರದ ಬಗ್ಗೆ ಕೇಳಿದ್ದಾರೆ. ಈಗಾಗಲೇ ಸಾಕಷ್ಟು ಪಠ್ಯ ಪುಸ್ತಕದಲ್ಲಿ ಬೇರೆ ಬೇರೆ ಸಂದರ್ಭದಲ್ಲಿ ಸಂವಿಧಾನದ ಮೌಲ್ಯವನ್ನು ನಾವೆಲ್ಲರೂ ಉಪಯೋಗ ಮಾಡಿಕೊಳ್ಳುತ್ತಿದ್ದೇವೆ. ಎಲ್ಲಾ ಕಡೆಯೂ ಮಾಡಿಕೊಳ್ಳುತ್ತಿದ್ದೇವೆ. ಅವರವರ ಕಾಲಮಾನಕ್ಕೆ ಸಂಬಂಧಪಟ್ಟಂತೆ, details ಅನ್ನು ಅವರಿಗೆ ಕೊಟ್ಟಿದ್ದಾರೆ. ಅದರ ಜೊತೆಗೆ ಎಲ್ಲಾ ಶಾಲೆಯಲ್ಲಿಯೂ ಸಹ, ನಾವು ಬೆಳಗ್ಗೆ ನಮ್ಮ ಸರ್ಕಾರಿ ಶಾಲೆ ಮತ್ತು ಖಾಸಗಿ ಶಾಲೆಯಲ್ಲಿಯೂ ಸಹ, ಸಂವಿಧಾನದ ಪೀಠಿಕೆಯನ್ನು ಓದಲಾಗುತ್ತದೆ. ಕೆಲವು ಖಾಸಗಿ ಶಾಲೆಗಳಲ್ಲಿ ಓದುವುದಿಲ್ಲ. ಸರ್ಕಾರಿ ಶಾಲೆಯಲ್ಲಿ ಸಂವಿಧಾನದ ಪೀಠಿಕೆಯನ್ನು ಓದಲೇಬೇಕೆಂದು compulsory ಮಾಡಿದ್ದೇವೆ. ಈಗ ನಾವು moral science ಎಲ್ಲವನ್ನು ತಂದಿರುವುದರಿಂದ ಅದರಲ್ಲಿಯೂ ಬೇರೆ ಬೇರೆ ಹಂತದಲ್ಲಿ ಅವರಿಗೆ ಶಿಕ್ಷಣಕ್ಕೆ ಅನುಗುಣವಾದ ರೀತಿಯಲ್ಲಿ ಅವರಿಗೆ ಅರ್ಥವಾಗಬೇಕಾಗುತ್ತದೆ. 1ನೇ

ತರಗತಿಯಿಂದ. Higher Education ನನಗೆ ಬರುವುದಿಲ್ಲ. ಪದವಿ ಪೂರ್ವದವರೆಗೂ ಕೂಡ language ಇರಬಹುದು, Social Studies ಇರಬಹುದು, ಎಲ್ಲೆಲ್ಲಿ ಬೇಕೋ ಅದು ಕೊಡೋಣ.

ಮಾನ್ಯ ಸಭಾಪತಿಯವರೇ, ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಮಾನ್ಯ ಸದಸ್ಯರು ಲಿಖಿತ ರೂಪದಲ್ಲಿ ಕೊಟ್ಟರೆ, ನಮ್ಮ ಪಠ್ಯ ಪುಸ್ತಕದಲ್ಲಿ ಯಾವ ಯಾವ ಹಂತದಲ್ಲಿ ಹಾಕಬಹುದು ಎನ್ನುವ ಅಂದಾಜು ನಮಗೆ ಸಿಗುತ್ತದೆ. ಏಕೆಂದರೆ, ನಾವು subject ನೋಡಬೇಕಾಗುತ್ತದೆ. ಮತ್ತೆ ಇದನ್ನು ಸಹ ನೋಡಬೇಕಾಗುತ್ತದೆ. ಇದು ಬಹಳ ಮುಖ್ಯವಾಗಿದೆ. ಏಕೆಂದರೆ, ನಮ್ಮ ದೇಶದಲ್ಲಿ ಇದು ಒಂದು ತರಹ ದೇವರು ಇದ್ದಂತೆ. ನಮ್ಮ ಸಂವಿಧಾನದ ಬಗ್ಗೆ ತಿಳುವಳಿಕೆ ಕೊಡಬೇಕಾಗುತ್ತದೆ. ಅದು ಅವಶ್ಯಕತೆ ಇರುತ್ತದೆ. ಏಕೆಂದರೆ, ಎಲ್ಲಾ ಮಕ್ಕಳಿಗೂ ಜವಾಬ್ದಾರಿ ಬರಬೇಕು. ನಮ್ಮ ದೇಶ, ಆ ಪ್ರೀತಿ, ವಿಶ್ವಾಸ, ಗೌರವ ಬರಬೇಕಾಗುತ್ತದೆ. ತಾಯಿ ಸಮಾನ ತರುವಂತಹ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಏನಾದರೂ ಸಲಹೆಗಳನ್ನು writing ನಲ್ಲಿ ಯಾವ ಯಾವ ಸಂದರ್ಭದಲ್ಲಿ ತೆಗೆದುಕೊಳ್ಳಬಹುದು ಎನ್ನುವುದನ್ನು ಹೇಳಿದರೆ ಒಳ್ಳೆಯದು. ಏಕೆಂದರೆ, ಸಂವಿಧಾನದ ಪುಸ್ತಕ ದೊಡ್ಡದಾಗಿದೆ. ಆದರೆ, ನಾವು ಅದರ ಪೀಠಿಕೆಗೆ ಮಾತ್ರ ಒತ್ತನ್ನು ಕೊಡುತ್ತಿದ್ದೇವೆ. ಇನ್ನು ಹೆಚ್ಚು ಏನಾದರೂ ಹೇಳಬೇಕೆಂದರೆ, ಮಾನ್ಯ ಸದಸ್ಯರಾದ ಬಿ.ಎಸ್.ಶಿವಣ್ಣನವರಿಗೆ ಸ್ವಲ್ಪ ಈ ಕಡೆಗೆ ಯಾವತ್ತು ಸಹ ಆಸಕ್ತಿ ಜಾಸ್ತಿ. ಅವರ nick name, 'Lohia' ಎಂದು ಇಟ್ಟುಕೊಂಡಿದ್ದಾರೆ. ಅದಕ್ಕೆ ಮಾನ್ಯ ಸದಸ್ಯರು ವೈಯಕ್ತಿಕವಾಗಿ ಕೊಡಲಿ. ಅದನ್ನು ಗ್ಯಾರಂಟಿ ನಮ್ಮ ಪಠ್ಯ ಪುಸ್ತಕದಲ್ಲಿ ಪ್ರಕಟಿಸಿ, ಅದರಿಂದ ಮಕ್ಕಳಿಗೆ ಬಹಳ ಒಳ್ಳೆಯ ರೀತಿಯಲ್ಲಿ ಆಸಕ್ತಿ ಬರುವಂತೆ ಮತ್ತು ಅದರ ಅರ್ಥ ಆಗುವಂತೆ ಮಾಡಿ, ನಮ್ಮ ದೇಶದ ಬಗ್ಗೆ ಪ್ರೇಮ ಮತ್ತು ಪ್ರೀತಿ ವಿಶ್ವಾಸ ಬರುವಂತೆ ಆ ವ್ಯವಸ್ಥೆಯನ್ನು ಮಾಡುತ್ತೇನೆಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಪ್ರಶ್ನೆ ಸಂಖ್ಯೆ 137**

ಸಭಾಪತಿಯವರು:- ಮಾನ್ಯ ಸದಸ್ಯರಾದ ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) ರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) ರವರು ಸದನದಲ್ಲಿ ಹಾಜರಿರಲಿಲ್ಲ)**

**ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಡಾ॥ ಯತೀಂದ್ರ ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 24ನೇ ಆಗಸ್ಟ್ 2026, ಸಮೂಹ-1ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 150 ಪ್ರಶ್ನೆಗಳ ಪೈಕಿ 60 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:-** ಮಂಡಿಸಲಾಯಿತು.

(ಮುಂದು)

(827) 24.08.2026/11.50/ಎಂವಿ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

**3. ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು**

**ಸಭಾಪತಿಯವರು:-** ಶ್ರೀ ನಿರಾಣಿ ಹಣಮಂತ್ ರುದ್ರಪ್ಪರವರು ಪ್ರಸ್ತಾಪಿಸಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರು ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

**ಡಾ: ಯತೀಂದ್ರ. ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಮ್ಮ ಆಡಳಿತ ಪಕ್ಷದವರದ್ದು ಶೂನ್ಯವೇಳೆ ಪ್ರಸ್ತಾವನೆಗಳು ಜಾಸ್ತಿ ಇದೆ.

**ಅ) ವಿಷಯ:- ಕರಾವಳಿ ಭಾಗದ ಕ್ರೈಸ್ತ ಸಮುದಾಯದವರು 'ತೆನೆ ಹಬ್ಬ' ಆಚರಿಸುವ ಸಂದರ್ಭದಲ್ಲಿ ಸರ್ಕಾರಿ ರಜೆ ಘೋಷಣೆ ಮಾಡುವ ಕುರಿತು.**

- - - - -

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸೆಪ್ಟೆಂಬರ್ 8ರಂದು ಕ್ರೈಸ್ತ ಸಮುದಾಯದವರು ಆಚರಿಸುವ ದೇವಮಾತ ಕನ್ಯಾಮರಿಯಮ್ಮ ಜನ್ಮದಿನವಾಗಿದ್ದು, ಈ ದಿನವನ್ನು ಕರಾವಳಿ ಭಾಗದ ಕ್ರೈಸ್ತ ಬಾಂಧವರವರು 'ತೆನೆ ಹಬ್ಬ' ಆಚರಿಸುವ ಸಂದರ್ಭದಲ್ಲಿ ಸರ್ಕಾರಿ ರಜೆ ಘೋಷಣೆ ಮಾಡಬೇಕೆಂಬ ಬೇಡಿಕೆಯನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

ಕರಾವಳಿ ಭಾಗದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಕ್ರೈಸ್ತ ಸಮುದಾಯದವರು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದು, ಈ ಭಾಗದ ಕ್ರೈಸ್ತರು ಕೃಷಿಕರಾಗಿದ್ದು, ರೈತರು ಬೆಳೆದ ಹೊಸ ಫಸಲನ್ನು ದೇವರಿಗೆ ಅರ್ಪಿಸಿ, ದೇವಾಲಯಗಳಲ್ಲಿ ಪೂಜಾವಿಧಿಗಳನ್ನು ನೆರವೇರಿಸಿ, ಕುಟುಂಬದ ಸಹಭೋಜನದೊಂದಿಗೆ ಸಂಭ್ರಮವನ್ನು ಆಚರಣೆ ಮಾಡುತ್ತಾರೆ. ಈ ಹಬ್ಬವನ್ನು "ಕೊರಳ ಹಬ್ಬ", "ಕುಟುಂಬದ ಹಬ್ಬ" ಎಂದು ಕರೆಯುತ್ತಿದ್ದು. ಈ ಹಬ್ಬವು ಪ್ರತಿ ವರ್ಷ ಸೆಪ್ಟೆಂಬರ್ 8ರಂದು ಆಚರಿಸಲಾಗುತ್ತಿದೆ. ಇತ್ತೀಚಿನ ಕೆಲವು ವರ್ಷಗಳಲ್ಲಿ ಈ ಹಬ್ಬಕ್ಕೆ ರಾಜ್ಯ ಸರ್ಕಾರವು ನಿರ್ಬಂಧಿತ ರಜೆ (R.H) ಎಂದು ಘೋಷಣೆ ಮಾಡಬೇಕೆಂದು ಪರಿಗಣಿಸಿದೆ. ಇದು ಕೇವಲ ಶಿಕ್ಷಕರಿಗೆ ಮಾತ್ರ ಸೀಮಿತವಾಗಿದೆ. ಆದರೆ, ಕರಾವಳಿ ಭಾಗದಲ್ಲಿ ಈ ಹಬ್ಬವನ್ನು ಸಾರ್ವತ್ರಿಕವಾಗಿ ಆಚರಿಸುತ್ತಿದ್ದು, ಇದನ್ನು ನಾಡಹಬ್ಬದ ರೀತಿಯಲ್ಲಿ ಆಚರಿಸಲಾಗುತ್ತದೆ. ಸುಮಾರು 8

ದಿನಗಳ ಕಾಲ "ನೋವಿನಾ ವಿಶೇಷ ಪೂಜೆ" ನಡೆಸಿ ಮರಿಯಮ್ಮ ಮಾತೆಗೆ ತೋಟದ ಹೂಗಳನ್ನು ಅರ್ಪಣೆ ಮಾಡಿ ಈ ಹಬ್ಬದಲ್ಲಿ ಕಬ್ಬುಗಳನ್ನು ವಿತರಿಸುವುದು ವಿಶೇಷವಾಗಿರುತ್ತದೆ.

ದಿನಾಂಕ ೮ರಂದು ಮಂಗಳೂರು, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಧರ್ಮ ಪ್ರಾಂತ್ಯಗಳಲ್ಲಿ ವಿವಿಧ ಪೂಜಾ ವಿಧಿಗಳು ನಡೆಯುತ್ತಿದ್ದು, ಕರ್ನಾಟಕ ರಾಜ್ಯ ಸೆಪ್ಟೆಂಬರ್ ೮ರಂದು ಸಾರ್ವತ್ರಿಕ ರಜೆ ಎಂದು ಘೋಷಣೆ ಮಾಡಬೇಕೆಂದು, ಈಗಾಗಲೇ ಕ್ರೈಸ್ತ ಸಮುದಾಯದ ಕ್ಯಾಥೋಲಿಕ ಸಭಾ ಮತ್ತು ಇತರೆ ಸಂಘಟನೆಗಳು ರಾಜ್ಯದ ಮುಖ್ಯಮಂತ್ರಿಯವರಿಗೆ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿಯನ್ನು ಸಲ್ಲಿಸಿದೆ. ಒಂದು ವೇಳೆ ರಾಜ್ಯಾದ್ಯಂತ ರಜೆ ನೀಡಲು ಅಸಾಧ್ಯವಾದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಿಗೆ ಸಾರ್ವತ್ರಿಕ ರಜೆ ಘೋಷಣೆ ಮಾಡಬೇಕೆಂದು ಕ್ರೈಸ್ತ ಸಮುದಾಯದವರ ಬೇಡಿಕೆಯಾಗಿದೆ. ಇದೊಂದು ಸಾರ್ವಜನಿಕ ಮಹತ್ವವುಳ್ಳ ವಿಚಾರವಾಗಿರುವುದರಿಂದ ಶೂನ್ಯವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯ ಬಯಸುತ್ತೇನೆ.

**ಡಾ: ಯತೀಂದ್ರ. ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರಿಂದ ನಂತರ ಉತ್ತರವನ್ನು ಕೊಡಿಸಲಾಗುವುದು.

**ಆ) ವಿಷಯ:- ಕಲ್ಯಾಣ ಕರ್ನಾಟಕ ಹಾಗೂ ವಾಯುವ್ಯ ಕರ್ನಾಟಕ ಭಾಗಗಳಲ್ಲಿ ಹಳೆಯ/ಅಸುರಕ್ಷಿತ ಬಸ್‌ಗಳ ಸಂಚಾರ ಮತ್ತು ಮಾಸಿಕ ಬಸ್ ಪಾಸ್ ದರದಲ್ಲಿನ ತಾರತಮ್ಯವನ್ನು ಸರಿಪಡಿಸುವ ಕುರಿತು.**

- - - - -

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕಲ್ಯಾಣ ಕರ್ನಾಟಕ ಹಾಗೂ ವಾಯುವ್ಯ ಕರ್ನಾಟಕ ಭಾಗಗಳಲ್ಲಿ ಹಳೆಯ, ಅಸುರಕ್ಷಿತ ಬಸ್‌ಗಳ ಸಂಚಾರ ಮತ್ತು ಮಾಸಿಕ ಬಸ್ ಪಾಸ್ ದರದಲ್ಲಿನ ತಾರತಮ್ಯವನ್ನು ಸರಿಪಡಿಸುವ ಕುರಿತು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ಕೋರಿದ್ದೆ. ತಾವು ಅದಕ್ಕೆ ಅನುಮತಿ ಕೊಟ್ಟಿದ್ದೀರಿ. ಅದಕ್ಕೆ ತಮಗೆ ಧನ್ಯವಾದಗಳು.

ಕಲ್ಯಾಣ ಕರ್ನಾಟಕ (K.K.R.T.C) ಮತ್ತು ವಾಯುವ್ಯ ಕರ್ನಾಟಕ (N.W.K.R.T.C) ಭಾಗದ ಗ್ರಾಮೀಣ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆ ತೀವ್ರ ಶೋಚನೀಯ ಹಂತದಲ್ಲಿರುವ ಬಗ್ಗೆ ದಿನಾಂಕ 22.08.2026ರ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಹಳೆ ಮೈಸೂರು ಹಾಗೂ ಬೆಂಗಳೂರು ಭಾಗಗಳಿಗೆ ನೂತನ ಎ.ಸಿ. ಹಾಗೂ ಮಲ್ಟಿ ಆಕ್ಸಲ್ ಬಸ್‌ಗಳನ್ನು ಒದಗಿಸಲಾಗುತ್ತಿದ್ದರೆ, ಕಲ್ಯಾಣ ಹಾಗೂ ವಾಯುವ್ಯ ಕರ್ನಾಟಕದ ಭಾಗಗಳಿಗೆ ಕೇವಲ ಹಳೆಯ ಮತ್ತು ದುರಸ್ತಿಗೆ ಬಂದ ಹಾಗೂ ಕೆಟ್ಟು ನಿಲ್ಲುವ ಬಸ್‌ಗಳನ್ನೇ ಓಡಿಸಲಾಗುತ್ತಿದೆ. ಸೀಟುಗಳು, ಕಿಟಕಿಗಳು, ಬಾಗಿಲುಗಳು ಹಾಳಾಗಿದ್ದು, ಲೈಟ್‌ಗಳು ಸರಿಯಾಗಿ ಉರಿಯುತ್ತಿಲ್ಲ. ಇತ್ತೀಚೆಗೆ ಯಾದಗಿರಿ ಸಮೀಪದ ಯಡ್ರಾಮಿ ಮಾರ್ಗದಲ್ಲಿ ಬಸ್ ಆಕ್ಸಲ್ ಕಟ್ ಆಗಿ ಅಪಘಾತಕ್ಕೀಡಾಗಿರುವುದು ಹಾಗೂ ಚಿಂಚೋಳಿ ಮಾರ್ಗದಲ್ಲಿ ಮೊಬೈಲ್ ಬೆಳಕಿನಲ್ಲಿ ಪ್ರಯಾಣಿಕರು ಪ್ರಯಾಣಿಸಿರುವುದು ಬಸ್‌ಗಳ ದುಸ್ಥಿತಿಗೆ ಸಾಕ್ಷಿಯಾಗಿದೆ. ಹಳೆಯ ಬಸ್‌ಗಳನ್ನು ನೀಡುತ್ತಿದ್ದರೂ, ಮಾಸಿಕ ಪಾಸ್ ದರದಲ್ಲಿ ಕಲ್ಯಾಣ ಕರ್ನಾಟಕದ ಪ್ರಯಾಣಿಕರಿಗೆ ಹೆಚ್ಚುವರಿ ಹೊರೆ ಹಾಕಲಾಗುತ್ತಿದೆ. ಉದಾಹರಣೆಗೆ; 20ನೇ ಸ್ಟೇಜ್‌ಗೆ ಸಾಮಾನ್ಯ ಬಸ್ ಪಾಸ್ ದರ ₹ 3,230/- ರಷ್ಟಿದ್ದರೆ, ಅದೇ ಸ್ಟೇಜ್‌ಗೆ ಪ್ರಯಾಣಿಕರಿಂದ ₹ 230/- ವರೆಗೆ ಹೆಚ್ಚುವರಿ ಶುಲ್ಕ ವಸೂಲಿ ಮಾಡುತ್ತಿದ್ದಾರೆ.

ಕಲ್ಯಾಣ ಕರ್ನಾಟಕ ಹಾಗೂ ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆಗಳಿಗೆ ಹೊಸ ಬಸ್‌ಗಳನ್ನು ತಕ್ಷಣವೇ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಬೇಕು. ಹಳೆಯ ಬಸ್‌ಗಳನ್ನು ನೀಡಿ, ಹೆಚ್ಚಿನ ಪಾಸ್ ದರ ವಸೂಲಿ ಮಾಡುತ್ತಿರುವ ತಾರತಮ್ಯವನ್ನು ತಕ್ಷಣವೇ ತೆರವುಗೊಳಿಸಬೇಕು. ಪ್ರಯಾಣಿಕರಿಗೆ ದರ ವಿನಾಯಿತಿ ನೀಡಿ ಗ್ರಾಮೀಣ ಭಾಗದ ಶಾಲಾ-ಕಾಲೇಜು ವಿದ್ಯಾರ್ಥಿಗಳು, ನೌಕರರು ಹಾಗೂ ಸಾರ್ವಜನಿಕರ ಸುರಕ್ಷಿತ ಪ್ರಯಾಣಕ್ಕೆ ಸರ್ಕಾರ ತಕ್ಷಣ ಕೈಗೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ಮಾನ್ಯ ಸಾರಿಗೆ ಸಚಿವರನ್ನು ಒತ್ತಾಯಿಸುತ್ತೇನೆ.

**ಡಾ: ಯತೀಂದ್ರ. ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಾರಿಗೆ ಸಚಿವರಿಂದ ನಂತರ ಉತ್ತರವನ್ನು ಕೊಡಿಲಾಗುವುದು.

**ಇ) ವಿಷಯ:- ಅಭಯಾರಣ್ಯ ವ್ಯಾಪ್ತಿಯಲ್ಲಿರುವ ವಸತಿ ಪ್ರದೇಶಕ್ಕೆ ವಿನಾಯಿತಿ ನೀಡುವ ಕುರಿತು.**

- - - - -

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ತಮಗೆ ಧನ್ಯವಾದಗಳು. "ಶೀತ ಆಯಿತೆಂದು ಮೂಗನ್ನೇ ಕತ್ತರಿಸಿಕೊಳ್ಳಬೇಕೇ? ಸರಕಾರಿ ಕಚೇರಿಗಳಿಗೂ ಸಂಚಕಾರ, ಪ್ರತಿಯೊಂದಕ್ಕೂ ಅನುಮತಿಗೆ ಕಾಯುವ ರಗಳೆ, ಆತಂಕದಲ್ಲೇ ಸಂಪೂರ್ಣ ಬದುಕು!" ಎಂಬ ಶೀರ್ಷಿಕೆಯಡಿಯಲ್ಲಿ ದಿನಾಂಕ 11-08-2026ರ 'ಉದಯವಾಣಿ' ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಅಭಯಾರಣ್ಯ ವ್ಯಾಪ್ತಿಗೆ ನೂರಿನ್ನೂರು ಮೀಟರ್ ಬಂದರೆ ಇಡೀ ಗ್ರಾಮವೇ ಹೋಗುತ್ತಾ? ಇಂಥದೊಂದು ಆತಂಕ ಶುರುವಾಗಿರುವುದು ಕುಂದಾಪುರ ತಾಲ್ಲೂಕಿನ ವಂಡ್ಸೆ ಗ್ರಾಮದಲ್ಲಿ. ಡಾ: ಕೆ.ಕಸ್ತೂರಿ ರಂಗನ್ ವರದಿಯ ಪಶ್ಚಿಮ ಘಟ್ಟದ ಪರಿಸರ ಸೂಕ್ಷ್ಮ ಕ್ಷೇತ್ರದ ವ್ಯಾಪ್ತಿ ವಂಡ್ಸೆ ಗ್ರಾಮದ 150 ರಿಂದ 200 ಮೀಟರ್ ಮಾತ್ರ ಇರುತ್ತದೆ. ಆದರೆ, ಇದರಿಂದ ತೊಂದರೆ ಮಾತ್ರ ಇಡೀ ಗ್ರಾಮಕ್ಕೆ ಆಗುತ್ತಿದೆ. ಈ ಗ್ರಾಮದ ಕಥೆ ಶೀತ ಆಗಿದೆಯೆಂದು ಮೂಗನ್ನೇ ಕತ್ತರಿಸಿಕೊಂಡಂತಾಗಿದೆ. ಸೀಮಿತ ಪ್ರದೇಶಕ್ಕೆ ಆಗಬೇಕಾಗಿದ್ದ ಈ ಸಮಸ್ಯೆಗೆ 10-12 ವರ್ಷಗಳಾದರೂ ಪರಿಹಾರ ಸಿಕ್ಕಿಲ್ಲ. ನಿತ್ಯ ಏನಾಗುತ್ತದೋ ಏನೋ ಅನ್ನುವ ಆತಂಕವೇ ನಮ್ಮ ಬದುಕಾಗಿದೆ ಎನ್ನುತ್ತಾರೆ ಗ್ರಾಮಸ್ಥರು.

ನಿಜಕ್ಕಾದರೆ ಈ ಗ್ರಾಮದ ವ್ಯಾಪ್ತಿಯಲ್ಲಿ ಮೂಕಾಂಬಿಕಾ ಅಭಯಾರಣ್ಯ ಪ್ರದೇಶ ಇರುವುದು ಕೇವಲ 150 ರಿಂದ 200 ಮೀಟರ್ ಅಷ್ಟೇ. ಆದರೆ, ಈ ಗ್ರಾಮವನ್ನು ಪರಿಸರ ಸೂಕ್ಷ್ಮ ಪ್ರದೇಶಗಳ ವ್ಯಾಪ್ತಿಗೆ ಸೇರಿಸಿದ ಕಾರಣ, ಸುತ್ತಲಿನ ಸುಮಾರು 1 ಕಿಲೋಮೀಟರ್‌ನಷ್ಟೇ ಅಲ್ಲ, ವಂಡ್ಸೆ ಪೇಟೆ, ಗ್ರಾಮ ಪಂಚಾಯಿತಿ, ನಾಡ ಕಚೇರಿ ಸಹಿತ ಎಲ್ಲವೂ ಸಂಕಷ್ಟ ಅನುಭವಿಸುತ್ತಿವೆ. ಇಡೀ ವಂಡ್ಸೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 750 ಮನೆಗಳಿವೆ. ಆದರೆ, ಈ ವರದಿಯ ಜಾರಿಯಿಂದ ಆತಂಕ ಎದುರಿಸುತ್ತಿರುವ 400ಕ್ಕೂ ಹೆಚ್ಚು ಮನೆಯವರು. ಅಂದರೆ. ಶೇಕಡಾ 60ಕ್ಕಿಂತ ಹೆಚ್ಚು ಮಂದಿ ಈಗ ಬದುಕು ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ವಂಡ್ಸೆ ಪೇಟೆ, ಹರವರಿ, ತೆಂಕೊಡ್ಡಿ ಮಾವಿನಕಟ್ಟೆ ಸಹಿತ ಸುಮಾರು ಒಂದು ಕಿಲೋಮೀಟರ್ ಪ್ರದೇಶವೂ ಪರಿಸರ ಸಂರಕ್ಷಣೆ ವ್ಯಾಪ್ತಿಗೆ ಸೇರಿಕೊಂಡು ಸಮಸ್ಯೆ ಎದುರಿಸುವಂತಾಗಿದೆ.

ನಮ್ಮದು ಜನವಸತಿ, ಕೃಷಿ ಅವಲಂಬಿತ ಪ್ರದೇಶ, ವರದಿ ಜಾರಿಯಾದರೆ ಅದರ ನಿಯಮಗಳ ಪ್ರಕಾರ ಕೃಷಿ ಮಾಡಲು ಸಾಧ್ಯವೇ ಇಲ್ಲ. ಮನೆ ಕಟ್ಟಲು ಕನ್ವರ್ಷನ್, ಎನ್.ಓ.ಸಿ., ದೃಢೀಕರಣ ಪತ್ರ ಎಲ್ಲದಕ್ಕೂ ಕಷ್ಟ ಎನ್ನುವ ಆತಂಕದಲ್ಲೇ ಜನರಿದ್ದಾರೆ. ಇದು ಕೇವಲ ವಂಡ್ಸೆ ಗ್ರಾಮವೊಂದರ ಸಮಸ್ಯೆಯಲ್ಲ ರಾಜ್ಯದ ಪಶ್ಚಿಮ ಘಟ್ಟದ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ಇದೇ ರೀತಿಯ ಸ್ಥಿತಿ ಇದೆ. ಡಾ: ಕೆ.ಕಸ್ತೂರಿ ರಂಗನ್ ವರದಿ ಅಧಿಸೂಚನೆ ಬಂದ ಕೂಡಲೇ ಕೇರಳದಲ್ಲಿ ಎಲ್ಲ ಜನಪ್ರತಿನಿಧಿಗಳು ಪಕ್ಷಬೇಧ ಮರೆತು ಒಟ್ಟಾಗಿ ಹೋರಾಟ ಆರಂಭಿಸಿದ್ದಾರೆ. ನಮ್ಮಲ್ಲಿ ಮಾತ್ರ ಜನಪ್ರತಿನಿಧಿಗಳು ಈ ಬಗ್ಗೆ ಜಾಣ ಕುರುಡು ಪ್ರದರ್ಶಿಸುತ್ತಿದ್ದಾರೆ ಎಂಬುದು ಜನರ ಭಾವನೆಯಾಗಿದೆ.

ವರದಿ ಜಾರಿ ಮಾಡಲಿ. ಆದರೆ, ಅದರಿಂದ ಜನರಿಗೆ ಬದುಕಲು ಯಾವುದೇ ತೊಂದರೆಯಾಗದಿರಲಿ, ಜನ ವಸತಿ ಪ್ರದೇಶಕ್ಕೆ ವಿನಾಯಿತಿ ಸಿಗಬೇಕು. ಅಭಯಾರಣ್ಯ ವ್ಯಾಪ್ತಿಯ ನೂರಿನ್ನೂರು ಮೀಟರ್ ಹೊರತುಪಡಿಸಿ, ಬಾಕಿ ಪ್ರದೇಶವನ್ನು ಮುಕ್ತಗೊಳಿಸಬೇಕು. ಮುಖ್ಯವಾಗಿ ಇಲ್ಲಿನ ಜನ ಆಶ್ರಯಿಸಿರುವ ಅಡಿಕೆ, ಭತ್ತದ ಕೃಷಿ ಬೆಳೆಯಲು ಈ ಕಾಯಿದೆ ಕಾನೂನುಗಳು ತೊಡಕಾಗದಿರಲಿ, ಮೂಲ ಸೌಕರ್ಯಗಳಾದ ವಸತಿ, ರಸ್ತೆ, ನೀರಿಗೆ ತೊಂದರೆ ಆಗದ ಹಾಗೆ ಮಾಡಲಿ. ಕೂಡಲೇ ರಾಜ್ಯ ಸರ್ಕಾರವು ಕೇಂದ್ರ ಅಧಿಸೂಚನೆಗೆ ಸೂಕ್ತ ಆಕ್ಷೇಪಣೆಗಳನ್ನು ಸಲ್ಲಿಸಬೇಕಾಗಿದೆ. ಹಾಗಾಗಿ, ಮಾನ್ಯ ಅರಣ್ಯ, ಜೀವಿಶಾಸ್ತ್ರ ಹಾಗೂ ಪರಿಸರ ಇಲಾಖಾ ಮಂತ್ರಿಗಳನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ರಾಮಲಿಂಗಾ ರೆಡ್ಡಿ (ಅರಣ್ಯ, ಜೀವಿಶಾಸ್ತ್ರ ಹಾಗೂ ಪರಿಸರ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಬಹಳ ಸವಿಸ್ತಾರವಾದ ಉತ್ತರವನ್ನು ನೀಡಿದ್ದೇನೆ. ನಾನು ಕೊನೆಯ ಒಂದೇ ಒಂದು ಪ್ಯಾರಾವನ್ನು ಓದಿಬಿಡುತ್ತೇನೆ. ರಾಜ್ಯ ಸಚಿವ ಸಂಪುಟದ ಸಭೆಯ ನಿರ್ಣಯಗಳನ್ನು ಅನುಸರಿಸಿ, ಡಾ: ಕೆ.ಕಸ್ತೂರಿ ರಂಗನ್ ಸಮಿತಿಯ ವರದಿಯ ಶಿಫಾರಸುಗಳನ್ನು ನಿರಾಕರಿಸಿ, ಸದರಿ ವರದಿಯ ಅನುಷ್ಠಾನದ ಸಂಬಂಧ ಹೊರಡಿಸಿದ ಹಿಂದಿನ ಕೆಲವು ಅಧಿಸೂಚನೆಗಳನ್ನು ತಿರಸ್ಕರಿಸುವ ರಾಜ್ಯ ಸರ್ಕಾರದ ಸ್ಪಷ್ಟ ನಿಲುವನ್ನು ಮಾನ್ಯ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ನಾವು ಮುಂದಕ್ಕೂ ಕೂಡ ಅದನ್ನೇ ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ತಾವು ಅವರಿಗೆ written reply ಯನ್ನು ಕಳುಹಿಸಿಕೊಡಬೇಕು.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ಸದಸ್ಯರು ಮೂಡಾ ಹಗರಣ ಎಂದು ಕೂಗಿದರು)**

**(ಗೊಂದಲ)**

**ಶ್ರೀ ಹೆಚ್.ಸಿ. ಬಾಲಕೃಷ್ಣ:-** ಮಾನ್ಯ ಸಭಾಪತಿಯವರೇ, ಮೂಡಾ ಹಗರಣ ತೀರ್ಮಾನವಾಗಿದೆ. ಅವರು ಅದರ ಬಗ್ಗೆ ಏಕೆ ಮಾತನಾಡುತ್ತಾರೆ?

**(ಗೊಂದಲ)**

**ಶ್ರೀ ಶಿವಕುಮಾರ್. ಕೆ:-** ಮಾನ್ಯ ಸಭಾಪತಿಯವರೇ, ಏನು ಮೂಡಾ ಹಗರಣವಾಗಿದೆ? ಯಾವ ಮೂಡಾ ಹಗರಣವಾಗಿದೆ?

**(ಗೊಂದಲ)**

**ಸಭಾಪತಿಯವರು:-** ಶೂನ್ಯವೇಳೆ ಪ್ರಸ್ತಾವನೆ ಮತ್ತು ಅವುಗಳಿಗೆ ನೀಡುವ ಉತ್ತರಗಳನ್ನು ಬಿಟ್ಟು, ಬೇರೆ ಯಾವುದೂ ಕಡತಕ್ಕೆ ಹೋಗಬಾರದು. ಶೂನ್ಯವೇಳೆ ಪ್ರಸ್ತಾವನೆ ಬಿಟ್ಟು ಬೇರೆ ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿನ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಸಭಾಪತಿಯವರು:-** ಯಾವುದೂ ಸಹ ಕಡತಕ್ಕೆ ಹೋಗುವುದಿಲ್ಲ. ತಾವುಗಳು ಸುಮ್ಮನೆ ಕುಳಿತುಕೊಳ್ಳಿ. ಈಗ ಅವರನ್ನು ಬಿಟ್ಟುಬಿಡಿ.

(ಮುಂದು)

(828) 24.08.2026 ವೈಎಲ್-ವಿಕೆ 12.00 (ಸಭಾಪತಿಯವರ ಉಪಸ್ಥಿತಿ)

**ಈ) ವಿಷಯ:- ರಾಯಚೂರು ಜಿಲ್ಲೆಯಲ್ಲಿ ಒಂದೇ ತಿಂಗಳಲ್ಲಿ ಮೂವರು ಪರಿಶಿಷ್ಟ ಜಾತಿ ಸಮುದಾಯದವರು ಕೊಲೆಯಾಗಿದ್ದು, ಈ ಕುಟುಂಬಗಳಿಗೆ ಸೂಕ್ತ ಪರಿಹಾರ ಒದಗಿಸುವ ಕುರಿತು.**

- - - - -

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಿನಾಂಕ: 21.08.2026 ರಂದು 'ಕಲ್ಯಾಣ ಸತ್ಯ' ಎಂಬ ದಿನ ಪತ್ರಿಕೆ ಸೇರಿದಂತೆ ವಿವಿಧ ದಿನ ಪತ್ರಿಕೆಗಳಲ್ಲಿ "ಒಂದೇ ತಿಂಗಳಲ್ಲಿ ಪರಿಶಿಷ್ಟ ಜಾತಿ ಮೂವರ ಕೊಲೆ" ಎಂಬ ಶೀರ್ಷಿಕೆಯಡಿ, ಅತೀ ಹೆಚ್ಚು ಮೀಸಲು ಕ್ಷೇತ್ರಗಳನ್ನು ಒಳಗೊಂಡ ರಾಯಚೂರು ಜಿಲ್ಲೆಯಲ್ಲಿ ಒಂದೇ ತಿಂಗಳಲ್ಲಿ ಪರಿಶಿಷ್ಟ ಜಾತಿ ಸಮುದಾಯಕ್ಕೆ ಸೇರಿದ ಪುರುಷ & ಮಹಿಳೆಯರು ಒಳಗೊಂಡ ಹಾಗೆ ಮೂವರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಸಮುದಾಯಕ್ಕೆ ರಕ್ಷಣೆ ಇಲ್ಲವೇ ಎನ್ನುವ ಪ್ರಶ್ನೆ ತಲೆ ಎತ್ತುವಂತೆ ಮಾಡಿದೆ. ಒಂದೇ ದಿನ ಇಬ್ಬರು ಮಹಿಳೆಯರ ಅತ್ಯಾಚಾರ ಮತ್ತು ಕೊಲೆ ಪ್ರತ್ಯೇಕ ಘಟನೆಗಳಲ್ಲಿ ಪರಿಶಿಷ್ಟ ಜಾತಿಯ ಹಾಗೂ ಪರಿಶಿಷ್ಟ ಪಂಗಡದ ಯುವಕನ ಕೊಲೆ ಆಗಿರುವ ಘಟನೆಯು ಜಿಲ್ಲಾ ಪೋಲೀಸ್ ಇಲಾಖೆ ಗಂಭೀರ ವಿಮರ್ಶೆಗೆ ಗುರಿಯಾಗುವಂತಾಗಿದೆ. ಪರಿಶಿಷ್ಟ ಜಾತಿಯ ಹಾಗೂ ಪರಿಶಿಷ್ಟ ಪಂಗಡದ ದೌರ್ಜನ್ಯ ತಡೆ ಸಮಿತಿಗೆ ಜಿಲ್ಲಾಧಿಕಾರಿಗಳೇ ಅಧ್ಯಕ್ಷರಾಗಿದ್ದು, ಎಸ್ಪಿಯವರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ಜಿಲ್ಲೆಯಲ್ಲಿ ಯಾವುದೇ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಮೇಲೆ ದೌರ್ಜನ್ಯ ಪ್ರಕರಣಗಳು ನಡೆದರೆ, ತಕ್ಷಣವೇ ಜಿಲ್ಲಾಧಿಕಾರಿ ಹಾಗೂ ಎಸ್ಪಿಯವರು ಭೇಟಿ ನೀಡಿ, ಪರಿಶೀಲಿಸಿ ಪ್ರಕರಣದ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ದೆಹಲಿಯ ನಿರ್ಭಯ ಪ್ರಕರಣದ ಮಾದರಿಯಲ್ಲಿ ಅತ್ಯಾಚಾರ ನಡೆದು ಕುಮಾರಿ ಅಶ್ವಿನಿಯನ್ನು ಅತ್ಯಂತ ಅಮಾನುಷವಾಗಿ ಬಾವಿಗೆ ಎಸೆದು ಕೊಲೆ ಮಾಡಿದ ಘಟನಾ ಸ್ಥಳಕ್ಕೆ ಹಾಗೂ ಕುಟುಂಬದವರ ಭೇಟಿಗೆ ಸಂಬಂಧಪಟ್ಟ ಅಧಿಕಾರಿಗಳು ಸ್ವಯಂ ಬಾರದಿರುವುದು ಪರಿಶಿಷ್ಟ ಜಾತಿ ಸಮುದಾಯದ ಅಸಮಾಧಾನಕ್ಕೆ ಕಾರಣವಾಗಿದೆ. ಪರಿಶಿಷ್ಟ ಜಾತಿ ಸಮುದಾಯದ ಮುಖಂಡರು & ಕಾರ್ಯಕರ್ತರು, ಜಿಲ್ಲಾಧಿಕಾರಿ ಹಾಗೂ ಐ.ಜಿ.ಪಿ, ಎಸ್.ಪಿ. ಯವರು ಘಟನಾ ಸ್ಥಳಕ್ಕೆ ಬರಬೇಕೆಂಬ ಪಟ್ಟಿನ ಹೋರಾಟದ ನಂತರವೇ ಮೇಲಾಧಿಕಾರಿಗಳು ಬಂದಿರುವುದು ಅವರ ಕಾಳಜಿಯನ್ನು ಈ ಸಮುದಾಯದ ಜನ ಪ್ರಶ್ನಿಸುವಂತೆ ಮಾಡಿದೆ. ಈ ಘಟನೆ ನಡೆದ ದಿನವೇ ಲಿಂಗಸಗೂರಿನಲ್ಲಿ ರಾಣಿಮ್ಮ ಎಂಬ ಮತ್ತೊಬ್ಬ ಪರಿಶಿಷ್ಟ ಜಾತಿ ಮಹಿಳೆಯ ಕೊಲೆ ಪ್ರಕರಣ ನಡೆದಿದೆ. ಪರಿಶಿಷ್ಟ ಜಾತಿ ಸಮುದಾಯಕ್ಕೆ ಸೇರಿದ ಈ ಇಬ್ಬರು ಮಹಿಳೆಯರ ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳು

ಈ ಸಮುದಾಯವನ್ನು ತೀವ್ರ ಆಕ್ರೋಶಕ್ಕೆ ಗುರಿ ಮಾಡಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಮೇಲೆ ದೌರ್ಜನ್ಯ ನಡೆದರೆ, ಅದರ ನೇರ ಹೊಣೆ ಸಂಬಂಧಪಟ್ಟ ಜಿಲ್ಲಾಧಿಕಾರಿ & ಎಸ್.ಪಿ ಅವರದ್ದಾಗಿದ್ದರಿಂದ ತಕ್ಷಣವೇ ಈ ಪ್ರಕರಣಗಳಲ್ಲಿ ಸ್ಪಂದಿಸುವ ಮತ್ತು ಈ ಸಮುದಾಯಗಳೊಂದಿಗೆ ನಾವಿದ್ದೇವೆ ಎನ್ನುವ ಭರವಸೆ ಮೂಡಿಸುವಲ್ಲಿ ವಿಳಂಬ ಮಾಡಿರುವುದು ಅಸಮಾಧಾನ ಹೆಚ್ಚುವಂತೆ ಮಾಡಿರುವುದಾಗಿ ವರದಿಯಾಗಿದೆ. ಆದುದರಿಂದ, ಸದರಿ ಘಟನೆಯ ಕುರಿತು ಸರ್ಕಾರ ಕೂಡಲೇ ಅಗತ್ಯ ಕಾನೂನು ಕ್ರಮವಹಿಸಿ, ದೌರ್ಜನ್ಯಕ್ಕೆ ಒಳಗಾಗಿ ಕೊಲೆಯಾದವರ ಕುಟುಂಬಕ್ಕೆ ತುರ್ತಾಗಿ ಪರಿಹಾರವನ್ನು ನೀಡುವಂತೆ ತಮ್ಮ ಮೂಲಕ ಮಾನ್ಯ ಗೃಹ ಸಚಿವರನ್ನು ಒತ್ತಾಯಿಸುತ್ತೇನೆ.

**ಡಾ: ಯತೀಂದ್ರ ಎಸ್.(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಉ) ವಿಷಯ:- ರಾಜ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟುವ ಕುರಿತು.**

- - - - -

**ಶ್ರೀ ಕೆ.ಅಬ್ದುಲ್ ಜಬ್ಬಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ನಿರಂತರವಾಗಿ ಹೆಚ್ಚುತ್ತಿರುವುದು ಅತ್ಯಂತ ಆತಂಕಕಾರಿ ಸಂಗತಿಯಾಗಿದೆ. ಇಂದಿನ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯ ಪ್ರಕಾರ, 2023ನೇ ಇಸವಿಯಿಂದ ರಾಜ್ಯದಲ್ಲಿ ಒಟ್ಟು 63,447 ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ ಎಂಬ ಅಂಶ ಬೆಳಕಿಗೆ ಬಂದಿದೆ. ಈ ಪೈಕಿ ಅತ್ಯಾಚಾರ, ಲೈಂಗಿಕ ಕಿರುಕುಳ, ಕೌಟುಂಬಿಕ ದೌರ್ಜನ್ಯ, ವರದಕ್ಷಿಣೆ ಕಿರುಕುಳ, ಹಿಂಬಾಲಿಸುವಿಕೆ ಹಾಗೂ ಇತರ ರೀತಿಯ ದೌರ್ಜನ್ಯ ಪ್ರಕರಣಗಳ ಸಂಖ್ಯೆಯೇ ಹೆಚ್ಚಾಗಿವೆ.

ಮಹಿಳೆಯರ ಸುರಕ್ಷತೆಗಾಗಿ ಸರ್ಕಾರವು ವಿವಿಧ ಕಾನೂನುಗಳು, ಯೋಜನೆಗಳು ಹಾಗೂ ರಕ್ಷಣಾ ವ್ಯವಸ್ಥೆಗಳನ್ನು ಜಾರಿಗೊಳಿಸಿದ್ದರೂ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಪ್ರಕರಣಗಳು ದಾಖಲಾಗುತ್ತಿರುವುದು, ಪ್ರಸ್ತುತ ವ್ಯವಸ್ಥೆಗಳ ಪರಿಣಾಮಕಾರಿತ್ವದ ಬಗ್ಗೆ ಗಂಭೀರವಾಗಿ ಪರಿಶೀಲಿಸುವ ಅಗತ್ಯವನ್ನು ಸೂಚಿಸುತ್ತದೆ.

ವಿಶೇಷವಾಗಿ ಮಹಿಳೆಯರ ಮೇಲಿನ ಅತ್ಯಾಚಾರ, ಲೈಂಗಿಕ ಕಿರುಕುಳ, ಕೌಟುಂಬಿಕ ದೌರ್ಜನ್ಯ, ವರದಕ್ಷಿಣೆ ಕಿರುಕುಳ, ಹಿಂಬಾಲಿಸುವಿಕೆ ಹಾಗೂ ಇತರ ರೀತಿಯ ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟಲು ಪೊಲೀಸ್ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವುದು ಅಗತ್ಯವಾಗಿದೆ. ದೂರು ನೀಡಲು ಮುಂದಾಗುವ ಮಹಿಳೆಯರಿಗೆ ತ್ವರಿತ ಸ್ಪಂದನ, ಸಂತ್ರಸ್ತರಿಗೆ ಕಾನೂನು ನೆರವು ಮತ್ತು ಮಾನಸಿಕ ಬೆಂಬಲ ಹಾಗೂ ಪ್ರಕರಣಗಳ ಶೀಘ್ರ ತನಿಖೆ ಮತ್ತು ನ್ಯಾಯ ದೊರಕಿಸುವ ವ್ಯವಸ್ಥೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈ ವಿಚಾರವನ್ನು ತೀವ್ರವಾಗಿ ಪರಿಗಣಿಸಿ, ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಪರಿಣಾಮಕಾರಿ ಮತ್ತು ಶಾಶ್ವತ ಕ್ರಮಗಳನ್ನು ಕೈಗೊಂಡು, ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ತ್ವರಿತ ತನಿಖೆ ಮತ್ತು ನ್ಯಾಯ ಒದಗಿಸಲು ವಿಶೇಷ ವ್ಯವಸ್ಥೆ ರೂಪಿಸುವ ಕುರಿತು ಸೂಕ್ತ ಕ್ರಮ ಕೈಗೊಳ್ಳುವಂತೆ ತಮ್ಮ ಮೂಲಕ ಮಾನ್ಯ ಗೃಹ ಸಚಿವರನ್ನು ಒತ್ತಾಯಿಸುತ್ತೇನೆ.

**ಡಾ: ಯತೀಂದ್ರ ಎಸ್.(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಊ) ವಿಷಯ:- ಶಿವಮೊಗ್ಗ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದು, 04 ವರ್ಷಗಳಿಂದ ವಸೂಲಿಯಾಗದೇ ಬಾಕಿ ಉಳಿದಿರುವ ರೂ.121 ಕೋಟಿಯನ್ನು ವಸೂಲಿ ಮಾಡುವ ಕುರಿತು.**

- - - -

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಿನಾಂಕ 27/07/2026 ರಂದು ರಾಜ್ಯದ ಪ್ರತಿಷ್ಠಿತ ದಿನಪತ್ರಿಕೆಯಾದ 'ವಿಜಯ ಕರ್ನಾಟಕ ದಿನ ಪತ್ರಿಕೆ' ಯಲ್ಲಿ ನಿಯಮ ಉಲ್ಲಂಘನೆಯಾದರೂ ಕೈಕಟ್ಟಿ ಕುಳಿತ ಸ್ಥಳೀಯ ಆಡಳಿತ ರೂ. 121 ಕೋಟಿ ವಸೂಲಿ ಬಾಕಿ ಎಂಬ ಶೀರ್ಷಿಕೆಯಲ್ಲಿ ವರದಿ ಪ್ರಕಟವಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಮನಸೋಇಚ್ಛೆ ಗಣಿಗಾರಿಕೆ ನಡೆಯುತ್ತಿದ್ದು, ಅದನ್ನು ನಿಯಂತ್ರಿಸಬೇಕಾದ ಆಡಳಿತ ಸಂಪೂರ್ಣವಾಗಿ ವಿಫಲವಾಗಿದೆ. ಅದಕ್ಕೆ ಕಳೆದ ನಾಲ್ಕು ವರ್ಷಗಳಿಂದ ವಸೂಲಿಯಾಗದೇ ಬಾಕಿ ಉಳಿದಿರುವ ರೂ.121 ಕೋಟಿ ರಾಜಧನ ಮತ್ತು ದಂಡವೇ ಸಾಕ್ಷಿಯಾಗಿದೆ. ಮರಳು ಗಣಿಗಾರಿಕೆ ಪರವಾನಗಿ ಪಡೆದ ಮೂವರು ನಿಯಮ ಉಲ್ಲಂಘಿಸಿ ಗಣಿಗಾರಿಕೆ ನಡೆಸಿದ್ದಕ್ಕೆ ಅವರಿಗೆ ರೂ.10 ಕೋಟಿ ಡಿ.ಬಿ.ಸಿ. (ಬೇಡಿ, ಸಂಗ್ರಹ ಮತ್ತು ವಿತರಣೆ) ಯಲ್ಲಿ 72 ಜನ ನಿಯಮ ಉಲ್ಲಂಘಿಸಿ ಗಣಿಗಾರಿಕೆ ನಡೆಸಿದ್ದಕ್ಕೆ ರೂ.11 ಕೋಟಿ ಹಾಗೂ ಒ.ಎಸ್. (ಒನ್ ಟೈಂ ಸೆಟಲ್ ಮೆಂಟ್)ಗೆ ರೂ.98.85 ಕೋಟಿ ಸೇರಿ ಒಟ್ಟು ರೂ.121.14 ಕೋಟಿಗಳಷ್ಟು ರಾಜಧನ ಮತ್ತು ದಂಡ ವಿಧಿಸಲಾಗಿತ್ತು. ಅದನ್ನು ವಸೂಲಿ ಮಾಡದೇ ನಿಯಮ ಉಲ್ಲಂಘಿಸಿದವರಿಗೆ ಪರವಾನಗಿ ನೀಡುವ ಔದಾರ್ಯವನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆ ತೋರಿದೆ. ಇದರಿಂದ ಸರಕಾರಕ್ಕೆ ಕೋಟ್ಯಂತರ ರೂಪಾಯಿ ನಷ್ಟವಾಗಿದೆ.

ಮಲೆನಾಡಿನ ಪರಿಸರವು ಲ್ಯಾಟರೇಟ್ ಮಣ್ಣು, ಉತ್ಕೃಷ್ಟ ಮರಳು, ಹಲವು ಖನಿಜ ಸಂಪತ್ತನ್ನು ತನ್ನ ಒಡಲೊಳಗೆ ಹುದುಗಿಸಿಟ್ಟುಕೊಂಡಿದೆ. ಇವುಗಳನ್ನು ನಿಯಮ ಮೀರಿ ಬಗೆಯುವ ಮೂಲಕ ಪರಿಸರಕ್ಕೆ ಹಾನಿ ಉಂಟು ಮಾಡುವ ಕೆಲಸವನ್ನು ಕೆಲವರು ಮಾಡಿದ್ದಾರೆ. ಶಿವಮೊಗ್ಗ ಲೋಕಾಯುಕ್ತರು ಯಾವ ಮಾಹಿತಿಯನ್ನೂ ಬಿಟ್ಟುಕೊಡದೆ ಲೋಕಾಯುಕ್ತ ಪೊಲೀಸ್ ಇತಿಹಾಸದಲ್ಲಿ ಮೊದಲ ಬಾರಿಗೆ ಬಹುದೊಡ್ಡ ಕಾರ್ಯಾಚರಣೆ ಕೈಗೊಂಡಿದ್ದರು. ಗಣಿಗಾರಿಕೆ ನಡೆಯುವ ಪ್ರದೇಶದಲ್ಲಿ ಅರಣ್ಯ ನಾಶ ಆಗುವುದಷ್ಟೇ ಅಲ್ಲದೇ ಅಂತರ್ಜಲ ಕುಸಿತ ಉಂಟಾಗಿದೆ. ರಸ್ತೆಗಳು ಹಾಳಾಗಿವೆ, ಧೂಳಿನಿಂದ ಆರೋಗ್ಯದ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಅತಿಯಾದ ಧೂಳಿನ ಕಣಗಳಿಂದಾಗಿ ಜಮೀನಿನಲ್ಲಿ ಬೆಳೆಯುವ ಬೆಳೆಗಳ ಮೇಲೆಯೂ ಪರಿಣಾಮಗಳಾಗಿವೆ, ಇದರ ಬಗ್ಗೆ ಜಿಲ್ಲಾಡಳಿತ

ತಲೆಕೆಡಿಸಿಕೊಂಡಿಲ್ಲ. ಗಣಿಗಾರಿಕೆಯಿಂದ ಸಂಗ್ರಹವಾಗುವ ರಾಜಧನವನ್ನು ಆ ಪ್ರದೇಶದ ಅಭಿವೃದ್ಧಿಗೆ ಬಳಸಬೇಕು. ಆದರೆ, ರಾಜಧನ ವಸೂಲಿಯೇ ಆಗದೇ ಮೂಲಸೌಕರ್ಯ ಕಲ್ಪಿಸಲು ತೊಡಕಾಗಿದೆ.

ಆದ್ದರಿಂದ ರೂ.121 ಕೋಟಿ ವಸೂಲಿ ಮಾಡದೆ ಇರುವ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಲು ತಮ್ಮ ಮೂಲಕ ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರನ್ನು ಒತ್ತಾಯಿಸುತ್ತೇನೆ.

**ಡಾ: ಯತೀಂದ್ರ ಎಸ್.(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಋ) ವಿಷಯ:- ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ವ್ಯವಸ್ಥೆಯಲ್ಲಿ ತೆಗೆದುಕೊಳ್ಳುವ ದಿಡೀರ್ ನಿರ್ಧಾರಗಳಿಂದ ಶಿಕ್ಷಕರು ಗೊಂದಲಕ್ಕೆ ಈಡಾಗಿರುವ ಕುರಿತು.**

- - - -

**ಶ್ರೀ ಕೆ.ಅಬ್ದುಲ್ ಜಬ್ಬರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ದಿನಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ವ್ಯವಸ್ಥೆಯಲ್ಲಿ ತೆಗೆದುಕೊಳ್ಳುವ ದಿಢೀರ್ ನಿರ್ಧಾರಗಳಿಂದ ಶಿಕ್ಷಕರು ಗೊಂದಲಕ್ಕೆ ಈಡಾಗಿದ್ದಾರೆ ಹಾಗೂ ತರಗತಿಯ ಕಲಿಕೆಗೆ ಮತ್ತು ಕಲಿಸುವಿಕೆಗೆ ಹೆಚ್ಚು ಸಮಯ ದೊರಕುತ್ತಿಲ್ಲವಾಗಿದೆ. ಅದಕ್ಕೆ ಉದಾಹರಣೆಗೆ ಹೇಳುವುದಾದರೆ, ಬೆಳಗ್ಗೆ 9.45 ಕ್ಕೆ ಶಾಲಾ ಚಟುವಟಿಕೆಗಳು ಪ್ರಾರಂಭವಾಗಿ ಹತ್ತು ಗಂಟೆಯ ಒಳಗೆ ಪ್ರಾರ್ಥನೆ ಮತ್ತು ಹಾಜರಿ ತೆಗೆದುಕೊಳ್ಳಲಾಗುತ್ತಿತ್ತು. ಆದರೆ ಈಗ ನಿರಂತರ ಆಪ್ ಬಂದಾಗಿನಿಂದ ತರಗತಿಯು ಮಧ್ಯಾಹ್ನ 11.15 ರಿಂದ 12.15ರವರೆಗೆ ಹಾಗೂ ಮಧ್ಯಾಹ್ನ 2.15 ರಿಂದ 3.15 ರವರೆಗೆ ಹಾಜರಾತಿ ತೆಗೆದುಕೊಳ್ಳಲಾಗುತ್ತಿದೆ. ಒಂದು ವೇಳೆ ನೆಟ್ವರ್ಕ್ ನಲ್ಲಿ ಸಮಸ್ಯೆಯಾದ ಪಕ್ಷದಲ್ಲಿ ಹಾಜರಿ ಹಾಕೋದೇ ಅವತ್ತಿನ ಕೆಲಸವಾಗಿದೆ. ಎಲ್ಲಾ ಕಾರ್ಯಗಳನ್ನು ಆನ್-ಲೈನ್‌ನಲ್ಲಿಯೇ ಮಾಡಬೇಕಾಗಿರುವುದರಿಂದ ಸರ್ವರ್ ಮುಂದೆ ಶಿಕ್ಷಕರು ಖಾಯಂ ಆಗಿ ಕಾಯ್ದು ಕುಳಿತುಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ. ಇದರಿಂದಾಗಿ ಮಕ್ಕಳ ಶೈಕ್ಷಣಿಕ ಅವಧಿಯನ್ನು ಹಾಳು ಮಾಡುವುದಲ್ಲದೇ ಅವರ ಪಾಠ ತಯಾರಿಯೂ ಕುಂಠಿತಗೊಳ್ಳುತ್ತದೆ ಮತ್ತು ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ತುಂಬಾ ತೊಂದರೆಯಾಗುತ್ತಿದೆ. ಮಾನ್ಯರು ಪದೇ ಪದೇ ಆದೇಶಗಳ ಬದಲಾವಣೆ ಮಾಡುತ್ತಿರುವುದರಿಂದ ಅವುಗಳಿಗೆ ತಕ್ಷಣ ಹೊಂದಿಕೊಂಡು ಕಾರ್ಯನಿರ್ವಹಣೆಯನ್ನು ಅನುಪಾಲನೆ ಮಾಡಲು ತುಂಬಾ ತೊಂದರೆ ಉಂಟಾಗುತ್ತಿದೆ ಹಾಗೂ ವೈಜ್ಞಾನಿಕ ದೃಷ್ಟಿಯಿಂದ ಯೋಜನೆಗಳನ್ನು ತರಬೇಕೆ ಹೊರತು ಹೊಸ ಆಪ್‌ಗಳ ಪರಿಚಯದ ಹುಮ್ಮಸ್ಸಿನಲ್ಲಿ ಇರಬಾರದು. ಅಲ್ಲದೇ ಈ ಆಪ್‌ಗಳ ಕುರಿತು ಸಂಪೂರ್ಣ ಮಾಹಿತಿಯೂ ಇಲ್ಲದೇ, ತರಬೇತಿಯೂ ಇಲ್ಲದೆ ಅದಕ್ಕೆ ಹೊಂದಿಕೊಳ್ಳುವಂತಹ ಮೊಬೈಲ್ ಸೆಟ್ ಗಳು ಇಲ್ಲದೇ ಶಿಕ್ಷಕರು ಶಾಲೆಗಳಲ್ಲಿ ಪರದಾಡುವಂತೆ ಆಗಿದೆ. ಅಲ್ಲದೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಂಡ ಸಂದರ್ಭದಲ್ಲಿ ಖಾಯಂ ಶಿಕ್ಷಕರು ಮಾತ್ರ ಈ ಕಾರ್ಯವನ್ನು ಮಾಡಬಹುದಾಗಿರುತ್ತದೆ. ಅದು ಅಲ್ಲದೆ ಇಂಡೀಕರಣದಲ್ಲಿ ಮುಖ್ಯೋಪಾಧ್ಯಾಯರ ಮೊಬೈಲ್ ಸಂಖ್ಯೆಗೆ ಓ.ಟಿ.ಪಿ. ಬರುತ್ತಿರುವುದರಿಂದ ಪ್ರತಿ ಒಂದು ವಿಷಯವನ್ನು ಎಂಟ್ರಿ ಮಾಡಲು ಸಹ ಪ್ರತ್ಯೇಕ ಓ.ಟಿ.ಪಿ. ಬರುತ್ತಿದ್ದು ತುಂಬಾ ಕಿರಿಕಿರಿ ಉಂಟಾಗುತ್ತಿದೆ. ಅಲ್ಲದೆ ಮುಖ್ಯ ಶಿಕ್ಷಕರು ಹಾಗೂ ಎಂಟ್ರಿ ಮಾಡುವ ಸಹಾಯಕರು ಅಥವಾ ಶಿಕ್ಷಕರು ಕಂಪ್ಯೂಟರ್ ಮುಂದೆ ಕುಳಿತುಕೊಂಡು ಓ.ಟಿ.ಪಿ. ಗಾಗಿ ಕಾಯ್ದುಕೊಳ್ಳುತ್ತಾ

ಕುಳಿತುಕೊಳ್ಳಬೇಕಾಗಿರುವ ಪರಿಸ್ಥಿತಿ ಎದುರಾಗಿದೆ. ಅಲ್ಲದೆ ಕಾಲಕಾಲಕ್ಕೆ ನಡೆಯಬೇಕಾದ ಕಾರ್ಯಗಳು ಸಹ ನಡೆಯುತ್ತಿಲ್ಲ. ಇದು ತುಂಬಾ ಶೈಕ್ಷಣಿಕ ಹೊರೆಯಾಗಿರುವುದಲ್ಲದೆ ಶಿಕ್ಷಕರು ತಮ್ಮ ಕೆಲಸದ ಕುರಿತು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಮಕ್ಕಳ ಮಾನಸಿಕ ಶೈಕ್ಷಣಿಕ ವ್ಯವಸ್ಥೆಗಳಿಗೆ ಅನುಗುಣವಾಗಿ ವೈಯಕ್ತಿಕ ಕಾಳಜಿಯನ್ನು ಹರಿಸುವ ವ್ಯವಸ್ಥೆ ಇಲ್ಲದಾಗಿದೆ. ಭವಿಷ್ಯದಲ್ಲಿ ಮಕ್ಕಳ ಶೈಕ್ಷಣಿಕ ಜೀವನದಲ್ಲಿ ತುಂಬಾ ದುಷ್ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ಮಗುವಿನ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವಾಗದೇ ಆ ಮಗು ಕೇವಲ ಒಂದು ತರಗತಿಯಿಂದ ಮತ್ತೊಂದು ತರಗತಿಗೆ ಪಾಸ್ ಮಾಡುವ ಮತ್ತು ಸೌಲಭ್ಯಗಳನ್ನು ಒದಗಿಸುವ ಕೇಂದ್ರವಾಗಿ ಶಾಲೆಯು ಪರಿವರ್ತಿತವಾಗಿದೆ. ಆದ್ದರಿಂದ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ತಮ್ಮ ಮೂಲಕ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಲಾಗುವುದು.

(ಮುಂದು)

**(829) 24.08.2026/12.10/ಎಸ್‌ಕೆ-ವಿಕೆ (ಸಭಾಪತಿಯವರ ಉಪಸ್ಥಿತಿ)**

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಸ್ವಸ್ಥಾನಗಳಲ್ಲಿ ಒಟ್ಟಿಗೆ ಎದ್ದು ನಿಂತು ಸರ್ಕಾರದ ವಿರುದ್ಧ ನಿರಂತರವಾಗಿ ಘೋಷಣೆಗಳನ್ನು ಕೂಗುತ್ತಿದ್ದರು)**

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಪಿ.ಹೆಚ್. ಪೂಜಾರ್‌ರವರೇ, ತಮ್ಮ ಶೂನ್ಯ ವೇಳೆಯನ್ನು ಪ್ರಸ್ತಾಪಿಸಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಮಾನ್ಯ ಪಿ.ಹೆಚ್. ಪೂಜಾರ್‌ರವರು ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು.**

## 4. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ, ಕ.ವಿ.ಪ.–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1. ಕರ್ನಾಟಕ ಅಪಾರ್ಟ್‌ಮೆಂಟ್ (ಮಾಲೀಕತ್ವ ಮತ್ತು ನಿರ್ವಹಣೆ) ವಿಧೇಯಕ, 2026
2. ಕರ್ನಾಟಕ ಮುನ್ಸಿಪಾಲಿಟಿಗಳ (ತಿದ್ದುಪಡಿ) ವಿಧೇಯಕ, 2026
3. ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2026

**ಸಭಾಪತಿಯವರು:–** ಮಂಡಿಸಲಾಯಿತು.

## 5. ಚುನಾವಣಾ ಪ್ರಸ್ತಾವ

**"ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ಹಾಗೂ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ವಿಧಾನ ಪರಿಷತ್ತಿನ ತಲಾ ಒಬ್ಬರು ಶಾಸಕರನ್ನು ಚುನಾಯಿಸುವುದು".**

– – – – –

**ಡಾ॥ ಯತೀಂದ್ರ ಎಸ್. (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ಹಾಗೂ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ವಿಧಾನ ಪರಿಷತ್ತಿನ ತಲಾ ಒಬ್ಬರು ಶಾಸಕರನ್ನು ಚುನಾಯಿಸಬೇಕೆಂಬ ಪ್ರಸ್ತಾವವನ್ನು ದಿನಾಂಕ 18.08.2026 ರಂದು ಮಂಡಿಸಲಾಗಿರುತ್ತದೆ.

ನಡೆದು ಬಂದಿರುವ ಸದನದ ಪದ್ಧತಿಯಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ಹಾಗೂ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ವಿಧಾನ ಪರಿಷತ್ತಿನ ಶಾಸಕರನ್ನು ಚುನಾಯಿಸುವ ಬದಲು ನಾಮನಿರ್ದೇಶಿಸಲು ಈ ಸದನ ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡಬೇಕೆಂದು ಕೋರುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**" ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ಹಾಗೂ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ವಿಧಾನ ಪರಿಷತ್ತಿನ ತಲಾ ಇಬ್ಬರು ಶಾಸಕರನ್ನು ಚುನಾಯಿಸುವ ಬದಲು ನಾಮ ನಿರ್ದೇಶಿಸುವುದು."**

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಹಾಗೂ ಪ್ರಸ್ತಾವಕ್ಕೆ ಸದನದ ಅನುಮೋದನೆ ದೊರಯಿತು.

## 6. ಶಾಸನ ರಚನೆ

## ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

### ಅ) ಕರ್ನಾಟಕ ಮುನ್ಸಿಪಾಲಿಟಿಗಳ (ತಿದ್ದುಪಡಿ) ವಿಧೇಯಕ, 2026

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಹೆಚ್.ಸಿ. ಬಾಲಕೃಷ್ಣ (ಪೌರಾಡಳಿತ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ನೇ ಸಾಲಿನ "ಕರ್ನಾಟಕ ಮುನ್ಸಿಪಾಲಿಟಿಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಹೆಚ್.ಸಿ. ಬಾಲಕೃಷ್ಣ (ಪೌರಾಡಳಿತ ಸಚಿವರು):–** ಮಾನ್ಯ ಸಭಾಪತಿಯವರೇ, ನಗರಸಭೆ ಮತ್ತು ಪುರಸಭೆ ವ್ಯಾಪ್ತಿಯಲ್ಲಿ ಖಾಸಗಿಯವರ ಹೆಸರಿನಲ್ಲಿ ಇರುವಂತಹ ರಸ್ತೆ ಮತ್ತು ಚರಂಡಿಯನ್ನು ಸ್ವಯಂಪ್ರೇರಿತವಾಗಿ ಅದನ್ನು ನಗರಸಭೆ ಮತ್ತು ಪುರಸಭೆ ವ್ಯಾಪ್ತಿಯೊಳಗೆ ತೆಗೆದುಕೊಳ್ಳುವಂಥ ಪ್ರಸ್ತಾವಕ್ಕೆ ಈ ಒಂದು ವಿಧೇಯಕದಲ್ಲಿ ತಿದ್ದುಪಡಿಯನ್ನು ತಂದಿದ್ದೇವೆ. ಈ ಒಂದು ತಿದ್ದುಪಡಿಯಲ್ಲಿ ಅಧ್ಯಕ್ಷರು ಈ ಒಂದು objection raise ಮಾಡುವುದಕ್ಕೆ ಒಂದು ತಿಂಗಳು ಕಾಲಾವಕಾಶವನ್ನು ಕೊಡುತ್ತೇವೆ. ಒಂದು ತಿಂಗಳಿನಲ್ಲಿ ಇದಕ್ಕೆ ಯಾವುದೇ ಪರಿಹಾರ ಧನವನ್ನು ನಾವು ಕೊಡುವುದಕ್ಕೆ ಸಾಧ್ಯವಿಲ್ಲ. ಇದರ ಉದ್ದೇಶವೇನೆಂದರೆ, ಇದು ದುಸ್ಥಿತಿಯಲ್ಲಿರುವಂತಹ ರಸ್ತೆ ಮತ್ತು ಚರಂಡಿಯನ್ನು ಸುಸ್ಥಿತಿಗೆ ತಂದು ಸಾರ್ವಜನಿಕರಿಗೆ ಓಡಾಟ ಮಾಡುವುದಕ್ಕೆ ಮತ್ತು ಸಾರ್ವಜನಿಕರ ಆರೋಗ್ಯದ ಮೇಲೆ ಪರಿಣಾಮವನ್ನು ತಡೆಗಟ್ಟುವುದಕ್ಕೆ ನಾವು ಈ ವಿಧೇಯಕಕ್ಕೆ ತಿದ್ದುಪಡಿಯನ್ನು ತಂದಿರುವಂತಹದ್ದು. ಎರಡನೇ ಉದ್ದೇಶವೇನೆಂದರೆ, "ಬಿ" ಖಾತೆಯನ್ನು "ಎ" ಖಾತೆಯನ್ನಾಗಿ ಪರಿವರ್ತನೆ ಮಾಡುವುದಕ್ಕೆ ಸರ್ಕಾರದ ವ್ಯಾಪ್ತಿಗೆ ಇರುವಂತಹ ರಸ್ತೆ ಅವಶ್ಯಕತೆ ಇರುವುದರಿಂದ ಈ ವಿಧೇಯಕಕ್ಕೆ ತಿದ್ದುಪಡಿ ತಂದಿರುವಂತಹದ್ದು. ದಯವಿಟ್ಟು, ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ನಾನು ತಮಗೆ ಮನವಿ ಮಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರೇ, ತಾವು ವಿಧೇಯಕದ ಬಗ್ಗೆ ಮಾತನಾಡುತ್ತೀರಾ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಿಲ್ಲ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ತಾವು ವಿಧೇಯಕದ ಬಗ್ಗೆ ಮಾತನಾಡುತ್ತೀರಾ. ಈ ಕಡೆಯಲ್ಲಿ ಯಾರಾದರೂ ಮಾತನಾಡುತ್ತೀರಾ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಡಿ.ಟಿ. ಶ್ರೀನಿವಾಸ್‌ರವರೇ, ತಾವು ವಿಧೇಯಕದ ಬಗ್ಗೆ ಮಾತನಾಡಿ.

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಮುನ್ಸಿಪಾಲಿಟಿಗಳ (ತಿದ್ದುಪಡಿ) ವಿಧೇಯಕ, 2026 ಗೆ ತಿದ್ದುಪಡಿಯನ್ನು ತಂದಿದ್ದಾರೆ. ಸಾರ್ವಜನಿಕರಿಗೆ ಖಂಡಿತವಾಗಿ ಅನುಕೂಲವಾಗುವುದಕ್ಕೆ ಬೇಕಾದಂತಹ ಈ ಒಂದು ವಿಧೇಯಕಕ್ಕೆ ತಿದ್ದುಪಡಿಯನ್ನು ತಂದಿದ್ದಾರೆ. ವಿರೋಧ ಪಕ್ಷದವರಿಗೆ ಸಾರ್ವಜನಿಕರಿಗೆ ಒಳ್ಳೆಯದಾಗುವುದು ಬೇಕಾಗಿಲ್ಲ. ಅವರಿಗೆ ಹಕ್ಕುಪತ್ರಗಳನ್ನು ಕೊಡುವುದು ಬೇಕಾಗಿಲ್ಲ. "ಬಿ" ಖಾತೆಯಿಂದ "ಎ" ಖಾತೆ ಮಾಡುವುದು ಮಾನ್ಯ ವಿರೋಧ ಪಕ್ಷದ ಸದಸ್ಯರುಗಳಿಗೆ ಬೇಕಾಗಿಲ್ಲ. ಇವರ ಜೀವನ ಕೂಡ ಮುಂದೆ ಗೋವಿಂದನೇ; ಅದಕ್ಕೋಸ್ಕರವಾಗಿ ಮಾನ್ಯ ಸಚಿವರು ಈ ವಿಧೇಯಕಕ್ಕೆ ಏನೊಂದು ತಿದ್ದುಪಡಿಯನ್ನು ತಂದಿದ್ದಾರೆ. ಇದು ಮುನ್ಸಿಪಾಲಿಟಿ ವಿಚಾರವಾಗಿ, Chief Officer ಮತ್ತು ಅಧಿಕಾರಿಗಳಿಗೆ ಹಕ್ಕು ಕೊಡುವಂತಹದ್ದು. ಯಾರು ಕಳಪೆ ಕಾಮಗಾರಿ ಮಾಡುತ್ತಾರೆ ಅದನ್ನು ಕಂಡುಹಿಡಿಯುವುದು ಮತ್ತು ಆ ಸ್ವತ್ತುಗಳನ್ನು ಸಂರಕ್ಷಿಸುವುದಾಗಿದೆ. ಇದರ ಜೊತೆಯಲ್ಲಿ ಆ ಮುನ್ಸಿಪಾಲಿಟಿ ಭಾಗದಲ್ಲಿರುವಂತಹ ಸಾರ್ವಜನಿಕರಿಗೆ "ಬಿ" ಖಾತೆಯಿಂದ "ಎ" ಖಾತೆಗೆ ಪರಿವರ್ತನೆ ಮಾಡುವುದಕ್ಕೆ ತುಂಬಾ ಅದ್ಭುತವಾದಂತಹ ವಿಧೇಯಕವಾಗಿದೆ. ಮಾನ್ಯ ಸಭಾಪತಿಯವರೇ, ನಾನು ವಿಧೇಯಕದ ಪರವಾಗಿದ್ದೇನೆ. ಧನ್ಯವಾದಗಳು.

**ಸಭಾಪತಿಯವರು:-** ಮಾನ್ಯ ರಾಮೋಜಿಗೌಡರವರೇ, ತಾವು ವಿಧೇಯಕದ ಬಗ್ಗೆ ಮಾತನಾಡಿ.

**ಶ್ರೀ ರಾಮೋಜಿ ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಮುನ್ಸಿಪಾಲಿಟಿಗಳ (ತಿದ್ದುಪಡಿ) ವಿಧೇಯಕ, 2026 ಗೆ ತಂದಿರುವ ತಿದ್ದುಪಡಿಯನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಈ ವಿಧೇಯಕವನ್ನು ಸ್ವಾಗತ ಮಾಡುವುದಕ್ಕೆ ಕಾರಣವೇನೆಂದರೆ, ಇದು ನನ್ನ ಸುಮಾರು ವರ್ಷಗಳ ಕನಸ್ಸು ಆಗಿತ್ತು. ಇಲ್ಲಿ ಎರಡು-ಮೂರು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಮೊದಲನೆಯದಾಗಿ, ಮುಖ್ಯವಾಗಿ ರೆವಿನ್ಯೂ ಲೇ-ಔಟ್‌ಗಳನ್ನು ಮಾಡುತ್ತಾರೆ. ಈ ರೆವಿನ್ಯೂ ಲೆ-ಔಟ್ ಮಾಡಿದಾಗ ಏನಾಗುತ್ತದೆ ಎಂದರೆ, ಐದು ವರ್ಷ ಅಥವಾ ಹತ್ತು ವರ್ಷ ಕಲ್ಲುಗಳನ್ನು ಹಾಕುತ್ತಾರೆ. ಇದಕ್ಕೆ ಸರ್ಕಾರದ ಹೆಸರು ಇರುವುದಿಲ್ಲ. ಯಾರು ಇದನ್ನು ಮಾಡಿರುತ್ತಾರೋ, ಆರ್.ಟಿ.ಸಿ.,ಯಲ್ಲಿ ಅವರ ಹೆಸರು ಇರುತ್ತದೆ. ಇವರು ಏನು ಮಾಡುತ್ತಾನೆಂದರೆ, ಐದಾರು ವರ್ಷಗಳ ನಂತರ ಯಾರು ಮನೆ ಕಟ್ಟಿಲ್ಲವೆಂದರೆ, ಅದನ್ನು ಬೇರೆಯವರಿಗೆ ಮಾರಾಟ ಮಾಡಿ ಬಿಡುತ್ತಾನೆ. ಪೌರಾಡಳಿತ ಸಚಿವರು ಈ ವಿಧೇಯಕಕ್ಕೆ ತಿದ್ದುಪಡಿ ತಂದಿದ್ದಾರೆ. ಸರ್ಕಾರ ಇಂತಹ ಕಡೆ ರಸ್ತೆಗಳನ್ನು ಮಾಡಿಬಿಟ್ಟರೆ ಇದು ವರ್ಗಾವಣೆ ಆಗುವುದಿಲ್ಲ. ಇದೊಂದು ಅಂಶವಾಗುತ್ತದೆ. ಎರಡನೆಯದಾಗಿ, "ಬಿ" ಖಾತೆಯಿಂದ "ಎ" ಖಾತೆಗೆ ಮಾಡಬೇಕೆಂಬುದರ ಬಗ್ಗೆ ಸದುದ್ದೇಶವಿದೆ. ಇದು ಸಹ ಯಾವಾಗ ರಸ್ತೆ ಸರ್ಕಾರಕ್ಕೆ ಸೇರುತ್ತದೆಯೋ, "ಬಿ" ಖಾತೆ

ಸುಲಭವಾಗಿ "ಎ" ಖಾತೆ ಆಗುತ್ತದೆ. ಮೂರನೇಯದಾಗಿ, ಯಾರೋ ಕೆಲವರು ಹತ್ತು, ಹದಿನೈದು, ಇಪ್ಪತ್ತು ವರ್ಷಗಳವರೆಗೂ ಲೆ-ಔಟ್ ಮಾಡಿ ಹೋಗಿರುತ್ತಾರೆ. ಸರ್ಕಾರದಿಂದ ರಸ್ತೆ, ಚರಂಡಿ, sanitary ಮತ್ತು drainage ಮಾಡಬೇಕಾದರೆ, ಯಾವುದೇ ಸರ್ಕಾರದಿಂದ ಮಾಡುವುದಕ್ಕಾಗುವುದಿಲ್ಲ, ಇದು ಖಾಸಗಿ ಬಡಾವಣೆ ಎನ್ನುತ್ತಾರೆ. ಈ ವಿಧೇಯಕದಲ್ಲಿ ರಸ್ತೆಗಳು ಸರ್ಕಾರಕ್ಕೆ ಸೇರಿದರೆ, ಅದನ್ನು ಸುಲಭವಾಗಿ ಸರ್ಕಾರದಿಂದ ಅಭಿವೃದ್ಧಿಪಡಿಸಬಹುದು. ಆ ಭಾಗದಲ್ಲಿ ಅನೇಕ ಮನೆಗಳನ್ನು ಕಟ್ಟಿಕೊಂಡು ವಾಸವಾಗಿರುವಂತಹ ನಿವಾಸಿಗಳಿಗೆ ಅನುಕೂಲವಾಗುತ್ತದೆ. ಈ ವಿಧೇಯಕವನ್ನು ತಂದಿರುವುದು ತುಂಬಾ ಸ್ವಾಗತಾರ್ಹವಾಗಿದೆ. ಸಾವಿರಾರು ಜನರಿಗೆ ನಿಟ್ಟುಸಿರು ಬಿಡುವಂತಹ ಕ್ಷಣ. ಏಕೆಂದರೆ ಅವರಿಗೆ ಪಾಪ ರಸ್ತೆ ಇಲ್ಲ, drainage ಇಲ್ಲ, ಚರಂಡಿ ಇಲ್ಲ, ಯಾವುದೇ ಕಾಮಗಾರಿಗಳು ಆಗಿರುವುದಿಲ್ಲ. ಏಕೆಂದರೆ, ನಿಮ್ಮದು ಖಾಸಗಿ ಲೇ-ಔಟ್ ಎನ್ನುತ್ತಾರೆ. ಯಾವಾಗ ಖಾಸಗಿ ಬಡಾವಣೆ ಈ ಒಂದು ಸರ್ಕಾರಕ್ಕೆ ಸೇರುತ್ತದೆಯೋ, ಸರ್ಕಾರ ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡುತ್ತದೆ. ಅವರಿಗೆ ಈ future ನಲ್ಲಿ ಇದು transfer ಕೂಡ ಆಗುವುದಿಲ್ಲ. ಯಾವಾಗ ಇದನ್ನು ಮಾಡಲಿಲ್ಲ ಎಂದರೆ, ಆರ್.ಟಿ.ಸಿ., ನಲ್ಲಿ ಅವರ ಹೆಸರು ಇರುತ್ತದೆ. ಅವರು ಬೇರೆಯವರಿಗೆ transfer ಮಾಡುತ್ತಾರೆ. ಎಲ್ಲಾ clean ಮಾಡುತ್ತಾರೆ. ಸರ್ಕಾರದಿಂದ ರಸ್ತೆ ಆಗಿಬಿಟ್ಟರೆ, ಅವರು ಬೇರೆಯವರಿಗೆ ವರ್ಗಾವಣೆ ಮಾಡುವುದಕ್ಕಾಗುವುದಿಲ್ಲ. ಹಾಗಾಗಿ, ಈ ಒಂದು ಅತ್ಯುತ್ತಮವಾಗಿ ಆಲೋಚನೆ ಮಾಡಿದಂತಹ ಮಾನ್ಯ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಾ, ಈ ಒಂದು ವಿಧೇಯಕಕ್ಕೆ ತಿದ್ದುಪಡಿ ತಂದಿರುವುದಕ್ಕಾಗಿ ನಾನು ಸ್ವಾಗತವನ್ನು ಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೇ, ತಾವು ವಿಧೇಯಕದ ಬಗ್ಗೆ ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಒಂದು ವಿಧೇಯಕದ ಬಗ್ಗೆ ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ clarifications ಅನ್ನು ಕೇಳಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೇ, ಮಾನ್ಯ ಸದಸ್ಯರು ಈಗಾಗಲೇ ಕೇಳಿರುವಂಥದ್ದಕ್ಕೆ, ತಾವು ಪುನರಾವರ್ತನೆ ಮಾಡುವುದಕ್ಕೆ ಹೋಗಬೇಡಿ. ಇದರಲ್ಲಿ ಹೊಸ ವಿಚಾರ ಏನಾದರೂ ಇದ್ದರೆ ಹೇಳಿ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಒಂದು ವಿಧೇಯಕದಲ್ಲಿ ನನಗೆ ಒಂದು clarification ಬೇಕಾಗಿದೆ. ಈಗ ಬೀದಿಗಳಲ್ಲಿ ರಸ್ತೆ ಚರಂಡಿಗಳನ್ನು ಮಾಡುವುದಕ್ಕೆ ಅಥವಾ acquire ಮಾಡಿ ರಸ್ತೆ, ಚರಂಡಿಗಳನ್ನು ಮಾಡುವುದಕ್ಕೆ acquire ಮಾಡುವುದು ಸರಿ ಇದೆ. ಆದರೆ ಖಾಸಗಿ ಜಾಗಗಳು ಇದ್ದರೆ, ಇದುವರೆವಿಗೂ ಏನು ಮಾಡುತ್ತಿದ್ದರು ಎಂದರೆ ಖಾಸಗಿಯವರ ಜಾಗವನ್ನು ನಾವು ತೆಗೆದುಕೊಳ್ಳುವಾಗ, ಆ ಬೀದಿಯಲ್ಲಿರುವ ಜಾಗದಲ್ಲಿ ಕಟ್ಟಿ ಕೊಡುತ್ತಿದ್ದರು. Compound Wall ಅನ್ನು ತೆಗೆದು ಅವರಿಗೆ ಕಟ್ಟಿ ಕೊಡುತ್ತಿದ್ದರು ಮತ್ತು ಅವರ ಜಾಗಕ್ಕೆ F.I.R ಕೊಡುತ್ತಿದ್ದರು.

(ಮುಂದು)

(೮೩೦) 24.08.2026, 12.20 TCH-BNS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ಮುಂದು):-**

**(ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಒಟ್ಟಿಗೆ ಸ್ವಸ್ಥಾನಗಳಲ್ಲಿ ನಿಂತು ನಿರಂತರವಾಗಿ ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

ಖಾಸಗಿಯವರ ಕಾಂಪೌಂಡ್ ಗೋಡೆ ತೆಗೆದಿದ್ದರೆ ಅವರಿಗೆ ಕಟ್ಟಿಕೊಡುತ್ತಿದ್ದರು ಮತ್ತು ಅವರ ಜಾಗಕ್ಕೆ F.A.R. ಕೊಡುತ್ತಿದ್ದರು. ಅವರ ಜಾಗಕ್ಕೆ ಸಮಾನವಾಗಿರತಕ್ಕಂಥ ದೇಣಿಗೆ ಬರುವ ಹಾಗೆ ಕೊಡುತ್ತಿದ್ದರು. ಈಗ ಇದು ಏನಾಗುತ್ತದೆಂದರೆ, ಖಾಸಗಿಯವರ ಜಾಗವಿದ್ದಾಗ, ಇವರು ಯಾರನ್ನೂ ಹೇಳದೇ ಮತ್ತು ಕೇಳದೇ ರಸ್ತೆಯನ್ನು ಮಾಡುವುದಾದರೆ, ಖಾಸಗಿಯವರು ಏನು ಮಾಡಬೇಕು? ಅದಕ್ಕೆ ಯಾವ ರೀತಿ ಪರಿಹಾರ ಕೊಡುತ್ತಾರೆ? ಇದು ಮಾನ್ಯ ಸಚಿವರ ಮುಂದೆ ಇರುವ ಪ್ರಶ್ನೆ. ಇದಕ್ಕೆ ಸರ್ಕಾರ ಏನೂ ಕೊಡುವುದಿಲ್ಲವೆಂದರೆ ಯಾರು ಜಾಗ ಬಿಡುವುದಕ್ಕೆ ರೆಡಿ ಇದ್ದಾರೆ. They will go to the Court. ಅವರು ಕೋರ್ಟ್‌ಗೆ ಹೋಗುತ್ತಾರೆ. ಆದರೆ ಅಲ್ಲಿ ಸರಿಯಾಗಿ ರಸ್ತೆ ಆಗುವುದಿಲ್ಲ, ಚರಂಡಿಯನ್ನೂ ಕಟ್ಟುವುದಿಲ್ಲ ಮತ್ತು ಬೀದಿಯು ಕೂಡ ಉದ್ದಾರ ಆಗುವುದಿಲ್ಲ. ಹಾಗಾಗಿ, Government should find a solution while implementing this law. ಈಗ ನೀವು ಅದನ್ನು ಮಾಡದೇ ಇದ್ದರೆ ಖಾಸಗಿ ಜಾಗದವರ ಹಕ್ಕುಚ್ಯುತಿ ಆಗುತ್ತದೆ. ಅವರ ಹಕ್ಕನ್ನು ನೀವು ಕಸಿದುಕೊಂಡಂತಾಗುತ್ತದೆ. They will go to the Court and they will not pay the revenue tax. ಹಾಗಾಗಿ, ಇದು ನ್ಯಾಯ ಸಮ್ಮತವಾಗಿ ಆಗಬೇಕಾದರೆ, ಖಾಸಗಿಯವರ ಜಾಗವನ್ನು ಸರ್ಕಾರ ವಶಪಡಿಸುಕೊಳ್ಳುವಾಗ ಏನು ಮಾಡುತ್ತಾರೆ? ಮಾನ್ಯ ಸಚಿವರು ಇದರ ಬಗ್ಗೆ explanation ಕೊಡಬೇಕೆಂದು ಕೋರುತ್ತೇನೆ.

**ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಈ ಬಿಲ್ ಬಗ್ಗೆ ಅವರು ಸ್ವಲ್ಪ ಚರ್ಚೆ ಮಾಡಲಿ. ಈ ಬಿಲ್ ಬಗ್ಗೆ ಕಾಳಜಿಯೇ ಇಲ್ಲವೇ? ಅವರು ಬಿಲ್ ಬಗ್ಗೆ ಸ್ವಲ್ಪ ಚರ್ಚೆ ಮಾಡಬೇಕಲ್ಲವೇ?

**(ಗೊಂದಲ)**

**ಡಾ: ಯತೀಂದ್ರ.ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಜನರಿಗೆ ಅನುಕೂಲವಾಗುವಂತಹ ತುಂಬಾ ಮಹತ್ವವಾದ ಬಿಲ್ ತೆಗೆದುಕೊಂಡು ಬಂದಿದ್ದಾರೆ. ದಯವಿಟ್ಟು ಅದರ ಬಗ್ಗೆ ಚರ್ಚೆ ಮಾಡಲಿ. ಒಂದು ವೇಳೆ ಬಿಲ್‌ನಲ್ಲಿ ಏನಾದರೂ ತಪ್ಪಿದ್ದರೆ ಅದನ್ನು ಸರಿಪಡಿಸುವಂಥ ಕೆಲಸ ಮಾಡಲಿ.

**ಸಭಾಪತಿಯವರು:-** ಮಾನ್ಯ ಡಿ.ಎಸ್.ಅರುಣ್‌ರವರೇ, ತಾವು ಈ ಬಿಲ್ ಬಗ್ಗೆ ಮಾತನಾಡುತ್ತೀರಾ?

**ಶ್ರೀ ಡಿ.ಎಸ್.ಅರುಣ್:-** ಇಲ್ಲ.

**(ಗೊಂದಲ)**

**ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಅವರು ಜನರಿಗೆ ವಂಚನೆ ಮಾಡುತ್ತಿದ್ದಾರೆ. ಸರ್ಕಾರ ಜನಸಾಮಾನ್ಯರ ಅನುಕೂಲಕ್ಕೆ ಈ ಬಿಲ್ ತೆಗೆದುಕೊಂಡು ಬಂದಿದ್ದಾರೆ. ಇವರು ಅದರ ಬಗ್ಗೆ ಚರ್ಚೆ ಮಾಡುತ್ತಿಲ್ಲ. ಅವರು ಸಲಹೆ ಕೊಡಬೇಕು. ಜನರಿಗೆ ವಂಚನೆ ಮಾಡುವಂಥ ಕೆಲಸವನ್ನು ಏಕೆ ಮಾಡುತ್ತಿದ್ದಾರೆ? ಉತ್ತಮವಾದ ಬಿಲ್ ಬಗ್ಗೆ ಚರ್ಚೆ ಮಾಡಿ, ಏನು ಬೇಕು ಮತ್ತು ಏನು ಬೇಡ ಎಂದು ಹೇಳಲಿ.

**ಸಭಾಪತಿಯವರು:-** ಆಯಿತು. ಮಾನ್ಯ ಯು.ಟಿ.ಖಾದರ್‌ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. **(ಗೊಂದಲ)** ಬಿಲ್ ಬಗ್ಗೆ ಇನ್ನಾವ ಸದಸ್ಯರು ಮಾತನಾಡುವುದಿಲ್ಲ ಅಲ್ಲವೇ?

**ಶ್ರೀ ಶಿವಕುಮಾರ್ .ಕೆ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**(ಗೊಂದಲ)**

**ಶ್ರೀ ಹೆಚ್.ಸಿ.ಬಾಲಕೃಷ್ಣ:-** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಸಭಾಪತಿಯವರು:-** ಶ್ರೀ ಶಿವಕುಮಾರ್ ಕೆ. ರವರೇ, ಹೇಳಿ.

**(ಗೊಂದಲ)**

**ಶ್ರೀ ಶಿವಕುಮಾರ್ ಕೆ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಇವತ್ತು ಕರ್ನಾಟಕ ಮುನ್ಸಿಪಾಲಿಟಿಗಳ (ತಿದ್ದುಪಡಿ) ವಿಧೇಯಕ, 2026 ಅನ್ನು ಮಾನ್ಯ ಪೌರಾಡಳಿತ ಸಚಿವರು ತೆಗೆದುಕೊಂಡು ಬಂದಿದ್ದಾರೆ, ಅದನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಿದ್ದೇನೆ. ಬಹಳ ವರ್ಷಗಳಿಂದ ಇದ್ದಂತಹ ಬೇಡಿಕೆಯನ್ನು ಈ ಬಿಲ್‌ನಲ್ಲಿ ತರುವಂಥ ಒಂದು ಪ್ರಯತ್ನವನ್ನು ಸರ್ಕಾರ ಮಾಡಿದೆ. ಏಕೆಂದರೆ, ಇವತ್ತಿನ ದಿವಸ ಬಹಳಷ್ಟು ಮುನಿಸಿಪಾಲಿಟಿಗಳ ಪ್ರದೇಶ ಇರಬಹುದು ಮತ್ತು ಪುರಸಭೆಗಳ ವ್ಯಾಪ್ತಿಯಲ್ಲಿ 'ಎ' ಖಾತೆಯಿಂದ 'ಬಿ' ಖಾತೆ ಮಾಡಿಸಿಕೊಳ್ಳುವುದಕ್ಕೆ ಬಹಳ ವರ್ಷಗಳಿಂದ ಕಾಯುತ್ತಿದ್ದು, ಅವರಿಗೆಲ್ಲಾ ಇದು ಒಂದು ಅವಕಾಶ ಆಗಿದೆ.

ಎರಡನೆಯದಾಗಿ, ಇವತ್ತಿನ ದಿವಸ ಹೊಸ ಲೇಔಟ್‌ಗಳನ್ನು ಮಾಡಿಕೊಂಡು develop ಮಾಡಿಕೊಳ್ಳದೇ ಹೋಗಿದ್ದರು, ಆ properties ಈಗಲೂ ಕೂಡ ಆ land owner ರವರ ಹೆಸರಿನಲ್ಲಿಯೇ ಬರುತ್ತಿತ್ತು. ಈಗ ಅದು end ಆಗುತ್ತದೆ.

ಮೂರನೆಯದಾಗಿ, ಇವತ್ತಿನ ದಿವಸ family disputes ಏನಿದೆಯೋ ಅದು ಬಹಳ ಕಡಿಮೆ ಆಗುತ್ತದೆ. ಇದಕ್ಕಿಂತ ಬಹಳ ಮುಖ್ಯವಾಗಿ ಇವತ್ತಿನ ದಿವಸ ಮುನಿಸಿಪಾಲಿಟಿ properties ಅನ್ನು protection ಮಾಡುವುದರ ಜೊತೆಗೆ, ಸಂಪನ್ಮೂಲ ಜಾಸ್ತಿ ಮಾಡುವುದಕ್ಕೆ ಬಹಳ ಅವಕಾಶವಾಗುತ್ತದೆ. ಏಕೆಂದರೆ ಇವತ್ತಿನ ದಿವಸ

municipalities ನಲ್ಲಿ ಸಂಪನ್ಮೂಲಗಳಿಲ್ಲ. Tax ಅನ್ನು ಬಿಟ್ಟರೆ ಬಹಳಷ್ಟು municipalities ನಡೆಸುವುದಕ್ಕೆ ಆಗುತ್ತಿಲ್ಲ. ಅಂತಹ ಸಮಯದಲ್ಲಿ ಮಾನ್ಯ ಸಚಿವರು ಮತ್ತು ಸರ್ಕಾರ ಈ ಬಿಲ್ ತೆಗೆದುಕೊಂಡು ಬಂದು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಇವತ್ತಿನ ದಿವಸ ಸಂಪನ್ಮೂಲಗಳು ಜಾಸ್ತಿಯಾದರೆ municipalities ಚೇತರಿಸಿಕೊಳ್ಳುತ್ತವೆ. ರಸ್ತೆಗಳು ಇರಬಹುದು, ಬೀದಿ ದೀಪಗಳು ಇರಬಹುದು ಮತ್ತು ಇತರೆ ಸೌಲಭ್ಯಗಳನ್ನು ಆ ಪ್ರದೇಶದಲ್ಲಿ develop ಮಾಡುವುದಕ್ಕೆ ಅವಕಾಶವಾಗುತ್ತದೆ. ನಾನು ಮಾನ್ಯ ಸಚಿವರಲ್ಲಿ ಒಂದು request ಮಾಡುವುದೇನೆಂದರೆ, ಪುರಸಭೆಗಳಲ್ಲಿ ಮತ್ತು ನಗರ ಪ್ರದೇಶಗಳಲ್ಲಿ, corporation limits ನಲ್ಲಿ ಯಾವ ರೀತಿ ಪಾರ್ಕ್‌ಗಳಿವೆಯೋ ಅದೇ ರೀತಿ at least ಒಂದು ಊರಿಗೆ ಎರಡೆರಡು-ಮೂರು ಪಾರ್ಕ್‌ಗಳನ್ನು develop ಮಾಡಿದರೆ ಆ ಜನಕ್ಕೆ ಬಹಳಷ್ಟು ಅನುಕೂಲವಾಗುತ್ತದೆಂದು ಹೇಳಿ, ನಾನು ಈ ಬಿಲ್ ಅನ್ನು ಬೆಂಬಲಿಸಿ ನನ್ನ ಮಾತು ಮುಗಿಸುತ್ತಿದ್ದೇನೆ.

**(ಗೊಂದಲ)**

**ಶ್ರೀ ಹೆಚ್.ಸಿ. ಬಾಲಕೃಷ್ಣ (ಪೌರಾಡಳಿತ ಸಚಿವರು):-** ಮಾನ್ಯ ಸಭಾಪತಿಯವರೇ, ಈಗ ಆ ರಸ್ತೆಗಳನ್ನು ನಾವೇನು acquire ಮಾಡುತ್ತಿದ್ದೇವೆ, ಅದಕ್ಕೆ ಮಾನ್ಯ ಐವನ್ ಡಿ'ಸೋಜಾರವರು ಪರಿಹಾರವನ್ನು ಕೊಡಬೇಕು ಎಂಬ ವಿಚಾರವನ್ನು ಪ್ರಸ್ತಾಪ ಮಾಡಿದರು. ಇಲ್ಲಿ ಸರ್ಕಾರ ಪರಿಹಾರ ಕೊಡುವುದಕ್ಕೆ ಸಾಧ್ಯವಿಲ್ಲ. ಕಾರಣವೇನೆಂದರೆ ಇವೆಲ್ಲಾ illegal layouts. ಅವರು revenue layouts ಮಾಡಿಕೊಂಡು ಮಾರಾಟ ಮಾಡಬೇಕಾದರೆ, ಅವರು ನೋಂದಣಿ ಮಾಡಿಸುವ ಸಂದರ್ಭದಲ್ಲಿ ನಿವೇಶನಗಳಿಗೆ 'ಚಕ್ಕುಬಂದಿ' ಹಾಕಿರುತ್ತಾರೆ. ಆ ಚಕ್ಕುಬಂದಿಯಲ್ಲಿ 'ರಸ್ತೆ' ಎಂದು ತೋರಿಸಿರುತ್ತಾರೆ. ಅದು 'ರಸ್ತೆ' ಎಂದು ತೋರಿಸಿದ ನಂತರ ಅವರು ಪರಿಹಾರ ಕೇಳುವುದಕ್ಕೆ ಅಧಿಕಾರ ಕಳೆದುಕೊಂಡಿದ್ದಾರೆ. ಆಮೇಲೆ ಅವರು ಮಾಡಿರತಕ್ಕಂಥ ಆ ರಸ್ತೆಗಳು ಮತ್ತು ಚರಂಡಿಗಳು ತುಂಬಾ ಹಾಳಾಗಿರುತ್ತವೆ. ಅದನ್ನು ನಾವು ಸರ್ಕಾರಕ್ಕೆ ತೆಗೆದುಕೊಂಡು ಸಾರ್ವಜನಿಕರು ಓಡಾಡುವುದಕ್ಕೋಸ್ಕರ ರಿಪೇರಿ ಮಾಡಲಾಗುತ್ತದೆ. ಆಮೇಲೆ ಮೋರಿಗಳೆಲ್ಲಾ ಮಣ್ಣು ತುಂಬಿಕೊಂಡಿರುತ್ತವೆ. ಅದನ್ನೆಲ್ಲಾ clean ಮಾಡಬೇಕಲ್ಲವೇ? ಏಕೆಂದರೆ ಅದೆಲ್ಲಾ ಸಾರ್ವಜನಿಕರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಆ ದೃಷ್ಟಿಯಿಂದ ಪರಿಹಾರ ಕೊಡುವುದಕ್ಕೆ ಸಾಧ್ಯವಿಲ್ಲ. ಅವರು ಮಾಡಿರತಕ್ಕಂಥ illegal layouts ಅನ್ನು ನಾವು legalize ಮಾಡುತ್ತಿದ್ದೇವೆ. ಒಂದು ವೇಳೆ ಆ ಜಾಗ ಅಥವಾ ಅವರ ಸ್ವತ್ತು ಲ್ಯಾಂಡ್ ಮಾಲೀಕರ ಹೆಸರಿನಲ್ಲೇ ಇದ್ದರೆ, ಮುಂದಿನ ದಿನಗಳಲ್ಲಿ ತರ್ಲೆ ಮಾಡಿ, ಕೋರ್ಟ್‌ಗೆ ಹೋಗುತ್ತಾರೆ. ಆದ್ದರಿಂದ ಅದನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುತ್ತಿದ್ದೇವೆ. ಆದ್ದರಿಂದ ಮಾನ್ಯ ವಿಧಾನ ಪರಿಷತ್ತಿನ ಶಾಸಕರುಗಳು ಈ ಬಿಲ್ ಅನ್ನು ಪಾಸ್ ಮಾಡಿಕೊಡಬೇಕೆಂದು ನಾನು ಮನವಿ ಮಾಡುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಶಿವಕುಮಾರ್ ರವರು ಕೂಡ ಹೇಳಿದರು.

**(ಗೊಂದಲ)**

**ಶ್ರೀ ಹೆಚ್.ಸಿ.ಬಾಲಕೃಷ್ಣ:–** ಮಾನ್ಯ ಸಭಾಪತಿಯವರೇ, ಅದು ಸರಿಯಾಗಿ ಕೇಳಿಸಲಿಲ್ಲ.

(ಗೊಂದಲ)

**Sri IVAN D'SOUZA:–** Illegal properties ಅನ್ನು ವಶಕ್ಕೆ ತೆಗೆದುಕೊಳ್ಳುವುದಕ್ಕೆ ನನ್ನ ಆಕ್ಷೇಪ ಇಲ್ಲ. ಆದರೆ ಆ ಜಾಗ legally ಇದೆ. ಆ legally ಇರುವುದನ್ನು ಏನು ಮಾಡುತ್ತಾರೆಂದು ಹೇಳಬೇಕೋ, ಬೇಡವೋ? ಇಲ್ಲದಿದ್ದರೆ ನಾಳೆ ದಿವಸ ಅವರು ಕೋರ್ಟ್‌ಗೆ ಹೋಗುತ್ತಾರೆ. ಅವರಿಗೆ ಅಭಿವೃದ್ಧಿ ಆಗದೇ ಕುಂಠಿತವಾಗುತ್ತದೆ. Legally ಇದ್ದವರಿಗೆ ಏನು ಮಾಡುತ್ತಾರೆಂದು ಹೇಳಲಿ. Illegal ಇದ್ದವರದ್ದು, that is your property. You can do it.

(ಗೊಂದಲ)

**ಡಾ: ಯತೀಂದ್ರ.ಎಸ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಲೇಔಟ್ ನಿರ್ಮಾಣವಾಗಿದೆ. Illegal layouts ನಲ್ಲಿ ರಸ್ತೆ ಅವರದ್ದಲ್ಲ.

(ಗೊಂದಲ)

**ಶ್ರೀ ಹೆಚ್.ಸಿ.ಬಾಲಕೃಷ್ಣ:–** ಮಾನ್ಯ ಸಭಾಪತಿಯವರೇ, ಸಕ್ಷಮ ಪ್ರಾಧಿಕಾರದಿಂದ ಅವರು approval ತೆಗೆದುಕೊಂಡರೆ ಮಾತ್ರ legal. ಆದರೆ ಇದು ಮಾಡುತ್ತಿರುವುದು illegal. ಅವರು ಪ್ರಾಧಿಕಾರದಿಂದ approval ತೆಗೆದುಕೊಂಡರೆ ಅದು legal. ಆದ್ದರಿಂದ ಮಾನ್ಯ ಸದಸ್ಯರು ಈ ಬಿಲ್ ಪಾಸ್ ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

(ಗೊಂದಲ)

**ಶ್ರೀ ಯತೀಂದ್ರ. ಎಸ್:–** ಮಾನ್ಯ ಸಭಾಪತಿಯವರೇ, ಅದು legal ಆಗಿದ್ದರೆ ರಸ್ತೆ ಮತ್ತು ಚರಂಡಿಗಳು ಮೊದಲಿಗೆ ಚೆನ್ನಾಗಿ ನಿರ್ಮಾಣವಾಗಿರುತ್ತದೆ. ಹಾಗಾಗಿ ನಾವು ಮತ್ತೆ ಮಾಡಿಕೊಡುವ ಅಗತ್ಯವಿರುವುದಿಲ್ಲ. ಸರ್ಕಾರ ಮತ್ತೆ ಅದನ್ನು ಸ್ವಾಧೀನಪಡಿಸಿಕೊಳ್ಳುವ ಅಗತ್ಯತೆ ಇರುವುದಿಲ್ಲ. Illegal layouts ನಲ್ಲಷ್ಟೇ ಈ ಪ್ರಶ್ನೆ ಬರುವುದು. ಏಕೆಂದರೆ ಅಲ್ಲಿ ಸರಿಯಾಗಿ ರಸ್ತೆ ಮತ್ತು ಚರಂಡಿಗಳಾಗಿರುವುದಿಲ್ಲ. ಮತ್ತೆ ಬೇರೆ ಲೇಔಟ್‌ಗಳಿಗೆ ಹೋಗುವುದಕ್ಕೆ access ಇರುವುದಿಲ್ಲ. ಅದನ್ನು ಸರ್ಕಾರ ಮಾಡಿಕೊಡಬೇಕಾಗಿರುತ್ತದೆ. ಅದಕ್ಕೋಸ್ಕರ ಸರ್ಕಾರ ಈ ಬಿಲ್ ತರುತ್ತಿರುವುದು.

ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಮುನ್ಸಿಪಾಲಿಟಿಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"**

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

ಖಂಡ 2

ಸಭಾಪತಿಯವರು:- ಪ್ರಸ್ತಾವ ಏನೆಂದರೆ, "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಸಭಾಪತಿಯವರು:- ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಹೆಚ್.ಸಿ.ಬಾಲಕೃಷ್ಣ (ಪೌರಾಡಳಿತ ಸಚಿವರು):-** ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಮುನ್ಸಿಪಾಲಿಟಿಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಸಭಾಪತಿಯವರು:- **ಪ್ರಸ್ತಾವ ಏನೆಂದರೆ;**

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಮುನ್ಸಿಪಾಲಿಟಿಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಸದನದ ಅನುಮೋದನೆ ದೊರೆಯಿತು**

**ಆ) ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2026**

**ಪರ್ಯಾಲೋಚನಾ ಪ್ರಸ್ತಾವ**

**ಡಾ: ಯತೀಂದ್ರ.ಎಸ್ (ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2026 ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವವನ್ನು ಮಂಡಿಸಲಾಯಿತು.**

**ಡಾ: ಯತೀಂದ್ರ. ಎಸ್ (ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪೌರಾಡಳಿತ ಸಚಿವರಾದ ಶ್ರೀ ಹೆಚ್.ಸಿ. ಬಾಲಕೃಷ್ಣರವರು, ನಗರ ಸಭೆಗಳು ಮತ್ತು ಪುರಸಭೆಗಳ ವ್ಯಾಪ್ತಿಯಲ್ಲಿ ಖಾಸಗಿ ರಸ್ತೆಗಳು, ಅನಧಿಕೃತ ಬಡಾವಣೆಗಳಲ್ಲಿರುವ ಖಾಸಗಿ ರಸ್ತೆಗಳನ್ನು ಅದು ‘ಸಾರ್ವಜನಿಕ ರಸ್ತೆ’ ಎಂದು ಘೋಷಣೆ ಮಾಡಿ; ಅದನ್ನು ಸರ್ಕಾರವೇ ಅಭಿವೃದ್ಧಿಪಡಿಸಬೇಕೆಂದು ತಿದ್ದುಪಡಿ ವಿಧೇಯಕವನ್ನು ತಂದಿದ್ದಾರೋ, ಅದೇ ತಿದ್ದುಪಡಿಯನ್ನು ನಾವು ನಗರ ಪಾಲಿಕೆಗಳ ವ್ಯಾಪ್ತಿಯಲ್ಲೂ ಕೂಡ ತರುತ್ತಿದ್ದೇವೆ. ನಗರ ಸಭೆ ಮತ್ತು ಪುರಸಭೆಗಳಲ್ಲಿ ಏನು ತಿದ್ದುಪಡಿ ಬಿಲ್ ತೆಗೆದುಕೊಂಡು ಬಂದಿದ್ದಾರೋ, ಅದನ್ನೇ ನಾವು ನಗರ ಪಾಲಿಕೆಗಳಿಗೂ ಕೂಡ apply ಮಾಡುವುದಕ್ಕೆ ಈ ಬಿಲ್‌ಅನ್ನು ತರುತ್ತಿದ್ದೇವೆ.

(ಮುಂದು)

(831)24.8.2026/12.30/ಎಂ.ಎಂ-ಬಿ.ಎನ್.ಎಸ್ (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

**ಶ್ರೀ ಐವನ್ ಡಿ’ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ವಾಸವಾಗಿರುವ ಪ್ರದೇಶ ನಗರಪಾಲಿಕೆ. ನಗರಪಾಲಿಕೆಗಳಲ್ಲಿ ಯಾವುದೇ ಬಡಾವಣೆಗಳನ್ನು ಮಾಡಬೇಕಾದರೆ ಅವರು ‘ಮುಡಾ’ದಿಂದ ಅನುಮತಿ ತೆಗೆದುಕೊಳ್ಳಬೇಕು. ಆ ಅನುಮತಿಯನ್ನು ನಗರಪಾಲಿಕೆಯು ಅಪ್ರೂವ್ ಮಾಡಬೇಕು ಮತ್ತು ನಗರಪಾಲಿಕೆಗೆ ಬೇಕಾದಂತಹ ಕಾನೂನನ್ನು ರಚನೆ ಮಾಡಿ ಯಾವ ಯಾವ ಕಾನೂನಿನ ಆಧಾರದಲ್ಲಿ ಅವರು ಮಾಡಬೇಕು ಎಂಬ ನಿಯಮಾವಳಿಗಳನ್ನು ತಂದುಕೊಡುತ್ತಾರೆ. ಈಗ ಅವರು ಏನು ಹೇಳುತ್ತಾರೆಂದರೆ, ಖಾಸಗಿ ಭೂಮಿ ಇದ್ದರೆ ಅದರ ಬಗ್ಗೆ ಮಾತನಾಡುವುದಿಲ್ಲ. ಸರ್ಕಾರಿ ಭೂಮಿ ಇದ್ದರೆ ಸರಿಯಿದೆ ಅದನ್ನು ಸ್ವಾಧೀನಪಡಿಸಿಕೊಳ್ಳಲಿ, ಅಭಿವೃದ್ಧಿ ಮಾಡಲಿ ಅಥವಾ ಏನು ಬೇಕಾದರೂ ಮಾಡಲಿ. ನನ್ನ ಪ್ರಶ್ನೆ ಇರುವುದೇನೆಂದರೆ, ಖಾಸಗಿ ಭೂಮಿ ಅಥವಾ ಜಾಗ ಯಾವುದಾದರೂ ಇದ್ದರೆ ಆ ಜಾಗವನ್ನು ಇವರು ಸ್ವಾಧೀನಪಡಿಸಿಕೊಳ್ಳುವಾಗ

ಅವರಿಗೆ compensation ಕೊಡುತ್ತಾರೋ ಇಲ್ಲವೋ ಎಂಬುದನ್ನು ತಿಳಿಸಬೇಕು. ಈ ಬಿಲ್‌ನ ಪ್ರಕಾರ ಇವರು ಏನೂ ಕೊಡುವುದಿಲ್ಲ. ತಾವು ಭೂಸ್ವಾಧೀನ ಮಾಡುತ್ತೇವೆ, ಅಭಿವೃದ್ಧಿ ಮಾಡುತ್ತೇವೆಂದರೆ, they will automatically go to Court, because their right is infringed. Who gives you the right to take over their property? Public property ಯನ್ನು ತೆಗೆದುಕೊಳ್ಳುವ ಹಕ್ಕು ಇವರಿಗೆಲ್ಲಿದೆ? ಹಾಗಾಗಿ ನನ್ನ ಪ್ರಶ್ನೆಯೇನೆಂದರೆ ಇವರು ದಯವಿಟ್ಟು ಈ ಬಗ್ಗೆ ಆಲೋಚನೆ ಮಾಡಬೇಕು. ಆಲೋಚನೆ ಮಾಡಿ ಮಾಡಿದರೆ ಅಥವಾ ಖಾಸಗಿ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವುದಾದರೆ ಆ ಆಸ್ತಿಗೆ ಹಿಂದೆ F.A.R. ಕೊಡಲಾಗುತ್ತಿತ್ತು. ಆ ಆಸ್ತಿಗೆ ಸರಿಸಮಾನವಾದ right ಅನ್ನು ಕೊಟ್ಟು ಬೇರೆ ಆಸ್ತಿಗೆ ಅವರನ್ನು ಅಳವಡಿಸಿಕೊಳ್ಳಬಹುದಾಗಿತ್ತು. ಹಾಗಾಗಿ ಇದರಿಂದ ಅಭಿವೃದ್ಧಿ ಕುಂಠಿತವಾಗುತ್ತದೆ ಮಾತ್ರವಲ್ಲ ಇದರಿಂದ ಯಾವುದೇ ಅಭಿವೃದ್ಧಿ ಮುಂದಕ್ಕೆ ಹೋಗುವುದಿಲ್ಲ ಎನ್ನುವುದು ನನ್ನ ಭಾವನೆ. ಇದು ಕೋರ್ಟ್‌ನಲ್ಲಿಯೂ ನಿಲ್ಲುವುದಿಲ್ಲ ಎಂದು ನನ್ನ ಅಭಿಪ್ರಾಯ ತಿಳಿಸಬಯಸುತ್ತೇನೆ.

**ಸಭಾಪತಿಯವರು:-** ಈ ಬಿಲ್ ಮೇಲೆ ವಿರೋಧಪಕ್ಷದಲ್ಲಿ ಯಾರಾದರೂ ಮಾತನಾಡುವವರು ಇದ್ದೀರಾ?

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2026ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಮಂಡಿಸಿರುವ ವಿಧೇಯಕವನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಸಾರ್ವಜನಿಕ ಹಿತದೃಷ್ಟಿಯಿಂದ ತಂದಿರುವ ಬಿಲ್ ಇದು. ಈ ಬಿಲ್ ಇಲ್ಲದ ಕಾರಣದಿಂದ ಸಾರ್ವಜನಿಕರಿಗೆ ಹಲವಾರು ಪ್ರಶ್ನೆಗಳನ್ನು ಹುಟ್ಟು ಹಾಕುತ್ತಿತ್ತು ಮತ್ತು ಘರ್ಷಣೆಗಳಾಗುತ್ತಿತ್ತು. ಬಹಳಷ್ಟು ಖಾಸಗಿ ಲೇಔಟ್‌ನವರು ಅವರೆಲ್ಲಾ ಮಾಡಿದ ನಂತರ ಅದನ್ನು surrender ಮಾಡಿದರೂ ಕೂಡ ಕೆಲವೊಮ್ಮೆ ಬೇರೆಯವರು ಇನ್ನೂ ಆಗಿಲ್ಲ ಎಂದು ಅಲ್ಲಿಯೇ ನಿಲ್ಲಿಸಿಬಿಡುತ್ತಿದ್ದರು. ಅದು ತಮಗೆ ಸೇರಿದ್ದೆಂದು ತಾವೇ ಸ್ವಯಂ ಘೋಷಣೆ ಮಾಡಿಕೊಳ್ಳುತ್ತಿದ್ದರು. ಈ ಬಿಲ್‌ನಿಂದ ಸಾರ್ವಜನಿಕರ ಕಲಹಗಳಿಗೆ ಕಡಿವಾಣ ಹಾಕುವ ಕೆಲಸವಾಗಿದೆ. ಇದು ಸಂಪೂರ್ಣವಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ಇರುವುದರಿಂದ ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ.

**ಡಾ॥ ಯತೀಂದ್ರ ಎಸ್. (ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಐವನ್ ಡಿ'ಸೋಜಾರವರು ಪೌರಾಡಳಿತ ಸಚಿವರು ಬಿಲ್ ಅನ್ನು ಮಂಡಿಸಿದಾಗಲು ಕೂಡ ಇದೇ ಪ್ರಶ್ನೆಯನ್ನು ಕೇಳಿದರು. ಆಗಲೂ ಕೂಡ ಪೌರಾಡಳಿತ ಸಚಿವರು ಮತ್ತು ನಾನು ಇಬ್ಬರೂ ಉತ್ತರ ಕೊಟ್ಟಿದ್ದೇವೆ. ಮತ್ತೆ ಅದೇ ಪ್ರಶ್ನೆಯನ್ನು ಕೇಳಿದ್ದಾರೆ. ಪ್ರಶ್ನೆ ಯಾವಾಗ ಉದ್ಭವಿಸುತ್ತದೆಂದರೆ, ಬಡಾವಣೆಗಳು ಅಧಿಕೃತವಾಗಿ ರೂಪುಗೊಂಡಿದ್ದರೆ

automatic ಆಗಿ ಸೈಟ್‌ಗಳ ಮುಂದಿರುವ ರಸ್ತೆಗಳು ಅದರ ನಿರ್ವಹಣೆ ಮತ್ತು ಸಾರ್ವಜನಿಕರು ಉಪಯೋಗಿಸಿಕೊಳ್ಳುವುದಕ್ಕೆ ಸರ್ಕಾರಕ್ಕೇ ಬರುತ್ತವೆ. ಯಾವಾಗ ಅನಧಿಕೃತ ಬಡಾವಣೆಗಳಾಗುತ್ತವೆ ಆಗ ಆ ರಸ್ತೆಗಳ ಮಾಲೀಕತ್ವ ಖಾಸಗಿ ವ್ಯಕ್ತಿಗಳ ಹತ್ತಿರ ಇರುತ್ತದೆ. ಆಗ ನಾವು ಆ ರಸ್ತೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಆಗುವುದಿಲ್ಲ. ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತದೆ. ಎಷ್ಟೋ ಸಲ ಈ ರಸ್ತೆಗಳ ಮುಂದೆ ಸೈಟುಗಳಿರುತ್ತವೆ. ಪಾಪ ಅವರು ಖಾತೆ ಮಾಡಿಸಿಕೊಳ್ಳಬೇಕು, plan approval ಮಾಡಿಸಿಕೊಳ್ಳಬೇಕೆಂದರೂ ಕೂಡ ರಸ್ತೆ access ಇಲ್ಲದಿರುವುದರಿಂದ ಅವರು plan approval ಮತ್ತು ಖಾತೆ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಹೀಗಾಗಿ ಅನಧಿಕೃತವಾಗಿ ಬಡಾವಣೆಗಳನ್ನು ಕಟ್ಟಿ ಖಾಸಗಿ ವ್ಯಕ್ತಿಗಳ ಮಾಲೀಕತ್ವದಲ್ಲಿ ಇರುವಂತಹ ರಸ್ತೆಗಳನ್ನು ನಾವು ಸಾರ್ವಜನಿಕ ರಸ್ತೆಗಳೆಂದು ಘೋಷಿಸಿ ಅದಕ್ಕೆ ಅಭಿವೃದ್ಧಿ ಮಾಡಿಕೊಟ್ಟಾಗ ಎಲ್ಲರಿಗೂ ಅನುಕೂಲವಾಗುತ್ತದೆ ಅವರಿಗೆ ಪರಿಹಾರ ಕೊಡುವಂತಹ ಪ್ರಶ್ನೆ ಬರುವುದಿಲ್ಲ. ಏಕೆಂದರೆ ಅವು ಅನಧಿಕೃತ ಬಡಾವಣೆಗಳು. ಆದ್ದರಿಂದ ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ನಾನು ಸದನವನ್ನು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಶಿವರಾಜ್ ತಂಗಡಗಿಯವರೇ, ಮಾನ್ಯ ತಿಪ್ಪಣ್ಣಪ್ಪನವರೇ, ಕುಳಿತುಕೊಳ್ಳಿ. ಬಿಲ್ ಪಾಸ್ ಮಾಡುವಾಗ ಎಲ್ಲರೂ ಕುಳಿತುಕೊಳ್ಳಬೇಕು. ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:-** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)**

ಖಂಡ 1 ಇತ್ಯಾದಿ

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

## ಪ್ರಸ್ತಾವದ ಅಂಗೀಕಾರ

**ಡಾ॥ ಯತೀಂದ್ರ. ಎಸ್ (ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಸದನದ ಅನುಮೋದನೆ ದೊರೆಯಿತು**

**ಇ) ಕರ್ನಾಟಕ ಅಪಾರ್ಟ್‌ಮೆಂಟ್ (ಮಾಲೀಕತ್ವ ಮತ್ತು ನಿರ್ವಹಣೆ) ವಿಧೇಯಕ, 2026**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಅಪಾರ್ಟ್‌ಮೆಂಟ್ (ಮಾಲೀಕತ್ವ ಮತ್ತು ನಿರ್ವಹಣೆ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ನಗರೀಕರಣ ದೇಶದಲ್ಲಿ, ರಾಜ್ಯದಲ್ಲಿ, ಬೆಂಗಳೂರಿನಲ್ಲಿ ಅತ್ಯಂತ ವೇಗವಾಗಿ ನಡೆಯುತ್ತಿರುವಂತಹ ವಿದ್ಯಮಾನ. ಎಲ್ಲಾ ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ದೇಶದಾದ್ಯಂತ ಮತ್ತು ಪ್ರಪಂಚದಾದ್ಯಂತ ಜನ ಶಿಫ್ಟ್ ಆಗುತ್ತಿದ್ದಾರೆ. ನಗರ ಪ್ರದೇಶಗಳಲ್ಲಿ ಬರುತ್ತಿರುವಂತಹ ಜನಸಂಖ್ಯೆಗೆ ಅನುಗುಣವಾಗಿ ಸ್ಥಳ, ಜಾಗ, ಜಮೀನು ಸಿಗುವುದಿಲ್ಲ. ಆ ಕಾರಣದಿಂದ ಇವತ್ತು ಎಲ್ಲಾ ನಗರಗಳಲ್ಲಿ ಲಂಬಾಕಾರವಾಗಿ, vertical growth ಆಗುತ್ತಿದೆ. ಒಂದು ಕಡೆ ದಿನೇ ದಿನೇ ಹೆಚ್ಚು ಹೆಚ್ಚು ಲೇಔಟ್‌ಗಳು ಆಗುತ್ತಿವೆ ಆದರೆ ಅಷ್ಟೇ ಪ್ರಮಾಣದಲ್ಲಿ ಅಥವಾ ಅದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಲಂಬಾಕಾರವಾದಂತಹ vertical growth ಆಗುತ್ತಿದೆ. ಕಟ್ಟಡಗಳನ್ನು ಕಛೇರಿಗಳಿಗೆ ಕಟ್ಟುತ್ತಿದ್ದಾರೆ ಅದೇ ಸಂದರ್ಭದಲ್ಲಿ ವಾಸಕ್ಕೂ ಕೂಡ vertical growth ಆಗುತ್ತಿದೆ, ಅವೆಲ್ಲಾ ಅಪಾರ್ಟ್‌ಮೆಂಟ್‌ಗಳಾಗಿ ಬರುತ್ತಿವೆ. ದಿನೇ ದಿನೇ ಹೆಚ್ಚು ಹೆಚ್ಚು ಜನ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸ ಮಾಡುತ್ತಿರುವುದರಿಂದ ಆ ಅಪಾರ್ಟ್‌ಮೆಂಟ್‌ಗಳಿಗೆ ಸಂಬಂಧಪಟ್ಟಂತಹ ಅನೇಕ ಸಮಸ್ಯೆಗಳಿರುತ್ತವೆ, ಅಲ್ಲಿ ವಾಸಕ್ಕೆ ಸಂಬಂಧಪಟ್ಟಂತಹ ವಿಷಯಗಳಿರುತ್ತವೆ. ಅಪಾರ್ಟ್‌ಮೆಂಟ್ ಕಟ್ಟಡ ಕಟ್ಟುವವರಿಂದ ಖರೀದಿ ಮಾಡುವಂಥವರ ಹಕ್ಕುಗಳಿರುತ್ತವೆ, ಖರೀದಿ ಮಾಡಿದ ನಂತರ ಆ ಕಟ್ಟಡದ ನಿರ್ವಹಣೆ ವಿಷಯಗಳಿರುತ್ತವೆ ಮತ್ತು ಆ ಕಟ್ಟಡದ ಸುತ್ತ ಇರುವಂತಹ ಎಲ್ಲಾ ಮಾಲೀಕರಿಗೆ ಸೇರಿದಂತಹ ಒಟ್ಟಾರೆ ಜಾಗ common land ಅದರ ವಿಷಯಗಳಿರುತ್ತವೆ. ನಾಳೆ ದಿನ ಕಟ್ಟಡದ ಮರು ನಿರ್ಮಾಣದಂತಹ ವಿಷಯಗಳು ಕೂಡ ಇರುತ್ತವೆ. ಇವೆಲ್ಲಾ ಒಂದೊಂದು ಕೂಡ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸ ಮಾಡುವಂತಹ ಜನಗಳ ಜೀವನದ ಮೇಲೆ ನಾನಾ ರೀತಿಯ ಪರಿಣಾಮಗಳನ್ನು ಬೀರುತ್ತದೆ. ಇಲ್ಲಿಯವರೆಗೂ ಇಷ್ಟು ದಿನ ವ್ಯಾಪಕವಾಗಿ ಅಪಾರ್ಟ್‌ಮೆಂಟ್ ಕಟ್ಟಡಗಳು ಬಂದಿದ್ದರೂ ಕೂಡ ಕಳೆದ 10-15 ವರ್ಷಗಳಿಂದ ಈ ಅಪಾರ್ಟ್‌ಮೆಂಟ್ ನಿವಾಸಿಗಳು ನಾನಾ ಸಂಘ-ಸಂಸ್ಥೆಗಳ ಮುಖಾಂತರ ಹೋರಾಟ ಮಾಡುತ್ತಾ ಬಂದಿದ್ದಾರೆ.

(ಮುಂದು)

(832) 24-08-2026 12-40 KH/MD (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೃಷ್ಣ ಬೈರೇಗೌಡ (ಮುಂದು):-**

ನಮ್ಮ ಅಪಾರ್ಟ್‌ಮೆಂಟ್‌ಗಳ ಮ್ಯಾನೇಜ್‌ಮೆಂಟ್ ಮತ್ತು ನಿರ್ವಹಣೆಗೆ ಒಂದು ಕಾನೂನು ಬೇಕು ಎನ್ನುವ ವಿಷಯಕ್ಕೆ 10-12 ವರ್ಷಗಳಿಂದ ಹೋರಾಟ ಮಾಡಿದ್ದಾರೆ. ಆದರೆ, ಈ ಹಿಂದೆ ಯಾರೂ ಕೂಡ ಅವರಿಗೆ ಬೇಕಾದಂತಹ ಕಾನೂನನ್ನು ರಚನೆ ಮಾಡುವಂತಹ ಕೆಲಸ ಮಾಡಲಿಲ್ಲ. ಹಾಗಾಗಿ ನಮ್ಮ ಸರ್ಕಾರ ಬಂದ ನಂತರ ಮಾನ್ಯ ಮುಖ್ಯಮಂತ್ರಿಯವರಾದ ಡಿ.ಕೆ.ಶಿವಕುಮಾರ್‌ರವರು ಈ ಅಪಾರ್ಟ್‌ಮೆಂಟ್ ನಿವಾಸಿಗಳ ಬೇಡಿಕೆಯನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದೆ. ಒಂದು ಕಾನೂನು ಇರಬೇಕು ಎನ್ನುವುದು ಅಪಾರ್ಟ್‌ಮೆಂಟ್‌ಗಳ ಬೇಡಿಕೆ ಆಗಿದೆ. ಇದನ್ನು ಸರ್ಕಾರವು ಆದ್ಯತೆಯ ಕಾರ್ಯಕ್ರಮವಾಗಿ ತೆಗೆದುಕೊಂಡು, ಕಳೆದ 6-8 ತಿಂಗಳಿನಿಂದ ನಮ್ಮ ಅಧಿಕಾರಿಗಳು ಅಪಾರ್ಟ್‌ಮೆಂಟ್‌ರವರ ಜೊತೆಗೆ ಸಮಾಲೋಚನೆ ಮಾಡಿ ಈ ವಿಧೇಯಕವನ್ನು ತಯಾರು ಮಾಡಿದ್ದೇವೆ. ಏಕೆಂದರೆ, ಅಪಾರ್ಟ್‌ಮೆಂಟ್‌ಗಳಲ್ಲಿ ವಾಸ ಮಾಡುವಂತಹ ಜನರ ಸಮಸ್ಯೆಗಳಿಗೆ ಕಾನೂನು ಚೌಕಟ್ಟಿನ ಮುಖಾಂತರ ಕಾನೂನು ಕ್ರಮಗಳನ್ನು ಕೊಡಬೇಕೆನ್ನುವ ಕಾರಣಕ್ಕಾಗಿ ಈ ವಿಧೇಯಕವನ್ನು ತಂದಿದ್ದೇವೆ. 1972ನೇ ಇಸವಿಯಲ್ಲಿ ಕರ್ನಾಟಕದಲ್ಲಿ ಅಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟ ಹಾಗೆ ಒಂದು ನಿರ್ವಹಣಾ ಕಾನೂನು ಆಗಿದ್ದು ನಿಜ. ಇಲ್ಲ ಎಂದೇನೂ ಅಲ್ಲ. ಆಗ ಕಾನೂನು ಇತ್ತು. 1972ನೇ ಇಸವಿಯ ಕಾಲವೇ ಬೇರೆ. ಈಗಿನ ಕಾಲವೇ ಬೇರೆ. ಕಾಲಕ್ಕೆ ತಕ್ಕ ಹಾಗೆ complexity ಬಂದಿದೆ. ಸಮಸ್ಯೆಗಳು ಜಟಿಲವಾಗಿವೆ. ಒಂದು ಕಡೆ ಅಪಾರ್ಟ್‌ಮೆಂಟ್ ಮ್ಯಾನೇಜ್‌ಮೆಂಟ್ ಆದರೆ, ಇನ್ನೊಂದು ಕಡೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ. ಇವು ಯಾವ ಕಾನೂನಿನ ಅಡಿ ನೋಂದಣಿ ಮಾಡಿಸಿಕೊಳ್ಳಬೇಕು. 1972ನೇ ಇಸವಿಯ ಕಾನೂನಿನ ಕೆಳಗೂ ನೋಂದಣಿ ಮಾಡಿಕೊಳ್ಳಬಹುದು. ಕೋ-ಅಪರೇಷನ್ ಕಾನೂನಿನ ಕೆಳಗೂ ನೋಂದಣಿ ಮಾಡಿಕೊಳ್ಳಬಹುದು. ಸೊಸೈಟಿ ಕೆಳಗೂ ನೋಂದಣಿ ಮಾಡಿಕೊಳ್ಳಬಹುದು. ಈ ರೀತಿಯಾಗಿ ಒಂದೊಂದು ಅಪಾರ್ಟ್‌ಮೆಂಟ್‌ನಲ್ಲಿ 2-3 ಅಸೋಸಿಯೇಷನ್‌ಗಳಾಗಿ ಕೊನೆಗೆ 2-3 ಅಸೋಸಿಯೇಷನ್‌ರವರು ಜಗಳಕ್ಕೆ ಬಿದ್ದಿರುವ ಪ್ರಸಂಗಗಳು ಇವೆ. ಈ ರೀತಿಯಾಗಿ ಕಳೆದ 50 ವರ್ಷಗಳಲ್ಲಿ ಏನೆಲ್ಲಾ ಬದಲಾವಣೆಗಳು ಆಗಿವೆ, ಅವುಗಳನ್ನು ಗಮನಕ್ಕೆ ತೆಗೆದುಕೊಂಡು ಇವತ್ತಿನ ದಿನಗಳಿಗೆ ಅವಶ್ಯಕವಾದಂತಹ ಒಂದು ಕಾನೂನನ್ನು ರಚನೆ ಮಾಡುವಂತಹ ಕೆಲಸವನ್ನು ಈ ವಿಧೇಯಕದ ಮುಖಾಂತರ ಮಾಡುತ್ತಿದ್ದೇವೆ. ಇದರಲ್ಲಿ ಮುಖ್ಯವಾಗಿ Resident Welfare Association ಈ ಕಾನೂನಿನ ಅಡಿಯಲ್ಲಿಯೇ ನೋಂದಣಿ ಆಗಬೇಕು. ಅದೇ ಅಧಿಕೃತ ಎನ್ನುವಂತಹದ್ದನ್ನು ನಾವು ಇದರಲ್ಲಿ ತೆಗೆದುಕೊಂಡು ಬರುತ್ತಿದ್ದೇವೆ ಹಾಗೂ ಅಪಾರ್ಟ್‌ಮೆಂಟ್‌ಗಳ ನಿರ್ವಹಣೆ ಹೇಗೆ ಆಗಬೇಕು? ಅದಕ್ಕೆ expenditure

ಹೇಗೆ meet ಮಾಡಬೇಕು. ಆ ಅಂಶಗಳಿಗೂ ಕಾನೂನಿನ ಚೌಕಟ್ಟನ್ನು ಇದರಲ್ಲಿ ಕೊಡುತ್ತಿದ್ದೇವೆ. ಅಪಾರ್ಟ್‌ಮೆಂಟ್‌ನಲ್ಲಿ undivided share ಇರುತ್ತದೆ. ಆ ರೀತಿಯೆಂದರೆ, ಪಾರ್ಕ್ ಇರುತ್ತದೆ, ಮೆಟ್ಟಿಲುಗಳು ಇರುತ್ತದೆ, ಲಿಫ್ಟ್‌ಗಳು ಇರುತ್ತದೆ, ಇವೆಲ್ಲಾ undivided share ಆಗಿದ್ದು, ಅವುಗಳಲ್ಲಿ ಎಲ್ಲರಿಗೂ ಹೇಗೆ ಭಾಗ ಬರಬೇಕು ಎನ್ನುವಂತಹದ್ದನ್ನು ಮಾಡುತ್ತಿದ್ದೇವೆ. ಕೆಲವು undivided share ಇರುತ್ತದೆ. ಕೆಲವು undivided interest ಇರುತ್ತದೆ. ಇದರ ಬಗ್ಗೆಯೂ ಕೂಡ ಕಾನೂನಿನಲ್ಲಿ ಅವಕಾಶ ಮಾಡಿಕೊಡುತ್ತಿದ್ದೇವೆ. ಕೊನೆಗೆ common area management ಹೇಗೆ ಮಾಡಬೇಕು ಎನ್ನುವುದಕ್ಕೂ ಸ್ಪಷ್ಟತೆ ಕೊಡುತ್ತಿದ್ದೇವೆ. ಇದರಲ್ಲಿ ಬಹಳ ಮುಖ್ಯವಾಗಿ ಕೆಲವು ಹಳೆಯ ಕಟ್ಟಡಗಳು ಇವೆ. ಆ ಕಟ್ಟಡಗಳಿಗೆ ವಯಸ್ಸಾದ ನಂತರ ಇಡೀ ಅಪಾರ್ಟ್‌ಮೆಂಟ್ ಅನ್ನು ಮರು ನಿರ್ಮಾಣ ಮಾಡಬೇಕೆಂದು ಹೇಳಿದಾಗ ಇದಕ್ಕೆ ಕಾನೂನು ಚೌಕಟ್ಟು ಹೇಗೆ ಎನ್ನುವುದರ ಬಗ್ಗೆ ಇದರಲ್ಲಿ ಸ್ಪಷ್ಟತೆಯನ್ನು ಕೊಡುತ್ತಿದ್ದೇವೆ. ಇದರ ಜೊತೆಗೆ ನಿವಾಸಿಗಳು ಮತ್ತು ಅಸೋಸಿಯೇಷನ್ ರವರ ಮಧ್ಯೆ ಏನಾದರೂ ವ್ಯಾಜ್ಯ ಬಂದಾಗ ಇದಕ್ಕೆ Competent Authority ಎಂದು ಒಂದು Dispute Resolution Officer ನ್ನು ನೇಮಕ ಮಾಡುತ್ತಿದ್ದೇವೆ. ಇವರು first order pass ಮಾಡುತ್ತಾರೆ. ಅದರ ಮೇಲೆ Appellate Authority ಅನ್ನು ಇದರಲ್ಲಿ ಕೊಡುತ್ತಿದ್ದೇವೆ. ಈ ರೀತಿಯಾಗಿ ಏನೆಲ್ಲಾ ಅಪಾರ್ಟ್‌ಮೆಂಟ್‌ಗಳ ನಿರ್ವಹಣೆಯಲ್ಲಿ ಸಮಸ್ಯೆಗಳು ಕಂಡು ಬರುತ್ತಿವೆ, ಅವುಗಳನ್ನು ಅರ್ಥ ಮಾಡಿಕೊಂಡು ಅದನ್ನು ಬಗೆಹರಿಸಿಕೊಳ್ಳುವುದಕ್ಕೆ ಮತ್ತು ಮ್ಯಾನೇಜ್‌ಮೆಂಟ್ ನಿರ್ವಹಣೆಗೆ ಬೇಕಾದಂತಹ ಕಾನೂನಿನ ಅವಶ್ಯಕತೆಯನ್ನು ಇದರ ಮುಖಾಂತರ ಕೊಡುವಂತಹ ಪ್ರಯತ್ನ ಮಾಡುತ್ತಿದ್ದೇವೆ. ನಾವು ಅವರ ಜೊತೆ ಎರಡು ಸುತ್ತಿನ ಸಮಾಲೋಚನೆ ಮಾಡಿದ್ದು, ಮೊದಲನೇ ಬಾರಿಗೆ ಇಂತಹ ಕಾನೂನನ್ನು ವಿಧಾನಮಂಡಲದಲ್ಲಿ ಮಂಡಿಸುವುದಕ್ಕೆ ಮೊದಲೇ ಸಾರ್ವಜನಿಕರಿಗೆ ಇದರ ಬಗ್ಗೆ ಮಾಹಿತಿ ಕೊಟ್ಟು, ಅವರಿಂದ ಸಲಹೆಗಳನ್ನು ಸ್ವೀಕಾರ ಮಾಡಿ, ಅದನ್ನು ತಿದ್ದುಪಡಿ ಮಾಡಿಕೊಂಡು ಆನಂತರ ವಿಧಾನಮಂಡಲದ ಮುಂದೆ ತಂದಿದ್ದೇವೆ. ಸಾಕಷ್ಟು consultation ಮಾಡಿ ಈ ವಿಧೇಯಕವನ್ನು ತೆಗೆದುಕೊಂಡು ಬಂದಿದ್ದೇವೆ. ಇದಕ್ಕೂ ಮುಂದುವರೆದು ಇದರಲ್ಲಿ ಸಾಕಷ್ಟು ನ್ಯೂನತೆಗಳು ಇರಬಹುದು. ಏಕೆಂದರೆ, ಇದು ಬಹಳ ಸಂಕೀರ್ಣವಾದಂತಹ ವಿಷಯ. It's a complex issue. ಆ ರೀತಿ ಏನಾದರೂ ಇದ್ದರೆ ಮುಂದಿನ ದಿನಗಳಲ್ಲಿ ಅವುಗಳನ್ನು ಸರಿಪಡಿಸುವುದಕ್ಕೆ ನಾವು ಬದ್ಧರಿದ್ದೇವೆ. ಪ್ರಮುಖವಾಗಿ ಮೊದಲ ಹೆಜ್ಜೆಯನ್ನು ಈ ವಿಧೇಯಕದ ಮುಖಾಂತರ ಇಡುತ್ತಿದ್ದೇವೆ. It's a first major step. It is the need of the hour. Because, in cities like ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ, ಬೆಳಗಾವಿ ಇಲ್ಲಿ ಎಲ್ಲಾ ಕಡೆಗಳಲ್ಲೂ ಅಪಾರ್ಟ್‌ಮೆಂಟ್‌ಗಳು ತಲೆ ಎತ್ತುತ್ತಿವೆ. ಅವುಗಳ proper management ಗೆ ಒಂದು ಕಾನೂನು ಇರಬೇಕು. ಆ ಜನರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ನಾವು major step ಇಟ್ಟಿದ್ದೇವೆ. ಇನ್ನು ಏನಾದರೂ ಇದ್ದರೆ ಮುಂದಿನ

ದಿನಗಳಲ್ಲಿ ಸರಿಪಡಿಸಿಕೊಂಡು, ಇದನ್ನು ಸುಧಾರಣೆ ಮಾಡಿಕೊಂಡು ಹೋಗುತ್ತೇವೆ. ಸದ್ಯಕ್ಕೆ ಇದನ್ನು ಆರಂಭ ಮಾಡುವುದಕ್ಕೆ ಅನುಮತಿ ಕೊಡಬೇಕೆಂದು ತಮ್ಮ ಮುಖಾಂತರ ಕೋರುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರೇ, ಇದು ಮಹತ್ತರವಾದ ವಿಧೇಯಕವಾಗಿದೆ. ಬೆಂಗಳೂರು ನಗರಕ್ಕೆ ಸೇರಿದ್ದು. ದಯವಿಟ್ಟು ಚರ್ಚೆ ಮಾಡಬೇಕು. ಚರ್ಚೆ ಮಾಡುವ ಹಾಗಿದ್ದರೆ . . .

**ಡಾ: ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇದು ಲಕ್ಷಾಂತರ ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ಅನುಕೂಲ ಮಾಡಿಕೊಡುವಂತಹ ವಿಧೇಯಕವಾಗಿದ್ದು, ದಯವಿಟ್ಟು ತಮ್ಮದೇನಾದರೂ ಟಿಪ್ಪಣಿ ಇದ್ದರೆ ಹೇಳಿ. ಇದರ ಬಗ್ಗೆ ಟಿಪ್ಪಣಿ ಮಾಡಿ. ಲಕ್ಷಾಂತರ ಜನರು ಅಪಾರ್ಟ್‌ಮೆಂಟ್‌ಗಳಲ್ಲಿ ಬದುಕುತ್ತಿದ್ದಾರೆ. ಅವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಈ ವಿಧೇಯಕವನ್ನು ತರುತ್ತಿದ್ದಾರೆ. ದಯವಿಟ್ಟು ತಾವೇನಾದರೂ ಸಲಹೆ ಕೊಡುವುದಿದ್ದರೆ ಕೊಡಿ.

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಅಪಾರ್ಟ್‌ಮೆಂಟ್ (ಮಾಲೀಕತ್ವ ಮತ್ತು ನಿರ್ವಹಣೆ) ವಿಧೇಯಕ, 2026 ಅನ್ನು ಸ್ವಾಗತಿಸುತ್ತೇನೆ. ಏಕೆಂದರೆ, ಇವತ್ತು vertical growth, group housing concept is the order of the day. ಆದರೆ, ಸುಮಾರು 50 ರಿಂದ 55 ವರ್ಷಗಳ ನಂತರ ಈ ರೀತಿಯ ಒಂದು ಸಮಗ್ರವಾದ ಚಿತ್ರಣವನ್ನು ಬದಲಾವಣೆ ಮಾಡಿಕೊಂಡು ಈ ರೀತಿಯ ಕಾಯ್ದೆ ತಂದಿರುವುದನ್ನು ನಾನು ಸ್ವಾಗತಿಸುತ್ತೇನೆ. Because, they can't afford a site. ಇವತ್ತು ಅಪಾರ್ಟ್‌ಮೆಂಟ್‌ಗಳನ್ನು lower middle class and middle class people ಜಾಸ್ತಿ ತೆಗೆದುಕೊಳ್ಳುತ್ತಿದ್ದಾರೆ. ಅವರು ಸೈಟ್ ಅನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಬೆಂಗಳೂರಿಗೆ ಬಂದು 2 ಬಿ.ಹೆಚ್.ಕೆ., 3 ಬಿ.ಹೆಚ್.ಕೆ., ಅಪಾರ್ಟ್‌ಮೆಂಟ್ ಅನ್ನು ತೆಗೆದುಕೊಂಡು ಬದುಕನ್ನು ಕಟ್ಟಿಕೊಂಡು ಜೀವನ ಮಾಡುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿರುವುದನ್ನು ಕೇಳಿದ್ದೇನೆ. ಇದನ್ನು ಬಹಳ democratic ಆಗಿ ಅಪಾರ್ಟ್‌ಮೆಂಟ್‌ನಲ್ಲಿ ಇರುವವರನ್ನು ಕರೆದು ಅಸೋಸಿಯೇಷನ್‌ರವರ ಜೊತೆ interact ಮಾಡಿದ್ದಾರೆ. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಯವರು ಮೀಟ್ ಮಾಡಿರುವುದೆಲ್ಲಾ ನೋಡಿದ್ದೇವೆ. ನನ್ನ ಮನವಿಯೇನೆಂದರೆ, ಈ ಅಪಾರ್ಟ್‌ಮೆಂಟ್‌ನಲ್ಲಿ ಅಸೋಸಿಯೇಷನ್‌ಗಳು ಮತ್ತು ವೆಲ್‌ಫೇರ್ ಸೊಸೈಟಿಗಳು ಇವೆ, they should be accountable to both the community and the Government. ಏಕೆಂದರೆ, ಬಹಳಷ್ಟು ಕಡೆ ಈ ಅಸೋಸಿಯೇಷನ್‌ಗಳು ಮತ್ತು ವೆಲ್‌ಫೇರ್ ಸೊಸೈಟಿಗಳು ಏನಿವೆ, ಇವರ ನಡುವೆ ಜಗಳಗಳು ಆಗಿ, ಅವರು ದುಡ್ಡು ಎತ್ತಿಕೊಂಡು ಹೋಗಿ ಅಲ್ಲಿನ ನಿವಾಸಿಗಳು victimize ಆಗಿವೆ. They should be accountable to the

Government. And the audit report should be given to the Government itself. I accept that it is their money. ಅವರ ದುಡ್ಡು ಅದು. ಅವರು ಏನು ಬೇಕಾದರೂ ಮಾಡಿಕೊಳ್ಳಲಿ. ಎಷ್ಟು ದುಡ್ಡು ಇದೆ, ಏನು ಕೆಲಸ ಮಾಡುತ್ತಿದ್ದಾರೆ ಎಂದು accountability ಸರ್ಕಾರದಲ್ಲಿ ಇರಬೇಕು. ಏಕೆಂದರೆ, ಇದು ಸರ್ಕಾರದ ಹೊಣೆ.

ಎರಡನೆಯದಾಗಿ ಬಹಳಷ್ಟು ಜನರು ಅಪಾರ್ಟ್‌ಮೆಂಟ್‌ಗಳನ್ನು ಕಟ್ಟುತ್ತಿದ್ದಾರೆ. 400 ರಿಂದ 500 ಮನೆಗಳು ಇರುವಂತಹ ಅಪಾರ್ಟ್‌ಮೆಂಟ್‌ಗಳನ್ನು ಕಟ್ಟುತ್ತಿದ್ದಾರೆ. ಅಲ್ಲಿ Playground ಇಲ್ಲ. ಅಲ್ಲಿ Club House ಇಲ್ಲ. ಉದಾಹರಣೆಗೆ ಇವತ್ತು ಬಿ.ಡಿ.ಎ., ರವರೇ ಕೆಂಗೇರಿಯಲ್ಲಿ ಅಪಾರ್ಟ್‌ಮೆಂಟ್‌ಗಳನ್ನು ಕಟ್ಟಿದ್ದಾರೆ. ಅಲ್ಲಿ 460 ಮನೆಗಳು ಇವೆ. ಮಕ್ಕಳು ಎಲ್ಲಿ ಆಟವಾಡಬೇಕೆಂದು ಗೊತ್ತಿಲ್ಲ. ಅದಕ್ಕೆ ದಯಮಾಡಿ Club House ಅನ್ನು mandatory ಮಾಡಬೇಕು. ಆ ಕುಟುಂಬಗಳಿಗೆ ನಗರ ಪ್ರದೇಶದಲ್ಲಿ ಎಲ್ಲೆಲ್ಲಿ ಸಣ್ಣ ಪುಟ್ಟ ಸರ್ಕಾರಿ ಭೂಮಿಗಳು ಇವೆ, ಅದನ್ನು ಪಾರ್ಕ್ ಆಗಿ ಬದಲಾವಣೆ ಮಾಡಿಕೊಳ್ಳಬೇಕು. ಮೂರನೇಯದಾಗಿ, fire safety norms ಬಹಳಷ್ಟು ಅಪಾರ್ಟ್‌ಮೆಂಟ್‌ಗಳಲ್ಲಿ violate ಆಗಿದೆ. ಏನಾದರೂ ಅನಾಹುತ ಆಗಿ ಬೆಂಕಿ ಬಿದ್ದಾಗ ಅದನ್ನು ನಿಭಾಯಿಸುವುದಕ್ಕೆ ಕಷ್ಟವಾಗುತ್ತದೆ. ಈ norms and regulations mandatory ಮಾಡಿ, ಇದರ ಬಗ್ಗೆ ಸರ್ಕಾರ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅಪಾರ್ಟ್‌ಮೆಂಟ್‌ನಲ್ಲಿ ಹುಟ್ಟುವಂತಹ ಮಕ್ಕಳು 4 ಗೋಡೆಗಳ ಮಧ್ಯೆ ಆಟವಾಡುತ್ತಿದ್ದಾರೆ. ಲಿಫ್ಟ್ ಏರಿಯಾದಲ್ಲಿ ಆಟವಾಡುತ್ತಿದ್ದಾರೆ. ಆ ಮಕ್ಕಳು ಆಟವಾಡುವುದಕ್ಕೆ ಜಾಗ ಇಲ್ಲ. Club House ಇಲ್ಲ. ಎಲ್ಲಿಯಾದರೂ Club House ಅನ್ನು ಮಾಡಬೇಕೆಂದರೆ, ಎಲ್ಲಿಯೂ ಜಾಗ ಇಲ್ಲ. ದಯಮಾಡಿ ಇದನೆಲ್ಲಾ ಗಮನಿಸಿ ಬಿ.ಡಿ.ಎ., ಅಪಾರ್ಟ್‌ಮೆಂಟ್‌ಗಳು ಇರಬಹುದು ಅಥವಾ ಹೊರಗಡೆ ಇರಬಹುದು. ಇದನ್ನೆಲ್ಲಾ address ಮಾಡಿ ಸರ್ಕಾರ ಏನು ವಿಧೇಯಕವನ್ನು ತೆಗೆದುಕೊಂಡು ಬಂದಿದೆ. ಇದು ಒಂದು ಒಳ್ಳೆಯ ಬದಲಾವಣೆ. ಬದುಕು ಮತ್ತು ಅವರ ಜೀವನ ನಿರ್ವಹಣೆಯಲ್ಲಿ ಹಾಗೂ ಅಪಾರ್ಟ್‌ಮೆಂಟ್ ನಿರ್ವಹಣೆಯಲ್ಲಿ ಒಂದು ಒಳ್ಳೆಯ ಬದಲಾವಣೆಯನ್ನು ತರುತ್ತಾರೆ ಎನ್ನುವ ಆಶಯದಲ್ಲಿ ಈ ವಿಧೇಯಕವನ್ನು ನಾನು ಬೆಂಬಲಿಸುತ್ತಿದ್ದೇನೆ.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ಅಪಾರ್ಟ್‌ಮೆಂಟ್ (ಮಾಲೀಕತ್ವ ಮತ್ತು ನಿರ್ವಹಣೆ) ವಿಧೇಯಕ, 2026 ಅನ್ನು ಸ್ವಾಗತಿಸುತ್ತಾ, ಈಗ ತಾನೇ ಮಾನ್ಯ ಸಚಿವರು ಸುದೀರ್ಘವಾಗಿ ಎಲ್ಲಾ ವಿಚಾರಗಳನ್ನು ಹೇಳಿದರು. ಮಾನ್ಯ ವಿರೋಧ ಪಕ್ಷದ ನಾಯಕರು ಸ್ವಲ್ಪ ಕೇಳಿಸಿಕೊಳ್ಳಬೇಕು. ಇವರೆಲ್ಲಾ ಅಪಾರ್ಟ್‌ಮೆಂಟ್‌ಗಳಲ್ಲಿ ಇದ್ದಾರೆ, ಇವರನ್ನೆಲ್ಲಾ

ಹೊರತುಪಡಿಸಬೇಕೆಂದು ಮಾನ್ಯ ಸಚಿವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಅವರೆಲ್ಲರಿಗೂ ಅಪಾರ್ಟ್‌ಮೆಂಟ್‌ಗಳು ಇವೆ.

(ಮುಂದು)

(833) 24.8.2026 12.50 ಪಿಕೆ:ಎಂಡಿ (ಸಭಾಪತಿಗಳ ಉಪಸ್ಥಿತಿ)

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಮುಂದು):**

ಮಾನ್ಯ ಸಭಾಪತಿಗಳೆ, ಬಹುತೇಕ ವಿರೋಧ ಪಕ್ಷದ ಸದಸ್ಯರುಗಳು ಅಪಾರ್ಟ್‌ಮೆಂಟ್‌ನಲ್ಲೇ ವಾಸವಿದ್ದಾರೆ. ಈ ಬಗ್ಗೆ ಏನಾಗುತ್ತದೆ ಎನ್ನುವ ಕಾಳಜಿ ಅವರಿಗೆ ಇಲ್ಲ. ನಾಳೆ ಯಾರಾದರೂ ಬೇರೆ ರಾಜ್ಯಗಳಿಂದ ಬಂದು ಅಪಾರ್ಟ್‌ಮೆಂಟ್‌ಗಳಲ್ಲಿ ವಾಸ ಮಾಡಬೇಕೆಂದರೆ, ಅವರಿಗೆ ಒಂದು ಧೈರ್ಯ ಮತ್ತು ನಂಬಿಕೆ ಬರುತ್ತದೆ. ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಪಟ್ಟಂತೆ ನಮ್ಮ ಸಚಿವರು ಕೈಗೊಂಡ ಕೆಲಸಗಳು ಶ್ಲಾಘನೀಯವಾದುದು. ಈ ವಿಧೇಯಕವನ್ನು ಸ್ವಾಗತ ಮಾಡುತ್ತಾ ಒಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ. ಈ ಹಿಂದೆ ಏನು ಅಸೋಸಿಯೇಷನ್‌ಗಳು ನೋಂದಣಿ ಮಾಡಿಕೊಂಡಿದ್ದಾರೋ ಅಂಥವರು ಮತ್ತೆ ನೋಂದಣಿ ಮಾಡಿಕೊಳ್ಳಬೇಕೇ? ಈಗಾಗಲೇ 1972ರ ನಿಯಮದ ಅಡಿಯಲ್ಲಿ, ಯಾರು ನೋಂದಣಿ ಮಾಡಿಕೊಂಡಿದ್ದರೋ ಅವರಿಗೂ ಇದು ಅನ್ವಯಿಸುತ್ತದೆಯೇ ಅಥವಾ ಅವರು ಮತ್ತೊಮ್ಮೆ ನೋಂದಣಿ ಮಾಡಿಕೊಳ್ಳಬೇಕೇ ಎಂಬುದನ್ನು ತಿಳಿಸಬೇಕು. ನಾನು ಸಂಪೂರ್ಣವಾಗಿ ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ರಾಮೋಜಿಗೌಡ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಮಾನ್ಯ ನಗರಾಭಿವೃದ್ಧಿ ಸಚಿವರು ದಿಟ್ಟವಾದ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಅಧಿನಿಯಮ, 1972 ಜಾರಿಯಾದ ಮೇಲೆ, first Management, secondly Welfare Association and ಇನ್ನೊಂದು, ರಿಜಿಸ್ಟ್ರೇಷನ್‌ಗೆ ಸಂಬಂಧಪಟ್ಟಂತೆ ವಿಷಯಗಳೇನಿದ್ದವೋ, ಇವುಗಳ ಮಧ್ಯೆ ನಾನು, ನಾನು ಎಂದು ಜಗಳ ಮಾಡಿಕೊಂಡು ಮತ್ತೆ ಕೋರ್ಟ್‌ಗೆ ಹೋಗುತ್ತಿದ್ದರು. ಈ ನಿಟ್ಟಿನಲ್ಲಿ ಇಷ್ಟು ವರ್ಷಗಳಾದರೂ ಏಕೆ ಸುಧಾರಣೆ ಮಾಡಲಿಲ್ಲವೋ ಗೊತ್ತಿಲ್ಲ. ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಅಭಿನಂದಿಸುತ್ತೇನೆ. ನನ್ನ ಪ್ರಶ್ನೆ ಏನೆಂದರೆ, ಅಪಾರ್ಟ್‌ಮೆಂಟ್‌ನವರು ಅಸೋಸಿಯೇಷನ್ ಮಾಡಿಕೊಳ್ಳುತ್ತಾರೆ, ನೋಂದಣಿ ಮಾಡಿಕೊಳ್ಳುತ್ತಾರೆ ಮತ್ತು ಒಂದು ಕಡೆ ಮ್ಯಾನೇಜ್‌ಮೆಂಟ್ ಇರುತ್ತದೆ. ಅಪಾರ್ಟ್‌ಮೆಂಟ್‌ಗಳನ್ನು ಯಾರು ನಿರ್ಮಿಸುತ್ತಾರೋ, ಅವರೇ ಇಂತಿಷ್ಟು ಮೊತ್ತವನ್ನು ಅಭಿವೃದ್ಧಿ ಶುಲ್ಕವೆಂದು ಪಡೆದು ಅಭಿವೃದ್ಧಿ ಮಾಡುತ್ತಿದ್ದರು. ಈಗ ಮ್ಯಾನೇಜ್‌ಮೆಂಟ್‌ನವರು ಕೊಡುತ್ತಾರೋ ಅಥವಾ ವೆಲ್‌ಫೇರ್ ಅಸೋಸಿಯೇಷನ್‌ನವರು ಕೊಡುತ್ತಾರೋ ತಿಳಿಸಬೇಕು ಅಥವಾ ಯಾರು ಬಿಲ್ಡರ್ ಇದ್ದಾರೋ ಅವರಿಗೆಯೇ ಈ ಅವಕಾಶವನ್ನು ಕೊಡಲಾಗುತ್ತದೆಯೇ ಎನ್ನುವುದನ್ನು ತಿಳಿಸಬೇಕು.

ಮುಂದಿನ ದಿನಗಳಲ್ಲಿ ಈ ಕೆಲಸ ಸುಸೂತ್ರವಾಗಿ ಆಗುತ್ತದೆ. ಇಲ್ಲಿ ಎರಡು – ಮೂರು ಅಸೋಸಿಯೇಷನ್‌ಗಳ ಪರಿಸ್ಥಿತಿ ಏನು ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಬಿ.ಎಸ್.ಶಿವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಇಂತಹ ವಿಧೇಯಕಗಳನ್ನು 2–3 ದಿವಸಗಳ ಮುಂಚೆಯೇ ತಂದರೆ ನಮಗೆ ನಾವು ಸ್ಟಡಿ ಮಾಡುವುದಕ್ಕೆ ಅನುಕೂಲವಾಗುತ್ತದೆ ಮತ್ತು ಸಲಹೆಗಳನ್ನೂ ಕೂಡ ನೀಡಬಹುದಾಗಿರುತ್ತದೆ. You should provide the copies of the Bill two or three days in advance. Naturally we can study and give the proper guidance or suggestions. Private Apartment Owners ಏನು ಮಾಡುತ್ತಾರೆ ಎಂದರೆ, ಅಲ್ಲಿ S.C–S.T, Backward Classes (**ಗೊಂದಲ**) ಕೂಡ ಕಾಳಜಿ ಮಾಡಬೇಕಾಗುತ್ತದೆ.

**ಸಭಾಪತಿಯವರು:– ಈ** ಕುರಿತ ವಿಷಯಗಳು repeat ಆಗುವುದು ಬೇಡ. ನಿಮ್ಮ ವಿಚಾರಗಳನ್ನು ಸಂಕ್ಷಿಪ್ತವಾಗಿ ತಿಳಿಸಿ.

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಸದರಿ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ಇಡೀ ದೇಶದಲ್ಲಿ, ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುವ ಜನರ ಸಮಸ್ಯೆಗಳಿಗೆ ಪರಿಹಾರವಿಲ್ಲವೇನೋ ಎಂದು ಭಾವಿಸುತ್ತಿದ್ದ ಸಂದರ್ಭದಲ್ಲಿ, ಮಾನ್ಯ ಸಚಿವರು ಈ ವಿಧೇಯಕವನ್ನು ತರುವುದರ ಮೂಲಕ ಒಂದು ಸಂದೇಶವನ್ನು ಕೊಟ್ಟಿದ್ದಾರೆ. ಅಪಾರ್ಟ್‌ಮೆಂಟ್‌ಗಳಲ್ಲಿ ವಾಸವಾಗಿರುವ ಜನರಿಗೆ ಹಲವಾರು ಸಮಸ್ಯೆಗಳು ಇರುತ್ತವೆ. ಅಪಾರ್ಟ್‌ಮೆಂಟ್ ಕಟ್ಟಿದವರು ಮತ್ತು ಅಲ್ಲೇ ವಾಸಿಸುವವರ ಮಧ್ಯೆ ದಿನನಿತ್ಯ ಜಗಳಗಳು ಆಗುತ್ತಿತ್ತು; ಅವರು ಪೊಲೀಸ್ ಠಾಣೆಗೆ ದೂರು ಕೊಡುವ ಮಟ್ಟಕ್ಕೆ ಹೋಗುತ್ತಿದ್ದರು. ಮಾನ್ಯ ಸಚಿವರು ಮಂಡಿಸಿರುವ ವಿಧೇಯಕದಿಂದ ಇದಕ್ಕೊಂದು ಮುಕ್ತಿ ಸಿಗುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಹಲವಾರು ಅಸೋಷಿಯೇಷನ್‌ಗಳು ಆದಾಗ ಅವರಲ್ಲಿ ವ್ಯಾಜ್ಯಗಳು ನಿರಂತರವಾಗಿರುತ್ತಿತ್ತು. ಈಗ ಒಂದೇ ಅಸೋಷಿಯೇಷನ್‌ನ ಅಡಿಯಲ್ಲಿ ನೋಂದಣಿ ಮಾಡಿಕೊಳ್ಳಬೇಕೆಂದು ಹೇಳಿರುವುದು ಮತ್ತು ಆ ಅಂಶಗಳನ್ನು ವಿಧೇಯಕದಲ್ಲಿ ವಿವರವಾಗಿ ತಿಳಿಸಿರುವುದರಿಂದ, ಇದು ಅಪಾರ್ಟ್‌ಮೆಂಟ್‌ಗಳಲ್ಲಿ ವಾಸವಾಗಿರುವ ಜನರ ಪರವಾಗಿದೆ, ವ್ಯಾಜ್ಯಗಳು ಉಂಟಾಗುವ ಸಂದರ್ಭಗಳು ಬರುವುದಿಲ್ಲ ಎಂದು ಹೇಳುತ್ತಾ, ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಗಳೆ, ದೇಶದಲ್ಲಿ ಅಪಾರ್ಟ್‌ಮೆಂಟ್‌ಗಳನ್ನು ಕಟ್ಟುವುದು ದಿನೇ ದಿನೇ ಜಾಸ್ತಿಯಾಗುತ್ತಿದೆ. ಹಿಂದೆ, ಡೆವಲಪರ್‌ಗಳು ಜನರಿಂದ ದುಡ್ಡು ತೆಗೆದುಕೊಂಡು, ಅನೇಕ ವರ್ಷಗಳು ಕಳೆದರೂ ಕಟ್ಟಡವನ್ನು ಪೂರ್ಣಗೊಳಿಸುತ್ತಿರಲಿಲ್ಲ. ಅಪಾರ್ಟ್‌ಮೆಂಟ್‌ನಲ್ಲಿ ಮನೆಗಳನ್ನು ಖರೀದಿ ಮಾಡುವ ಖರೀದಿದಾರರು ಡೆವಲಪರ್‌ಗಳ ಕಪಿಮುಷ್ಟಿಯಲ್ಲಿ ಸಿಕ್ಕಿಹಾಕಿಕೊಂಡು, ನ್ಯಾಯ ಸಿಗದೇ ತತ್ತರಿಸಿ ಹೋಗುತ್ತಿದ್ದರು. ಕೇಂದ್ರದ ಹಿಂದಿನ ಯುಪಿಎ ಸರ್ಕಾರ, ರೇರಾ ಕಾನೂನನ್ನು ತೆಗೆದುಕೊಂಡು ಬಂದಿತ್ತು. ಅಪಾರ್ಟ್‌ಮೆಂಟ್‌ನಲ್ಲಿ

ಮನೆಗಳನ್ನು ಖರೀದಿ ಮಾಡುವವರಿಗೆ ದೇಶದಲ್ಲಿ ನ್ಯಾಯ ಸಿಗುತ್ತಿದೆ ಎಂದರೆ ಅದು ಯು.ಪಿ.ಎ. ಸರ್ಕಾರ ತಂದ ರೇರಾ ಕಾನೂನಿನಿಂದ ಎಂದು ಹೇಳಬೇಕಾಗುತ್ತದೆ. ದೇಶದಲ್ಲಿ, ಇವತ್ತು ಮಧ್ಯಮ ಮತ್ತು ಕೆಳಮಧ್ಯಮ ವರ್ಗದ ಜನರಿಗೆ ಏನಾದರೂ ಸ್ವಲ್ಪ ಇವತ್ತು ರಕ್ಷಣೆ ಸಿಕ್ಕಿದೆ ಎಂದರೆ ಅದು ಯು.ಪಿ.ಎ. ಸರ್ಕಾರ ಮಾಡಿದ ಕಾನೂನಿನಿಂದ ಎಂದು ಹೇಳಬೇಕಾಗುತ್ತದೆ. ಅವರ ಹಕ್ಕುಗಳನ್ನು ಅವರಿಗೆ ಕೊಟ್ಟಿದೆ. ಈಗ, ರೇರಾ ಕಾನೂನಿನಿಂದ ಸ್ಫೂರ್ತಿಯನ್ನು ಪಡೆದುಕೊಂಡು, ಅಪಾರ್ಟ್‌ಮೆಂಟ್ ಕಟ್ಟುವಾಗ ರೇರಾ ಕಾನೂನು ಲಾಗೂ ಆಗುತ್ತದೆ ಮತ್ತು ಖರೀದಿ ಮಾಡಿದ ನಂತರ ಅವರ ಹಕ್ಕುಗಳನ್ನು ಕೊಡಬೇಕಾಗುತ್ತದೆ. ಅದೇ rights based approach, ಹಕ್ಕುಗಳ ಆಧಾರಿತ ಆಡಳಿತ (Rights based Administration). ಅದನ್ನೇ ನಾವು ಪ್ರೇರಣೆಯಾಗಿ ತೆಗೆದುಕೊಂಡಿದ್ದೇವೆ. ಇವತ್ತು ಖರೀದಿದಾರರಿಗೆ ಖರೀದಿ ಮಾಡುವುದಕ್ಕೆ ಮೊದಲು ರೇರಾ ರಕ್ಷಣೆ ಸಿಗುತ್ತದೆ. ಖರೀದಿ ಮಾಡಿ ವಾಸ ಮಾಡುವುದಕ್ಕೆ ಆರಂಭವಾದ ಮೇಲೆ ಅವರಿಗೆ ಅವರ ಹಕ್ಕುಗಳನ್ನು ಸಿಗುತ್ತವೆ. We are giving them rights. It's a rights based approach to empower the citizens. That is the motive of this Act. ಇದರ philosophy ಹೇಳುತ್ತಾ, ಮಾನ್ಯ ಸದಸ್ಯರುಗಳು ಮಾತನಾಡುತ್ತಾ, Annual Audit ಆಗಬೇಕು ಎಂದು ಹೇಳಿದ್ದಾರೆ. ಈ ಕಾನೂನಿನಲ್ಲಿ Annual Audit ಅನ್ನು ಕಡ್ಡಾಯ ಮಾಡಿದ್ದೇವೆ. ಅದನ್ನು General Body ಮುಂದೆ ಇಡಬೇಕು, ಆ ಕುರಿತು ಚರ್ಚೆ ಆಗಬೇಕು, ಅದರ ಮೇಲೆ dispute ಬಂದರೆ ಅದನ್ನು ಸರ್ಕಾರಕ್ಕೆ ರೆಫರ್ ಮಾಡಬಹುದು. ನಂತರ, ಸರ್ಕಾರ ಈ ಕುರಿತು ವೆರಿಫೀಕೇಷನ್ ಪ್ರಕ್ರಿಯೆಯನ್ನು ಮಾಡುವಂಥ ಪ್ರಾವಿಷನ್ ಮಾಡಿದ್ದೇವೆ. ಇನ್ನು ಮೇಲೆ, compulsory audit ಮಾಡಲೇಬೇಕಾಗುತ್ತದೆ. ಮತ್ತೆ, Play Ground, Fire Extinguisher common facilities ಇತ್ಯ ಆದಿ ಸೌಲಭ್ಯಗಳನ್ನು ಕೊಡುತ್ತಿಲ್ಲ ಎಂದು ಹೇಳಿದರು. ಈ ರೀತಿ ಹಿಂದೆ ಆಗಿರಬಹುದು. ಆದರೆ, ನಮ್ಮ ಸರ್ಕಾರ ಬಂದಮೇಲೆ ಕಟ್ಟುನಿಟ್ಟಾಗಿ, ರೇರಾ ಕಾನೂನು, Town Planning Law ಎರಡನ್ನೂ ಕಟ್ಟುನಿಟ್ಟಾಗಿ ಜಾರಿ ಮಾಡುತ್ತಿದ್ದೇವೆ. ಅವುಗಳಲ್ಲಿ ಯಾವುದೇ ವಿನಾಯಿತಿ ಇರುವುದಿಲ್ಲ. ನಾವಂತೂ ಆ ರೀತಿ violation ಗೆ ಅವಕಾಶ ಕೊಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಹಿಂದೆ ನೋಂದಣಿ ಆಗಿರುವಂತಹ ಸೊಸೈಟಿಗಳ ಸ್ಥಿತಿ ಏನು ಎಂದು ಕೇಳಿದರು. ಅಂಥವರು, ಇದರ ಅಡಿ ಹೊಸದಾಗಿ ನೋಂದಣಿ ಆಗಬೇಕಾಗುತ್ತದೆ. ಇಲ್ಲದಿದ್ದರೆ, ಒಂದು clean platform or ಹೊಸ ಸಿಸ್ಟಮ್‌ಗೆ ಬರುವುದಕ್ಕೆ ಆಗುವುದಿಲ್ಲ. ಹಳೆಯದು ಇರುತ್ತವೆ, ಹೊಸದೂ ಇರುತ್ತದೆ ಎಂದರೆ ಸಮಸ್ಯೆ ಪರಿಹಾರ ಆಗುವುದಿಲ್ಲ. ಹಾಗಾಗಿ ಈ ಕಾನೂನಿನಡಿಯಲ್ಲಿ ನೋಂದಣಿ ಆಗಲೇ ಬೇಕು. ಆಗ fresh start or clean start ಆಗುತ್ತದೆ. ಇಲ್ಲದಿದ್ದರೆ ಹಳೆಯ ಗೊಂದಲವೇ ಮುಂದುವರೆಯುತ್ತದೆ. So, we are excluding other forms of Associations and making this as the only form of Association. ಕೆಲವು ಡೆವಲಪರ್‌ಗಳು development fees ಸಂಗ್ರಹಿಸಿರುತ್ತಾರೆ. ಅವರು ಅದನ್ನು ಹೇಗೆ ಖರ್ಚು ಮಾಡುತ್ತಾರೆ ಎಂಬ ಬಗ್ಗೆ ಲೆಕ್ಕ ಕೊಟ್ಟು official Resident Welfare Officer ಗೆ handover ಮಾಡಬೇಕಾಗುತ್ತದೆ. ಇದನ್ನು ಲೆಕ್ಕದ

ಸಮೇತ ಕೊಡಬೇಕು. ಎಷ್ಟು ಸಂಗ್ರಹ ಮಾಡಿದ್ದರು, ಅದರಲ್ಲಿ ಎಷ್ಟು ಖರ್ಚಾಗಿದೆ ಎಂದು ಲೆಕ್ಕದ ಮೊತ್ತ, ಉಳಿದ ಮೊತ್ತ, ಎರಡನ್ನೂ Resident Welfare Officer ಗೆ ಹಸ್ತಾಂತರ ಮಾಡಬೇಕಾಗುತ್ತದೆ. ಈ ಒಂದು provision ಅನ್ನು ಸದರಿ ವಿಧೇಯಕದಲ್ಲಿ ತಂದಿದ್ದೇವೆ. ಮಾನ್ಯ ಸದಸ್ಯರು, 2-3 ಸೊಸೈಟಿಗಳು ಒಂದೇ ಕಡೆ ಇರುವುದರಿಂದ ವ್ಯಾಜ್ಯಗಳು ನಡೆಯುತ್ತಿವೆ ಎಂದು ಹೇಳಿದರು. ಅದಕ್ಕೆ ಮುಕ್ತಿ ಹಾಡಿ, ನೆಮ್ಮದಿಯಾಗಿ ಬದುಕುವಂತಹ ಪ್ರಕ್ರಿಯೆಯನ್ನು ಆರಂಭ ಮಾಡುತ್ತಿದ್ದೇವೆ. ಇದು perfect ಎಂದು ಹೇಳುತ್ತಿಲ್ಲ, ಏಕೆಂದರೆ ಈ ವಿಷಯ ಬಹಳ ಜಟಿಲತೆಯಿಂದ ಕೂಡಿದೆ. It's a complex subject. ಇರುವುದರಲ್ಲಿ, ಎಲ್ಲಾ feedback ಪಡೆದುಕೊಂಡು, ಈ ವಿಧೇಯಕವನ್ನು ತಂದಿದ್ದೇವೆ. We are open to future. ನಾವು ಇಂಪ್ಲಿಮೆಂಟ್ ಮಾಡುವಾಗ ಕೆಲವು ನ್ಯೂನತೆಗಳ ಕಂಡು ಬರುತ್ತವೆ. ಆಗ ನಾವು ಅದನ್ನೂ ಅಳವಡಿಸಿಕೊಳ್ಳುವುದಕ್ಕೆ ತಯಾರಿದ್ದೇವೆ. ಆದರೆ, perfect ಎಂದು ಹೇಳಿಕೊಂಡು ದಿನ ಕಳೆಯುವುದು ಬೇಡ, ಇರುವುದರಲ್ಲಿ, ಎಲ್ಲಾ ರೀತಿಯ ಸಮಾಲೋಚನೆ ಮಾಡಿ ಈ ವಿಧೇಯಕವನ್ನು ತಂದಿದ್ದೇವೆ. ಸದನ ಸಹಕಾರ ಕೊಡಬೇಕು, ಅನುಮೋದನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ರ ಕರ್ನಾಟಕ ಅಪಾರ್ಟ್‌ಮೆಂಟ್ (ಮಾಲೀಕತ್ವ ಮತ್ತು ನಿರ್ವಹಣೆ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 66 ರವರೆಗೆ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ, "ಖಂಡ 2 ರಿಂದ 66ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 66ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

<u>ಪ್ರಸ್ತಾವದ ಅಂಗೀಕಾರ</u>

**ಶ್ರೀ ಕೃಷ್ಣ ಭೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ರ ಕರ್ನಾಟಕ ಅಪಾರ್ಟ್‌ಮೆಂಟ್ (ಮಾಲೀಕತ್ವ ಮತ್ತು ನಿರ್ವಹಣೆ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ರ ಕರ್ನಾಟಕ ಅಪಾರ್ಟ್‌ಮೆಂಟ್ (ಮಾಲೀಕತ್ವ ಮತ್ತು ನಿರ್ವಹಣೆ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಸದನದ ಅನುಮೋದನೆ ದೊರೆಯಿತು**

(ಮುಂದು)

(834) 24-8-2026 1.00 ಡಿಎಸ್-ಎಕೆ (ಸಭಾಪತಿಯವರ ಉಪಸ್ಥಿತಿ)

7. **ವರದಿಗಳನ್ನೊಪ್ಪಿಸುವುದು**

**ಅ) ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಖಾಸಗಿ ಅನುದಾನಿತ/ಅನುದಾನರಹಿತ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದಂತೆ ಹೊರಡಿಸಿರುವ ಸರ್ಕಾರಿ ಆದೇಶ ಸಂಖ್ಯೆ:ಇಡಿ/709/ಪಿಜಿಸಿ/2017, ದಿನಾಂಕ:08.03.2018ರಲ್ಲಿ ಉಲ್ಲೇಖಿಸಲಾಗಿರುವ ಶಾಲೆಗಳ ಮಾನ್ಯತೆ ನವೀಕರಣದ ನಿಯಮಗಳನ್ನು ಸಡಿಲಿಸಿ ವಿನಾಯಿತಿ ನೀಡುವ ಸಂಬಂಧ ಪರಿಶೀಲಿಸಿ, ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಮಧ್ಯಂತರ ವರದಿಯನ್ನು ಸದನಕ್ಕೆ ಮಂಡಿಸುತ್ತಿದ್ದೇನೆ.

**ಆ) ಶ್ರೀ ರಾಜೇಂದ್ರ ರಾಜಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 242 (5)ರ ಪ್ರಕಾರ 2025-26ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯು

ಅನುಮೋದಿಸಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಿಗೆ ಸಂಬಂಧಿಸಿದ ಸಮಿತಿಯು 45ನೇ ವರದಿಯನ್ನು ಸದನಕ್ಕೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಗಳನ್ನೊಪ್ಪಿಸಲಾಯಿತು.

## ೮. ಗಮನ ಸೆಳೆಯುವ ಸೂಚನೆಗಳು

### ಅ) ವಿಷಯ: ರಾಜ್ಯದಲ್ಲಿ ಗೊಲ್ಲ ಸಮುದಾಯಕ್ಕೆ ಪ್ರತ್ಯೇಕ ಯಾದವ (ಗೊಲ್ಲ) ನಿಗಮ ಸ್ಥಾಪಿಸುವ ಕುರಿತು.

\- - - - - -

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ರಾಜ್ಯದಲ್ಲಿ ಹಲವು ಸಮುದಾಯಗಳಿಗೆ ಸರ್ಕಾರದಿಂದ ಲಭಿಸುವ ಸವಲತ್ತುಗಳು ಮತ್ತು ಅನುದಾನಗಳನ್ನು ಪಡೆಯಲು ಪ್ರತ್ಯೇಕ ನಿಗಮಗಳನ್ನು ರಚಿಸಿದ್ದು, ಅತೀ ಹಿಂದುಳಿದ ಹಾಗೂ ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಹಿಂದುಳಿದ ಗೊಲ್ಲ (ಯಾದವ್) ಸಮುದಾಯಕ್ಕೆ ಇಲ್ಲಿಯವರೆಗೆ ಪ್ರತ್ಯೇಕ ನಿಗಮ ಸ್ಥಾಪಿಸಿರುವುದಿಲ್ಲ. ಈ ಗೊಲ್ಲ ಸಮುದಾಯದ ನಾಗರಿಕರು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯವಾಗಿ ಹಿಂದುಳಿದಿದ್ದು, ಸರ್ಕಾರದಿಂದ ಲಭ್ಯವಾಗುವ ಬಹುತೇಕ ಮೂಲಭೂತ ಸೌಕರ್ಯಗಳಿಂದ ವಂಚಿರಾಗಿರುತ್ತಾರೆ. ಆದ್ದರಿಂದ ಗೊಲ್ಲ ಸಮುದಾಯದ ಜನರಿಗೆ ಮೂಲಭೂತ ಸೌಕರ್ಯಗಳನ್ನು ಪಡೆದುಕೊಳ್ಳಲು ಹಾಗೂ ಗೊಲ್ಲ ಸಮುದಾಯದ ಅಭಿವೃದ್ಧಿಗಾಗಿ ಅನುದಾನವನ್ನು ಮೀಸಲಿಟ್ಟು ರಾಜ್ಯದಲ್ಲಿ ಗೊಲ್ಲ ಸಮುದಾಯಕ್ಕೆ ಪ್ರತ್ಯೇಕ ಯಾದವ (ಗೊಲ್ಲ) ನಿಗಮ ಸ್ಥಾಪಿಸುವ ಕುರಿತು ಚರ್ಚಿಸಲು ಸನ್ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನ ಸೆಳೆಯುತ್ತಿದ್ದೇನೆ.

**ಶ್ರೀ ಶಿವರಾಜ ಎಸ್. ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ,

(ಉತ್ತರವನ್ನು ಲಗತ್ತಿಸಲಾಗಿದೆ)

ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಸ್ಪಷ್ಟೀಕರಣವನ್ನು ಕೇಳಿದರೆ ಅದಕ್ಕೆ ನಾನು ಉತ್ತರ ಕೊಡುತ್ತೇನೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಗೊಲ್ಲ ಸಮುದಾಯಕ್ಕೆ ಪ್ರತ್ಯೇಕ ಯಾದವ (ಗೊಲ್ಲ) ನಿಗಮ ಸ್ಥಾಪಿಸುವದು it is really a necessary demand which I am making to the government ಎನ್ನುವ ವಿಚಾರವನ್ನು ಹೇಳುತ್ತೇನೆ. ಇದನ್ನು ಯಾವ ಕಾರಣಕ್ಕಾಗಿ ಹೇಳುತ್ತಿದ್ದೇನೆಂದರೆ, ರಾಜ್ಯ ಸರ್ಕಾರ ಈಗಾಗಲೇ ಹಿಂದುಳಿದ ವರ್ಗಕ್ಕೆ ಸುಮಾರು 17 ನಿಗಮಗಳನ್ನು ರಚನೆ ಮಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅದರ ಜೊತೆಗೆ ಗೊಲ್ಲ ಸಮುದಾಯವನ್ನು ಅಲೆಮಾರಿ ಮತ್ತು ಅರೆ ಅಲೆಮಾರಿ ನಿಗಮದಲ್ಲಿ ಇಟ್ಟಿದ್ದೇವೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆ ಎಲ್ಲಾ ಸೌಲಭ್ಯಗಳನ್ನು ಮುಂದುವರೆದು ನಾನು ಕೇಳುತ್ತಿರುವುದೇನೆಂದರೆ, 1966 ರಲ್ಲಿ ಯಾವ ಗೊಲ್ಲ ಸಮುದಾಯವನ್ನು ಅಲೆಮಾರಿ ಸಮುದಾಯ ಎಂದು ಘೋಷಿಸಲಾಗಿತ್ತು ಅದು ಅಲೆಮಾರಿ ಸಮುದಾಯದಲ್ಲಿದೆ. ಹಾಗಾಗಿ ಅಲೆಮಾರಿ ಸಮುದಾಯದಲ್ಲಿರುವಂತಹ 46 ಸಮುದಾಯಗಳಿಗೆ ಆ ಸೌಲಭ್ಯಗಳನ್ನು ಕೊಡುತ್ತಿದ್ದರು. ಆದರೆ ಯಾದವ ಸಮುದಾಯ ಗೊಲ್ಲ ಸಮುದಾಯ ಎನ್ನುವುದಕ್ಕೆ 26 ಉಪ ಜಾತಿಗಳಿಗೆ ಅಲ್ಲಿ ಸೌಲಭ್ಯಗಳು ಸಿಗುತ್ತಿಲ್ಲ. ಹಾಗಾಗಿ ನಾನು ಕೇಳುತ್ತಿರುವುದೇನೆಂದರೆ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದಿರುವಂತಹ ಗೊಲ್ಲ ಸಮುದಾಯ ಮತ್ತು ಅದರ ಉಪ ಜಾತಿಗಳಿಗೆ ಸರ್ಕಾರ ಪ್ರತ್ಯೇಕ ನಿಗಮ ಮಾಡಿ ಅವರಿಗೆ ಸೌಲಭ್ಯಗಳನ್ನು ಕೊಡಬೇಕಾಗುತ್ತದೆ. ನಾವು ಶೈಕ್ಷಣಿಕವಾಗಿ ಹಿಂದುಳಿದಿರುವಂಥವರು ಇರಬಹುದು, ಅದರ ಜೊತೆಗೆ ನಾವು ಕೇವಲ ಹಿಂದುಳಿದಿರುವವರು ಅಲ್ಲ. ನಾವು ಅತೀ ಹಿಂದುಳಿದ ವರ್ಗದಲ್ಲಿರುವಂಥವರು. ಕರ್ನಾಟಕ ರಾಜ್ಯದಲ್ಲಿ ನಾವು ಪ್ರವರ್ಗ-1 ರಲ್ಲಿ ಬರುವಂಥವರು. 46 ಅಲೆಮಾರಿ ಸಮುದಾಯಗಳು ಇರುವಂತಹ ಜಾತಿಗಳು. ಅದರಲ್ಲೂ 376 ಜಾತಿಗಳಿಂದ ಒಟ್ಟಾರೆಯಾಗಿ ಒಂದು ಕೋಟಿ ಜನಸಂಖ್ಯೆ ಇರುವಂಥವರಿಗೆ ಯಾದವ ಸಮುದಾಯದವರಿಗೆ ಕೇವಲ ಶೇಕಡ 4 ರಷ್ಟು ಮೀಸಲಾತಿ ಪಡೆದುಕೊಳ್ಳುವುದಕ್ಕೆ ಹೇಳುತ್ತಾರಲ್ಲಾ ಇವೆಲ್ಲವೂ ಕೂಡ ನಾವು ಸಾಮಾಜಿಕವಾಗಿ ಹಿಂದುಳಿಯುವುದಕ್ಕೆ ಕಾರಣವಾಗಿದೆ. ಆ ಎಲ್ಲಾ ಕಾರಣಗಳಿಗೋಸ್ಕರ ಶೈಕ್ಷಣಿಕವಾಗಿರಬಹುದು, ಔದ್ಯೋಗಿಕವಾಗಿರಬಹುದು, ನಮಗೆ ಮೀಸಲಾತಿಯಲ್ಲಿ ಹೆಚ್ಚಿಗೆ ಮಾಡಬೇಕಾಗುತ್ತದೆ. ನಾವು ರಾಜಕೀಯವಾಗಿ ಮುಂದೆ ಬರಬೇಕು ಎನ್ನುವುದಾಗಿದ್ದರೆ ನಮಗೆ ಸೌಲಭ್ಯಗಳನ್ನು ಕೊಡಬೇಕಾಗಿದ್ದರೆ ಒಂದು ಪ್ರತಿಷ್ಠಿತವಾದ ಪ್ರತ್ಯೇಕವಾದ ನಿಗಮವನ್ನು ಮಾಡಬೇಕಾಗುತ್ತದೆ. ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳಿಗೆ ಸೌಲಭ್ಯಗಳನ್ನು ಮುಂದುವರಿಸುವ ಕೆಲಸ ಆಗಬೇಕಾಗಿದೆ. ಇದನ್ನು ಮಾಡಿದ್ದೇಯಾದರೆ ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಅರ್ಥ ಬರುತ್ತದೆ. ಸಂವಿಧಾನದ ವಿಚಾರದಲ್ಲಿ ಅರ್ಥ ಬರುತ್ತದೆ ಎಂದು ಹೇಳುತ್ತಿದ್ದೇನೆ. ಮಾನ್ಯ ಸಚಿವರು ಈ ವಿಚಾರದ ಬಗ್ಗೆ ಬಹಳ ಗಂಭೀರವಾಗಿ ಪರಿಗಣನೆ ಮಾಡುತ್ತಾರೆ ಎನ್ನುವ ನಂಬಿಕೆಯಿಂದ ನಾನು ಹೇಳುತ್ತಿದ್ದೇನೆ. ಗೊಲ್ಲ ಸಮುದಾಯ ಎನ್ನುವಂಥದ್ದು ಕರ್ನಾಟಕದಲ್ಲಿ ಬಹಳ ಪ್ರಮುಖವಾದ ಪಶುಪಾಲನಾ

ಮಾಡತಕ್ಕಂಥ ಸಮುದಾಯವಾಗಿರುತ್ತದೆ. ಹೈನುಗಾರಿಕೆ ಮಾಡುವಂತಹ, ಕುರಿ ಸಾಗಾಣಿಕೆ ಮಾಡುವಂತಹ, ಅವರು ಅಲೆಮಾರಿಗಳಾಗಿರುವಂಥವರು, ಅವರು ಬಹಳ ಕಷ್ಟದಲ್ಲಿರುವಂತಹ ಈ ಸಮುದಾಯಕ್ಕೆ ರಾಜ್ಯ ಸರ್ಕಾರ ಈಗಾಗಲೇ ಪ್ರತ್ಯೇಕ ನಿಗಮ ಮಾಡುತ್ತೇವೆಂದು ಘೋಷಣೆ ಮಾಡಬೇಕಾಗಿತ್ತು. ಪ್ರತ್ಯೇಕವಾಗಿ, ವಿಶಿಷ್ಟವಾಗಿರುವಂತಹ ನೂರು ಕೋಟಿ ರೂಪಾಯಿಗಳನ್ನು ಮೀಸಲಿಟ್ಟು ಅವರಿಗೆ ನಿಗಮವನ್ನು ಮಾಡಬೇಕಾಗಿತ್ತು. ಆದರೆ ಯಾವ ಕಾರಣಕ್ಕಾಗಿ ಮಾಡಿಲ್ಲ ಎಂಬುದು ಗೊತ್ತಾಗಲಿಲ್ಲ. ನಮ್ಮನ್ನು ತೆಗೆದುಕೊಂಡು ಹೋಗಿ ಅಲೆಮಾರಿ ಸಮುದಾಯದ ಪಟ್ಟಿಯಲ್ಲಿಟ್ಟಿರುವುದನ್ನು ನಾವು ಸ್ವಾಗತ ಮಾಡುತ್ತೇವೆ. 46 ಸಮುದಾಯಗಳಿಗೆ ಕೊಡುವಂತಹ ವ್ಯವಸ್ಥೆಯಲ್ಲಿ ಮತ್ತು ಇರುವಂತಹ ಶೇಕಡ 4 ರಷ್ಟು ಮೀಸಲಾತಿಯಲ್ಲಿ ನಾವು ಹೇಗೆ ಮುಂದೆ ಬರುವುದಕ್ಕೆ ಸಾಧ್ಯವಾಗುತ್ತದೆ? ರಾಜಕೀಯವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಮುಂದೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಒಂದು ವಿಚಾರವನ್ನು ತಿಳಿದುಕೊಳ್ಳಬೇಕಾಗುತ್ತದೆ, ಈ ಅಲೆಮಾರಿ ಸಮುದಾಯಗಳಲ್ಲಿರುವಂತಹ ಗೊಲ್ಲ ಸಮುದಾಯವು ತನ್ನ ಪರಂಪರೆಯನ್ನು ಭಾರತ ದೇಶದಲ್ಲಿ ವಿವಿಧದಲ್ಲಿ ಐಕ್ಯತೆಯನ್ನು ಕಾಪಾಡುವಂತಹ ಕುರಿ ಸಾಗಾಣಿಕೆ ಇರಬಹುದು, ಜಾನಪದ ಗೀತೆಗಳಿರಬಹುದು ಮತ್ತು ಊರೂರು ಅಲೆದು ನಮ್ಮ ಸಾಂಸ್ಕೃತಿಕ ಹಿರಿಮೆಯನ್ನು ಪ್ರತಿಪಾದನೆ ಮಾಡಿಕೊಂಡು ಬಂದಿರುವಂತಹ ಗೊಲ್ಲ ಸಮುದಾಯಕ್ಕೆ ಇವತ್ತಿನವರೆಗೂ ಪ್ರತ್ಯೇಕ ನಿಗಮವನ್ನು ಕೊಡಲಿಲ್ಲ ಎನ್ನುವುದಾದರೆ ಅದು ದೊಡ್ಡ ಸಮಸ್ಯೆ ಆಗಿದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ನಾವು ಕೇವಲ ಒಂದೆರಡು ಜಿಲ್ಲೆಗಳಲ್ಲಿ ಇರುವುದಿಲ್ಲ. ರಾಜ್ಯದಲ್ಲಿ 224 ವಿಧಾನಸಭಾ ಕ್ಷೇತ್ರಗಳಲ್ಲಿ ನಮ್ಮ ಅಸ್ತಿತ್ವ ಇದೆ. ವಿಶೇಷವಾಗಿ 60 ರಿಂದ 70 ವಿಧಾನಸಭಾ ಕ್ಷೇತ್ರಗಳಲ್ಲಿ ಬಹುತೇಕವಾಗಿ ಗೊಲ್ಲರು ಇರುವಂತಹ ಈ ಜಾಗದಲ್ಲಿ ಅವರು ಶೈಕ್ಷಣಿಕವಾಗಿ ಹಿಂದುಳಿದವರು ಇದ್ದಾರೆ ಎಂದರೆ ಅದಕ್ಕೆ ಕಾರಣ ಯಾರು ಎನ್ನುವ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ಸರ್ಕಾರ 17 ನಿಗಮಗಳನ್ನು ಮಾಡಿದೆ. ಎಲ್ಲದಕ್ಕೂ ನಿಗಮ ಮಾಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಮರಾಠ ನಿಗಮ, ಲಿಂಗಾಯಿತ ನಿಗಮ, ಒಕ್ಕಲಿಗರ ನಿಗಮವನ್ನು ಮಾಡಿದ್ದಾರೆ. ಅದರೆ ನಮ್ಮಂತಹ ಅಲೆಮಾರಿ ಸಮುದಾಯಗಳಿಗೆ ಏಕೆ ನಿಗಮವನ್ನು ಮಾಡಿಲ್ಲ? 1966 ರಲ್ಲಿ ಅಲೆಮಾರಿಗಳು ಎಂದು ಹೇಳಿದಂತಹ ಸಂದರ್ಭದಲ್ಲಿ, ಅವರು ಅತೀ ಹಿಂದುಳಿದ ವರ್ಗ ಎಂದು ಹೇಳಿದಂತಹ ಸಂದರ್ಭದಲ್ಲಿ ಇವತ್ತಿನವರೆಗೂ ಅಭಿವೃದ್ಧಿಗೋಸ್ಕರ ಪ್ರತ್ಯೇಕವಾಗಿ ಟಾರ್ಗೆಟ್ ಮಾಡಿ ಗೊಲ್ಲರು ಮತ್ತು ಅಲ್ಲಿರುವಂತಹ 26 ಉಪ ಜಾತಿಗಳನ್ನು ಸೇರಿಸಿಕೊಂಡು ಒಂದು ಪ್ರತ್ಯೇಕವಾಗಿರುವಂತಹ ನಿಗಮವನ್ನು ಸರ್ಕಾರ ಮಾಡಿಕೊಡಬೇಕು. ತಮ್ಮ ಕಾಲಾವಧಿಯಲ್ಲಿ ಈ ಕೆಲಸ ಮಾಡಿಕೊಡಬೇಕೆಂದು ಮಾನ್ಯ ಸಚಿವರಿಗೆ ನಾನು ಮನವಿ ಮಾಡುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರ ಭಾವನೆಗಳನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಅವರು ಮೊನ್ನೆಯೂ ಕೂಡ ನನ್ನ ಹತ್ತಿರ ಬಂದು ಸಾಕಷ್ಟು ಚರ್ಚೆ ಮಾಡಿದ್ದಾರೆ. ಈಗಾಗಲೇ ಬಹಳಷ್ಟು ನಿಗಮಗಳನ್ನು ಮಾಡಿದ್ದೀರಿ. ಅವರಿಗೆ ಪ್ರತ್ಯೇಕ ನಿಗಮವನ್ನು ಮಾಡಿಕೊಡಿ, ಅದರಿಂದ ಅವರಿಗೆ

ಒಳ್ಳೆಯದಾಗುತ್ತದೆ. ದಯವಿಟ್ಟು ತಮ್ಮ ಉತ್ತರದಲ್ಲಿ ನಿಗಮವನ್ನು ಮಾಡುತ್ತೇವೆ ಎನ್ನುವ ಮಾತನ್ನು ಹೇಳಿ. ಪರಿಶೀಲನೆ ಮಾಡಿ.

**ಶ್ರೀ ಶಿವರಾಜ ಎಸ್. ತಂಗಡಗಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ 16 ನಿಗಮಗಳನ್ನು ಮಾಡಿದ್ದೇವೆ. ಅದರ ಜೊತೆಗೆ ಅಲೆಮಾರಿ, ಅರೆ ಅಲೆಮಾರಿ ನಿಗಮ ಇದೆ. ಈಗಾಗಲೇ ಮತ್ತೊಂದು ಕಾಡು ಗೊಲ್ಲ ಅಭಿವೃದ್ಧಿ ನಿಗಮವು ಕೂಡ ಇದೆ. ಆದರೆ, ಆ ನಿಗಮ ನಮಗೆ ಬೇಡ ಎಂದು ಹೇಳಿರುವುದಕ್ಕೆ ಅಲೆಮಾರಿ ಅರೆ ಅಲೆಮಾರಿ ಎಂದು ನಿಗಮ ಮಾಡಿ ಅದರಲ್ಲಿ 46 ಸಮುದಾಯಗಳನ್ನು ಮಾತ್ರ ಸೇರಿಸಿದ್ದೇವೆ. ಆ 46 ಸಮುದಾಯಗಳು ಬಹಳ ಸಣ್ಣಸಣ್ಣ ಸಮುದಾಯಗಳಾಗಿವೆ. ಅವೆಲ್ಲವನ್ನು ಸೇರಿಸಿ 46 ನಿಗಮಗಳನ್ನು ಮಾಡಿದ್ದೇವೆ. ತಾವು ಕೂಡ ಹೇಳಿದ್ದೀರಿ. ನಿಶ್ಚಿತವಾಗಿಯೂ ಮಾನ್ಯ ಎಂ.ನಾಗರಾಜುರವರ ಬೇಡಿಕೆಯನ್ನು ನಾನು ಸ್ವಾಗತಿಸುತ್ತೇನೆ. ಆದರೆ ಇರುವ ನಿಗಮಕ್ಕೆ ನಮಗೆ ಹಣದ ತೊಂದರೆ ಇದೆ. ಆದರೂ ನಾನು ಮಾನ್ಯ ಎಂ.ನಾಗರಾಜುರವರ ಮನವಿಯನ್ನು ಸ್ವೀಕಾರ ಮಾಡುತ್ತೇನೆ. ನಿಗಮವನ್ನು ಅಪ್ರೂವ್ ಮಾಡಬೇಕಾದರೆ ಮಾನ್ಯ ಮುಖ್ಯಮಂತ್ರಿಯವರೇ ಮಾಡಬೇಕು. ನಾನು ನನ್ನ ಇಲಾಖೆಯಿಂದ ಮಾನ್ಯ ಮುಖ್ಯಮಂತ್ರಿಯವರಿಗೆ ಕಳುಹಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ.

(ಮುಂದು)

(835) 24/08/2026 1:10 ಎಸ್‌ಪಿಆರ್/ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸಚಿವರಿಗೆ ಧನ್ಯವಾದಗಳು. ಇವರು ನಮ್ಮ ಕಷ್ಟವನ್ನು ಅರ್ಥಮಾಡಿಕೊಂಡು ಡೈರೆಕ್ಷನ್ ನೀಡಿದ್ದಾರೆ. ಆದರೆ ಮತ್ತೊಂದು ವಿಚಾರವನ್ನು ಹೇಳಬೇಕೆಂದರೆ, ಆ 46 ಸಮುದಾಯಗಳಲ್ಲಿ ಗೊಲ್ಲರನ್ನು ಇಟ್ಟಿದ್ದಾರೆ, ಆ 46 ಸಮುದಾಯದಲ್ಲಿ ನಾವು ಸಹಾಯವನ್ನು ಪಡೆದುಕೊಳ್ಳುವುದು ಕಷ್ಟವಾಗುತ್ತದೆ ಎನ್ನುವ ವಿಚಾರವನ್ನು ನಾನು ಹೇಳುತ್ತಿದ್ದೇನೆ. ಕ್ಯಾಟೆಗರಿ-1 ರಲ್ಲಿರುವ 95 ಜಾತಿಗಳಲ್ಲಿ ನಾವು ಶೇಕಡಾ 4 ರಲ್ಲಿ ಬದುಕಬೇಕು ಎಂದು ಹೇಳಿದರೆ ಇದು ಹೇಗೆ ಸಾಧ್ಯವಾಗುತ್ತದೆ? ನಿಜವಾಗಿಯೂ ಹೇಳಬೇಕೆಂದರೆ, ಗೊಲ್ಲರು ಗುಡಿಸಲುಗಳಲ್ಲಿ ವಾಸ ಮಾಡುತ್ತಿದ್ದಾರೆ; ಹಾಗೂ ಇವರು ಅಲೆಮಾರಿಗಳಾಗಿದ್ದಾರೆ. ಈ ರೀತಿಯಾಗಿ ಮಾಡುತ್ತಿರುವ ಅನ್ಯಾಯವನ್ನು ಒಪ್ಪುವುದಕ್ಕೆ ಸಾಧ್ಯವೇ ಇಲ್ಲ. ಸಭಾಪತಿಗಳ ಕಾಳಜಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ, ನಾನು ಕೇಳುವುದು ಗೊಲ್ಲರು ಎಂದರೆ ಕೇವಲ ಗೊಲ್ಲರು ಮಾತ್ರವಲ್ಲ; ಬೆಳಗಾವಿಯಲ್ಲಿ ಹಣಬರು ಇದ್ದಾರೆ. ಆ ಹಣಬರನ್ನು ಕೇಳುವವರೇ ಇಲ್ಲ. ಇವತ್ತಿನ ದಿವಸ ಆ ಅಲೆಮಾರಿ ನಿಗಮದಲ್ಲಿ ಅವರಿಗೆ ಸೌಲಭ್ಯಗಳು ಸಿಗುತ್ತಿಲ್ಲ. ಹೀಗಾಗಿ ನಾನು ಹೇಳುತ್ತಿದ್ದೇನೆ. ಗೊಲ್ಲರ ಕೆಳಗಡೆ ಬರುವ ಉಪಜಾತಿಗಳಾದ 26 ಜಾತಿಗಳಿಗೂ ಸಹ ಆ ಸೌಲಭ್ಯವನ್ನು ಕೊಡಬೇಕು. ಇವರಿಗಾಗಿ ಪ್ರತ್ಯೇಕ ನಿಗಮವಾಗಬೇಕು. ಇದು ಈ ಸರ್ಕಾರದ ಅವಧಿಯಲ್ಲಿ ಆಗಬೇಕು ಹಾಗೂ ಈಗಲೇ ಸಚಿವರು ಘೋಷಣೆ

ಮಾಡುತ್ತಾರೆ ಎಂಬ ನಂಬಿಕೆಯಿಂದ ನಾನು ಅವರನ್ನು ಕೇಳುತ್ತಿದ್ದೇನೆ. ಸಭಾಪತಿಯವರು ಹೇಳಿದ ಮೇಲೆ ಸಚಿವರು ಈಗಲೇ ದಯಮಾಡಿ ಘೋಷಿಸಬೇಕು.

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಮ್ಮ ಸಹೋದ್ಯೋಗಿಯಾದ ಶ್ರೀ ಎಂ.ನಾಗರಾಜು ರವರು ತುಂಬಾ ಒಳ್ಳೆಯ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಇದಕ್ಕೆ ಸಂಬಂಧಿತ ನಿಗಮ ಇದೆ ಎಂದು ಈಗ ತಾನೇ ಸಚಿವರು ಹೇಳಿದರು. ಒಂದು ಸಮಾಜದಡಿಯಲ್ಲಿ ಬರುವ 26 ಉಪ ಜಾತಿಗಳಲ್ಲಿ ಗೊಲ್ಲ ಎಂಬ ಸರ್ಟಿಫಿಕೇಟ್ ಅನ್ನು ತೆಗೆದುಕೊಂಡರೆ ಮಾತ್ರವೇ ಅದು ಅಲೆಮಾರಿ ಕೆಳಗಡೆ ಬರುತ್ತದೆ. ಗೊಲ್ಲ, ಆಸ್ಥಾನ ಗೊಲ್ಲ, ಅಡವಿ ಗೊಲ್ಲ, ಹಣಬರು, ಅಟ್ಟಹಣಬರು, ಕೋನಾರು, ಯಾದವ, ಗೋಪಾಲ ಇಂತಹ ಯಾವುದೇ ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡರೆ, ಅದು ಬರುವುದಿಲ್ಲ. ಅದಕ್ಕೋಸ್ಕರವಾಗಿ ಇದನ್ನು ಗಂಭೀರವಾಗಿ ತೆಗೆದುಕೊಳ್ಳುವ ವಿಚಾರವಾಗಿದೆ. ತಮಿಳುನಾಡಿನ ಭಾಗಕ್ಕೆ ಹೋದರೆ, ಕೋನಾರ ಎಂಬುದಾಗಿ ಏನು ಕರೆಯುತ್ತೇವೆಯೋ, ಅವರಿಗೆ ತಮಿಳುನಾಡಿನಲ್ಲಿ ಯಾದವರು ಎಂದು ಕರೆಯುತ್ತೇವೆ. ಕೋನಾರರೆಲ್ಲರೂ ತಮಿಳುನಾಡಿನ ಗಡಿ ಭಾಗದಲ್ಲಿ ಗೊಲ್ಲ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಈ ಕಡೆ ಕೇರಳ ರಾಜ್ಯದ ಗಡಿ ಭಾಗದಲ್ಲಿ ಇವರುಗಳನ್ನು ಮಣಿಯಾಣಿ ಎಂಬುದಾಗಿ ಕರೆಯುತ್ತಾರೆ. ಅದೇ ಮಂಗಳೂರು ಭಾಗದ ಕಡೆಗೆ ಹೋದರೆ, ಅವರುಗಳೆಲ್ಲರೂ ಗೊಲ್ಲ ಸಮಾಜಕ್ಕೆ ಸೇರಿದವರಾಗಿದ್ದಾರೆ. ಕೇಂದ್ರದ ಅಲೆಮಾರಿ ಪಟ್ಟಿಯಲ್ಲಿರುವ 46 ಅಲೆಮಾರಿ ಜಾತಿಗಳಲ್ಲಿ ಗೊಲ್ಲ ಎಂಬ ಸರ್ಟಿಫಿಕೇಟ್ ಅನ್ನು ತೆಗೆದುಕೊಂಡಿರುವವರು ಮಾತ್ರವೇ eligible ಇದ್ದಾರೆ. ಇನ್ನು ಬೇರೆ ಇರುವ 25 ಉಪ ಜಾತಿಯವರು ಸರ್ಟಿಫಿಕೇಟನ್ ಅನ್ನು ತೆಗೆದುಕೊಂಡರೆ, ಇವರುಗಳು eligible ಆಗುವುದಿಲ್ಲ. ಈಗಾಗಲೇ "ಕಾಡುಗೊಲ್ಲ" ಎಂಬ ಅಭಿವೃದ್ಧಿ ನಿಗಮವನ್ನು ಮಾಡಿದ್ದಾರೆಯೋ, ಇವರುಗಳನ್ನು ಕೇಂದ್ರದಲ್ಲಿ E.W.S. (Economically Weaker Section) ಕೆಳಗೆ ಗುರ್ತಿಸಲಾಗಿದೆ. ಇವರು ಕಾಡುಗೊಲ್ಲ ಎಂಬ ಸರ್ಟಿಫಿಕೇಟ್ ಅನ್ನು ತೆಗೆದುಕೊಂಡರೆ, ಅಲೆಮಾರಿ ಕೆಳಗಡೆ ಇವರುಗಳನ್ನು ಪರಿಗಣಿಸುವುದಿಲ್ಲ. ಹೀಗಾಗಿ ಗೊಲ್ಲ ಮತ್ತು ಇದರ ಕೆಳಗಡೆ ಬರುವ ಎಲ್ಲಾ ಉಪ ಜಾತಿಗಳನ್ನು ಒಟ್ಟುಗೂಡಿಸಿ, ಅಲೆಮಾರಿ ಅಭಿವೃದ್ಧಿ ನಿಗಮವನ್ನು ಮಾಡಬೇಕು. ಏಕೆಂದರೆ, ಕಾಡುಗೊಲ್ಲ ಜಾತಿಯನ್ನು ಕೇಂದ್ರಕ್ಕೆ ಶಿಫಾರಸ್ಸು ಮಾಡಿದ ಸಂದರ್ಭದಲ್ಲಿ 'ತುಮಕೂರು, ಚಿತ್ರದುರ್ಗ' ಮತ್ತು 'parts of Bengaluru' ಎಂಬುದಾಗಿ ಇದೆ. ಅಲ್ಲಿ 'throughout Karnataka' ಎಂಬುದಾಗಿ ಅದನ್ನು ಪರಿಗಣಿಸಿರುವುದಿಲ್ಲ. ಹೀಗಾಗಿ ದಯಮಾಡಿ ಸಚಿವರು ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಶಿವರಾಜ ಎಸ್.ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೆ, ಸದಸ್ಯರಾದ ಶ್ರೀ ಎಂ.ನಾಗರಾಜು ಮತ್ತು ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್.) ರವರುಗಳು ಹೇಳಿದಂತೆ, ಅಲ್ಲಿಯೂ ಸಹ ವ್ಯತ್ಯಾಸಗಳಿವೆ. ಅವುಗಳನ್ನೆಲ್ಲಾ ವಿಚಾರ ಮಾಡಿ, ಲಾಸ್ಟ್‌ಗೆ ಅವರು ಬೇಡ ಎಂದು ಹೇಳಿದ್ದಕ್ಕೆ ನಾವು ಅವರುಗಳನ್ನು ಅಲೆಮಾರಿ ಎಂಬುದಾಗಿ ಮಾಡಿದ್ದೇವೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ಸಚಿವರು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡಬಾರದು. ಇಲ್ಲ ಅಲ್ಲಿ ಯಾವುದೇ diffencre ಇಲ್ಲ (ಗೊಂದಲ) ಕಾಡು ಗೊಲ್ಲರಿಗೆ ಅಲ್ಲಿ ಪ್ರತ್ಯೇಕವಾದ ನಿಗಮ ಇದೆ; ಇದನ್ನು mix ಮಾಡಬೇಡಿ. ನಾನು ಗೊಲ್ಲರ ಜಾತಿಯಲ್ಲಿರುವ 26 ಉಪ ಜಾತಿಗಳ ಬಗ್ಗೆ ಕೇಳುತ್ತಿದ್ದೇನೆ. ಹೀಗಾಗಿ ಇದನ್ನು ಮಾಡಲೇಬೇಕಾಗುತ್ತದೆ. ಸಚಿವರು ಸದನಕ್ಕೆ ತಪ್ಪು ಮಾಹಿತಿ ಕೊಡುವುದಾದರೆ ನಾನೂ ಧರಣಿಯನ್ನು ಮಾಡುತ್ತೇನೆ. We are not like this.

**ಸಭಾಪತಿಯವರು:-** ಶ್ರೀ ಎಂ.ನಾಗರಾಜು ರವರೇ ಕುಳಿತುಕೊಳ್ಳಿ. ಇನ್ನು ಯಾರೂ ಸಹ ಎದ್ದೇಳಬಾರದು.

**ಶ್ರೀ ಶಿವರಾಜ ಎಸ್.ತಂಗಡಗಿ:-** ಮಾನ್ಯ ಸಭಾಪತಿಯವರೆ, ಶ್ರೀ ಎಂ.ನಾಗರಾಜು ರವರು ಬಹಳ ಜೋಶ್ ಆಗಿ ಹೇಳುವುದಕ್ಕೆ ಹೋಗುತ್ತಾರೆ. ಆ ರೀತಿಯಾಗಿ ಅವರು ಹೇಳುವುದು ಬೇಡ. ಕಾಡು ಗೊಲ್ಲ, ಗೊಲ್ಲ, ಯಾದವ ಎಂಬುದಾಗಿ ಏನಿದೆ, ಅದರ ಬಗ್ಗೆ ಮುಖ್ಯ ಮಂತ್ರಿಗಳ ಗಮನಕ್ಕೆ ತರುವ ಕೆಲಸವನ್ನು ನಾನು ಮಾಡುತ್ತೇನೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ಸಚಿವರು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದು ಅಲ್ಲ; ಮುಂದಿನ ದಿನಗಳಲ್ಲಿ ಅದನ್ನು ಮಾಡುತ್ತೇವೆ ಎಂಬ ಆಶ್ವಾಸನೆಯನ್ನು ನೀಡಬೇಕು. ಈ ಸಬೂಬುಗಳನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದನ್ನು ಇವತ್ತಿನ ದಿವಸ ಕೇಳುತ್ತಿಲ್ಲ; **(ಗೊಂದಲ)** ಇದನ್ನು ನಾಲ್ಕು ವರ್ಷಗಳಿಂದ ಕೇಳುತ್ತಿದ್ದೇವೆ.

**ಸಭಾಪತಿಯವರು:-** ಶ್ರೀ ಎಂ.ನಾಗರಾಜು ರವರೇ, ಮುಖ್ಯಮಂತ್ರಿಗಳೊಂದಿಗೆ ಚರ್ಚಿಸುವುದಾಗಿ ಸಚಿವರು ಹೇಳಿದ್ದಾರೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ ಒಳ್ಳೆಯ ಸಭಾಪತಿಗಳು ಕುಳಿತಿದ್ದಾರೆ. **(ಗೊಂದಲ)** ಎಲ್ಲವನ್ನೂ **(ಗೊಂದಲ)** ಕೆಲಸ ಮಾಡುತ್ತಿದ್ದಾರೆ, ಆದರೆ, ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ವಿರೋಧ ಪಕ್ಷದವರು ಪ್ರಸ್ತಾಪಿಸಿದ್ದು, ಅವರಿಗೆ ನಾನು ಕೃತಜ್ಞನಾಗಿದ್ದೇನೆ ಎಂಬ ಮಾತನ್ನು ಹೇಳುತ್ತಿದ್ದೇನೆ. I am thankful for them. ಸಚಿವರು ದಯಮಾಡಿ ಇದರ ಬಗ್ಗೆ ಘೋಷಣೆಯನ್ನು ಮಾಡಲೇಬೇಕು. ಇಲ್ಲಿ compromise ಪ್ರಶ್ನೆಯೇ ಇಲ್ಲ. ನಾಲ್ಕು ವರ್ಷಗಳಿಂದ ಮೋಸ ಮಾಡಿದ್ದಾರೆ. ಹೀಗಾಗಿ ಇದನ್ನು ಒಪ್ಪುವುದಕ್ಕೆ ಸಾಧ್ಯವೇ ಇಲ್ಲ. ಇದನ್ನು ಮಾಡಲೇಬೇಕು. ಗೊಲ್ಲರ ಜೊತೆಗೆ 26 ಉಪ ಜಾತಿಗಳನ್ನು ಸೇರಿಸಬೇಕು ಹಾಗೂ ಇದಕ್ಕೆ ಒಂದು ನಿಗಮ ಆಗಲೇಬೇಕು. ಇಲ್ಲವೆಂದರೆ ನಾನು ಕುಳಿತುಕೊಳ್ಳುವುದಿಲ್ಲ. I will not sit. You can throw me out.

**ಸಭಾಪತಿಯವರು:-** ಶ್ರೀ ಎಂ.ನಾಗರಾಜು ರವರೇ ಕುಳಿತುಕೊಳ್ಳಿ. ನೀವು ಹೇಳಿ ಆಯಿತು. ನಾನು ಹೇಳಿದ ಮೇಲೆ, ನೀವು ಕುಳಿತುಕೊಳ್ಳಬೇಕು.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಗಳಿಗೆ ಕಳುಹಿಸುವ ಸಬೂಬನ್ನು ನಾಲ್ಕು ವರ್ಷಗಳಿಂದ ಹೇಳುತ್ತಿದ್ದಾರೆ.

**ಸಭಾಪತಿಯವರು:–** ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆಂದೆ ಸಚಿವರು ಹೇಳುತ್ತಿದ್ದಾರೆ. Won't you agree with him?

**(ಗೊಂದಲ)**

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೆ, **(ಗೊಂದಲ)** ನನಗೆ ಈ ಬಗ್ಗೆ assurance ಬೇಕು.

**Mr. CHAIRMAN:** I am very sorry.

**Sri M. NAGARAJU:** Mr. Chairman Sir, it is my right.

**Mr. CHAIRMAN:** I am asking you to sit.

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೆ, ನಾನು ವಿನಮ್ರವಾಗಿ ಮನವಿಯನ್ನು ಮಾಡುತ್ತಿದ್ದೇನೆ. It is my right. I want the minister to announce it today.

**Mr. CHAIRMAN:** No, I will not tolerate.

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೆ, ಅವರು ಘೋಷಣೆ ಮಾಡಲೇಬೇಕು ಎಂಬ ಮಾತನ್ನು ನಾನು ಹೇಳುತ್ತಿದ್ದೇನೆ.

**ಸಭಾಪತಿಯವರು:–** ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆಂದೆ ಸಚಿವರು ಹೇಳುತ್ತಿದ್ದಾರೆ.

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೆ, ಅವರು ಘೋಷಣೆ ಮಾಡದಿದ್ದರೆ, ಗೊಲ್ಲರ ಶಾಪ ಅವರಿಗೆ ಬಿಡುವುದಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಶಿವರಾಜ ಎಸ್.ತಂಗಡಗಿ:–** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದವರು ಎಲ್ಲಾ ಸಮುದಾಯಕ್ಕೆ ಅನ್ಯಾಯ ಮಾಡಿದ್ದಾರೆ. ಬೋವಿ, ಲಂಬಾಣಿ ಮತ್ತು ಗೊಲ್ಲ ಸಮಾಜಗಳಿಗೂ ಅನ್ಯಾಯ ಮಾಡಿದ್ದಾರೆ. ಇವರಿಗೆಲ್ಲಾ ನಾಚಿಕೆಯಾಗಬೇಕು. ಬೋವಿ, ಲಂಬಾಣಿ ಮತ್ತು ಗೊಲ್ಲ ಸಮುದಾಯಗಳ ಬಗ್ಗೆ ಇವರಿಗೆ ನಾಚಿಕೆ, ಮಾನ ಮತ್ತು ಮರ್ಯಾದೆಗಳು ಏನೂ ಇಲ್ಲ. ಇವರಿಗೆ ನಾಚಿಕೆ ಇಲ್ಲ.

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೆ, ನಾಲ್ಕು ವರ್ಷಗಳಿಂದ ಇದೇ ರೀತಿಯ ಸಬೂಬನ್ನು ಹೇಳಿದ್ದಾರೆ. ಹೀಗಾಗಿ ನಾನು ಏಕೆ ಈ ಮಾತನ್ನು ಒಪ್ಪಿಕೊಳ್ಳಬೇಕು? ನಾವು ಈ ದೇಶದ ನಾಗರೀಕರಲ್ಲವೇ? ನಾವು ಅಲೆಮಾರಿಗಳಾಗಿದ್ದೇವೆ ಎಂದರೆ, ನಮ್ಮನ್ನು ಯಾರೂ ಕೇಳುವುದು ಬೇಡವೇ? ನಮಗೆ ಸಂವಿಧಾನದ ಆಶಯದಂತೆ,

benefits ಬರಬಾರದೇ? ದಯಮಾಡಿ ಸಚಿವರಿಗೆ ಘೋಷಣೆ ಮಾಡುವುದಕ್ಕೆ ಹೇಳಿ. ನೀವು ಇರುವಾಗ ಆಗಲಿಲ್ಲವೆಂದಾದರೆ, ಮುಂದೆಯೂ ಆಗುವುದಿಲ್ಲ.

**ಸಭಾಪತಿಯವರು:-** ಸಚಿವರೇ, ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ಕ್ರಮ ತೆಗೆದುಕೊಳ್ಳಿ.

**ಶ್ರೀ ಶಿವರಾಜ ಎಸ್.ತಂಗಡಗಿ:-** ಮಾನ್ಯ ಸಭಾಪತಿಯವರೆ, ಯಾವುದಾದರೂ ನಿಗಮವನ್ನು ಮಾಡಬೇಕೆಂದರೆ, ಮುಖ್ಯಮಂತ್ರಿಗಳ ಗಮನಕ್ಕೆ ತೆಗೆದುಕೊಂಡು ಬಂದ ನಂತರವೇ ತೀರ್ಮಾನವನ್ನು ಮಾಡಬೇಕು. ಸಭಾಪತಿಯವರು ತಿಳಿಸಿದಂತೆ, ಸದಸ್ಯರನ್ನು ಕರೆದುಕೊಂಡು ಹೋಗಿ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ನಿರ್ಧಾರವನ್ನು ಮಾಡುತ್ತೇನೆ.

**ಸಭಾಪತಿಯವರು:-** ಸದನವನ್ನು 2:30 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1 ಗಂಟೆ 17 ನಿಮಿಷಕ್ಕೆ ಮುಂದೂಡಲ್ಪಟ್ಟು,**
**ಪುನಃ ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

(836) 24.08.2026 3.10 ವೈಎಲ್-ಬಿಎನ್‌ಎಸ್

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 01 ಗಂಟೆ 17 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 03 ಗಂಟೆ 14 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಾದರು)**

9. ಪ್ರಕಟಣೆ

**"ಕರ್ನಾಟಕ ವಿಧಾನ ಸಭೆಯು ಅಂಗೀಕರಿಸಿರುವ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ಕೋರಿರುವ ಕುರಿತು."**

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ:-

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ: 24.08.2026 ರಂದು ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆ ಎಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1) 2026ನೇ ಸಾಲಿನ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕ;
2) 2026ನೇ ಸಾಲಿನ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ;
3) 2026ನೇ ಸಾಲಿನ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ;
4) 2026ನೇ ಸಾಲಿನ ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ;
5) 2026ನೇ ಸಾಲಿನ ಭೂ ಕಂದಾಯ (ತಿದ್ದುಪಡಿ) ವಿಧೇಯಕ;
6) 2026ನೇ ಸಾಲಿನ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ ತಿದ್ದುಪಡಿ), ವಿಧೇಯಕ;
7) 2026ನೇ ಸಾಲಿನ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ;
8) 2026ನೇ ಸಾಲಿನ ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿಧೇಯಕ

**10. ಕಾರ್ಯಕಲಾಪಗಳ ಸಲಹಾ ಸಮಿತಿ ನಿರ್ಣಯದನ್ವಯ ವಿಧೇಯಕಗಳ ಪರಿಶೀಲನೆ ಹಾಗೂ ಚರ್ಚೆಗೆ ಸಮಯ ನಿಗದಿ ಮಾಡುವುದು ಹಾಗೂ ನಿಯಮಾವಳಿಯನ್ವಯ ಚರ್ಚೆಗೆ ಅವಕಾಶ ಮಾಡಿಕೊಡಬೇಕೆನ್ನುವ ಕುರಿತು**

- - - - -

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೊನ್ನೆ ದಿವಸ Business Advisory Committee meeting ನಲ್ಲಿ ನಾವು ಹಾಗೂ ಮಾನ್ಯ ಕೃಷ್ಣ ಬೈರೇಗೌಡರು ಒಳಗೊಂಡ ಹಾಗೆ ಆಯಾ ದಿನದ ಅಜೆಂಡಾ ಪ್ರಕಾರ ದಿನಕ್ಕೆ ಎರಡು-ಮೂರು ವಿಧೇಯಕಗಳನ್ನು ಕೈಗೆತ್ತಿಕೊಳ್ಳಬೇಕೆಂದು ತೀರ್ಮಾನಿಸಲಾಗಿತ್ತು.

**ಸಭಾಪತಿಯವರು:-** ಆಡಳಿತ ಪಕ್ಷದವರು ಸುಮಾರು 13, 14 ವಿಧೇಯಕಗಳು ಬರುತ್ತಿವೆ ಎಂದು ಹೇಳಿದರು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ವಿಧೇಯಕಗಳು ಬರುತ್ತವೆ. ಅದನ್ನು ದಿನಕ್ಕೆ ಇಂತಿಷ್ಟು ಎಂದು divide ಮಾಡಿಕೊಳ್ಳಿ. ಒಂದೇ ದಿವಸ ಇಷ್ಟೊಂದು ವಿಧೇಯಕವನ್ನು ಕೈಗೆತ್ತಿಕೊಂಡರೆ ಹೇಗೆ?

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ... **(ಗೊಂದಲ)**

**ಶ್ರೀ ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅವರು ಚರ್ಚೆಯಲ್ಲಿ ಭಾಗವಹಿಸುವುದಾದರೆ, ಖಂಡಿತವಾಗಿ ಒಂದು ದಿವಸಕ್ಕೆ ಎರಡು-ಮೂರು ವಿಧೇಯಕವನ್ನು ಕೈಗೆತ್ತಿಕೊಳ್ಳಬಹುದು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, I am asking the Chair. ಏತಕ್ಕಾಗಿ ಮಾನ್ಯ ಐವನ್ ಡಿ'ಸೋಜಾರವರು ಆ ರೀತಿ ಮಾತನಾಡುತ್ತಾರೆ? Business Advisory Committee meeting ನಲ್ಲಿ ತೀರ್ಮಾನವಾಗಿರುವಂತೆ ಕೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೇ, ಕುಳಿತುಕೊಳ್ಳಿ.

**ಶ್ರೀ ಯತೀಂದ್ರ ಎಸ್.:-** ಮಾನ್ಯ ಸಭಾಪತಿಯವರೇ, ಅವರು ಯಾವುದೇ ವಿಧೇಯಕಕ್ಕೆ ಸಂಬಂಧಿಸಿದಂತೆ ಚರ್ಚೆಯಲ್ಲಿ ಭಾಗವಹಿಸಲಿಲ್ಲ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, I have called him.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಪೀಠಕ್ಕೆ ಕೇಳುತ್ತಿದ್ದೇನೆ. ಹಾಗಾದರೆ, ಮಾನ್ಯ ಸಭಾಪತಿಯವರು ಉತ್ತರ ನೀಡಲು ಸಮರ್ಥರಿಲ್ಲವೇ?

**ಶ್ರೀ ಯತೀಂದ್ರ ಎಸ್.:-** ಮಾನ್ಯ ಸಭಾಪತಿಯವರೇ, ನಾನು ಸಹ ತಮ್ಮನ್ನೇ ಉದ್ದೇಶಿಸಿ ಕೇಳುತ್ತಿರುವುದು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಾವು ಸಮರ್ಥರಿದ್ದೀರಿ. ಪೀಠಕ್ಕೆ ಬಹಳ ತೂಕವಾಗಿರುವಂಥ ವ್ಯಕ್ತಿಯನ್ನೇ ಕೂರಿಸಿದ್ದೇವೆ. ರಾಜಕೀಯದೊಳಗೆ ಪರ, ವಿರೋಧಗಳು, ಘೋಷಣೆ-ಧಿಕ್ಕಾರ

ಕೂಗುವುದು ಸರ್ವೇ ಸಾಮಾನ್ಯವಾದ ವಿಚಾರಗಳಾಗಿದ್ದು, ಅದರಂತೆ ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದವರು ಘೋಷಣೆಯನ್ನು ಕೂಗಿದ್ದೇವೆ. ನಮ್ಮ ಮನಸ್ಸಿಗೆ ಬಂದ ವಿಚಾರವೇನೆಂದರೆ, ನಾವು ಇಲ್ಲಿ ವಿರೋಧ ಮಾಡುವಂಥ ಸಂದರ್ಭದಲ್ಲಿ, if we are using any unparliamentary words, ಅಂತಹ ಪದಗಳನ್ನು ಉಪಯೋಗಿಸಿದಾಗ ಹಾಗೂ ಅಂತಹ ಪದಗಳನ್ನು ಕಡತದಿಂದ ತೆಗೆಯಬೇಕೆಂದು ಆಡಳಿತ ಪಕ್ಷದವರಾಗಲೀ ಅಥವಾ ವಿರೋಧ ಪಕ್ಷದವರಾಗಲೀ, ವಿರೋಧ ಮಾಡಿದರೆ ಆಗ ಕಡತದಿಂದ ಆ ಪದಗಳನ್ನು ತೆಗೆಯುವುದು ಸರ್ವೇ ಸಾಮಾನ್ಯ. ಆದರೆ, ನಾವು ಕೂಗಿರುವಂಥ ಘೋಷಣೆಗಳು ಯಾವುದೂ ಕಡತಕ್ಕೆ ಹೋಗಬಾರದೆಂದು ತಾವೇ ಹೇಳಿದರೆ ಹೇಗೆ?

**ಸಭಾಪತಿಯವರು:-** ಭಾಷೆಯಲ್ಲಿ ಬಳಕೆಯಾಗುವುದನ್ನು,...

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಆ ರೀತಿ ಭಾಷೆ ಬಳಕೆಯನ್ನು ಮಾಡಿದರೆ ಕಡತದಿಂದ ತೆಗೆಸಬೇಕು.

**ಸಭಾಪತಿಯವರು:-** ಮಾನ್ಯ ಭೋಜೇಗೌಡರವರೇ, ತಾವು ಹೇಳುವುದನ್ನು ನಾನು ಕೇಳಿದ್ದೇನೆ ಅಲ್ಲವೇ? ಈಗ ನಾನು ಹೇಳುವುದನ್ನು ತಾವು ಕೇಳಬೇಕು. You have asked me. What message are we sending? ಅಂದಿನ ದಿವಸ ಸಹ ನಾನು ಹೇಳಿದ ಹಾಗೆ, ಈ ರಾಜ್ಯದ ಸುಮಾರು 7 ಕೋಟಿ ಜನರು 224 ಜನ ಎಂ.ಎಲ್.ಎ. ಗಳು ಹಾಗೂ 74 ಜನ ಎಂ.ಎಲ್.ಸಿ. ಗಳನ್ನು ಆಯ್ಕೆ ಮಾಡಿ, ಈ ವಿಧಾನಮಂಡಲಕ್ಕೆ ಕಳುಹಿಸಿಕೊಟ್ಟಿದ್ದಾರೆ. We have the privilege of coming here and sitting in this House. ಆಡಳಿತ ಪಕ್ಷದವರಾಗಲೀ ಅಥವಾ ವಿರೋಧ ಪಕ್ಷದವರಾಗಲೀ ಅವರವರ ನಡವಳಿಯನ್ನು ಅವರೇ ಸರಿಪಡಿಸಿಕೊಳ್ಳಬೇಕು. ಇಡೀ ರಾಜ್ಯ ನಮ್ಮನ್ನು ನೋಡುತ್ತಿದ್ದು, ಲೈವ್ ಆಗಿ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿರುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅದು ನಮ್ಮ ಪುಣ್ಯ.

**ಸಭಾಪತಿಯವರು:-** ಆ ರೀತಿ ಇದ್ದಾಗ, ಸದನದೊಳಗೆ ನಿಂತುಕೊಂಡು ಘೋಷಣೆಗಳನ್ನು ಕೂಗುವುದು, ಯಾರು ಈ ಸದನದ ಸದಸ್ಯರಲ್ಲವೋ, ಅಂಥವರ ಬಗ್ಗೆ ವಿಚಾರಗಳನ್ನು ಹೇಳುವುದು ಸರಿಯಾಗುವುದಿಲ್ಲ. ಹಾಗೆಯೇ ಆಡಳಿತ ಪಕ್ಷದವರು ಏನೇ ಗಲಾಟೆ ಮಾಡಿದರೆ, ಆಡಳಿತ ಪಕ್ಷದವರು ಮಾತನಾಡಿರುವುದು ಕಡತಕ್ಕೆ ಹೋಗಬಾರದೆಂದು ಹೇಳಿದ್ದೇನೆ ವಿನಃ ವಿರೋಧ ಪಕ್ಷದವರು ಮಾತನಾಡಿರುವುದು ಮಾತ್ರ ಕಡತಕ್ಕೆ ಹೋಗಬಾರದೆಂದು ಹೇಳಿಲ್ಲ. Unless I call them, ಯಾವುದು ಕಡತಕ್ಕೆ ಹೋಗಬಾರದೆಂದು ಹೇಳಿದ್ದು,

ಬೇಕಾದರೆ ಕಡತವನ್ನು ತೆಗೆದು ನೋಡಿ. ನಮ್ಮನ್ನು ನಾವೇ ನಿಯಂತ್ರಣ ಮಾಡಿಕೊಳ್ಳಲಿಲ್ಲವೆಂದರೆ, ಬೇರೆ ಯಾರು ಬಂದು ನಿಯಂತ್ರಣ ಮಾಡುತ್ತಾರೆ? There should be some restrictions. ನಾನು ಒಳಗೊಂಡ ಹಾಗೆ ಪ್ರತಿಯೊಬ್ಬರು ಕೂಡ ಅವರವರ ಭಾಷೆಯಲ್ಲಿ ನಿಯಂತ್ರಣ ಇರಬೇಕು. ಸುಮಾರು 24 ಮಂದಿ ಎದ್ದು ಕೂಗುವುದು ಕಡತಕ್ಕೆ ಹೋಗಬೇಕಾ! ಒಬ್ಬೊಬ್ಬರೆ ನಿಂತುಕೊಂಡು ಮಾತನಾಡಿದರೆ ಪರವಾಗಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, unparliamentary ಪದ ಬಳಕೆ ಇದ್ದಾಗ ಮಾತ್ರ ಸದನದ ಗೌರವದಿಂದಾಗಿ ಅದನ್ನು ಕಡತದಿಂದ ತೆಗೆಯಬೇಕು.

**Mr.CHAIRMAN:-** Let me watch the Members of both the parties now. ಯಾವ ರೀತಿ ಮಾತನಾಡುತ್ತೀರಿ ಎಂಬುದನ್ನು ನಾನು ಗಮನಿಸುತ್ತೇನೆ. ಎಲ್ಲಿಯವರೆಗೂ ಸದನದಲ್ಲಿ ನಮ್ಮನ್ನು ನಾವು ನಿಯಂತ್ರಣ ಮಾಡಿಕೊಳ್ಳುವುದಿಲ್ಲವೋ,..

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದು ನನ್ನ ಮನವಿಯಷ್ಟೆ. The Chair is empowered. ತಾವು ತೆಗೆದುಕೊಂಡಿರುವಂಥ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ, ಅದರಲ್ಲಿ ಎರಡು ಮಾತಿಲ್ಲ.

**ಸಭಾಪತಿಯವರು:-** ಹಾಗೆಯೇ ನಾನು ವಿರೋಧ ಪಕ್ಷದವರ ಹಕ್ಕಿಗೆ ಚ್ಯುತಿ ಬರುವಂಥ ಯಾವುದೇ ಕೆಲಸವನ್ನು ಮಾಡುವುದಿಲ್ಲ. ಆದರೆ, ಯಾವ ರೀತಿ ಸದನ ನಡೆಯುತ್ತಿದೆ? ಅದು ಸರಿಯಾಗಿಲ್ಲ. ಅದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಶುಕ್ರವಾರವೇ ಬೆಳಗ್ಗೆ 10 ಗಂಟೆಗೆ Floor Leaders ಅನ್ನು B.A.C. meeting ಗೆ ಕರೆದಿದ್ದೆನು. ಹಾಗೆಯೇ ಎರಡನೇ ಬಾರಿ ಸಹ ಕರೆ ಮಾಡಿದ್ದೇನೆ. ಪುನಃ ಇವತ್ತು ಬೆಳಗ್ಗೆ 7 ಗಂಟೆ 52 ನಿಮಿಷಕ್ಕೆ ವಿರೋಧ ಪಕ್ಷದ ನಾಯಕರಿಗೆ ಕರೆ ಮಾಡಿದ್ದೆನು. ಏಕೆಂದರೆ, ಬೇರೆ ಬೇರೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ ಎಂದು ಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನು ಓದಿದ್ದೆನು. I just wanted to know as to what to do with the House. ಹಾಗಾಗಿ, ಬೆಳಗ್ಗೆ 7 ಗಂಟೆ 52 ನಿಮಿಷಕ್ಕೆ ವಿರೋಧ ಪಕ್ಷದ ನಾಯಕರಿಗೆ ಕರೆ ಮಾಡಿದ್ದು, ಅವರು ಕರೆಯನ್ನು ಸ್ವೀಕರಿಸಲಿಲ್ಲ. ಆಮೇಲೆ ಬೆಳಗ್ಗೆ 7 ಗಂಟೆ 54 ನಿಮಿಷಕ್ಕೆ ಮಾನ್ಯ ಎನ್.ರವಿಕುಮಾರ್‌ರವರಿಗೆ ಕರೆ ಮಾಡಿದ್ದು, ಅವರು ಸಹ ನನ್ನ ಕರೆಯನ್ನು ಸ್ವೀಕರಿಸಲಿಲ್ಲ.

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಪುನಃ ನಾನು ತಮಗೆ ಕರೆ ಮಾಡಿದ್ದೆನು.

(ಮುಂದು)

(837) 24.08.2026/3.20/ಎಸ್‌ಕೆ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ನನಗೆ ದೂರವಾಣಿ ಕರೆ ಬಂದಿಲ್ಲ. I don't know. ನಾನು ತಮಗೆ ಬೇಕಾದರೆ records ಕೂಡ ಕಳುಹಿಸಿಕೊಡುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೆಳಗ್ಗೆ ಹೇಳಿದ್ದೀರಿ.

**ಸಭಾಪತಿಯವರು:-** ತಾವು ಕೇಳಿ. ನಾನು ಬೆಳಗ್ಗೆ ಹೇಳಿದೆ. ನಾನು ಅವರಿಗೆ ಫೋನ್ ಮಾಡಿದ ನಂತರ ಇಬ್ಬರಿಗೂ ಫೋನ್ ಮಾಡಿದೆ. What to do with the House? ಸದನವನ್ನು ಹೇಗೆ ನಡೆಸಬೇಕು ಎಂದು ನಾನು ಕೇಳಬೇಕಲ್ಲ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಮ್ಮ ಕಾಳಜಿ ಬಗ್ಗೆ ನಮಗೆ ಅರ್ಥವಾಗುತ್ತದೆ.

**ಸಭಾಪತಿಯವರು:-** ಬೆಳಗ್ಗೆಯಿಂದ 10 ಗಂಟೆಯಿಂದ 11 ಗಂಟೆಯವರೆಗೂ ನಾನು ಕುಳಿತಿದ್ದೆ. ಆಡಳಿತ ಪಕ್ಷದ ಸದಸ್ಯರುಗಳಾದ ಶ್ರೀ ಬೋಸರಾಜುರವರು, ಸಭಾನಾಯಕರು ಸದನಕ್ಕೆ ಬಂದಿದ್ದರು. ಬೆಳಗ್ಗೆ 11 ಗಂಟೆಯಿಂದ ನನಗೆ ಯಾವುದೇ ಮಾಹಿತಿ ಇಲ್ಲ. ಒಂದು ಫೋನ್ ಕೂಡ ಬಂದಿಲ್ಲ. ನೀವು ಸದನಕ್ಕೆ ಬರುತ್ತೀರೋ ಅಥವಾ ಬರುವುದಿಲ್ಲವೋ ಎಂಬ ಬಗ್ಗೆ ನನಗೆ ಮಾಹಿತಿ ಕೂಡ ಸಿಗಲಿಲ್ಲ. I had to start the House. ನಾನು ಸದನ ಪ್ರಾರಂಭ ಮಾಡಿದ್ದು ತಪ್ಪಾ?

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಪ್ಪಿಲ್ಲ. ನಾನು ಬೆಳಗ್ಗೆ ಹತ್ತು ಗಂಟೆಗೆ ಬಂದಿದ್ದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಯಾವುದು ತಪ್ಪು ಎಂದು ಹೇಳುವುದಿಲ್ಲ. ತಾವು ನನಗೆ ಬೆಳಗ್ಗೆ ಫೋನ್ ಮಾಡಿದ್ದೀರಿ. ಆ ಸಮಯದಲ್ಲಿ ನಾನು ಫೋನ್ ತೆಗೆದುಕೊಳ್ಳುವುದಕ್ಕಾಗಲಿಲ್ಲ. ನಮ್ಮ protest ಇತ್ತು.

**ಸಭಾಪತಿಯವರು:-** ಅದು ಗೊತ್ತಾಯಿತು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಆ protest ಗೆ ಹೋದೆ. ಅವರು ಮಾಡಿದ್ದರು ಎಂದು ಆಗ ನನಗೆ ಹೇಳಿದರು. ಆನಂತರ ನಾನು ನೋಡಿದೆ. ಅದೇ ವಿಷಯ. ನಾವು ಇನ್ನು ಅಲ್ಲಿಗೆ ಹೋಗುವುದಕ್ಕಾಗುವುದಿಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಸದನ ಹನ್ನೊಂದು ಗಂಟೆ ನಡೆಯುವ ಸಮಯದಲ್ಲಿ ಹನ್ನೊಂದುವರೆಗೆ ಪ್ರಾರಂಭ ಮಾಡಿ ಎಂದು ತಾವು ಒಂದೇ ಒಂದು ನಿಮಿಷ ನನಗೆ ಫೋನ್ ಮಾಡಿ ಹೇಳಿದ್ದರೆ, ಆಗ ಸದನವನ್ನು ಹನ್ನೊಂದುವರೆ ಗಂಟೆಗೆ ಪ್ರಾರಂಭ ಮಾಡುತ್ತಿದ್ದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆ ಸಮಯದಲ್ಲಿ ನಾವು ಫೋನ್ ಮಾಡುವುದಕ್ಕಾಗಲಿಲ್ಲ. ಹಾಗಾಗಿ ತಪ್ಪು ಆಗಿದೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಏಕೆಂದರೆ ನಾನು ನನ್ನ ಪ್ರಯತ್ನ ಮಾಡಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಪ್ರಯತ್ನ ಮಾಡಿದ್ದೀರಿ. ಏಕೆಂದರೆ, ಅವತ್ತಿನ ದಿವಸ ಮೀಟಿಂಗ್‌ನಲ್ಲಿಯೇ ಅದರ ಬಗ್ಗೆ ಪ್ರಸ್ತಾಪವಾಗಿತ್ತು. ಅದರಿಂದಾಗಿ ನಾವು busy ಇದ್ದಿದ್ದುದರಿಂದ, ಆಗ ತಮಗೆ ನಾನು ಹೇಳುವುದಕ್ಕಾಗಲಿಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ನನಗೆ ಹೇಳಬೇಕಾಗಿತ್ತು. ನಮ್ಮದೊಂದು ಕಾರ್ಯಕ್ರಮ ಇದೆ ನಾವು ಸದನಕ್ಕೆ ಹನ್ನೊಂದು ಗಂಟೆಗೆ ಬರುವುದಕ್ಕಾಗುವುದಿಲ್ಲ, ಹನ್ನೆರಡು ಗಂಟೆಗೆ ಬರುತ್ತೇವೆಂದು opposition party Chief Whip ಅವರು ನನಗೆ ಹೇಳಿದ್ದರೆ ಆಗುತ್ತಿತ್ತು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಹೇಳಿಬಿಡಿ ಎಂದು ನಾನು ಅವರಿಗೆ ಹೇಳಿದೆ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ತಾವು ಏಳು ಗಂಟೆ ಹತ್ತೊಂಭತ್ತು ನಿಮಿಷಕ್ಕೆ ಫೋನ್ ಮಾಡಿದ್ದೀರಾ. ನಾನು ಆಗ ವಾಕಿಂಗ್‌ಗೆ ಹೋಗಿದ್ದೆ. ನಾನು ಬಂದು ತಮಗೆ ವಾಪಸ್ಸು ಫೋನ್ ಮಾಡಿದೆ. ಆಗ ತಾವು ಫೋನ್ receive ಮಾಡಲಿಲ್ಲ.

**ಸಭಾಪತಿಯವರು:-** ನನಗೆ ಯಾವುದೇ ಫೋನ್ ಕಾಲ್ ಬಂದಿಲ್ಲ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ತಮಗೆ ಯಾವಾಗ ಫೋನ್ ಮಾಡಿದ್ದೇನೆಂದು ತಮಗೆ ಟೈಮಿಂಗ್ ಹೇಳುತ್ತೇನೆ. ಏಳು ಗಂಟೆ ಐವತ್ತೆರಡು ನಿಮಿಷಗಳ ಸಮಯದಲ್ಲಿ ತಮಗೆ ಫೋನ್ ಮಾಡಿದ್ದೇನೆ. ಆಗ ತಾವು ಫೋನ್ ಅನ್ನು receive ಮಾಡಿಲ್ಲ. ಎರಡು ಬಾರಿ ಫೋನ್ ಕಾಲ್ ಮಾಡಿಸಿದ್ದೇನೆ. ಆಗ ತಾವು ವಾಪಸ್ಸು ಮಾಡಲಿಲ್ಲ. ಈ ತರಹ ವಿಷಯವಿದೆ ಎಂದು ಎರಡು ದಿನಗಳ ಹಿಂದೆ ನನಗೆ ತಾವು ಫೋನ್ ಮಾಡಿದ್ದೀರಿ. ಆಯಿತು ಬರುತ್ತೇವೆ ಎಂದು ನಾನು ಆಗ ತಮಗೆ ಹೇಳಿದ್ದೆ. ಸದನ ನಡೆಯಬೇಕು ಎಂದು ನಾನು ಸದಸ್ಯರೆಲ್ಲರಿಗೂ ಇದಕ್ಕೆ attend ಆಗಬೇಕೆಂದು ನಾನು ಎಲ್ಲರಿಗೂ ಹೇಳಿದ್ದೆ.

**ಸಭಾಪತಿಯವರು:-** ಮಾನ್ಯ ವಿರೋಧ ಮುಖ್ಯ ಸಚೇತಕರೇ, ನಾವು ಹತ್ತು ಗಂಟೆಗೆ ನಡೆಯುವ ಮೀಟಿಂಗ್‌ಗೆ ಬರುವುದಕ್ಕಾಗುವುದಿಲ್ಲ ಎಂದು ಸಂದೇಶವನ್ನು ನಮಗೆ ಕಳುಹಿಸಬಹುದಾಗಿತ್ತು. ಸದನವನ್ನು ಹನ್ನೊಂದು ಗಂಟೆಗೆ ಪ್ರಾರಂಭ ಮಾಡಬೇಡಿ ಹನ್ನೆರಡು ಗಂಟೆಗೆ ಪ್ರಾರಂಭ ಮಾಡಿ ಎಂದು ಹೇಳಿದ್ದರೆ, ಸದನವನ್ನು ಹನ್ನೊಂದು ಗಂಟೆಗೆ ಪ್ರಾರಂಭ ಮಾಡುತ್ತಿರಲಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರು ಫೋನ್ ಮಾಡಿದ್ದಾರೆ. ಆಯಿತು ತಾವು ಅವರಿಗೆ ಹೇಳಿಬಿಡಿ ಎಂದು ನಾನು ನಮ್ಮ Chief Whip ಗೆ ಹೇಳಿದ್ದೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಆಯಿತು ಬಿಡಿ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ನನ್ನ ಕಡೆಯಿಂದ ಲೋಪವಾಯಿತು. ತಮ್ಮ ಕಡೆಯಿಂದ ಆಗಿರುವ ಲೋಪವಾಗಿರುವುದೇನೆಂದರೆ,

**ಸಭಾಪತಿಯವರು:–** ನನ್ನ ಕಡೆಯಿಂದ ಲೋಪವಾಗಿಲ್ಲ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಪೀಠದಿಂದ ಆಗಿರುವಂತಹ ಲೋಪವೇನೆಂದರೆ, ಪ್ರತಿ ಪಕ್ಷ ಇರುವುದು ಏತಕ್ಕೆ? ಸರ್ಕಾರವನ್ನು watch ಮಾಡುವುದಕ್ಕೆ ಪ್ರತಿಪಕ್ಷ ಇರುವಂಥದ್ದು. ಸರ್ಕಾರ ಏನು ತಪ್ಪು ಮಾಡುತ್ತದೆ ಆ ತಪ್ಪನ್ನು ತೆಗೆದುಕೊಂಡು ಹೇಳುವಂತಹದ್ದಕ್ಕೆ ಪ್ರತಿಪಕ್ಷ ಇರುವಂತಹದ್ದು. ಸರ್ಕಾರ ಏನು ತಪ್ಪು ಮಾಡಿದೆ, ಅದನ್ನು ನಾವು ಹಿಡಿದುಕೊಂಡಿದ್ದೇವೆ.

**ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಸಚಿವರು):–** ಮಾನ್ಯ ವಿರೋಧ ಮುಖ್ಯ ಸಚೇತಕರೇ, ಯಾವ ತಪ್ಪು ಎಂಬುದನ್ನು ಹೇಳಬೇಕಲ್ಲ. ನಾವು ಎಲ್ಲಿ ತಪ್ಪು ಮಾಡಿದ್ದೇವೆ. ತಾವು ಅದನ್ನು prove ಮಾಡಿದರೆ ನಾವು ಒಪ್ಪುತ್ತೇವೆ. ಸರ್ಕಾರ ತಪ್ಪು ಮಾಡಿದೆ ಎಂದು ಹೇಳಬೇಡಿ.

**ಶ್ರೀ ಎನ್. ರವಿಕುಮಾರ್:–** ಈಗ ಉದಾಹರಣೆಗೆ ಹೇಳುತ್ತೇನೆ. ಹೌದು ಸರ್ಕಾರ ತಪ್ಪು ಮಾಡಿದೆ. ಅದು ಯಾವುದು ಎಂದು ಹೇಳುತ್ತೇನೆ.

**ಡಾ॥ ಯತೀಂದ್ರ ಎಸ್. (ಸಭಾನಾಯಕರು):–** ಇಲ್ಲ.

**ಶ್ರೀ ಎನ್. ರವಿಕುಮಾರ್:–** ಯಾವುದು ತಪ್ಪು ಎಂದು ಹೇಳುತ್ತೇನೆ. ಮಾನ್ಯ ಸಭಾನಾಯಕರೇ ಆನಂತರ ತಾವು ಮಾತನಾಡಿ. ಏನೇನು ತಪ್ಪು ಮಾಡಿದೆ ಎಂದು ಉದಾಹರಣೆ ಹೇಳುವುದಾದರೆ, "ಹಿಂದಿ ವಿರೋಧಿ ಸರ್ಕಾರಕ್ಕೆ" ಎಂದು ಘೋಷಣೆ ಕೂಗಿದ್ದೇವೆ. ಇದು ಕಡತಕ್ಕೆ ಹೋಗಬೇಕಾ, ಹೋಗಬಾರದೋ ಎಂಬುದು ಹೇಳಿ. ಇದರಲ್ಲಿ unparliamentary ಏನಿದೆ?

**ಸಭಾಪತಿಯವರು:–** ವಿರೋಧ ಪಕ್ಷದ ಮುಖ್ಯ ಸಚೇತಕರಾದ ಮಾನ್ಯ ರವಿಕುಮಾರ್‌ರವರೇ, ಒಂದು ನಿಮಿಷವಿರಿ. ವಿರೋಧ ಪಕ್ಷದ ಕಡೆಯಿಂದ ಇಪ್ಪತ್ತು ಜನ ಸದಸ್ಯರು ನಿಂತುಕೊಂಡು ಒಂದು slogan ಹಾಕಿದರೆ, ಯಾವುದನ್ನು ಕಡತಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯ ಹೇಳಿ?

**ಡಾ॥ ಯತೀಂದ್ರ ಎಸ್.:–** ಮಾನ್ಯ ಸಭಾಪತಿಯವರೇ, ಅದು ಅಷ್ಟೇ ಅಲ್ಲ. ಕಲಾಪ ನಡೆಯಬೇಕಾದರೆ, ವಿರೋಧ ಪಕ್ಷದ ಕಡೆಯವರು ಘೋಷಣೆ ಕೂಗಿದರೆ ಕಲಾಪದ ವಿಚಾರಗಳು ಕಡತದಲ್ಲಿ ಹೋಗಬೇಕಾ ಅಥವಾ ಅವರು ಘೋಷಣೆ ಕೂಗಿದ್ದು ಕಡತಕ್ಕೆ ಹೋಗಬೇಕಾ? ಕಲಾಪದ ನಡೆಯುವ ಮಧ್ಯೆದಲ್ಲಿ ಘೋಷಣೆ ಕೂಗಿದರೆ, ಅದೆಲ್ಲವೂ ಕಡತದಲ್ಲಿ ಹೇಗೆ ಹೋಗುವುದಕ್ಕೆ ಸಾಧ್ಯ ಹೇಳಿ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈ ತರಹ ಹತ್ತು issue ಗಳನ್ನು ಹೇಳುತ್ತೇನೆ. ಉದಾಹರಣೆಗೆ "ಕೆ.ಪಿ.ಎಸ್.ಸಿ.ನಲ್ಲಿ ಆಗಿರುವಂತಹ ಭ್ರಷ್ಟಾಚಾರವನ್ನು ನಿಲ್ಲಿಸದೇ ಇರುವ ಸರ್ಕಾರಕ್ಕೆ ಧಿಕ್ಕಾರ." ಇದರಲ್ಲಿ unparliamentary ಏನಿದೆ ಹೇಳಿ.

**ಸಭಾಪತಿಯವರು:-** ನಾನು ವಿರೋಧ ಪಕ್ಷದವರಿಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿದರೂ ಚರ್ಚೆ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ ನೀವು.

**ಡಾ॥ ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ನಿಯಮಾವಳಿಗಳ ಪ್ರಕಾರ ಸೂಚನೆ ಕೊಟ್ಟು, ಅವರು ಏನು ಬೇಕಾದರೂ ಮಾತನಾಡಲಿ. ಅದು ಕಡತಕ್ಕೆ ಹೋಗುತ್ತದೆ. ಇವರು ನಿಯಮಾವಳಿಗಳನ್ನು ಪಾಲನೆ ಮಾಡುವುದಿಲ್ಲ. ಸೂಚನೆ ಕೊಡದೇ ಮಾತನಾಡುತ್ತಾರೆ. ಅದು ಹೇಗೆ ಕಡತಕ್ಕೆ ಹೋಗುತ್ತದೆ?

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಒಂದು ನಿಮಿಷ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನನ್ನ ಮಾತನ್ನು ಹೇಳಿ ಮುಗಿಸುತ್ತೇನೆ.

**ಸಭಾಪತಿಯವರು:-** ಸೋಮವಾರದಿಂದ ಪ್ರಾರಂಭ ಮಾಡಿದಾಗಿನಿಂದ ನಾನು ವಿರೋಧ ಪಕ್ಷದವರಿಗೆ ಹೇಳಿದ್ದೇನೆ. ವಿರೋಧ ಪಕ್ಷದವರಿಗೆ ಚರ್ಚೆ ಮಾಡುವುದಕ್ಕೆ ಮುಕ್ತ ಅವಕಾಶವಿದೆ. ಅದು ತಮ್ಮ ಹಕ್ಕು ಎಂದು ನಾನು ಹೇಳಿದ್ದೇನೆ. ಆದರೆ ವಿರೋಧ ಪಕ್ಷದವರು ಇಲ್ಲಿಯವರೆವಿಗೂ "ರಾಜೀನಾಮೆ ಕೊಟ್ಟು ಬಿಡಿ" ಎಂಬ ಘೋಷಣೆಯನ್ನು ಬಿಟ್ಟು ಬೇರೆ ಯಾವುದೇ ವಿಷಯವನ್ನು ಚರ್ಚೆ ಮಾಡಿಲ್ಲ. ರಾಜೀನಾಮೆ ಹೊರತುಪಡಿಸಿ, ಸದನದ ಕಲಾಪವನ್ನು ನಡೆಯುವುದಕ್ಕೆ ಬಿಡುವುದಿಲ್ಲ ಎನ್ನುವಂತಹ ಮೊಂಡು ವಾದ ಇದೆಯೆಲ್ಲಾ, ಅದು ಅಷ್ಟೊಂದು ನನಗೆ ಸರಿ ಎನಿಸುವುದಿಲ್ಲ. ಇಲ್ಲಿ ಚರ್ಚೆ ಮಾಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಷ್ಟೆಲ್ಲಾ ಹೇಳಿದರೂ ಭ್ರಷ್ಟಾಚಾರದಲ್ಲಿ....

**ಸಭಾಪತಿಯವರು:-** ನಾನು ಸರ್ಕಾರದ ಪರ ಇಲ್ಲ.

**ಶ್ರೀ ಯು.ಟಿ. ಖಾದರ್:-** ಮಾನ್ಯ ಸಭಾಪತಿಯವರೇ, ಅವರಿಗೆ ಮಾತನಾಡಲು ಅವಕಾಶವಿಲ್ಲ.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದವರು ಒಟ್ಟಿಗೆ ಎದ್ದುನಿಂತು ಮಾತನಾಡುತ್ತಿದ್ದರು)**

**ಡಾ॥ ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಭ್ರಷ್ಟಾಚಾರದ ಬಗ್ಗೆ ನಿಯಮಾವಳಿಗಳ ಪ್ರಕಾರ ಸೂಚನೆ ಕೊಟ್ಟು, ಚರ್ಚೆ ಮಾಡಲಿ. ಸರ್ಕಾರವನ್ನು ಪ್ರಶ್ನೆ ಮಾಡಲಿ. ಅದು ಕಡತಕ್ಕೆ ಹೋಗುತ್ತದೆ. ಅದಕ್ಕೆ ಸರ್ಕಾರ ಉತ್ತರ ಕೊಡುತ್ತದೆ. ಆನಂತರ ರಾಜೀನಾಮೆ ಬಗ್ಗೆ ಕೇಳಲಿ. ಅದಕ್ಕೂ ಉತ್ತರ ಕೊಡುತ್ತೇವೆ. **(ಗೊಂದಲ)** ಆದರೆ, ಅವರು ಯಾವುದೇ ಸೂಚನೆಯನ್ನು ಕೊಡುವುದಿಲ್ಲ, ಯಾವುದೇ ನಿಯಮಾವಳಿಗಳನ್ನು ಪಾಲನೆ ಮಾಡುವುದಿಲ್ಲ, ಯಾವುದೂ ಕೂಡ ವಿಷಯದ ಬಗ್ಗೆ ಚರ್ಚೆ ಮಾಡುವುದಿಲ್ಲ. ಎಲ್ಲರೂ ಒಟ್ಟಿಗೆ ಕೂಗಾಡಿದರೆ ಅದು ಹೇಗೆ ಕಡತಕ್ಕೆ ಹೋಗುತ್ತದೆ ಹೇಳಿ. ಅದು ಹೇಗೆ ಸರ್ಕಾರ....

**(ಗೊಂದಲ)**

**ಸಭಾಪತಿಯವರು:-** ಅಧಿವೇಶನ ನಡೆದು ಇವತ್ತಿಗೆ ಆರು ದಿನ ಆಗಿದೆ. ಜನರು ನಮ್ಮನ್ನೆಲ್ಲಾ ನೋಡುತ್ತಿದ್ದಾರೆ. ಆಡಳಿತ ಮತ್ತು ವಿರೋಧ ಪಕ್ಷದ ಕಡೆಯವರನ್ನು ಜನರು ನೋಡುತ್ತಿದ್ದಾರೆ. ಅವರು ಎಲ್ಲವನ್ನು ಗಮನಿಸುತ್ತಿದ್ದಾರೆ. ಅದರಿಂದ ದಯವಿಟ್ಟು, ಮತ್ತೊಂದು ಅವಕಾಶ ಕೊಡಿ.

**ಡಾ॥ ಯತೀಂದ್ರ ಎಸ್:-** ಅದು ಸದನದ ಕಲಾಪ.

**ಶ್ರೀ ಯು.ಟಿ. ಖಾದರ್:-** ಇಪ್ಪತ್ತು ಜನರು ಒಟ್ಟಿಗೆ ಮಾತನಾಡಿದರೆ, ಯಾವುದು ಕಡತಕ್ಕೆ ಹೋಗುತ್ತದೆ?

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇಲ್ಲಿಗೆ ಮುಗಿಸೋಣ. ನಾವು ಈ ತರಹ ಹತ್ತು ಹನ್ನೆರಡು ಘೋಷಣೆಗಳನ್ನು ಕೂಗಿದ್ದೇವೆ. ಹಿಂದಿ ವಿಷಯದ ಬಗ್ಗೆ ಘೋಷಣೆ ಕೂಗಿದ್ದೇವೆ. ಕೆ.ಪಿ.ಎಸ್.ಸಿ., ಬಗ್ಗೆ ಘೋಷಣೆ ಕೂಗಿದ್ದೇವೆ. ರಾಜ್ಯದ ರೈತರ ಬರ, ಬರಕ್ಕೆ ಪರಿಹಾರ ಕೊಡದೇ ಇರುವ ಸರ್ಕಾರಕ್ಕೆ ಧಿಕ್ಕಾರ ಎಂಬ ಘೋಷಣೆಯನ್ನು ಕೂಗಿದ್ದೇವೆ.

**(ಗೊಂದಲ)**

**ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಇದು question ಮಾಡಿದ ಹಾಗೆ ಆಗುತ್ತದೆಯಾ? ಸದನದಲ್ಲಿ ಸುಮ್ಮನೆ ಗಲಾಟೆ ಮಾಡಿ .....ಈ ತರಹ ಸಂದೇಶ.....

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಗಲಾಟೆ ಮಾಡಿ ಹೋಗಬೇಕೆಂಬುದಾಗಿದೆ.

**(ಗೊಂದಲ)**

**ಡಾ॥ ಯತೀಂದ್ರ ಎಸ್:-** ಎಲ್ಲರೂ ಒಟ್ಟಿಗೆ ಕೂಗಾಡಿದರೆ, ಕಡತಕ್ಕೆ ಹೋಗುವುದಕ್ಕೆ ಹೇಗೆ ಸಾಧ್ಯ ಹೇಳಿ?

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ರೈತರಿಗೆ ಬರ ಪರಿಹಾರ ಕೊಡದಿರುವ ಸರ್ಕಾರಕ್ಕೆ ಧಿಕ್ಕಾರ.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷವಿರಿ.

**(ಗೊಂದಲ)**

**ಡಾ॥ ಯತೀಂದ್ರ ಎಸ್.:-** ಮಾನ್ಯ ಸಭಾಪತಿಯವರೇ, ಯಾರಾದರೂ ಒಬ್ಬರು ನಿಂತುಕೊಂಡು ಮಾತನಾಡಿದರೆ ಕಡತಕ್ಕೆ ಹೋಗುತ್ತದೆ. ವಿರೋಧ ಪಕ್ಷದವರು ನಿಯಮಾವಳಿಗಳ ಮೂಲಕ ಸೂಚನೆ ಕೊಟ್ಟು, ನಿಯಮಾವಳಿಗಳ ಪ್ರಕಾರ ಚರ್ಚೆ ಮಾಡುವುದಕ್ಕೆ ತಯಾರಿಲ್ಲ.

**(ಗೊಂದಲ)**

**ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಚರ್ಚೆ ಮಾಡುವುದಕ್ಕ ತಯಾರಿಲ್ಲ. ಅವರು ಅಕ್ಷಮ್ಯ ಅಪರಾಧ ಮಾಡುತ್ತಿದ್ದಾರೆ. ಅವರು ಹೇಳುವುದನ್ನು ಬಿಡುವುದಕ್ಕಾಗುವುದಿಲ್ಲ. ನಾವು ಹೇಳಿದ್ದನ್ನು ಅವರು ಕೇಳುತ್ತಾರೆ. ಅವರು ಹೇಳಿದ್ದನ್ನು ನಾವು ಕೇಳುತ್ತೇವೆ. ಈಗ ನಾವು ಅವರ ಮಾತು ಏತಕ್ಕೆ ಕೇಳಬೇಕು ಹೇಳಿ. **(ಗೊಂದಲ)**

**ಡಾ॥ ಯತೀಂದ್ರ ಎಸ್.:-** ಮಾನ್ಯ ಸಭಾಪತಿಯವರೇ, ಸದನದಲ್ಲಿರುವ ದಾಖಲೆ..... ಇವರು ಮಾಡುವ ದಾಂಧಲೆ ಮಾತ್ರ ಇವರಿಗೆ ವರದಿಯಾಗಬೇಕು.

**ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು... ಜನರ ಪರವಾಗಿ ಸಮಸ್ಯೆಗಳನ್ನು ಸದನದಲ್ಲಿ ಚರ್ಚೆ ಮಾಡಿ ಎಂದರೆ, ಇಲ್ಲಿ ಇವರು ರಾಜಕೀಯ ಮಾಡುತ್ತಿದ್ದಾರೆ. We are not here to listen to the nonsense.

**ಡಾ॥ ಯತೀಂದ್ರ ಎಸ್.:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಕಾಲಹರಣ ಮಾಡುತ್ತಿದ್ದಾರೆ. ಇವರು ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಇವರು ಏನೋ ಘೋಷಣೆ ಕೂಗಿರುವುದನ್ನು ಕಡತಕ್ಕೆ ಸೇರಿಸಿ ಎಂದು ಹೇಳುತ್ತಿದ್ದಾರೆ. ಅದನ್ನು ಮಾಡಲು ಆಗುವುದಿಲ್ಲ. ಇವರು ವಿಷಯವನ್ನು ಸೂಚನೆ ಕೊಟ್ಟು ಚರ್ಚೆ ಮಾಡಲಿ. ಒಬ್ಬೊಬ್ಬರೇ ಮಾತನಾಡಲಿ ಆಗ ಕಡತಕ್ಕೆ ಹೋಗಲು ಸಾಧ್ಯವಾಗುತ್ತದೆ. **(ಗೊಂದಲ)** ಇಲ್ಲಿ ಜಗಳ ಮಾಡಿಕೊಂಡು ಚರ್ಚೆ ಮಾಡುವುದಕ್ಕೆ ಬಂದಿಲ್ಲ. **(ಗೊಂದಲ)** ಮಾನ್ಯ ಸಭಾಪತಿಯವರೇ, ಇದಕ್ಕೆ ಅವಕಾಶ ಮಾಡಿಕೊಡಬೇಡಿ. ದಯವಿಟ್ಟು, ಮುಂದಿನ ಕಲಾಪಕ್ಕೆ ಅವಕಾಶ ಮಾಡಿಕೊಡಿ ಸಭಾಪತಿಗಳೆ. ಇಲ್ಲಿ ಬಂದು ರಾಜಕೀಯ ಮಾಡುತ್ತಿದ್ದಾರೆ. ಸದನವನ್ನು ರಾಜಕೀಯವಾಗಿ ಪ್ರತಿಪಕ್ಷದವರು ಬಳಸಿಕೊಳ್ಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಯು.ಟಿ. ಖಾದರ್:-** ಜನರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕು.

**ಶ್ರೀ ಎಂ.ಬಿ. ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಜನರ ಸಮಸ್ಯೆ ಬಗ್ಗೆ ಚರ್ಚೆ ಮಾಡಲು ಸದನಕ್ಕೆ ಬಂದಿಲ್ಲ.

**ಡಾ॥ ಯತೀಂದ್ರ ಎಸ್.:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಸದನವನ್ನು ರಾಜಕೀಯಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ಅವರಿಗೆ ನಾಚಿಕೆಯಾಗಬೇಕು.

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಲು ಆರಂಭಿಸಿದರು)**

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಹಾಗೂ ವಿರೋಧ ಪಕ್ಷದ ಸದಸ್ಯರು ಪರಸ್ಪರ ಘೋಷಣೆಗಳನ್ನು ಕೂಗುತ್ತಿದ್ದರು.)**

**(ಮುಂದು)**

(838) 24.08.2026, 3.30 TCH-MD (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳೆಲ್ಲರೂ ಒಟ್ಟಿಗೆ ಸ್ವಸ್ಥಾನದಲ್ಲಿ ನಿಂತು ನಿರಂತರವಾಗಿ ಘೋಷಣೆಗಳನ್ನು ಕೂಗುತ್ತಿದ್ದರು)**

**11. ಗಮನ ಸೆಳೆಯುವ ಸೂಚನೆ**

**ಅ) ವಿಷಯ:- ಕರಾವಳಿ ಕರ್ನಾಟಕ ಭಾಗದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ಕೈಗೊಂಡಿರುವ ವಿವಿಧ ಅಭಿವೃದ್ಧಿ ಯೋಜನೆಗಳ ಬಗ್ಗೆ.**

- - - - -

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರಾವಳಿ ಕರ್ನಾಟಕ ಭಾಗದ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ಇದುವರೆಗೆ ಕೈಗೊಂಡಿರುವ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಮಾನ್ಯ ಇಂಧನ ಹಾಗೂ ಪ್ರವಾಸೋದ್ಯಮ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಡಾ: ಯತೀಂದ್ರ. ಎಸ್ (ಸಭಾನಾಯಕರು, ಇಂಧನ ಹಾಗೂ ಪ್ರವಾಸೋದ್ಯಮ ಸಚಿವರ ಪರವಾಗಿ)** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ.

**(ಉತ್ತರವನ್ನು ಲಗತ್ತಿಸಿದೆ)**

**ಡಾ: ಶರಣ ಪ್ರಕಾಶ್ ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಅವರು ಚರ್ಚೆಗೆ ಬರಲಿ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಇಂಧನ ಹಾಗೂ ಪ್ರವಾಸೋದ್ಯಮ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರು 'ಕರಾವಳಿ ಕರ್ನಾಟಕದಲ್ಲಿ ಒಂದು ನೀತಿಯನ್ನು ಮಾಡುತ್ತೇನೆ' ಎಂದು ಹೇಳಿದ್ದಾರೆ. ಈಗ ಕರಾವಳಿ ಮತ್ತು ಮಲೆನಾಡು ಕರ್ನಾಟಕ ಪ್ರವಾಸೋದ್ಯಮದ ನೀತಿಯನ್ನು ಮಾಡುತ್ತೇನೆಂದು ಹೇಳಿದ್ದಾರೆ. ಈ ನೀತಿಯನ್ನು ಅವರು ಯಾವಾಗ ಜಾರಿಗೆ ತರುತ್ತಾರೆ? ಎರಡನೆಯದಾಗಿ, ಈ ಒಂದು ಭಾಗದಲ್ಲಿ 2024-25, 2025-26ನೇ ಸಾಲಿನಲ್ಲಿಯೂ ಹಲವಾರು ಯೋಜನೆಗಳನ್ನು ಕೂಡ ಸರ್ಕಾರ ಆಯವ್ಯಯದಲ್ಲಿ ಘೋಷಣೆಯನ್ನು ಮಾಡಿತ್ತು. ಆದರೆ ಇದುವರೆಗೂ ಕೂಡ ಯಾವುದೇ ಒಂದು ಯೋಜನೆಯನ್ನು ಸರಿಯಾಗಿ ಜಾರಿಗೆ ತರಲಿಲ್ಲ. ಇದನ್ನು ತಮ್ಮ ಗಮನಕ್ಕೆ ತರಲುಬಯಸುತ್ತೇನೆ. ಇಲ್ಲಿ ಏಕೆ ಜಾರಿಗೆ ತರಲಿಲ್ಲವೆಂದರೆ, ಈ ಯೋಜನೆಗಳಿಗೆ ಕೆಲವು ಅಡೆತಡೆಗಳಿವೆ. ಕರಾವಳಿ ಭಾಗದಲ್ಲಿ C.R.Z. (Coastal Regulation Zone) ಸಮಸ್ಯೆ ಇದೆ. ಈ C.R.Z ಸಮಸ್ಯೆ ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಇದೆ. ಕರಾವಳಿ ಸುಮಾರು 320 ಕಿ.ಮೀ ಉದ್ದವಿದೆ ಎಂದು ಹೇಳಿದರು ಆ ಕರಾವಳಿ ಉದ್ದಕ್ಕೂ ಸಮುದ್ರ ತೀರದಿಂದ ಅಭಿವೃದ್ಧಿ ಮಾಡಬೇಕಾದರೆ,1 ಕಿ.ಮೀ. ಅಥವಾ 500 ಮೀಟರ್‌ಗಳಷ್ಟು ಬಿಟ್ಟುಬಿಡಬೇಕು. ಅದೇ ರೀತಿ ಅವರು ಕೇರಳ ಅಥವಾ ಗೋವಾಗೆ ಹೋದಲ್ಲಿ ಅವರು ಸಮುದ್ರದ ಬಳಿಯಲ್ಲಿಯೇ Multi-storeyed Building ಅನ್ನು ಕಟ್ಟುವುದಕ್ಕೆ ಬಿಟ್ಟಿದ್ದಾರೆ. ಬೇರೆ ಬೇರೆ ಪ್ರವಾಸೋದ್ಯಮ ಚಟುವಟಿಕೆಗಳನ್ನು ಮಾಡುವುದಕ್ಕೆ ಬಿಟ್ಟಿದ್ದಾರೆ. ಆದರೆ ನಮ್ಮಲ್ಲಿರತಕ್ಕಂಥ ದೊಡ್ಡ ಸಮಸ್ಯೆ C.R.Z. ಈ C.R.Z ಸಮಸ್ಯೆಯನ್ನು ಇತ್ಯರ್ಥ ಮಾಡಲು ಯಾವುದೇ ಕಾರ್ಯಕ್ರಮ ಹಾಕಿಕೊಂಡಿಲ್ಲ. ನಾವು ಅಭಿವೃದ್ಧಿ ಮಾಡುತ್ತೇವೆ, ನಾವು building ಕಟ್ಟುತ್ತೇವೆ, ನಾವು Five Star Hotel ಅನ್ನು ಕಟ್ಟುತ್ತೇವೆ ಎಂದು ಅನೇಕ ಜನ investors ಬರುತ್ತಾರೆ.

ಮಾನ್ಯ ಸಭಾಪತಿಯವರೇ, ತಾವು ಕೂಡ ಆ ಭಾಗದಿಂದ ಬಂದವರು. ಇಡೀ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯಲ್ಲಿ ಒಂದೇ ಒಂದು Five Star Hotel ಇದುವರೆಗೂ ಆಗಿಲ್ಲ. ಯಾರಾದರೂ ದೊಡ್ಡ ಉದ್ಯಮಿಗಳು ಬಂದಾಗ ಅವರು ಮೊದಲು ನಮ್ಮನ್ನು ಕೇಳುವುದು ಏನೆಂದರೆ, 'ನಮಗೆ stay ಮಾಡುವುದಕ್ಕೆ ಏನು ಅವಕಾಶಗಳಿವೆ' ಎಂದು ಕೇಳುತ್ತಾರೆ. ನಮ್ಮಲ್ಲಿ ಅಂತರರಾಷ್ಟ್ರೀಯ ಮಟ್ಟದ Shuttle Badminton Court ಇದೆ. ಅಂತರ ರಾಷ್ಟ್ರೀಯ ಮಟ್ಟದ tournment ನಡೆದಾಗ ಅಲ್ಲಿಗೆ ಬರತಕ್ಕಂಥ Judges and Referees ಗಳಿಗೆ ಅವರ standard ಗೆ ತಕ್ಕಂತೆ ಉಳಿದುಕೊಳ್ಳುವುದಕ್ಕೆ ಒಂದೇ ಒಂದು ಹೋಟೆಲ್ ಇದುವರೆಗೂ ನಮ್ಮ ಜಿಲ್ಲೆಯಲ್ಲಿ ಇಲ್ಲ. ನಾನು ಕೂಡ ಅನೇಕ ಬಾರಿ ಮಾನ್ಯ ಶಾಸಕರನ್ನೂ ಕೇಳಿದ್ದೇನೆ. ನಮ್ಮಲ್ಲಿ ಅನೇಕ ಜಾಗಗಳಿವೆ, ಸಾಕಷ್ಟು ಸಂಪನ್ಮೂಲವುಳ್ಳ ಭೂಮಿ ಇದೆ. ಅದನ್ನು ಗುರುತು ಮಾಡಲಿ. ನೀವು P.P.P. (Public-Private

Partnership) model ನಲ್ಲಿ ಕಟ್ಟಬೇಕೆಂದು ನಾನು ಹೇಳುವುದಿಲ್ಲ. ಸರ್ಕಾರ ಕಟ್ಟತಕ್ಕಂಥ ಕೆಲಸ ಮಾಡುವುದು ಬೇಡ. ಅದನ್ನು P.P.P. (Public-Private Partnership) model ನಲ್ಲಿ ಬೇರೆ ಯಾರು Investorsಗಳು ಇದ್ದಾರೋ ಅವರಿಗೆ ಕರೆದು ಕೊಟ್ಟರೆ, ಅವರು ಕಟ್ಟಡ ಕಟ್ಟುವುದಕ್ಕೆ ತಯಾರಿದ್ದಾರೆ, ಅವರು invest ಮಾಡುವುದಕ್ಕೆ ತಯಾರಿದ್ದಾರೆ. ಇದರಿಂದ ಜನಕ್ಕೆ ಉದ್ಯೋಗಗಳು ದೊರೆಯುತ್ತವೆ. ನಮ್ಮ ಕರಾವಳಿ ಕರ್ನಾಟಕದ ಅಭಿವೃದ್ಧಿಯಾಗುತ್ತದೆ. ಅದನ್ನು ಮಾಡಿ ಎಂದು ಹೇಳಿದರೆ, ಇದುವರೆಗೂ ಒಂದೇ ಒಂದು ಯೋಜನೆಯನ್ನು ಜಾರಿಗೆ ತರಲಿಲ್ಲ. ಆದರೆ ಈಗ ನಾವು ಅಲ್ಲಿಗೆ ವಿಮಾನ ತರುತ್ತೇವೆ, ಎಲಿಕಾಪ್ಟರ್ ತರುತ್ತೇವೆ ಮತ್ತು ನಾವು ಅದನ್ನು ತರುತ್ತೇವೆ ಎಂದು ಹೇಳುವುದು. That is not the point. The point is ನೀವು ಕರಾವಳಿ ಅಭಿವೃದ್ಧಿಗೆ Corridor Road ಗಳನ್ನು ಮಾಡಿಲ್ಲ, ರಸ್ತೆಗಳ ಅಭಿವೃದ್ಧಿ ಆಗಲಿಲ್ಲ, Approach Roadಗಳು ಅಭಿವೃದ್ಧಿಯಾಗಲಿಲ್ಲ. ಇಂಥದ್ದೆಲ್ಲಾ ಅನೇಕ ಸಮಸ್ಯೆಗಳಿವೆ. ಹಾಗಾಗಿ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಯಾವುದಾದರೂ ಪರಿಹಾರವನ್ನು ಕಂಡುಹಿಡಿಯಲು ಒಂದು Single Window Agencyಯನ್ನು ಮಾಡಬೇಕು. ಎಲ್ಲಾ ಇಲಾಖೆಗಳನ್ನೂ ಒಟ್ಟಾಗಿ ಸೇರಿಸಿ, ಇಲಾಖೆಗಳಲ್ಲಿ ಏನೇನು ಸಮಸ್ಯೆ ಇದೆಯೋ ಅದನ್ನು ಪರಿಹರಿಸಬೇಕಾಗುತ್ತದೆ. ಅಲ್ಲಿ port ನಗರ ಸಮಸ್ಯೆ ಇದೆ, ಅಲ್ಲಿ ಇಂಡಸ್ಟ್ರಿಯವರ ಸಮಸ್ಯೆ ಇದೆ, ಅಲ್ಲಿ ಮೀನುಗಾರಿಕೆ ನಿಗಮದ ಸಮಸ್ಯೆ ಇದೆ. ಆ ಎಲ್ಲಾ ಇಲಾಖೆಗಳನ್ನೂ ಒಟ್ಟಿಗೆ ಸೇರಿಸಿ ಒಂದು Single Window Agency ಮಾಡಿದರೆ ಖಂಡಿತವಾಗಿಯು ಕೂಡ ಆ ಭಾಗದ ಅಭಿವೃದ್ಧಿಯಾಗುತ್ತದೆ. ನಾವು P.P.P. (Public-Private Partnership) model ನಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ಕರಾವಳಿ ಮತ್ತು ಮಲೆನಾಡು ಕರ್ನಾಟಕ ಭಾಗದಲ್ಲಿ ಪ್ರವಾಸೋದ್ಯಮ ನೀತಿಯನ್ನು ಮಾಡುತ್ತೇನೆಂದು ಹೇಳಿದ್ದಾರೆ. ಅದು ಏನು ನೀತಿ? ಅದನ್ನು ಯಾವಾಗ ಜಾರಿಗೆ ತರುತ್ತಾರೆ? ಸರ್ಕಾರದ ಉದ್ದೇಶ ಏನಿದೆ? ಯಾವ್ಯಾವ ರೀತಿಯ ಪ್ರವಾಸೋದ್ಯಮಕ್ಕೆ ಬೇಕಾದಂತಹ ಚಟುವಟಿಕೆಗಳನ್ನು ಮಾಡುತ್ತಾರೆ. ನಮ್ಮಲ್ಲಿ ದೊಡ್ಡ ದೊಡ್ಡ backwaters ಗಳಿವೆ. ಅದು ಕೂಡ improvement ಆಗಲಿಲ್ಲ. ಕೇರಳಕ್ಕೆ compare ಮಾಡಿದರೆ, ಗೋವಾಕ್ಕೆ compare ಮಾಡಿದರೆ ನಮ್ಮಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿ ಶೂನ್ಯ ಆಗಿದೆ. ಕೇವಲ ಮಾತನಾಡಿದ್ದೇ ಹೊರತು, ಯಾವುದೇ ಯೋಜನೆಗಳು ಜಾರಿಯಾಗಲಿಲ್ಲ.

ಮಾನ್ಯ ಸಭಾನಾಯಕರೇ, ತಾವು ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಇಂಧನ ಮತ್ತು ಪ್ರವಾಸೋದ್ಯಮ ಸಚಿವರಾದ ಶ್ರೀ ಕೆ.ಜೆ.ಜಾರ್ಜ್‌ರವರು ಇತ್ತೀಚೆಗೆ ಅಲ್ಲಿ ಒಂದು meeting ಮಾಡಿದ್ದಾರೆ. ಆ meeting ಗೆ ಎಲ್ಲಾ ಮಾನ್ಯ ಶಾಸಕರನ್ನೂ ಕರೆದಿದ್ದರು. ಸನ್ಮಾನ್ಯ ಮುಖ್ಯಮಂತ್ರಿಯರೇ ಮಂಗಳೂರಿಗೆ ಬಂದಿದ್ದರು. ಅಂದಿನ ಉಪ ಮುಖ್ಯಮಂತ್ರಿಗಳು ಕೂಡ ಮಂಗಳೂರಿಗೆ ಬಂದಿದ್ದರು. ಆ ಸಭೆಗೆ ಎಲ್ಲಾ Businessmen ಅನ್ನು ಕರೆದಿದ್ದರು. ಆದರೆ ಅದರಲ್ಲಿ ಯಾವುದೇ ಪ್ರಗತಿಯ ಸಾಧನೆ ಆಗಿಲ್ಲ ಎಂದು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದರ ಬಗ್ಗೆ ಮಾನ್ಯ ಸಚಿವರಿಂದ ಉತ್ತರವನ್ನು ಬಯಸುತ್ತೇನೆ.

**ಶ್ರೀ ಪಿ.ವಿ. ಮೋಹನ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, **(ಗೊಂದಲ)** ಕರಾವಳಿ ಪ್ರವಾಸೋದ್ಯಮದ ಬಗ್ಗೆ ಸರ್ಕಾರಗಳು ಬಹಳ serious ಆಗಿ ಚಿಂತನೆಯನ್ನು ಮಾಡಿಲ್ಲ. ನೆರೆ ರಾಜ್ಯಗಳಾದ ಗೋವಾ ಮತ್ತು ಕೇರಳದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಹೊಂದಿದೆ. ಆದರೆ ನಮ್ಮ ಭಾಗದಲ್ಲಿ ಗಣನೀಯವಾಗಿ ಕುಸಿದಿದೆ. ಇದು ಅಲ್ಲದೆ ಇವತ್ತಿನ ದಿವಸ ಕರಾವಳಿ ಭಾಗದ ಪ್ರವಾಸೋದ್ಯಮ ಇಲಾಖೆಯಲ್ಲಿ ಪೂರ್ಣ ಪ್ರಮಾಣದ ಸಿಬ್ಬಂದಿಗಳು ಕೂಡ ಇಲ್ಲ. ಮಾನ್ಯ ಸಚಿವರು, ಸರ್ಕಾರವು ರಾಜ್ಯದ ಸಮಗ್ರ 320 ಕಿಲೋ ಮೀಟರ್ ಉದ್ದದ ಕರಾವಳಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆಯೆಂದು ಹೇಳಿದರು. ಅಲ್ಲಿ ನಿಜವಾಗಿಯು ಜನವರಿ 26 ರಂದು ಅಲ್ಲಿಯ ಪ್ರವಾಸೋದ್ಯಮಕ್ಕೆ ರೂ.1,260 ಕೋಟಿಗಳಷ್ಟು ಅನುದಾನ ಬಿಡುಗಡೆ ಮಾಡುವಂತಹ ದೊಡ್ಡ ಘೋಷಣೆ ನಡೆಯಿತು. ಅದರಲ್ಲಿ ಸುಮಾರು 31 ಪ್ರಾಜೆಕ್ಟ್ ಬಗ್ಗೆ ಘೋಷಣೆ ಮಾಡಲಾಯಿತು. ಈಗ ಅದರ status ಏನಿದೆ? 2023ರಲ್ಲಿಯೂ ಕೂಡ ಅದೇ ರೀತಿ ಸುಮಾರು ರೂ.720 ಕೋಟಿಗಳಷ್ಟು ಅನುದಾನವನ್ನು ಘೋಷಿಸಲಾಯಿತು. ಆದರೆ ಅಲ್ಲಿ ಇದುವರೆಗೂ ಯಾವುದೇ ರೀತಿಯಾದ ಕೆಲಸ ಆಗಿಲ್ಲ. ಆದ್ದರಿಂದ ಅಲ್ಲಿಗೆ ಏನಾದರೂ master plan ಮಾಡಿದ್ದಾರೆಯೇ? ಅಲ್ಲಿ Integrated Tourism Circuit ಮಾಡುವಂತಹ ಏನಾದರೂ ಯೋಜನೆಗಳ ಬಗ್ಗೆ ಸ್ಪಷ್ಟತೆ ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ. ಅಲ್ಲಿ ಕೇವಲ beachesಗಳಲ್ಲದೇ, ದೇವಸ್ಥಾನಗಳವೆ, ಎಲ್ಲಾ ರೀತಿಯಲ್ಲಿ Integrated Tourism Circuit ಮಾಡಿದರೆ ಸಾಕಷ್ಟು economic activities ಆಗುತ್ತದೆ. ಜನಕ್ಕೆ ಸಾಕಷ್ಟು ಉದ್ಯೋಗ ಸೃಷ್ಟಿಯಾಗುತ್ತದೆ. ಆದ್ದರಿಂದ ಮಾನ್ಯ ಸಚಿವರು ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕು. ಅಮೇಲೆ ಎಲ್ಲಾ ಇಲಾಖೆಯವರನ್ನೂ integrate ಮಾಡಿ ಇದರ ಬಗ್ಗೆ ಗಮನಹರಿಸಿ ಕರಾವಳಿ ಜಿಲ್ಲೆಗೆ ತಾವು ಒಂದು master plan ಮಾಡಬೇಕೆಂದು ಈ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತಿದ್ದೇನೆ.

**ಡಾ: ಯತೀಂದ್ರ. ಎಸ್:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಶಾಸಕರಾದ ಮಾನ್ಯ ಐವನ್ ಡಿ'ಸೋಜಾರವರು ಮಾತನಾಡುತ್ತಾ, ಹಲವು ಆಯವ್ಯಯದಲ್ಲಿಯೂ ಕೂಡ ನಾವು ಕರಾವಳಿಯ ಪ್ರವಾಸೋದ್ಯಮವನ್ನು ಹಬ್ ಆಗಿ ಅಭಿವೃದ್ಧಿ ಮಾಡುತ್ತೇವೆ. ಆದರೆ ಆ ನಿಟ್ಟಿನಲ್ಲಿ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ.

(ಮುಂದು)

(839)24.8.2026/3.40/ಎಂ.ಎಂ-ಎಂ.ಡಿ (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ಸದನದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಸ್ವಸ್ಥಾನಗಳಂದ ನಿರಂತರವಾಗಿ ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

**ಡಾ॥ ಯತೀಂದ್ರ. ಎಸ್ (ಪ್ರವಾಸೋದ್ಯಮ ಸಚಿವರ ಪರವಾಗಿ) (ಮುಂದು):-**

ಆದರೆ ಆ ನಿಟ್ಟಿನಲ್ಲಿ ಇನ್ನೂ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ. ಆದರೆ ಅವರೇ ಮಾತನಾಡುತ್ತಾ ಹೇಳಿದರು, ಈಗ ಬಂದಿರುವಂತಹ ಪ್ರವಾಸೋದ್ಯಮ ಸಚಿವರು ನೂತನ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಒಂದು ಸಭೆಯನ್ನು ಮಾಡಿದ್ದಾರೆ. ಹಿಂದಿನ ಮುಖ್ಯಮಂತ್ರಿಗಳ ಸಮ್ಮುಖದಲ್ಲಿಯೂ ಒಂದು ಸಭೆ ಆಗಿದೆ. ಹಾಗಾಗಿ ಈಗ things have started moving. ಅವರು ಹೇಳಿದ ಹಾಗೆ ಆದಷ್ಟು ಬೇಗ ಕ್ರಮಗಳನ್ನು ವಹಿಸಿ, ಕರಾವಳಿ ಪ್ರದೇಶದಲ್ಲಿ ಪ್ರವಾಸೋದ್ಯಮವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವುದಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಮತ್ತು ಮಾನ್ಯ ಸದಸ್ಯರು ಒಂದು Single Window Agency ಮಾಡಬೇಕೆಂದು ಹೇಳುತ್ತಿದ್ದರು. ಎಲ್ಲಾ ಇಲಾಖೆಗಳಂದ ಏನೇನು ಪರವಾನಗಿಗಳನ್ನು ಪಡೆದುಕೊಳ್ಳಬೇಕು, ಯಾವ ಇಲಾಖೆಗಳಲ್ಲಿ ಏನೇನು ಸಮಸ್ಯೆಗಳಿರುತ್ತವೆ ಎಂಬುದನ್ನು ತಿಳಿದುಕೊಂಡು ಒಂದೇ ವಿಂಡೋನಲ್ಲಿ ಅದನ್ನೆಲ್ಲಾ ಬಗೆಹರಿಸಿಕೊಡಬೇಕೆಂದು ಅವರು ಕೇಳಿಕೊಂಡಿದ್ದಾರೆ. ಖಂಡಿತವಾಗಿಯೂ ನಾನು ಇದನ್ನು ಪ್ರವಾಸೋದ್ಯಮ ಸಚಿವರ ಗಮನಕ್ಕೆ ತಂದು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಅವರು ಕೊಟ್ಟಂತಹ ಸಲಹೆಗಳನ್ನು ಅಳವಡಿಸಿಕೊಳ್ಳುವುದಕ್ಕೆ ಹೇಳುತ್ತೇನೆ. ಹಾಗೂ ಮಾನ್ಯ ಸದಸ್ಯರಾದ ಪಿ.ವಿ. ಮೋಹನ್‌ರವರು ಮಾತನಾಡುತ್ತಾ ಇದಕ್ಕೆ ಒಂದು ಮಾಸ್ಟರ್ ಪ್ಲ್ಯಾನ್ ಮಾಡಬೇಕೆಂದು ಹೇಳಿದರು. ಈಗಾಗಲೇ 2026-27ರ ಬಜೆಟ್ ಭಾಷಣದಲ್ಲಿ ಕರ್ನಾಟಕ ಕರಾವಳಿ ಜಿಲ್ಲೆಗಳ ಪ್ರವಾಸೋದ್ಯಮವನ್ನು ಸದುಪಯೋಗಪಡಿಸಿಕೊಳ್ಳಲು ಸಮಗ್ರ ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಯನ್ನು ರೂಪಿಸಲಾಗುವುದು ಎಂದು ಹೇಳಿದ್ದಾರೆ. ಹಾಗಾಗಿ ಈ ಯೋಜನೆಯನ್ನು ರೂಪಿಸುತ್ತಾರೆ. ಈಗಾಗಲೇ ಅಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕೆಂದು M/s. **IPE Global Limited** ಅವರನ್ನು P.M.U. (Project Management Unit) ಆಗಿ ಆಯ್ಕೆ ಮಾಡಿಕೊಂಡಿದ್ದಾರೆ. ಅದೇ ರೀತಿ ಪಿ.ಪಿ.ಪಿ ಮಾದರಿಯಲ್ಲಿ ಅಭಿವೃದ್ಧಿ ಮಾಡಬೇಕೆಂದು M/s Ernst & Young LLP (E&Y) ಸಂಸ್ಥೆಯನ್ನು ಕೂಡ Transaction Advisor ಆಗಿ ಮಾಡಿಕೊಂಡಿದ್ದಾರೆ. ಪ್ರವಾಸೋದ್ಯಮವನ್ನು ಬೆಳೆಸುವಂತಹ ನಿಟ್ಟಿನಲ್ಲಿ ಯೋಜನೆಗಳು ಆದಷ್ಟು ಬೇಗ ರೂಪಿತವಾಗುತ್ತವೆ ಮತ್ತು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಎಂದು ಸಚಿವರ ಪರವಾಗಿ ಇವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಕರಾವಳಿ ಪ್ರವಾಸೋದ್ಯಮಕ್ಕೆ ಅಧಿಕಾರಿಗಳ ಬರ, ಕರಾವಳಿ ಪ್ರವಾಸೋದ್ಯಮ ಉಡುಪಿ ಮತ್ತು ಮಂಗಳೂರಿನಲ್ಲಿ Director of Tourism ಇದೆ. ಎರಡೂ ಕಡೆ permanent Directors ಇಲ್ಲ, ಒಬ್ಬನೇ ಒಬ್ಬ ಅಧಿಕಾರಿಯೂ ಪ್ರವಾಸೋದ್ಯಮ ಇಲಾಖೆಯಲ್ಲಿಲ್ಲ. ಡೈರೆಕ್ಟರ್‌ಗಳು ಪ್ರಭಾರದಲ್ಲಿದ್ದಾರೆ. ಉಡುಪಿ, ಮಂಗಳೂರು ಮತ್ತು North Canara ದಲ್ಲಿಯೂ ಪ್ರಭಾರದಲ್ಲಿದ್ದಾರೆ. ಇಲಾಖೆಯನ್ನು ಈ ರೀತಿ ಇಟ್ಟುಕೊಂಡು ಪ್ರವಾಸೋದ್ಯಮವನ್ನು ಏನು ಅಭಿವೃದ್ಧಿಪಡಿಸುತ್ತಾರೆ? ಇದಕ್ಕೇನಾದರೂ ಅರ್ಥ ಇದೆಯೇ?

**ಡಾ॥ ಯತೀಂದ್ರ. ಎಸ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಗಮನ ಸೆಳೆಯುವ ಸೂಚನೆಯಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ಒಂದೇ ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಸಚಿವರು ಉತ್ತರ ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಸಿಬ್ಬಂದಿಗಳ ಕೊರತೆ ಬಗ್ಗೆ ಪ್ರಶ್ನೆ ಕೇಳಿದ್ದಾರೆ, ಅದನ್ನು ಪ್ರವಾಸೋದ್ಯಮ ಸಚಿವರ ಗಮನಕ್ಕೆ ತಂದು, ಉತ್ತರ ಕೊಡಲಾಗುವುದು.

## 12. ವರದಿಯನ್ನೊಪ್ಪಿಸುವುದು

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಸದಸ್ಯನಾದ ನಾನು ಸಮಿತಿಯ ಸದಸ್ಯರಾದ ಶ್ರೀ ಸಿ.ಟಿ. ರವಿಯವರ ಪರವಾಗಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಕಂದಾಯ ಇಲಾಖೆಗೆ ಸಂಬಂಧಿಸಿದ 2018ರ ವರದಿ ಸಂಖ್ಯೆ:5, ''ಸರ್ಕಾರಿ ಭೂಮಿ ಮಂಜೂರಾತಿ, ಗುತ್ತಿಗೆ, ಒತ್ತುವರಿಗಳ ತೆರವುಗೊಳಿಸುವಿಕೆ ಹಾಗೂ ಅಕ್ರಮ ಹಿಡುವಳಿಗಳನ್ನು ಸಕ್ರಮಗೊಳಿಸುವಿಕೆಗಳ ಬಗ್ಗೆ'' ಮತ್ತು 2013-14ನೇ ಸಾಲಿನ ವರದಿಯಲ್ಲಿನ ಕಂಡಿಕೆಯ ಕುರಿತು ಸಮಿತಿಯ ಶಿಫಾರಸ್ಸುಗಳನ್ನೊಳಗೊಂಡ ಎರಡನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಯನ್ನೊಪ್ಪಿಸಲಾಯಿತು.

**ಸಭಾಪತಿಯವರು:-** ಈಗ ನಿಯಮ 330ರ ಮೇರೆಗೆ ಚರ್ಚೆಯನ್ನು ತೆಗೆದುಕೊಳ್ಳಲಾಗುವುದು. ಮಾನ್ಯ ಬಿ.ಜಿ. ಪಾಟೀಲ್‌ರವರೆ ಪ್ರಸ್ತಾಪ ಮಾಡಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಬಿ.ಜಿ. ಪಾಟೀಲರು ಸದನದಲ್ಲಿ ಹಾಜರಿರಲಿಲ್ಲ)**

**ಸಭಾಪತಿಯವರು:-** ಡಾ: ಎಂ.ಜಿ. ಮುಳೆ ಹಾಗೂ ಶ್ರೀಮತಿ ಬಲ್ಕೀಸ್ ಬಾನುರವರು ವಿಷಯವನ್ನು ಪ್ರಸ್ತಾಪಿಸುವುದು.

## 13. ನಿಯಮ 330ರ ಮೇರೆಗೆ ಚರ್ಚೆ

**ಅ) ವಿಷಯ:- ಬೀದರ್ ಜಿಲ್ಲೆ ಸೇರಿದಂತೆ ಗಡಿ ಭಾಗದ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಮರಾಠಿ ಮಾಧ್ಯಮದ ಭಾಷಿಕ ಶಿಕ್ಷಕರಿಗೆ ಅವಕಾಶ ನೀಡುವ ಕುರಿತು.**

- - - -

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ದಿನಾಂಕ 10.8.2026ರಂದು ಹೊರಡಿಸಿರುವ ಶಿಕ್ಷಕರ ನೇಮಕಾತಿ ಅಧಿಸೂಚನೆಯಲ್ಲಿ ಉರ್ದು ಮಾಧ್ಯಮದ ಭಾಷಾ ಶಿಕ್ಷಕರು, ಗಣಿತ, ವಿಜ್ಞಾನ, ಸಮಾಜ ವಿಷಯಗಳ ಶಿಕ್ಷಕರನ್ನು ಹೊರತುಪಡಿಸಿರುವ ಕುರಿತು ಪ್ರಸ್ತಾಪಿಸಿ ಮಾನ್ಯ ಸಚಿವರಿಂದ ಉತ್ತರವನ್ನು ಬಯಸುತ್ತೇನೆ.

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ನಿಯಮ 330ರಡಿ ಇರುವ ಮೂರನೇ ಮತ್ತು ನಾಲ್ಕನೇ ವಿಷಯಗಳಿಗೆ ಸೇರಿ ಉತ್ತರ ಕೊಡುತ್ತೇನೆ. ತಮಗೆ ಗೊತ್ತಿರುವಂತೆ ಮಾನ್ಯ ಸದಸ್ಯರುಗಳಾದ ಶ್ರೀಮತಿ ಬಲ್ಕೀಸ್ ಬಾನು, ಡಾ: ಎಂ.ಜಿ. ಮುಳೆ ಹಾಗೂ ಇತರ ಸದಸ್ಯರುಗಳ ಜೊತೆ ತಮ್ಮ ಸಮ್ಮುಖದಲ್ಲಿ ಒಂದು ಸಭೆಯನ್ನು ಮಾಡಿ, ಒಂದು ತೀರ್ಮಾನವನ್ನು ಕೂಡ ತೆಗೆದುಕೊಂಡಿದ್ದೆವು. ಈಗಾಗಲೇ ಮೊನ್ನೆ ಶುಕ್ರವಾರದಂದು ಒಂದು ಪ್ರಪೋಸಲ್ ಅನ್ನು ಸರ್ಕಾರಕ್ಕೆ finance clearance ಗೆ ಕಳುಹಿಸಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಮೌಖಿಕವಾಗಿ ಮಾಡೋಣ ಎಂದು ಹೇಳಿದ್ದಾರೆ. ಅದು ಬಂದ ತಕ್ಷಣ ಆದಷ್ಟು ಬೇಗ ನಾವು ತೀರ್ಮಾನ ಮಾಡುತ್ತೇವೆ. ಮರಾಠಿ ಮತ್ತು ಉರ್ದು ಮಾಧ್ಯಮದ ಶಿಕ್ಷಕರನ್ನು ಇಲಾಖೆ ವತಿಯಿಂದ ತೆಗೆದುಕೊಂಡಿರಲಿಲ್ಲ. ಅವೆರಡು ನೇಮಕಾತಿ ಕೂಡ ಆಗುತ್ತದೆ ಜೊತೆಗೆ 1,200 ಬೇರೆ ಬೇರೆ ವಿಷಯಗಳ ಶಿಕ್ಷಕರ ನೇಮಕಾತಿಗೆ call for ಮಾಡಬೇಕೆಂದು ಆರ್ಥಿಕ ಇಲಾಖೆಗೆ ಕಳುಹಿಸಿದ್ದೇವೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ಮೀಟಿಂಗ್ ಮಾಡಿದ ನಂತರ ಆರ್ಥಿಕ ಇಲಾಖೆಗೆ ಪ್ರಪೋಸಲ್ ಕಳುಹಿಸಲಾಯಿತು. ಆಮೇಲೆ ಈ ವಿಚಾರ ಏನಾಯಿತು?

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಮುಖ್ಯಮಂತ್ರಿಗಳು ಕೂಡ informal ಆಗಿ ನಾವು ಕ್ಯಾಬಿನೆಟ್‌ನಲ್ಲು ಕೂಡ ಚರ್ಚೆ ಮಾಡಿದ್ದೇವೆ. ಆರ್ಥಿಕ ಇಲಾಖೆಗೆ ಕಳುಹಿಸಿದ್ದೇವೆ ಅದು ನಂತರ ಕ್ಯಾಬಿನೆಟ್‌ಗೆ ಬರುತ್ತದೆ. ಕ್ಯಾಬಿನೆಟ್‌ಗೆ ಬಂದ ಮೇಲೆ ಮುಂದಿನ ಪ್ರಕ್ರಿಯೆ ಮಾಡುತ್ತೇವೆ. ನಾನು ಆದಷ್ಟು ಬೇಗ ಇದನ್ನು ಮಾಡಿಕೊಡುವ ವಿಶ್ವಾಸವನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ಸಮಸ್ಯೆ. ಇಡೀ ರಾಜ್ಯಾದ್ಯಂತ ಅಲ್ಪಸಂಖ್ಯಾತರ ಭಾಷಾ ಶಿಕ್ಷಕರ ನೇಮಕಾತಿ ಆಗಿಲ್ಲ ಎಂದು ಈಗಾಗಲೇ ಎಲ್ಲರೂ ಪ್ರತಿಭಟನೆ ಮಾಡುತ್ತಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಬಯಸುವುದೇನೆಂದರೆ, ಈಗಾಗಲೇ ಸರ್ಕಾರದಲ್ಲಿ ಅವರದ್ದೇ ಇಲಾಖೆಯಲ್ಲಿ ಹೊರಡಿಸಿರುವ ಶಿಕ್ಷಕರ ಕೊರತೆಯ ಒಂದು ಪಟ್ಟಿ ಕೂಡ ನನ್ನ ಹತ್ತಿರವಿದೆ. ಇದರಲ್ಲಿ ಅವರ

ಪ್ರಕಾರ ಉರ್ದು ಶಾಲೆಗಳಲ್ಲಿ ಕೇವಲ 1,177 eligible vacancies ಇದೆಯೆಂದು ಅವರೇ ಹೇಳುತ್ತಾರೆ. ಇದಲ್ಲದೆ, ತಮಿಳು, ತೆಲುಗು ಮತ್ತು ಮರಾಠಿ ಶಾಲೆಗಳ vacancies ಗಳ ಬಗ್ಗೆ ಅವರೇ ಒಂದು ಪ್ರಕಟಣೆ ಮಾಡಿದ್ದಾರೆ. ಇವರು ಯಾವ ರೀತಿ ಮಾಡಿದ್ದಾರೆಂದರೆ, ಕೇಂದ್ರ ಸರ್ಕಾರದಿಂದ ಪಿ.ಎಂ.ಶ್ರೀ ಶಾಲೆಗಳಿಗೆ ಏನು ಮಾನದಂಡಗಳನ್ನು ಮಾಡಿದ್ದಾರೆ, ಅದೇ ಮಾನದಂಡವನ್ನು ಹೊರಡಿಸಿ, ಅದರ ಅನುಸಾರ ಈ vacancies declare ಮಾಡಿದ್ದಾರೆ. ನಾನು ಕೇಳುವುದೇನೆಂದರೆ, ಸರ್ಕಾರ ಈಗಾಗಲೇ 15,000 ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ಶಿಕ್ಷಕರನ್ನು ನೇಮಕಾತಿ ಮಾಡಬೇಕೆಂದು ಅಧಿಸೂಚನೆ ಹೊರಡಿಸಿದ್ದಾರೆ. ಅಭ್ಯರ್ಥಿಗಳು ಅರ್ಜಿಗಳನ್ನು ಹಾಕುತ್ತಿದ್ದಾರೆ. ಈ ಇಲಾಖೆಯ ಅಧಿಕಾರಿಗಳು ಶಿಕ್ಷಣವನ್ನು ಯಾರಿಗೆ ಕೊಡುತ್ತಿದ್ದಾರೆ? ಶಿಕ್ಷಣ ಒಂದು ಮೂಲಭೂತ ಹಕ್ಕು. ಸಚಿವರಿಗೆ ಸರಿಯಾದ ರೀತಿಯಲ್ಲಿ ಮಾಹಿತಿಯನ್ನು ಏಕೆ ಕೊಡುವುದಿಲ್ಲ?

ಮಾನ್ಯ ಸಭಾಪತಿಯವರೇ, ನಿಮ್ಮ ಮೂಲಕ ಆಗ್ರಹ ಮಾಡುತ್ತಿದ್ದೇನೆ, ಈಗ ಈ ಪಟ್ಟಿಯನ್ನು ತಯಾರು ಮಾಡಿರುವಂತಹ ಅಧಿಕಾರಿಯ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. It is a fundamental right of the children to take education. Who has to give education? ಸರ್ಕಾರ ಕೊಡಬೇಕು. ಆ ನಿಟ್ಟಿನಲ್ಲಿ ಉರ್ದು, ಮರಾಠಿ, ತಮಿಳು ಮತ್ತು ತೆಲುಗು ಓದುವ ಮಕ್ಕಳು ಶಿಕ್ಷಣದಿಂದ ವಂಚಿತರಾಗಿ drop out ಆಗುತ್ತಿದ್ದಾರೆ. ನೀವು ಇವರನ್ನೇ ಮೊದಲನೇ ಪಟ್ಟಿಯಲ್ಲಿ ಸೇರಿಸಬೇಕಾಗಿದೆಯೇ ವಿನಃ ಬೇರೆಯವರನ್ನಲ್ಲ. ಶ್ರೀಮಂತರ ಮಕ್ಕಳು ಖಾಸಗಿ ಶಾಲೆಗಳಲ್ಲಿ ಓದುತ್ತಿದ್ದಾರೆ. ಈ ತರಹ ಮಾಡುವ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ನಾನು ಈ ಸದನದಲ್ಲಿ ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಶಿಕ್ಷಕರನ್ನು ಭರ್ತಿ ಮಾಡುವ ಮುಂಚೆ ಅತಿಥಿ ಶಿಕ್ಷಕರ ಬಗ್ಗೆ ಇಡೀ ರಾಜ್ಯದಲ್ಲಿ ಐತಿಹಾಸಿಕ ತೀರ್ಮಾನವನ್ನು ತೆಗೆದುಕೊಂಡು, ತಕ್ಷಣವೇ ಅತಿಥಿ ಶಿಕ್ಷಕರನ್ನು ಹಾಕಿದ್ದಾರೆ. ಇಂತಹ ಆಲೋಚನೆ ಅವರಿಗಿರಬೇಕಾದರೆ ತಮ್ಮ ಆಲೋಚನೆಗೆ ತಕ್ಕಂತೆ ಅಧಿಕಾರಿಗಳು ಏಕೆ ಕೆಲಸ ಮಾಡುತ್ತಿಲ್ಲ? ನಾವು ಅವರಿಗೆ ಏನು ಉತ್ತರ ಕೊಡಬೇಕು? ಅಲ್ಲಿರುವಂತಹ ಅಲ್ಪಸಂಖ್ಯಾತರಿಗೆ ಏನು ಹೇಳಬೇಕು? ಹಿಂದಿ ಮಾಧ್ಯಮದ ತಂದೆ-ತಾಯಿ, ಮಕ್ಕಳಿಗೆ ಏನು ಉತ್ತರ ಕೊಡಬೇಕು? ಬೆಂಗಳೂರಿನಲ್ಲಿ ತಮಿಳು ಶಾಲೆಗಳು ಬಹಳಷ್ಟಿವೆ. ಬೆರಳೆಣಿಕೆಯಷ್ಟು ತೆಲುಗು ಶಾಲೆಗಳಿವೆ. ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಹೇಳುತ್ತಿದ್ದಾರೆ. Hindi, English and Urdu languages are also there. ಈ ಮಕ್ಕಳ ಮೇಲೆ ಏನಾದರೂ ಅಧಿಕಾರಿಗಳ ಸಂಚು ಇದೆಯೇ? ಈ ಶಾಲೆಗಳನ್ನು ಅಥವಾ ಈ ಮಾಧ್ಯಮವನ್ನು ತೆಗೆಯಬೇಕೆಂದು ಏನಾದರೂ ಸಂಚು ಮಾಡುತ್ತಿದ್ದಾರಾ? ನಾನು ತಮ್ಮ ಮೂಲಕ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ ಮಾನ್ಯ ಮಂತ್ರಿಗಳು ನಾವು ಆರ್ಥಿಕ ಇಲಾಖೆಗೆ ಕಳುಹಿಸಿದ್ದೇವೆ, ಇದನ್ನು ಮಾಡುತ್ತೇವೆಂದು ಹೇಳುತ್ತಾರೆ. ಯಾವಾಗ ಮಾಡುತ್ತಾರೆ? ಎಷ್ಟು ದಿನದಲ್ಲಿ ಮಾಡುತ್ತಾರೆ? ಎಷ್ಟು ಶಿಕ್ಷಕರನ್ನು ತೆಗೆದುಕೊಳ್ಳುತ್ತಾರೆ? ಈಗಾಗಲೇ ಘೋಷಣೆ ಮಾಡಿರುವ ಪ್ರಕಾರ 1,173 ಉರ್ದು ಮಾಧ್ಯಮದ ಶಿಕ್ಷಕರ ಹುದ್ದೆಗಳು ಖಾಲಿ ಹುದ್ದೆಗಳಿವೆ. 800 ಮರಾಠಿ ಶಿಕ್ಷಕರು, 200 ತಮಿಳು ಶಿಕ್ಷಕರ ಖಾಲಿ ಹುದ್ದೆಗಳಿವೆ. ಇದು

ಇವರು ಇಲಾಖೆಯಿಂದ ಮಾಡಿರುವ ಘೋಷಣೆಯೇ? ತೆಲುಗು ಮಾಧ್ಯಮದಲ್ಲಿ ಕೇವಲ 19 ಖಾಲಿ ಹುದ್ದೆಗಳಿವೆ ಮತ್ತು ಹಿಂದಿ ಮಾಧ್ಯಮದ ಶಿಕ್ಷಕರ ಖಾಲಿ ಹುದ್ದೆಗಳಿವೆ. ಇವುಗಳನ್ನೆಲ್ಲಾ ಸೇರಿಸಿ ಇವರು ಮಾಡಬೇಕೇ ವಿನಃ, ಆರ್ಥಿಕ ಇಲಾಖೆಯ ಮೇಲೆ ನೆಪ ಹಾಕುವುದಲ್ಲ. ಇದು ರಾಜ್ಯದ ಪ್ರತಿಷ್ಠಿತ ತಾಯಂದಿರ ಅಳಲನ್ನು ನಾನು ನಿಮ್ಮ ಎದುರುಗಡೆ ಹಾಕುತ್ತಿದ್ದೇನೆ.

(ಮುಂದು)

(840) 24-08-2026 3-50 KH/AK (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಬಲ್ಕೀಸ್ ಬಾನು (ಮುಂದು):-**

ಆ ಅಧಿಕಾರಿಯವರ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಇವರೇ ಪ್ರಥಮವಾಗಿ ಶಿಕ್ಷಣ ಕೊಡಬೇಕಾಗಿರುವುದು. ಶಿಕ್ಷಕರಿಗೆ ವಂಚನೆ ಮಾಡಬೇಕೆಂದು ಮಾನ್ಯ ಮಂತ್ರಿಯವರನ್ನು ದಾರಿ ತಪ್ಪಿಸುತ್ತಿದ್ದಾರೆಯಲ್ಲವೇ, ಅವರ ಮೇಲೂ ಕ್ರಮ ತೆಗೆದುಕೊಳ್ಳಬೇಕು. ಆದ್ದರಿಂದ, ಮಾನ್ಯ ಸಚಿವರು ನೋಟಿಫಿಕೇಷನ್ ಎಷ್ಟು ದಿನದೊಳಗೆ ಮಾಡುತ್ತಾರೆ ಮತ್ತು ಎಷ್ಟು ಸಂಖ್ಯೆಯಲ್ಲಿ ಮಾಡುತ್ತಾರೆ ಎನ್ನುವುದನ್ನು ತಿಳಿಸಬೇಕು.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ನಾಗರಾಜುರವರೇ, ಕೇವಲ ಅಂಶಗಳ ಬಗ್ಗೆ ತಿಳಿಸಿ. ಭಾಷಣ ಮಾಡಬೇಡಿ.

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ಸಹೋದರಿಯಾದ ಮಾನ್ಯ ಬಲ್ಕೀಸ್ ಬಾನು ಮತ್ತು ಇತರರು ತಂದಿರುವಂತಹ ಈ ವಿಚಾರದಲ್ಲಿ ಸಹಮತವನ್ನು ವ್ಯಕ್ತಪಡಿಸುತ್ತಾ, ಭಾಷಾ ಅಲ್ಪಸಂಖ್ಯಾತರಿಗೆ ಶಾಲೆಗಳಲ್ಲಿ ನೇಮಕ ಮಾಡಿಕೊಳ್ಳಬೇಕಾದರೆ ಈ ಅನ್ಯಾಯವನ್ನು ಸಹಿಸುವುದಕ್ಕೆ ಸಾಧ್ಯ ಇಲ್ಲ. ಮರಾಠಿ, ಹಿಂದಿ, ಉರ್ದು, ತೆಲುಗು ಮಾತನಾಡುವಂತಹವರು ಇರಬಹುದು. 'ಸರ್ವ ಜನಾಂಗದ ಶಾಂತಿಯ ತೋಟ'ದಲ್ಲಿ ಈ ಅನ್ಯಾಯವನ್ನು ಒಪ್ಪುವುದಕ್ಕೆ ಸಾಧ್ಯ ಇಲ್ಲ. ಕೇವಲ ಆರ್ಥಿಕ ಇಲಾಖೆಯ ವಿಚಾರಗಳನ್ನು ತೋರಿಸಿ ನಮಗೆ ಮೋಸ ಮಾಡುವಂತಹದ್ದನ್ನು ನಾವು ಒಪ್ಪುವುದಕ್ಕೆ ಸಾಧ್ಯ ಇಲ್ಲ. ಕನ್ನಡಕ್ಕೆ ಆದ್ಯತೆ ಕೊಟ್ಟ ಹಾಗೆ ಭಾಷಾ ಅಲ್ಪಸಂಖ್ಯಾತರಿಗೆ ಗೌರವ ಕೊಟ್ಟು, ಆ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಮರಾಠಿ ಶಾಲೆಗಳಲ್ಲಿ 800 ಶಿಕ್ಷಕರ ಹುದ್ದೆಗಳು ಖಾಲಿ ಇರುವುದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಆದಷ್ಟು ಬೇಗ ನೇಮಕ ಮಾಡಿ ಆದೇಶ ಹೊರಡಿಸಬೇಕು. ಈ ರೀತಿ ತಪ್ಪು ಮಾಡಿದವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕು.

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನ್ನ ಸಹದ್ಯೋಗಿಯಾದ ಮಾನ್ಯ ಬಲ್ಕೀಸ್ ಬಾನು ಮತ್ತು ಇತರರು ತಂದಿರುವಂತಹ ಈ ವಿಚಾರದ ಬಗ್ಗೆ ನಾನು ಸಂಪೂರ್ಣವಾದ ಸಹಮತವನ್ನು ವ್ಯಕ್ತಪಡಿಸುತ್ತಿದ್ದೇನೆ. ಏಕೆಂದರೆ, ಭಾಷೆ ಎನ್ನುವುದು ನಂಬರ್‌ನಲ್ಲಿ ನಡೆಯುವುದಿಲ್ಲ. ಕೆಲವು ವರ್ಷಗಳ ಹಿಂದೆ ಮೈಸೂರು ವಿಶ್ವವಿದ್ಯಾಲಯದಲ್ಲಿ 6 ವಿದ್ಯಾರ್ಥಿಗಳು ಇದ್ದಾರೆ ಎಂದು ಉರ್ದು ಡಿಪಾರ್ಟ್‌ಮೆಂಟ್ ಅನ್ನು ಮುಚ್ಚುವುದಕ್ಕೆ ಹೊರಟಿದ್ದರು. ಅಲ್ಲಿ 6 ವಿದ್ಯಾರ್ಥಿಗಳು ಇರುತ್ತಾರೋ, 10 ವಿದ್ಯಾರ್ಥಿಗಳು ಇರುತ್ತಾರೋ, ಅದು ಬೇರೆ. ಆದರೆ, ಭಾಷೆಗೆ ಪ್ರಾಮುಖ್ಯತೆ ಕೊಟ್ಟು ಉರ್ದು, ತೆಲುಗು, ತಮಿಳು ಇರಬಹುದು. ಏಕೆಂದರೆ, ತಮಿಳು ಶಾಲೆಗಳು ಕೆ.ಜಿ.ಎಫ್., ಮತ್ತು ಚಾಮರಾಜನಗರ ಬಾರ್ಡರ್‌ಗಳಲ್ಲಿ ಇದೆ. ಹಾಗೆಯೇ ತೆಲುಗು ಶಾಲೆಗಳು ಇವೆ. ಮರಾಠಿ ಶಾಲೆಗಳು ಇವೆ. ಹಾಗಾಗಿ ನಾವು ಬಹಳ ಸಣ್ಣತನವನ್ನು ತೋರಿಸಬಾರದು. ನಾವೆಲ್ಲಾ ಇದನ್ನು ಒಪ್ಪಿದ್ದೇವೆ. ಹಾಗಾಗಿ ಇವತ್ತು ಉರ್ದು ಶಾಲೆಗಳು ಏನಿವೆ, ಆ ಮಕ್ಕಳು ಅಲ್ಲಿ ಕನ್ನಡವನ್ನು ಕಲಿಯುವುದಕ್ಕೆ ಕಷ್ಟವಾಗುತ್ತದೆ. ಆ ಮಕ್ಕಳು ಎರಡನೇ ಭಾಷೆ ಕನ್ನಡ ಕಲಿತರೂ, ಮೊದಲ ಭಾಷೆ ಉರ್ದು, ಮರಾಠಿ, ತಮಿಳು ಕಲಿಯಬಹುದು. ಏಕೆಂದರೆ, ನಮ್ಮದು diversified country. ಈ diversity ಇರುವಂತಹ ದೇಶದಲ್ಲಿ ನೂರಾರು ಭಾಷೆಗಳು, ನೂರಾರು ಸಂಸ್ಕೃತಿಗಳು ಇವೆ. ಎಲ್ಲಾ ಭಾಷೆಗಳನ್ನು equal ಆಗಿ treat ಮಾಡಬೇಕು. ನಾವು ಈ ಕೂಡಲೇ ಒತ್ತಾಯ ಮಾಡುತ್ತಿದ್ದೇವೆ. ಇದಕ್ಕೆ ಸಂಬಂಧಪಟ್ಟವರು ಕೂಡಲೇ ನೇಮಕಾತಿ ಮಾಡಬೇಕು.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಬಲ್ಕೀಸ್ ಬಾನು, ಮಾನ್ಯ ಜಗದೇವ್ ಗುತ್ತೇದಾರ್, ಮಾನ್ಯ ರಾಮೋಜಿಗೌಡ, ಮಾನ್ಯ ರಾಜೇಂದ್ರ ರಾಜಣ್ಣ ಮತ್ತು ಇತರರು ತಂದಿರುವಂತಹ ಈ ಪ್ರಸ್ತಾವನೆಗೆ ಸಹಮತವನ್ನು ಸೂಚಿಸುತ್ತೇನೆ. ನಮಗೆ ಕಾಸರಗೋಡು ಜ್ಞಾಪಕಕ್ಕೆ ಬರುತ್ತಿದೆ, ಕಾಸರಗೋಡಿನಲ್ಲಿರುವಂತಹ ಕನ್ನಡ ಶಾಲೆಯಲ್ಲಿ ಮಲಯಾಳ ಶಿಕ್ಷಕರನ್ನು ಹಾಕಿದರಲ್ಲವೇ? ಇದರ ಬಗ್ಗೆ ಹಿಂದೆ ಒಂದು ಸಿನಿಮಾ ಕೂಡ ಬಂದಿತ್ತು. ಆ ರೀತಿಯ ಪರಿಸ್ಥಿತಿ ಆಗುವಂತಹದ್ದು ಇದೆ. ಇವತ್ತು ಕೆ.ಜಿ.ಎಫ್.ನಲ್ಲಿ ತಮಿಳು ಶಾಲೆಗಳು ಇವೆ. ಕಾಸರಗೋಡಿನಲ್ಲಿ ಮಲಯಾಳಂ ಭಾಷೆಯನ್ನು ಕಲಿಸುವಂತಹ ಶಾಲೆಗಳು ಇವೆ. ಉರ್ದು ಶಾಲೆಗಳಲ್ಲಿ ಈ ಶಿಕ್ಷಕರ ನೇಮಕಾತಿಯ ಬಗ್ಗೆ ಅಧಿಸೂಚನೆಯನ್ನು ಏನು ಹೊರಡಿಸಿದ್ದಾರೆ. ಖಂಡಿತವಾಗಿಯೂ ಆ ಶಾಲೆಯಲ್ಲಿ strength ಇರಲಿ, ಇಲ್ಲದೇ ಇರಲಿ, ಪ್ರಾಮಾಣಿಕವಾಗಿ ನಮ್ಮ ಸರ್ಕಾರ ಈ ಭಾಷಾ ನೀತಿಯಲ್ಲಿ ಯಾವುದೇ ತಾರತಮ್ಯ ಮಾಡುವುದು ಸರಿಯಲ್ಲ. ಆ ನಿಟ್ಟಿನಲ್ಲಿ ನೇಮಕಾತಿ ಮಾಡಬೇಕೆಂದು ನನ್ನ ಸಹಮತವನ್ನು ಸೂಚಿಸುತ್ತೇನೆ. ಧನ್ಯವಾದಗಳು.

**ಶ್ರೀ ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೇ, ತಮಗೆ ಗೊತ್ತಿರುವ ಹಾಗೆ ನಾನು ಈ ಇಲಾಖೆಗೆ ಬರುವುದಕ್ಕಿಂತ ಮುಂಚೆಯೇ 15,000 ಶಿಕ್ಷಕರ ನೇಮಕಾತಿ ಆಗಿತ್ತು. ಆಗ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಈ ಇಲಾಖೆ ಇತ್ತು. ಆದಾದ ಮೇಲೆ ಯಾವಾಗ ಅಧಿವೇಶನ ಪ್ರಾರಂಭವಾಯಿತು. ತಮ್ಮ ಅಧ್ಯಕ್ಷತೆಯಲ್ಲಿ ಎಲ್ಲರ ಜೊತೆ ಮಾತನಾಡಿದ್ದೇವೆ. ಇನ್ನು ಜಾಸ್ತಿ ಹುದ್ದೆಗಳು ಖಾಲಿ ಇವೆ. ಅದನ್ನು proportionate ಆಗಿ ಮಾಡಿದ್ದಾರೆ. ಎಲ್ಲಿ ಭಾಷಾ ಶಿಕ್ಷಕರಲ್ಲಿ ಉರ್ದು ಮತ್ತು ಮರಾಠಿ ಇರಬಹುದು. ಅಲ್ಲೆಲ್ಲಾ ಏನು ತೊಂದರೆಯಾಗಿತ್ತು. ಈಗ ಸದ್ಯಕ್ಕೆ ಎಷ್ಟು ತೆಗೆದುಕೊಳ್ಳಬೇಕೆಂದು ಆರ್ಥಿಕ ಇಲಾಖೆಗೆ ತಿಳಿಸಿದ್ದೇನೆ. ಇಷ್ಟು ದಿನ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ನನ್ನ ಪ್ರಕಾರ ಆದಷ್ಟು ಬೇಗ ಮಾಡಿಕೊಡುತ್ತಾರೆ. This has to come to the Cabinet. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸಹಮತ ಕೊಟ್ಟಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಆದಷ್ಟು ಬೇಗ ಮಾಡಿ.

**ಶ್ರೀ ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೇ, Academic Year ನಲ್ಲಿ ಆದಷ್ಟು ಬೇಗ ಶಿಕ್ಷಕರು ಬಂದು ಪಾಠ ಹೇಳಿಕೊಡುವಂತಹ ವ್ಯವಸ್ಥೆಯನ್ನು ಕೂಡ ಮಾಡುತ್ತೇವೆ.

**ಶ್ರೀಮತಿ ಬಲ್ಕೀಸ್ ಬಾನು:–** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

## 14. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ (ಕ.ವಿ.ಪ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮುಂಡಿಸುತ್ತಿದ್ದೇನೆ.

1. ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2026
2. ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2026
3. ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2026
4. ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2026
5. ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕ, 2026
6. ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕ, 2026
7. ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2026
8. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ, 2026

**ಸಭಾಪತಿಯವರು:–** ಮಂಡಿಸಲಾಯಿತು.

## 15. ಶಾಸನ ರಚನೆ

## ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

### ಅ) ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2026

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ತಮಗೆ ಗೊತ್ತಿರುವ ಹಾಗೆ ದೇಶದ ಮಟ್ಟದಲ್ಲಿ ಜಿ.ಎಸ್.ಟಿ., ಮಂಡಳಿ ಎಂದು ಇದೆ. ಜಿ.ಎಸ್.ಟಿ., ಕಾನೂನಿಗೆ ಸಂಬಂಧಪಟ್ಟ ವಿಷಯಗಳನ್ನು ಚರ್ಚೆ ಮಾಡಿ, ಎಲ್ಲಾ ರಾಜ್ಯಗಳು ಮತ್ತು ಕೇಂದ್ರ ಸರ್ಕಾರ ಒಂದು ತೀರ್ಮಾನಕ್ಕೆ ಬಂದ ಮೇಲೆ, ಆ ಕಾನೂನಿಗೆ ಆ ತೀರ್ಮಾನಗಳನ್ನು ಎಲ್ಲಾ ರಾಜ್ಯಗಳು ಹಾಗೂ ಕೇಂದ್ರ ಸರ್ಕಾರ ಅಳವಡಿಸಿಕೊಳ್ಳುವುದು ಒಂದು ಪದ್ಧತಿ ಇದೆ. ಆ ಪದ್ಧತಿ ಪ್ರಕಾರ ಜಿಎಸ್‌ಟಿ., ಮಂಡಳಿಯಲ್ಲಿ ಒಂದೆರಡು ತೀರ್ಮಾನಗಳು ಆಗಿವೆ. ಉದಾಹರಣೆಗೆ ಕೆಲವು ಸಾಮಗ್ರಿಗಳನ್ನು manufacturer ರಿಂದ ಡೀಲರ್‌ಗಳು ಖರೀದಿ ಮಾಡುತ್ತಾರೆ. ಇದನ್ನು ಮಾರಾಟ ಮಾಡುವಾಗ ಅವರು ಏನಾದರೂ ಖರೀದಿ ದರಕ್ಕಿಂತ ಕಡಿಮೆ ದರಕ್ಕೆ ಡಿಸ್ಕೌಂಟ್ ಕೊಟ್ಟು ಮಾರಾಟ ಮಾಡಿದರೆ, ಆಗ Input Tax Credit ಅನ್ನು ಅದಕ್ಕೆ ತಕ್ಕ ಹಾಗೆ adjust ಮಾಡುವುದಕ್ಕೆ ಒಂದು ಪ್ರಾವಿಷನ್ ಅನ್ನು ಇದರಲ್ಲಿ ತೆಗೆದುಕೊಂಡು ಬಂದಿದ್ದೇವೆ. ಇನ್ನೊಂದು ಸಣ್ಣ-ಪುಟ್ಟ e-commerce ನಲ್ಲೂ export ಮಾಡುತ್ತಾರೆ. ಅಕ್ಕ-ಪಕ್ಕ ದೇಶಗಳಿಗೆ ನಮ್ಮಲ್ಲಿ ಉತ್ಪಾದನೆ ಮಾಡಿದಂತಹ ಸಾಮಗ್ರಿಗಳನ್ನು ರಫ್ತು ಮಾಡಿದಾಗ ಅವರಿಗೆ Input Tax Credit ಸಾವಿರ ರೂಪಾಯಿಗಿಂತ ಕಡಿಮೆ ಇದ್ದಿದ್ದರೆ ಇಷ್ಟು ದಿನ ಅವರಿಗೆ Input Tax Credit ಸಿಗುತ್ತಿರಲಿಲ್ಲ. ಆ ಸಣ್ಣ-ಪುಣ್ಣ ಸಾಮಗ್ರಿಗಳನ್ನು ರಫ್ತು ಮಾಡುವಂತವರಿಗೂ ಕೂಡ Input Tax Credit ಸೌಲಭ್ಯ ಸಿಗಬೇಕೆಂದು ಅದಕ್ಕೆ ಒಂದು ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದೇವೆ. ಇವೆರಡು ಸಣ್ಣ ತಿದ್ದುಪಡಿಗಳಾಗಿದ್ದು, ಜಿ.ಎಸ್.ಟಿ., ಮಂಡಳಿಯಲ್ಲಿ

ತೀರ್ಮಾನವಾಗಿ ಎಲ್ಲಾ ರಾಜ್ಯಗಳು ಅಳವಡಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಇದಕ್ಕೆ ಮಂಜೂರಾತಿಯನ್ನು ಕೊಡಬೇಕೆಂದು ಸದನವನ್ನು ಕೋರುತ್ತಿದ್ದೇನೆ.

**ಸಭಾಪತಿಯವರು:–**ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 4 ರವರೆಗೆ**

**ಸಭಾಪತಿಯವರು:–** "ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

“ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಸದನದ ಅನುಮೋದನೆ ದೊರೆಯಿತು**

(ಮುಂದು)

(841) 24.8.2026 4.00 ಪಿಕೆ:ಎಕೆ (ಸಭಾಪತಿಗಳ ಉಪಸ್ಥಿತಿ)

**ಆ) ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2026**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೃಷ್ಣ ಭೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ನೇ ಸಾಲಿನ ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೃಷ್ಣ ಭೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ನಾವು ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರವನ್ನು ಅಸ್ತಿತ್ವಕ್ಕೆ ತಂದಿದ್ದೇವೆ. ಇದು 2022ನೇ ಸಾಲಿನಲ್ಲಿ ಬಂದರೂ, ಇನ್ನೂ ಕೆಲವು ನಿಯಮಗಳು ರಚನೆ ಆಗುವಂಥದ್ದು, ಕೆಲವು ಸಮಿತಿಗಳನ್ನು ರಚನೆ ಮಾಡುವಂಥದ್ದೆಲ್ಲವೂ ಬಾಕಿ ಇವೆ. ಆದರೆ, ಏತನ್ಮಧ್ಯೆ ದೈನಂದಿನ ಕೆಲಸ ನಡೆಯುತ್ತಲೇ ಇರಬೇಕಾಗುತ್ತದೆ. ಸದರಿ ಪ್ರಾಧಿಕಾರಕ್ಕೆ ಕೆಲವು statutory powers ಕೊಟ್ಟಿದ್ದೇವೆ. ಆ ನಿಯಮಗಳು ಸಂಪೂರ್ಣವಾಗಿ ರಚನೆಯಾಗಿ, ಎಲ್ಲಾ ಸಮಿತಿಗಳು ರಚನೆಯಾಗಿ, ಅವರು ಕಾರ್ಯ ನಡೆಸುವವರೆಗೆ, ಏತನ್ಮಧ್ಯೆ ಕೆಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾದರೆ, transition ನಲ್ಲಿ, enabling provisions Act ಬೇಕಾಗುತ್ತದೆ. So that, pending completion of the rule making, pending completion of constituting all the committees, in the meantime, essential activities can be discharged. ಆ essential activities ಮಾಡುವುದಕ್ಕೆ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಇದು ದೈನಂದಿನ ಚಟುವಟಿಕೆಗಳನ್ನು ನಡೆಸುವುದಕ್ಕೋಸ್ಕರ, ಆಡಳಿತ ನಿಲ್ಲಬಾರದು, ದಿನನಿತ್ಯ ಆಡಳಿತ ನಡೆಯಬೇಕೆನ್ನುವ ಉದ್ದೇಶದಿಂದ enabling provisions ಕಾನೂನಿನಲ್ಲಿ ಮಾಡುತ್ತಿದ್ದೇವೆ. ಹಾಗಾಗಿ ಸದನ ಇದಕ್ಕೆ ಅನುಮತಿ ಕೊಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ನೇ ಸಾಲಿನ ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣ ಭೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ನೇ ಸಾಲಿನ ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಸದನದ ಅನುಮೋದನೆ ದೊರೆಯಿತು**

**ಇ) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2026**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೃಷ್ಣ ಭೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಉಪ ಮುಖ್ಯಮಂತ್ರಿಗಳು ಮತ್ತು ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಭೂ ಕಂದಾಯ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೃಷ್ಣ ಭೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಉಪ ಮುಖ್ಯಮಂತ್ರಿಗಳು ಮತ್ತು ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಸದರಿ ವಿಧೇಯಕದಲ್ಲಿ ಸಣ್ಣಪುಟ್ಟ ತಿದ್ದುಪಡಿಗಳನ್ನು ತಂದಿದ್ದೇವೆ. ಇದರಲ್ಲಿ, “ನಕಲು ದಾಖಲೆ ಸೃಷ್ಟಿ”, “ಮೌಲ್ಯಯುತ ಭದ್ರತೆ” ಮತ್ತು “ಪ್ರಮಾಣೀಕೃತ ನಕಲು” ಎನ್ನುವಂತಹ ಪದಗಳ ವಿಶ್ಲೇಷಣೆಯಲ್ಲಿ, definition ನಲ್ಲಿ, ಕೆಲವರು, ಅದರ ಸ್ಪಷ್ಟತೆ ಇದ್ದರೂ ಕೂಡ, ಅವುಗಳನ್ನು misinterpret ಮಾಡಿ ದುರ್ಲಾಭ ಪಡೆದುಕೊಳ್ಳುತ್ತಿರುವ ಸನ್ನಿವೇಶಗಳನ್ನು ಗುರುತಿಸಲಾಗಿ, ಆ ಪದಗಳ ವಿಶ್ಲೇಷಣೆ, ಅರ್ಥವನ್ನು ಸ್ಪಷ್ಟೀಕರಣಗೊಳಿಸುವುದಕ್ಕೋಸ್ಕರ ಆ ಪರಿಭಾಷೆಯನ್ನು ಸ್ಪಷ್ಟಪಡಿಸುತ್ತಿದ್ದೇವೆ. We are reclarifying the meanings of these words so that there is no scope for misinterpretation which can lead to misuse of the law. We are trying to prevent misuse of the law by clarifying the meanings of these words. ಎರಡನೆಯದಾಗಿ, ಕಂದಾಯ ಇಲಾಖೆಯಲ್ಲಿ ಏನಾದರೂ ತಪ್ಪು ಆದಾಗ, ಅದನ್ನು ತನಿಖೆ ಮಾಡಬೇಕಾದರೆ, ತನಿಖೆ ಯಾವ ಸೆಕ್ಷನ್‌ನಲ್ಲಿ ಮಾಡುತ್ತೀರಿ ಎಂದು ಕೇಳುತ್ತಿದ್ದರು. ನಮಗೆ ತನಿಖೆ ಮಾಡಲು ಸಾಕಷ್ಟು ಅವಕಾಶಗಳಿವೆ. ಆದರೆ, ಕೆಲವು ಸಂದರ್ಭದಲ್ಲಿ ಯಾವ ಸೆಕ್ಷನ್‌ನಲ್ಲಿ enquiry order ಮಾಡಿದ್ದೀರಿ ಎಂದು ಕೇಳುತ್ತಾರೆ. ತನಿಖೆ ಮಾಡಲು ಒಂದು ಪ್ರತ್ಯೇಕ ಸೆಕ್ಷನ್ ಅನ್ನು ಕಾನೂನಿನಲ್ಲಿ ಇಂಟ್ರಡ್ಯೂಸ್ ಮಾಡುತ್ತಿದ್ದೇವೆ. ದೈನಂದಿನ ಆಡಳಿತಕ್ಕೆ ಅನುಕೂಲವಾಗಲೆಂದು ಈ ಎರಡು-ಮೂರು ಸಣ್ಣಪುಟ್ಟ ತಿದ್ದುಪಡಿಗಳನ್ನು ತಂದಿದ್ದೇವೆ. ಇದಕ್ಕೆ ಸಹಕಾರ ಕೊಟ್ಟು, ಅನುಮತಿ ಕೊಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಈ ವಿಧೇಯಕದ ಮೇಲೆ ವಿರೋಧ ಪಕ್ಷದ ಸದಸ್ಯರು ಮಾತನಾಡುತ್ತೀರಾ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ನಾವು ಇಷ್ಟು ಬೇಡಿಕೊಳ್ಳುತ್ತಿದ್ದರೂ ಸರ್ಕಾರ ತಲೆ ಕೆಡಿಸಿಕೊಳ್ಳುತ್ತಿಲ್ಲ. ಆದ್ದರಿಂದ ನಾವು ಅಹೋ-ರಾತ್ರಿ ಧರಣಿ ಮಾಡುತ್ತೇವೆ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಗಳೆ, ಅವರು ಸುಳ್ಳು ಹೇಳುತ್ತಿದ್ದಾರೆ. ನಾವು ಚರ್ಚೆಗೆ ತಯಾರಿದ್ದೇವೆ. ನೋಟಿಸ್ ಕೊಟ್ಟು ಚರ್ಚೆಗೆ ಬರಲಿ ಎಂದು ನಾನು ಅವರಿಗೆ ಅಹ್ವಾನ ನೀಡುತ್ತಿದ್ದೇನೆ. ಆದರೆ ಅವರು ಹೆದರಿ ಓಡಿ ಹೋಗುತ್ತಿದ್ದಾರೆ. ಮಾತನಾಡುವುದಕ್ಕೆ ಇವರ ಹತ್ತಿರ ಏನೂ ಮೆಟೀರಿಯಲ್ ಇಲ್ಲ. ಚರ್ಚೆ ಮಾಡುವುದಕ್ಕೆ ಇವರು ತಯಾರು ಇಲ್ಲ. ಜನ ಕಲ್ಯಾಣ ನೋಡುವುದು ಬಿಟ್ಟು . . .

**ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಗಳೆ, ಇವರು ರಾಜಕೀಯಕ್ಕಾಗಿ ಹೀಗೆ ಮಾಡುತ್ತಿದ್ದಾರೆ. ಎಲ್ಲಾ ಕಡೆ ಜನ ಥೂ ಎಂದು ಉಗುಳುತ್ತಿದ್ದಾರೆ. ಇವರು ನಾಚಿಕೆ, ಮಾನ-ಮರ್ಯಾದೆ ಬಿಟ್ಟು, ಈ ಸದನವನ್ನು ರಾಜಕೀಯಕ್ಕಾಗಿ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ.

**(ಗೊಂದಲ)**

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಮಾನ್ಯ ಸದಸ್ಯರು ಬಾವಿಗೆ ಬಂದು ಧರಣಿಯಲ್ಲಿ ನಿರತರಾಗಿ ಘೋಷಣೆಗಳನ್ನು ಕೂಗುತ್ತಿದ್ದರು)**

**ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಗಳೆ, ಧರಣಿ ಮಾಡಲು ಬಾವಿಯೊಳಗೆ ಬಂದರೆ ಅವರು ಯಾರೂ ಮಾತನಾಡಬಾರದು. The Hon'ble Chairman should not allow anybody to shout slogans from the well. They have to keep their mouth shut.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಭೂ ಕಂದಾಯ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 5ರವರೆಗೆ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಖಂಡ 2 ರಿಂದ 5ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 5ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣ ಭೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಉಪ ಮುಖ್ಯಮಂತ್ರಿ ಮತ್ತು ಕಂದಾಯ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಭೂ ಕಂದಾಯ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಭೂ ಕಂದಾಯ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಸದನದ ಅನುಮೋದನೆ ದೊರೆಯಿತು**

(ಮುಂದು)

(842) 24-8-2026 4.10 ಡಿಎಸ್-ಆರ್ಎನ್ (ಸಭಾಪತಿಯವರ ಉಪಸ್ಥಿತಿ)

**ಈ) ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2026**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೃಷ್ಣ ಬೈರೇಗೌಡ (ಬೆಂಗಳೂರು ನಗರಾಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ. ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೃಷ್ಣ ಬೈರೇಗೌಡ (ಬೆಂಗಳೂರು ನಗರಾಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಈ ಹಿಂದೆಯೇ ನೋಂದಣಿ ಕಾಯ್ದೆಗೆ ಕೆಲವು ಬದಲಾವಣೆಗಳನ್ನು ನಾವು ತಂದಿದ್ದೆವು. ಜನರು ಎಲ್ಲಾ ಕೆಲಸಗಳಿಗೂ ನಮ್ಮ ಕಛೇರಿಗಳಿಗೆ ಬರುವುದಕ್ಕೆ ವಿನಾಯಿತಿಯನ್ನು ಕೊಟ್ಟು, ಅವರನ್ನು remote registration enable ಮಾಡಬೇಕೆಂದು ಕೆಲವು ಬದಲಾವಣೆಗಳನ್ನು ನಾವು ಈಗಾಗಲೇ ತಂದಿದ್ದೇವೆ. ಅದು ಇನ್ನು ಅನುಷ್ಠಾನಕ್ಕೆ ಬಂದಿಲ್ಲ. ಆದರೆ, ನಾವು ಕಾನೂನಿನಲ್ಲಿ ಬದಲಾವಣೆಗಳನ್ನು ಮಾಡಿದ್ದೇವೆ. ಇದರ ಉದ್ದೇಶ ಏನೆಂದರೆ, ಮಾರಾಟಗಾರರು ಮತ್ತು ಖರೀದಿದಾರರು ಸ್ಪಷ್ಟ ಇದ್ದಾಗ, ಜನರು ಅನಗತ್ಯವಾಗಿ ನಮ್ಮ ಕಛೇರಿಗೆ ಬರುವ ಅವಶ್ಯಕತೆ ಇರುವುದಿಲ್ಲ. ಅವರು ಅವರವರ ಕಛೇರಿಯಿಂದಲೇ ಕುಳಿತು, remote ಆಗಿ registration ನಡೆಸಬಹುದು. ಇದರಿಂದ ನಮ್ಮ ಇಲಾಖೆಯ ಮೇಲೆ ಒತ್ತಡ ಕಡಿಮೆಯಾಗುತ್ತದೆ, ನಮ್ಮ ಸಿಬ್ಬಂದಿಯ ಸಮಯ ಉಳಿಯುತ್ತದೆ. ಜನರು ನಮ್ಮ ಕಛೇರಿಗಳಿಗೆ ಅಲೆಯುವಂತಹ ಕೆಲಸ ಕೂಡ ಕಡಿಮೆಯಾಗುತ್ತದೆ. ಈ ಕಾರಣಕ್ಕೆ ಒಂದೂವರೆ ವರ್ಷಗಳ ಹಿಂದೆಯೇ ನಾವು ತಿದ್ದುಪಡಿಗಳನ್ನು ತಂದಿದ್ದೇವೆ. ಇದಕ್ಕೆ ರಾಷ್ಟ್ರಪತಿಗಳ ಅನುಮೋದನೆ ಕೂಡ ಬೇಕಾಗಿದ್ದರಿಂದ ನಾವು ರಾಷ್ಟ್ರಪತಿಗಳಿಗೆ ಕಳುಹಿಸಿಕೊಟ್ಟಿದ್ದೆವು. ಆದರೆ ನಮ್ಮ ತಿದ್ದುಪಡಿಗಳೇನಿವೆ, ಬಹಳ ದೂರ ದೃಷ್ಟಿಯ ತಿದ್ದುಪಡಿಗಳನ್ನು ನಾವು ಮಾಡಿದ್ದೇವೆ. ಸ್ವಲ್ಪ radical and long term ಅವಶ್ಯಕತೆಗಳು, ಇವತ್ತಿನ ಟೆಕ್ನಾಲಜಿ ಎಲ್ಲವನ್ನು ಗಮನದಲ್ಲಿಟ್ಟುಕೊಂಡು ಬಹಳ foresight ಇಟ್ಟುಕೊಂಡು ತಿದ್ದುಪಡಿಗಳನ್ನು ಮಾಡಿದ್ದೆವು. ಮಾನ್ಯ ರಾಷ್ಟ್ರಪತಿಯವರು ನೀವು ಬಹಳ ದೂರ ಹೆಜ್ಜೆ ಇಟ್ಟಿದ್ದೀರಿ, especially ಒಂದೇ ಒಂದು ಪಾಯಿಂಟ್ ಏನೆಂದರೆ, ಹಿಂದೆ remote registration ಆದಾಗ ಯಾರಾದರೂ ಪೆಂಡಿಂಗ್ ಇಟ್ಟರೆ, ಎಲ್ಲಾ ದಾಖಲೆಗಳು ಮ್ಯಾಚ್ ಆದರೆ ಆ ಸಿಸ್ಟಮ್‌ನಲ್ಲೇ digital signature generate ಆಗಿ automatic registration ಆಗಬೇಕು, automatic approval ಆಗಬೇಕು ಎಂದು ಒಂದು ಅಂಶವನ್ನು ಸೇರಿಸಿದ್ದೆವು. ಅದನ್ನು ಬೇರೆ ರಾಜ್ಯದಲ್ಲಿಯೂ ಮಾಡಿದ್ದಾರೆ. ಆದರೆ ನೋಂದಣಿ ಪ್ರಕ್ರಿಯೆಯಲ್ಲಿ ಇದು ಬಹಳ ದೂರ ದೃಷ್ಟಿಯ ಕ್ರಮ ಎಂದು ಕೇಂದ್ರ ಸರ್ಕಾರ ಸ್ವಲ್ಪ

ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಆ ಕಾರಣಕ್ಕಾಗಿ ಆ ಒಂದು ಪದವನ್ನು ನಾವು ಹಿಂದೆ ಮಾಡಿರುವ ತಿದ್ದುಪಡಿಯಿಂದ ಕೈಬಿಟ್ಟು, ಬೇರೆ ತಿದ್ದುಪಡಿಗಳ ಮಂಜೂರಾತಿಗೋಸ್ಕರ ಇವತ್ತು ತೆಗೆದುಕೊಂಡು ಬಂದಿದ್ದೇವೆ. ಈಗ ಅದರ ಜೊತೆಗೆ Encumbrance Certificates and Certified Copies ಕೊಡಬೇಕಾದರೆ ಅವೆಲ್ಲವು ಕೂಡ automatic ಆಗಿ ಕೊಡುವುದಕ್ಕೆ ಬೇಕಾದಂತಹದ್ದನ್ನು ಆಗಲೇ ಮಾಡಿದ್ದೆವು. ಅದನ್ನು enable ಮಾಡಿಕೊಳ್ಳುತ್ತಿದ್ದೇವೆ. ಈ ರೀತಿಯಾಗಿ ಸಣ್ಣಪುಟ್ಟ ಕೆಲವು ಜನಪರವಾದಂತಹ ಸುಧಾರಣಾ ಕ್ರಮಗಳ ತಿದ್ದುಪಡಿ ಮುಖಾಂತರ ನೋಂದಣಿ ಕಾಯ್ದೆಗೆ ತೆಗೆದುಕೊಂಡು ಬರುತ್ತಿದ್ದೇವೆ. ಇವೆಲ್ಲವೂ ಕೂಡ ಜನರು ನಮ್ಮ ಕಛೇರಿಗೆ ಅಲೆಯುವುದನ್ನು ಕಡಿಮೆ ಮಾಡಬೇಕು, ನೋಂದಣಿ ಪ್ರಕ್ರಿಯೆಯನ್ನು ಜನಸ್ನೇಹಿಯನ್ನಾಗಿ ಮಾಡಬೇಕು. ಅವರಿಗೆ ಈಗ ಇರುವಂತಹ ತೊಂದರೆಗಳನ್ನು ಕಡಿಮೆ ಮಾಡುವುದಕ್ಕೋಸ್ಕರ ತಂದಿರುವಂಥದ್ದು. ಇದಕ್ಕೆ ಸಹಮತಿ ಕೊಡಬೇಕೆಂದು ನಾನು ಸದನಕ್ಕೆ ಕೋರುತ್ತಿದ್ದೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 10 ರವರೆಗೆ**

**ಸಭಾಪತಿಯವರು:–** "ಖಂಡ 2 ರಿಂದ 10 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 10 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣ ಬೈರೇಗೌಡ (ಬೆಂಗಳೂರು ನಗರಾಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ. ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿ ಸರ್ಕಾರದ ವಿರುದ್ಧ ನಿರಂತರವಾಗಿ ಘೋಷಣೆಗಳನ್ನು ಕೂಗುತ್ತಿದ್ದರು)**

## ಉ) ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕ, 2026

## ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕವು ದೇಶದಲ್ಲೇ ಮೊದಲ ರಾಜ್ಯವಾಗಿ ಹೂಡಿಕೆಗಳನ್ನು ಸುಗಮಗೊಳಿಸುವ ಉದ್ದೇಶದಿಂದ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಕಾಯ್ದೆ, 2002 ಜಾರಿಗೆ ಬಂದಿದೆ. ಈ ಕಾಯ್ದೆಗಳ ಮುಖ್ಯ ಉದ್ದೇಶ ಕೈಗಾರಿಕೆಗಳಿಗೆ ಅಗತ್ಯವಿರುವ ವಿವಿಧ ಅನುಮೋದನೆಗಳು, ಪರವಾನಗಿಗಳು ಮತ್ತು ಅನುಮತಿಗಳನ್ನು ಸರಳಗೊಳಿಸಿ, ಹೂಡಿಕೆಗಳಿಗೆ ಅನುಕೂಲಕರ ವಾತಾವರಣ ಕಲ್ಪಿಸಿ ಕೊಡುವಂಥದ್ದು, ಅಂದರೆ Ease of Doing Business. 2020ರಲ್ಲಿ ಕಾಯ್ದೆಯನ್ನು ತಿದ್ದುಪಡಿ ಮಾಡಿ, ಕೈಗಾರಿಕೆಗಳ ಅನುಮೋದನೆ ಪ್ರಕ್ರಿಯೆಯನ್ನು ತ್ವರಿತಗೊಳಿಸಲು affidavit based clearance ವ್ಯವಸ್ಥೆಯನ್ನು ಪರಿಚಯಿಸಲಾಯಿತು. ಅದರಲ್ಲಿ ಸುಮಾರು 15 ಸೇವೆಗಳಿಗೆ ಸಂಬಂಧಿಸಿದಂತೆ ಈಗಾಗಲೇ affidavit based clearance ಬಂದಿದೆ. ಈಗ 5 ಸೇವೆಗಳನ್ನು ಮತ್ತೆ ಈ affidavit based clearance ವ್ಯಾಪ್ತಿಗೆ ತರಲು ಪ್ರಸ್ತಾಪಿಸಲಾಗಿದ್ದು, ಸುಮಾರು 20 ಸೇವೆಗಳು ಈ affidavit based clearance ವ್ಯವಸ್ಥೆಯಡಿ ಬರುತ್ತಿವೆ. ನಮ್ಮ Single Window System ಅನ್ನು ಬಲಪಡಿಸುವಂಥದ್ದು ಮತ್ತು ಕೈಗಾರಿಕೆಗಳು ತಮ್ಮ ಯೋಜನೆಗಾಗಿ nowhere approvals ಎನ್ನುವುದನ್ನು tracking ಮಾಡುವುದಕ್ಕೆ ಅನುಕೂಲ ಮಾಡಿಕೊಡುತ್ತಿದ್ದೇವೆ. KAIS ದತ್ತಾಂಶದ ಮೂಲಕವೇ ದಾಖಲೆಯನ್ನು once only ವ್ಯವಸ್ಥೆ ಮಾಡಲಾಗುತ್ತಿದೆ. ಇವತ್ತಿನ ದಿವಸ ಎಲ್ಲವನ್ನು online ಮೂಲಕವೇ ಮಾಡಲಾಗುತ್ತದೆ. ಯಾವುದೂ ಕೂಡ ಆಫ್‌ಲೈನ್‌ನಲ್ಲಿ ಇರುವುದಿಲ್ಲ. ಇವತ್ತು deemed approval provisions ಸಹ ಪರಿಣಿತ ಅನುಬೋಧನೆ ಬೇಕಾಗುವಲ್ಲಿ ಜಾರಿಗೆ ತರುವಂಥದ್ದು. ಅದರ ಜೊತೆಗೆ ಒಂದು risk based inspection ಕೂಡ ಮಾಡಿ, ಅದರಲ್ಲಿ ಯಾರು ಕೆಳಮಟ್ಟದ ಅಧಿಕಾರಿಗಳು ಹೋಗಿ ಅವರಿಗೆ ತೊಂದರೆ ಕೊಡುವಂಥದ್ದಾಗಬಾರದು. ಅದಕ್ಕೆ Head of the Departments ಗಳಂದ ಅನುಮತಿ ತೆಗೆದುಕೊಂಡು ಮಾಡಬೇಕು ಎನ್ನುವಂಥದ್ದು ಇದೆ.

(ಮುಂದು)

(843) 24/08/2026 4:20 ಎಸ್‌ಪಿಆರ್/ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರು ಮತ್ತು ಶ್ರೀ ಎಸ್.ಎಲ್.ಭೋಜೇಗೌಡ ರವರುಗಳನ್ನು ಹೊರತುಪಡಿಸಿ, ಇನ್ನುಳಿದ ಎಲ್ಲಾ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಘೋಷಣೆಗಳನ್ನು ಕೂಗುತ್ತಿದ್ದರು)

**ಶ್ರೀ ಎಂ.ಬಿ.ಪಾಟೀಲ್ (ಮುಂದು):-**

ಮತ್ತೊಂದು Facilitation Desk ಗೆ not less than I.A.S., Officer ಅನ್ನು ಹಾಕಿ, ಇವರಿಗೆ ವಿವಿಧ ಇಲಾಖೆಗಳ ಪ್ರತಿನಿಧಿಗಳೆಲ್ಲರನ್ನೂ ಇವತ್ತಿನ ದಿವಸ ಇದರೊಳಗೆ ತೆಗೆದುಕೊಂಡು ಬಂದು Ease of Doing Business ಅನ್ನು ಬಲಪಡಿಸುತ್ತಿದ್ದೇವೆ. ಈ ತಿದ್ದುಪಡಿಯಿಂದ ಕರ್ನಾಟಕದಲ್ಲಿ ಏಕೀಕೃತ, ಡಿಜಿಟಲ್, ಸಮಯಬದ್ಧ ಮತ್ತು ಹೂಡಿಕೆದಾರರ ಸ್ನೇಹಿ ಕೈಗಾರಿಕಾ ಅನುಮೋದನೆಯ ವ್ಯವಸ್ಥೆಯನ್ನು ರೂಪಿಸುವ ಉದ್ದೇಶವನ್ನು ಹೊಂದಿದೆ. ಇದರಿಂದ ನಿಯಂತ್ರಣ ಹಾಗೂ ಅನುಸರಣೆಯ ಹೊರೆಯು ಕಡಿಮೆಯಾಗುವುದರ ಜೊತೆಗೆ ಪಾರದರ್ಶಕತೆ ಮತ್ತು ವ್ಯವಹಾರ ನಡೆಸುವ ಸುಲಭತೆಯನ್ನೂ ಸಹ ಇವತ್ತಿನ ದಿವಸ ಹೆಚ್ಚಿಸುವುದು ಆಗುತ್ತದೆ. ಇದರ ಜೊತೆಗೆ, ಇವತ್ತಿನ ದಿವಸ ನಾವು ಒಂದು ಸಮಿತಿಯನ್ನು ರಚಿಸುತ್ತಿದ್ದೇವೆ. ಈ ಎಲ್ಲಾ ಪ್ರಸ್ತಾವನೆಗಳನ್ನು ಇದರಲ್ಲಿ ಸೇರಿಸಲಾಗಿದೆ. ಇವತ್ತಿನ ದಿವಸ Co-ordination Committee ಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳಿರುತ್ತಾರೆ. ಅದರ ಮೂಲಕ ಇವತ್ತಿನ ದಿವಸ ಎಲ್ಲಿ ಬೇಕಾಗುತ್ತದೆಯೋ, ಅಲ್ಲಿಯೇ ಅಂದರೆ, ಸ್ಥಳೀಯವಾಗಿಯೇ ಪರವಾನಿಗೆಯನ್ನು ನೀಡುವ in principle approval ಕೊಡುವುದು ಆಗಿದೆ. ಕೆಲವೊಂದು statutory ತರುವುದಕ್ಕೆ ಸಮಯ ಇರುತ್ತದೆ. ಅವರು ಇದನ್ನು ಸಂಬಂಧಿಸಿದ ಇಲಾಖೆಗೆ ತಮ್ಮ ಇಲಾಖೆಗಳ ಜೊತೆಗೆ ಒಟ್ಟು ಅದನ್ನು follow up ಮಾಡಿಸಿ, ಅದನ್ನು ಮಾಡುವ ಕೆಲಸಗಳನ್ನು ಮಾಡುತ್ತದೆ. ಹೀಗಾಗಿ ಇವತ್ತಿನ ದಿವಸ ಕೇಂದ್ರ ಸರ್ಕಾರವೂ ಸಹ Ease of Doing Business ಕಡೆಗೆ ಹೆಚ್ಚಿನ ಲಕ್ಷ್ಯವನ್ನು ತುಂಬಿಸುವುದಕ್ಕೆ ನೀಡುವಂತಾಗಿದೆ. ಇವರೂ ಸಹ ಇವತ್ತಿನ ದಿವಸ ಇದನ್ನು ನೀಡುತ್ತಿದ್ದಾರೆ. ಸೆಕ್ಷನ್ 7 ರಲ್ಲಿ ಇದನ್ನು ಮಾಡಲಾಗುತ್ತದೆ. ಇದಕ್ಕಾಗಿ ಈ ತಿದ್ದುಪಡಿ ವಿಧೇಯಕಕ್ಕೆ ಅನುಮೋದನೆ ನೀಡುವಂತೆ ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 11 ರವರೆಗೆ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಖಂಡ 2 ರಿಂದ 11ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 11ರ ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ
ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು"

**ಪ್ರಸ್ತಾವದ ಅಂಗೀಕಾರ**

**ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕವನ್ನು ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ರ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಸದನದ ಅನುಮೋದನೆ ದೊರೆಯಿತು**

**ಊ) ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕ, 2026**

**ಪರ್ಯಾಲೋಚನಾ ಪ್ರಸ್ತಾವ**

**ಡಾ॥ ಯತೀಂದ್ರ ಎಸ್. (ನಗರಾಭಿವೃದ್ಧಿ ಸಚಿವರು) (ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಡಾ॥ ಯತೀಂದ್ರ ಎಸ್. (ನಗರಾಭಿವೃದ್ಧಿ ಸಚಿವರು) (ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಈ ವಿಧೇಯಕದ ಮೂಲಕ ಸರ್ಕಾರಿ ಉದ್ಯಾನವನಗಳಲ್ಲಿ ಸುಮಾರು 5% ವಿಸ್ತೀರ್ಣದ ಪ್ರದೇಶವನ್ನು ಸರ್ಕಾರಿ ಕಾಮಗಾರಿಗಳಿಗೆ, ಸಾರ್ವಜನಿಕ ಬಳಕೆ ಉದ್ದೇಶಕ್ಕೆ ಇರುವ ಯೋಜನೆಗಳಿಗೆ ಬಳಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುವುದಕ್ಕಾಗಿ ಈ ತಿದ್ದುಪಡಿಯನ್ನು ತರಲಾಗಿದೆ. ಈ ಹಿಂದೆಯೂ ಕೂಡ ಉದ್ಯಾನವನಗಳಲ್ಲಿ ರಸ್ತೆ ಅಗಲೀಕರಣ ಇರಬಹುದು ಅಥವಾ ಏನಾದರೂ ಸರ್ಕಾರಿ ಕಟ್ಟಡಗಳನ್ನು ಕಟ್ಟುವುದಕ್ಕೆ ಇರಬಹುದು, ಇದಕ್ಕಾಗಿ ಹಾಗೂ ಸಾರ್ವಜನಿಕ ಬಳಕೆಯ ಉದ್ದೇಶದ ಕಾಮಗಾರಿಗಳಿಗಾಗಿ ಉಪಯೋಗಿಸಿಕೊಳ್ಳುತ್ತಿದ್ದೆವು. ಆದರೆ, ಪ್ರತಿ ಬಾರಿ ಆ ರೀತಿಯಾಗಿ ಉಪಯೋಗಿಸಿಕೊಳ್ಳಬೇಕಾದರೆ ಕೂಡ, ಆ ವಿಷಯವನ್ನು ಸಚಿವ ಸಂಪುಟದ ಸಭೆಯಲ್ಲಿ ಮಂಡಿಸಿದ ನಂತರ ವಿಧಾನಸಭೆ ಹಾಗೂ ವಿಧಾನಪರಿಷತ್ತುಗಳಲ್ಲಿ ಅಂಗೀಕೃತವಾಗಬೇಕಾಗುತ್ತಿತ್ತು. ಈ ರೀತಿಯಾಗಿ ಪ್ರತಿಯೊಂದು ಪ್ರಕರಣದಲ್ಲಿ ಪದೇ, ಮಾಡಬೇಕಾಗಿತ್ತು.

ಇದನ್ನು ತಪ್ಪಿಸಬೇಕೆಂದು ನಾವು ಈಗ ಈ ವಿಧೇಯಕಕ್ಕೆ ತಿದ್ದುಪಡಿಯನ್ನು ತಂದು, general ಆಗಿ ಅನುಮತಿಯನ್ನು ಪಡೆದುಕೊಳ್ಳುವುದಕ್ಕೋಸ್ಕರವಾಗಿ ವಿಧೇಯಕವನ್ನು ತಂದಿದ್ದೇವೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು"

**ಪ್ರಸ್ತಾವದ ಅಂಗೀಕಾರ**

**ಡಾ॥ ಯತೀಂದ್ರ ಎಸ್. (ನಗರಾಭಿವೃದ್ಧಿ ಸಚಿವರು) (ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಸದನದ ಅನುಮೋದನೆ ದೊರೆಯಿತು**

**ಋ) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ, 2026**

**ಪರ್ಯಾಲೋಚನಾ ಪ್ರಸ್ತಾವ**

**ಡಾ॥ ಯತೀಂದ್ರ ಎಸ್. (ನಗರಾಭಿವೃದ್ಧಿ ಸಚಿವರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಡಾ॥ ಯತೀಂದ್ರ ಎಸ್. (ನಗರಾಭಿವೃದ್ಧಿ ಸಚಿವರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಇವತ್ತಿನ ಬೆಳಗ್ಗೆ ತಾನೆ ನಾವು ಪುರಸಭೆ, ನಗರಸಭೆ ಮತ್ತು ಮಹಾನಗರ ಪಾಲಿಕೆಯ ಅನಧಿಕೃತ ಬಡಾವಣೆಗಳಲ್ಲಿ ಇರುವ ಖಾಸಗಿ ಮಾಲೀಕತ್ವದ ರಸ್ತೆಗಳು ಹಾಳಾಗಿದ್ದರೆ, ಅವುಗಳನ್ನು ಅಭಿವೃದ್ಧಿಪಡಿಸಬೇಕೆಂದು ಮತ್ತು ಅವುಗಳನ್ನು ಸರ್ಕಾರವು ಸ್ವಾಧೀನ ಮಾಡಿಕೊಳ್ಳುವುದಕ್ಕೋಸ್ಕರ ಅದನ್ನು ಸಾರ್ವಜನಿಕ ರಸ್ತೆ ಎಂದು ಘೋಷಿಸಬೇಕೆಂದು ಈ ವಿಧೇಯಕಕ್ಕೆ ತಿದ್ದುಪಡಿಯನ್ನು ತಂದಿದ್ದೇವೆ. ಅದನ್ನು ಈಗ ನಾವು ಗ್ರಾಮ ಪಂಚಾಯಿತಿಗಳ ಮಟ್ಟಗಳಲ್ಲಿಯೂ ಮಾಡಬೇಕೆಂದು, ಈ ವಿಧೇಯಕಕ್ಕೆ ತಿದ್ದುಪಡಿಯನ್ನು ತಂದಿದ್ದೇವೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 6 ವರೆಗೆ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಖಂಡ 2 ರಿಂದ 6 ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 6 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಡಾ॥ ಯತೀಂದ್ರ ಎಸ್. (ನಗರಾಭಿವೃದ್ಧಿ ಸಚಿವರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಸದನದ ಅನುಮೋದನೆ ದೊರೆಯಿತು**

(ಮುಂದು)

(844)24-08-2026/4-30/bkp-vk (ಸಭಾಪತಿಯವರ ಉಪಸ್ಥಿತಿ)

**16. ನಿಯಮ 58ಎ ಅಡಿಯಲ್ಲಿ ಪ್ರಸ್ತಾಪಿಸಿದ ಶೂನ್ಯವೇಳೆ ಸೂಚನೆಗಳಿಗೆ ಸರ್ಕಾರದ ಲಿಖಿತ ಉತ್ತರಗಳು**

**ಅ) ವಿಷಯ:- ಶಿಕ್ಷಣದಿಂದ ಮಕ್ಕಳು ವಂಚಿತರಾಗಬಾರದೆಂಬ ದೃಷ್ಟಿಯಿಂದ ನಿರಂತರ ಆಪ್ ಮೂಲಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿಯನ್ನು ಹೆಚ್ಚಿಸುವ ಕುರಿತು.**

- - - - -

**ಡಾ॥ ಯತೀಂದ್ರ. ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ರಾಮೋಜಿಗೌಡ ಅವರು ದಿನಾಂಕ 18-8-2024 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ಸೂಚನೆಗೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

**ಆ) ವಿಷಯ:- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾಗಶಃ ಅರಣ್ಯ ಬಿಕ್ಕಟ್ಟಿಗೆ ಶಾಶ್ವತ ಪರಿಹಾರ ಒದಗಿಸುವ ಕುರಿತು.**

- - - - - -

**ಡಾ॥ ಯತೀಂದ್ರ ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಮಂಜುನಾಥ ಭಂಡಾರಿ ಅವರು ದಿನಾಂಕ 19-8-2024 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ಸೂಚನೆಗೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಇ) ವಿಷಯ:- ಎಲ್ ನಿನೋ ಮತ್ತು ಲಾನಿನಾ ಸೇರಿದಂತೆ ಹವಾಮಾನ ವೈಪರೀತ್ಯದ ಹಿನ್ನೆಲೆಯಲ್ಲಿ ಕರಾವಳಿ ಕರ್ನಾಟಕದಲ್ಲಿ ಉಳಿದ ಮಳೆ ನೀರನ್ನು ಸಂರಕ್ಷಿಸಿ ಅಂತರ್ಜಲ ಮರುಪೂರ್ಣಗೊಳಿಸುವ ಕುರಿತು.**

\- - - - - -

**ಡಾ॥ ಯತೀಂದ್ರ ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಪಿ.ವಿ.ಮೋಹನ್ ಅವರು ದಿನಾಂಕ 20-8-2024 ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ಸೂಚನೆಗೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

**ಈ) ವಿಷಯ:-ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜನ್ನು ಮಂಜೂರು ಮಾಡುವ ಕುರಿತು.**

- - - - -

**ಡಾ॥ ಯತೀಂದ್ರ ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಬಸನಗೌಡ ಬಾದರ್ಲಿ ಅವರು ದಿನಾಂಕ 20-8-2024ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ಸೂಚನೆಗೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

## 17. ನಿಯಮ 330ರ ಮೇರೆಗೆ ಚರ್ಚೆ

**ಆ) "ರಾಜ್ಯದಲ್ಲಿನ ಕಲ್ಲು ಗಣಿಗಾರಿಕೆಯಲ್ಲಿ ಅನಧಿಕೃತವಾಗಿ ಸಾದಾ ಕಟ್ಟಡ ಕಲ್ಲು ಸಾಗಾಣಿಕೆ ಮಾಡುವವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮದ ಕುರಿತು."**

- - - - -

. **ಶ್ರೀ ಎಫ್.ಹೆಚ್. ಜಕ್ಕಪ್ಪನವರ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ನನಗೆ ಅವಕಾಶ ಕೊಟ್ಟ ತಮಗೆ ವಂದನೆಗಳು. ಖನಿಜ ಸಂಪತ್ತನ್ನು ನಿಯಮಬಾಹಿರವಾಗಿ ಸಾಗಾಣಿಕೆ ಮಾಡಿದ್ದಕ್ಕಾಗಿ... ಒಂದಿಷ್ಟು ಕಲ್ಲು ಗಣಿಗಳನ್ನ ಇತ್ತೀಚೆಗೆ ಪುನಃ ಡ್ರೋನ್ ಮೂಲಕ ಸರ್ವೇ ಮಾಡಬೇಕು ಅಂತ ನಿರ್ದೇಶಿಸಲಾಗಿತ್ತು, ನಂತರ... ಪುನಃ ಮತ್ತೆ 2024 ಕ್ಕಿಂತ ಮುಂಚೆ ರಾಜ್ಯದಲ್ಲಿನ ಕಲ್ಲು ಗಣಿಗಳನ್ನು ಪುನಃ ಡ್ರೋನ್ ಮೂಲಕ ಸರ್ವೇ ಮಾಡಬೇಕು ಅಂತ ನಿರ್ದೇಶಿಸಲಾಗಿತ್ತು.

ಈಗ ಸರ್ಕಾರ ಒಂದು ಬಾರಿಯ ತೀರ್ಮಾನವನ್ನು (OTS) ಯೋಜನೆ ಮೂಲಕ ಈ ಸಮಸ್ಯೆ ಬಗೆಹರಿಸುವ ಉದ್ದೇಶದಿಂದ 2006 ರಿಂದ ಇಲ್ಲಿಯವರೆಗೆ ಜಾರಿಗೆ ಬರುವಂತೆ ಪೂರ್ವಾನ್ವಯವಾಗುವಂತೆ ಇಂಟರೆಸ್ಟ್, ದಂಡ ವಿಧಿಸಲು ಚಾಲ್ತಿ ನಿರ್ದೇಶನವಿದೆ. ಯಾವುದೇ ಒಂದು ಕಾನೂನು ಅಥವಾ ನಿಯಮಗಳನ್ನು ಪೂರ್ವಾನ್ವಯವಾಗಿ ಜಾರಿಗೊಳಿಸಲು ಅವಕಾಶವಿಲ್ಲವೆಂದು ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಆದೇಶಿಸಿದೆ. ಹೀಗಿದ್ದರೂ ಕೂಡ ಸರ್ಕಾರ ಕಾನೂನು ಹಾಗೂ ನಿಯಮಗಳನ್ನು ಪೂರ್ವಾನ್ವಯವಾಗಿ ಜಾರಿಗೊಳಿಸುತ್ತಿದೆ, ಈ ವರ್ಷದಿಂದ ಜಾರಿಗೊಳಿಸುವುದು ಸೂಕ್ತ ಎಂದು ಭಾವಿಸುತ್ತೇವೆ.

ಈ ಕುರಿತು ಅಂತಿಮ ಆದೇಶ ಮಾಡುವ ಮೊದಲು ರಾಜ್ಯದ ಗಣಿ ಮಾಲೀಕರ ಸಭೆಯನ್ನು ಕರೆದು ನಿರ್ಣಯ ತೆಗೆದುಕೊಳ್ಳುವಂತೆ ಗಣಿ ಮತ್ತು ಭೂವಿಜ್ಞಾನ ಇಲಾಖೆ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ. ಇದಕ್ಕೆ ಉತ್ತರ ಕೊಟ್ಟಿದ್ದಾರೆ. ಆ ಉತ್ತರದ ಪರವಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ತಮ್ಮ ಮುಖಾಂತರ ಮಂತ್ರಿಗಳ ಹತ್ತಿರ ಕೇಳಿಕೊಳ್ಳುವುದೇನೆಂದರೆ, ದಯವಿಟ್ಟು ಯಾವುದೇ... ಕಲ್ಲು ಗಣಿ ಗುತ್ತಿಗೆದಾರರು ಈ ಕಟ್ಟಡದ ಒಂದು ಉದ್ಯಮಕ್ಕೆ ಆಧಾರ ಸ್ತಂಭ ಆಗಿರುತ್ತಾರೆ. ಲಕ್ಷ ಲಕ್ಷ ಜನಗಳಿಗೆ ಕೆಲಸ ಕೊಟ್ಟಿದ್ದಾರೆ. ಆದ್ದರಿಂದ, 2006 ರಿಂದ ದಂಡ ಹಾಕುವಂತದ್ದು ನ್ಯಾಯೋಚಿತ ಅಲ್ಲ.

ಆದ್ದರಿಂದ, ನಾನು ತಮ್ಮ ಮುಖಾಂತರ ಮಂತ್ರಿಗಳಿಗೆ ಹೇಳಲಿಕ್ಕೆ ಇಷ್ಟಪಡುವುದು ಏನೆಂದರೆ, ದಯವಿಟ್ಟು ನೀವು 2006 ರಲ್ಲಿ royalty per ton was Rs.20 and now you are charging Rs.70 per ton. ಇದು ಏನಾಗುತ್ತದೆ ಎಂದರೆ, ಸಂಪೂರ್ಣವಾಗಿ ಆ ಒಂದು ಉದ್ಯಮವೇ ಬಂದ್ ಆಗುವಂತಹ ಬಹುದೊಡ್ಡ ಅಪಾಯದ ಅಂಚಿಗೆ ಸರ್ಕಾರದ ಈ ನೀತಿ ಅನ್ವಯವಾಗುತ್ತದೆ. ಆ ಕಾರಣಕ್ಕೋಸ್ಕರ ಈ ಕಲ್ಲು ಗಣಿ

ಕಟ್ಟಡದ ಗುತ್ತಿಗೆದಾರರಿಗೆ ದಯವಿಟ್ಟು prospective date ಆಗಿ ನೀವು ದಂಡ ಹಾಕಿದರೆ ಪರವಾಗಿಲ್ಲ. ಆದರೆ, ಈ ರೀತಿಯಾದಂತಹ ದಂಡ ಹಾಕುವುದರಿಂದ ಇಡೀ ಉದ್ಯಮ ನಿಂತುಹೋಗುತ್ತದೆ. ಆ ಕಾರಣಕ್ಕೋಸ್ಕರ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಪ್ರತಿವರ್ಷ ಆಡಿಟ್ ಮಾಡಿದಾಗ ಅದರಲ್ಲಿ ಯಾವ ತಪ್ಪುಗಳು ಇವರಿಗೆ ಕಂಡುಬಂದಿಲ್ಲ. ಆದರೆ, ಇದ್ದಕ್ಕಿದ್ದಂತೆ ಈ ರೀತಿಯಾಗಿದೆ ಎಂದು ಡ್ರೋನ್ ಮುಖಾಂತರ ಹೇಳುವಂತದ್ದು ನ್ಯಾಯೋಚಿತ ಅಲ್ಲ.

ಆ ಕಾರಣಕ್ಕೋಸ್ಕರ ಸರ್ಕಾರದಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, 2006 ರಿಂದ ನೀವು ದಂಡ ವಸೂಲು ಮಾಡದೇ ಇತ್ತೀಚಿನ ದಿನದಿಂದ ಆ ಕಾನೂನನ್ನು ಅನ್ವಯ ಮಾಡುವುದರ ಮೂಲಕ ದಯವಿಟ್ಟು ಅವರಿಗೆ ಏನು ಸ್ವಲ್ಪ ಸ್ವಲ್ಪ ದಂಡ ಹಾಕಲಿಕ್ಕೆ 1957 ರ ಆಕ್ಟ್ ನಿಮಗೆ ಏನು ಪರ್ಮಿಟ್ ಮಾಡುತ್ತದೆಯೇ ಅದನ್ನು ಮಾಡಬೇಕೆಂದು ಹೇಳಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಡಾ॥ ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ಸಭಾಪತಿಗಳೇ, ಗೌರವಾನ್ವಿತ ಶಾಸಕರಾದಂತಹ ಜಕಪ್ಪನವರ್‌ರವರು ಏನು ಹೇಳುತ್ತಿದ್ದಾರೆಂದರೆ ಯಾರು ಅನಧಿಕೃತವಾಗಿ ಸಾದಾ ಕಟ್ಟಡ ಕಲ್ಲಿನ ಗಣಿಗಾರಿಕೆ ಮಾಡಿ ಸಾಗಾಣಿಕೆ ಮಾಡಿರುತ್ತಾರೆ, ಅವರಿಗೆ ನಾವು One-Time Settlement ಎಂದು ಮಾಡಿ ಅವರಿಗೆ 70 ರೂಪಾಯಿ ರಾಯಲ್ಟಿ ಕಟ್ಟಬೇಕೆಂದು ಹೇಳಿ ಒಂದು ತೀರ್ಮಾನ ಮಾಡಿದ್ದೇವೆ. ಈ ತೀರ್ಮಾನವನ್ನು ಸುಮ್ಮನೆ ಏಕಾಏಕಿ ತೆಗೆದುಕೊಂಡಿಲ್ಲ. ಇದಕ್ಕಾಗಿಯೇ ಸಚಿವ ಸಂಪುಟದಲ್ಲಿ ಒಂದು ಉಪ ಸಮಿತಿಯನ್ನು ರಚನೆ ಮಾಡಿ, ಆ ಉಪ ಸಮಿತಿಯಲ್ಲಿ ವಿಸ್ತೃತವಾಗಿ ಚರ್ಚೆ ನಡೆದು ಈ ತೀರ್ಮಾನಕ್ಕೆ ಬಂದಿದೆ. ಈಗ ಅಕಸ್ಮಾತ್ ಈ ಒಂದು One-Time Settlement ಮಾಡಲಲ್ಲ ಎಂದರೆ, ಪ್ರಸ್ತುತ ಚಾಲ್ತಿಯಲ್ಲಿರೋ ಕಾಯ್ದೆ ಪ್ರಕಾರ ಅವರೇ ಹೇಳಿರುವಂತೆ ಎಂ.ಎಂ.ಡಿ.ಆರ್., 1957 ರ ಕಾಯ್ದೆ ಪ್ರಕಾರ ಸೆಕ್ಷನ್ 21(1) ಅಥವಾ ಸೆಕ್ಷನ್ 21(2) ರಲ್ಲಿ ನಾವು ಏನು ಮಾಡಬೇಕಾಗುತ್ತದೆ ಎಂದರೆ, ಹೆಕ್ಟೇರ್‌ಗೆ 5 ಲಕ್ಷ ರೂಪಾಯಿ ದಂಡದ ಜೊತೆಗೆ ಅವರನ್ನ 5 ವರ್ಷಗಳ ತನಕ ಅಥವಾ 2 ವರ್ಷಗಳ ತನಕ ಅವರಿಗೆ ಬಂಧನ ಕೂಡ ಮಾಡಬೇಕಾಗುತ್ತದೆ. ಅದನ್ನು ತಪ್ಪಿಸಬೇಕು, ಅನುಕೂಲ ಮಾಡಿಕೊಡಬೇಕು ಎನ್ನುವ ಒಂದು ಕಾರಣದಿಂದ ನಾವು ಈ One-Time Settlement ಅನ್ನು ಸರ್ಕಾರ ತಂದಿದೆ.

ಮಾನ್ಯ ಸಭಾಪತಿಗಳೇ, ಇದರ ಪ್ರಕಾರ ಅವರೇನಾದರೂ ಅವರಿಗೆ ಅನುಮತಿ ಕೊಟ್ಟಿರುವುದಕ್ಕಿಂತ ಹೆಚ್ಚು ಗಣಿಗಾರಿಕೆ ಮಾಡಿದ್ದರೆ, ಅವರಿಗೆ ಎಷ್ಟು ರಾಯಲ್ಟಿ ಇದೆಯೋ ಅಷ್ಟು ಮಾತ್ರ ಕಟ್ಟಬೇಕು (1:1). ಅಕಸ್ಮಾತ್ ಪಕ್ಕದಲ್ಲಿ ಅವರು ಅತಿಕ್ರಮಣ ಮಾಡಿ ಏನಾದರೂ ಗಣಿಗಾರಿಕೆ ಮಾಡಿದ್ದರೆ 1:3 ರಾಯಲ್ಟಿ ಕಟ್ಟಬೇಕಾಗುತ್ತದೆ.

ಆದರೆ, ಮಾನ್ಯ ಸದಸ್ಯರಾದ ಜಕಪ್ಪನವರ್ ಅವರು retrospective ಮಾಡಲೇಬೇಕೆಂದು ಹೇಳುತ್ತಿದ್ದಾರೆ. ಏಕೆಂದರೆ, ಅನಧಿಕೃತವಾಗಿ ಅವರು ಗಣಿಗಾರಿಕೆ ಮಾಡಿದ ಮೇಲೆ ಅವರಿಗೆ ಒಂದಲ್ಲ ಒಂದು ರೀತಿ ದಂಡವನ್ನು ಕಟ್ಟಲೇಬೇಕು. ಆದರೆ ಸದಸ್ಯರು ಏನು ಹೇಳುತ್ತಿದ್ದಾರೆಂದರೆ, 2006 ರಲ್ಲಿ ಆಗ ರಾಯಲ್ಟಿ ಬರಿ 15 ರೂಪಾಯಿ, 20 ರೂಪಾಯಿ ಇತ್ತು. ಆದರೆ ಈಗ ನೀವು 70 ರೂಪಾಯಿ ರಾಯಲ್ಟಿ ಫಿಕ್ಸ್ ಮಾಡಿರುವುದು ಅವರಿಗೆ ಜಾಸ್ತಿಯಾಗಿದೆ, ಹೊರೆಯಾಗಿದೆ, ಅದನ್ನು ಕಮ್ಮಿ ಮಾಡಬೇಕೆಂದು ಕೇಳುತ್ತಾ ಇದ್ದಾರೆ. ಈಗ ಇದನ್ನು ಸಚಿವರ ಗಮನಕ್ಕೆ ತರುತ್ತೇನೆ. ಮಂತ್ರಿಗಳು ಈಗಾಗಲೇ ಮುಖ್ಯಮಂತ್ರಿಗಳ ಜೊತೆ ಇದನ್ನು ಚರ್ಚೆ ಮಾಡಬೇಕು ಅಂತ ಹೇಳಿ ಸಮಯ ಕೇಳಿದ್ದಾರೆ. ಅವರು ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ಈ ರಾಯಲ್ಟಿಯನ್ನು ಏನಾದರೂ ಕಮ್ಮಿ ಮಾಡೋಕೆ ಆಗುತ್ತಾ ಅನ್ನೋದಕ್ಕೆ ನಾವು ಪರಿಶೀಲನೆ ಮಾಡುತ್ತೇವೆ ಅಂತ ಹೇಳಿ ಅವರಿಗೆ ಸಚಿವರ ಪರವಾಗಿ ಉತ್ತರ ಕೊಡುತ್ತಿದ್ದೇನೆ.

**ಶ್ರೀ ಎಫ್.ಹೆಚ್. ಜಕ್ಕಪ್ಪನವರ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು;-** ಸಚಿವರೆ, ಸಂಬಂಧಪಟ್ಟ ಸಚಿವರನ್ನು ಕರೆದು ಹೇಳುತ್ತೇವೆಂದು ಹೇಳಿ.

**ಡಾ॥ ಯತೀಂದ್ರ ಎಸ್. (ಸಭಾನಾಯಕರು):-** ಸಂಬಂಧಪಟ್ಟ. ಸಚಿವರನ್ನು ಕರೆದು ಹೇಳುತ್ತೇನೆ.

**ಶ್ರೀ ಎಫ್.ಹೆಚ್. ಜಕ್ಕಪ್ಪನವರ್:-** ನಮ್ಮ ಈ ಗಣಿ ಮಾಲೀಕರನ್ನು ಕೂಡಿಸಿಕೊಂಡು ಅವರ ಜೊತೆ ಕೂಡ ಸಭೆ ಮಾಡಿ ಒಂದು ತೀರ್ಮಾನ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳ ಹತ್ತಿರ ವಿನಂತಿ ಮಾಡಿಕೊಳ್ಳುತ್ತೇನೆ.

**ಡಾ॥ ಯತೀಂದ್ರ ಎಸ್. (ಸಭಾನಾಯಕರು):-** ಆಯಿತು, ಸಭಾಪತಿಗಳೇ, ಮಾನ್ಯ ಮುಖ್ಯಮಂತ್ರಿಗಳ ಜೊತೆ, ಸಚಿವರು ಚರ್ಚೆ ಮಾಡಿ ರಾಯಲ್ಟಿ ಕಮ್ಮಿ ಮಾಡೋಕೆ ಆಗುತ್ತಾ, ಮತ್ತೆ ಅವರದ್ದು ಏನು ಅಸೋಸಿಯೇಷನ್ ಇದೆ, ಅವರ ಜೊತೆ ಕೂಡ ಚರ್ಚೆ ಮಾಡಿ ಒಂದು ಪರಿಹಾರ ಕಂಡುಕೊಳ್ಳುವಂತಹ ಪ್ರಯತ್ನ ಮಾಡುತ್ತೇವೆ.

## 18. ಶಾಸನ ರಚನೆ

### ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

### ಎ) ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2026

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಕಾರ್ಮಿಕ ಮತ್ತು ಉದ್ಯೋಗ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ "**2026ರ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು** ಪರ್ಯಾಲೋಚಿಸಬೇಕೆಂದು ಸಭೆಯನ್ನು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಕೃಷ್ಣ ಬೈರೇಗೌಡ(ಬೃಹತ್ ಬೆಂಗಳೂರು ನಗರಾಭಿವೃದ್ಧಿ ಸಚಿವರು) (ಕಾರ್ಮಿಕ ಮತ್ತು ಉದ್ಯೋಗ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ತಮಗೆ ಗೊತ್ತಿರುವ ಹಾಗೆ ಪ್ರತಿಯೊಂದು ವಾಣಿಜ್ಯ ಸಂಸ್ಥೆಯೂ ಕೂಡ ಕಾನೂನಿನ ಅಡಿಯಲ್ಲಿ ನೋಂದಣಿಯನ್ನು ಪಡೆದುಕೊಳ್ಳಬೇಕಾಗಿರುವುದು ಕಡ್ಡಾಯವಾಗಿದೆ. ಇಷ್ಟು ದಿನದವರೆಗೆ Occupational Safety, Health and Working Conditions Code ಎಂದು ಹೇಳಿ, ಕೇಂದ್ರ ಸರ್ಕಾರದವರು ಇದ್ದಾರೆ. ಅದರ ಕೆಳಗಡೆ ಎಲ್ಲಾ ಸಂಸ್ಥೆಗಳು ಕೂಡ ನೋಂದಣಿ ಮಾಡಿಕೊಳ್ಳಬೇಕಾಗಿತ್ತು. ಈಗ Occupational Safety, Health and Working Conditions Code ಏನಿದೆ, ಅದು 10 ನೌಕರರು ಅಥವಾ ಅದಕ್ಕಿಂತ ಹೆಚ್ಚು ನೌಕರರು ಇರುವಂತವರಿಗೆ ಎಂದು ಹೇಳಿ ಅಲ್ಲಿ ಅದನ್ನ ಅವರು ಅವರ ಕೋಡ್‌ನಲ್ಲಿ ತಿದ್ದುಪಡಿ ಮಾಡಿದ್ದಾರೆ. ಹಾಗಾಗಿ, 10 ನೌಕರರಿಗಿಂತ ಕಡಿಮೆ ಇರತಕ್ಕಂತಹ ವಾಣಿಜ್ಯ ಸಂಸ್ಥೆಗಳು, ಅದು ಈ ನಮ್ಮ ಕಾನೂನಿನ ಅಡಿಯಲ್ಲಿ—ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳು ವಿಧೇಯಕ. ಇದರ ಅಡಿಯಲ್ಲಿ ನೋಂದಣಿ ಪಡೆದುಕೊಳ್ಳಬೇಕು ಅಂತ ಹೇಳಿ, ಆ ನೋಂದಣಿ enabling provision ಅನ್ನು ಇದರ ಮುಖಾಂತರ ತಗೆದುಕೊಂಡು ಬರುತ್ತಿದ್ದೇವೆ. ಯಾಕೆ ಅಂದ್ರೆ ತಮಗೆ ಗೊತ್ತಿರೋ ಹಾಗೆ ಒಂದು accountability ಇರಬೇಕು, ಬೇಸಿಕ್ ಆಗಿ ಎಲ್ಲಾದರೂ ಒಂದು ಕಡೆ ರಿಜಿಸ್ಟರ್ ಆಗಿರಬೇಕು.

(ಮುಂದು)

**(845) 24.08.2026 04.40 ಎಸ್‌ವಿ-ವಿಕೆ (ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ರ ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 12 ರವರೆಗೆ**

**ಸಭಾಪತಿಯವರು:-** "ಖಂಡ 2 ರಿಂದ 12 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 12 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ-1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು) (ಕಾರ್ಮಿಕ ಮತ್ತು ಉದ್ಯೋಗ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ರ ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ರ ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ದೊರೆಯಿತು**

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಪಲಾಯನ ಮಾಡುವುದಕ್ಕೆ ಸಿದ್ಧರಾಗಿದ್ದಾರೆಯೇ? ಸರ್ಕಾರ ಪಲಾಯನ ಮಾಡಲಿಕ್ಕೆ ಪ್ರಾರಂಭ ಮಾಡಿದಂತೆ ಇದೆ. ಎಲ್ಲಾ ವಿಧೇಯಕಗಳಿಗೂ ಒಂದೇ ದಿನ ಅಂಗೀಕಾರ ಪಡೆದುಕೊಂಡು ಪಲಾಯನ ಮಾಡುತ್ತಿದೆ. ಗಂಟು ಮೂಟೆ ಕಟ್ಟುವುದಕ್ಕೆ ಪ್ರಾರಂಭಿಸಿದೆ.

**ಶ್ರೀ ಕೃಷ್ಣ ಬೈರೇಗೌಡ (ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೆ, ನಾವು ಈ ವಾರ ಪೂರ್ತಿ ಅಧಿವೇಶನ ನಡೆಸಲಿಕ್ಕೆ ತಯಾರಿದ್ದೇವೆ. ಚರ್ಚೆಗೆ ಬರಲಿ, ನಾವು ಈ ವಾರ ಪೂರ್ತಿ ಅಧಿವೇಶನ ನಡೆಸಲು ತಯಾರಿದ್ದೇವೆ. ಬರಲಿ, ಇದೇ ಸದನದಲ್ಲಿ ಚರ್ಚೆ ಮಾಡಲಿ. ವಿಧೇಯಕಗಳ ಮೇಲೆ ಚರ್ಚೆ ಮಾಡಲಿ, ಅವರ ಅಭಿಪ್ರಾಯವನ್ನು ತಿಳಿಸಲಿ. ನಾವು ವಿರೋಧ ಪಕ್ಷದವರಿಗೆ ಮನವಿ ಮಾಡುತ್ತಿದ್ದೇವೆ. ವಿಧೇಯಕಗಳ ಬಗ್ಗೆ ಚರ್ಚೆ ಮಾಡಲಿ, ಅವರು ಸಲಹೆಗಳನ್ನು ಕೊಡಲಿ. ಸರ್ಕಾರದ ವಿರುದ್ಧವಾಗಿ ಟೀಕೆಗಳನ್ನು ಮಾಡಲಿ. Constructive criticism ಮಾಡಿ. ಅವರು ಚರ್ಚೆಯಲ್ಲಿ ಭಾಗವಹಿಸಬೇಕೆಂದು ತಮ್ಮ ಮೂಲಕ ಮತ್ತೊಮ್ಮೆ ಕೇಳಿಕೊಳ್ಳುತ್ತೇವೆ. ಸದನದ ಕಲಾಪವನ್ನು ಹಾಳು ಮಾಡಬಾರದು. ಸದನದ ಕಲಾಪವನ್ನು ರಾಜಕೀಯಕ್ಕೆ ಬಲಿಕೊಡಬಾರದು. ವಿಧೇಯಕಗಳ ಮೇಲೆ ವಿರೋಧ ಪಕ್ಷದವರು ಬೆಳಕು ಚೆಲ್ಲಬೇಕು. ನಾನು ವಿರೋಧ ಪಕ್ಷದವರಿಗೆ ಮನವಿ ಮಾಡುತ್ತಿದ್ದೇನೆ, ಆಹ್ವಾನ ಮಾಡುತ್ತಿದ್ದೇನೆ, ಸ್ವಾಗತ ಮಾಡುತ್ತಿದ್ದೇನೆ. ದಯವಿಟ್ಟು ಚರ್ಚೆಯಲ್ಲಿ ಭಾಗವಹಿಸಬೇಕು.

**(ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ಉಳಿದ ಎಲ್ಲಾ ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ಧರಣಿನಿರತರಾಗಿ ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

## 19. ನಿಯಮ 330ರ ಮೇರೆಗೆ ಚರ್ಚೆ

### ಇ) ವಿಷಯ:- ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣಕ್ಕಾಗಿ ಕರ್ನಾಟಕ ರಾಜ್ಯದ ಲಕ್ಷಾಂತರ ಭಕ್ತಾದಿಗಳು ನೀಡಿದ ದೇಣಿಗೆ ಹಾಗೂ ಕಾಣಿಕೆಯನ್ನು ದುರುಪಯೋಗಪಡಿಸಿಕೊಂಡಿರುವ ಕುರಿತು.

- - - - -

**ಶ್ರೀ ಕೆ. ಶಿವಕುಮಾರ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಈ ವಿಷಯದ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ಮತ್ತು ಈ ಸದನದ ಎಲ್ಲಾ ಸದಸ್ಯರು ಇದರ ಮೇಲೆ ಸ್ವಲ್ಪ ಗಮನವಿಡಬೇಕು. ಈ ವಿಷಯವು ಕರ್ನಾಟಕಕ್ಕೆ ಸಂಬಂಧಪಟ್ಟಿರುವ ವಿಷಯವಾಗಿರುವುದರಿಂದ ನಾನು ಇದನ್ನು ಪ್ರಸ್ತಾಪಿಸಬಯಸುತ್ತೇನೆ.

ಮಾನ್ಯ ಸಭಾಪತಿಯವರೆ, ಈ ದೇಶದಲ್ಲಿ ಶ್ರೀರಾಮನ ದೇವಸ್ಥಾನವನ್ನು ಕಟ್ಟಬೇಕೆಂದು ಕಾಲಾನುಕಾಲದಿಂದ ನಡೆಯುತ್ತಿತ್ತು. ನಾನು ಇತಿಹಾಸಕ್ಕೆ ಹೋಗುವುದಿಲ್ಲ. ಕಳೆದ 500 ವರ್ಷಗಳಿಂದ ಏನಾಯಿತು ಎನ್ನುವುದರ ಬಗ್ಗೆ ನಾನು ಮಾತನಾಡಲು ಹೋಗುವುದಿಲ್ಲ. ಆದರೆ ಇವತ್ತು ರಾಮನ ದೇವಸ್ಥಾನವನ್ನು ಕಟ್ಟಬೇಕೆನ್ನುವುದು, the core aspirations of the people of a Country. ಆದರೆ ಈ ದೇವಸ್ಥಾನ ಕಟ್ಟಲು ಮಾನ್ಯ ಪ್ರಧಾನ ಮಂತ್ರಿಗಳು ತೀರ್ಮಾನಿಸಿ, ನ್ಯಾಯಾಲಯದ ಆದೇಶ ಬಂದ ನಂತರ, ಅವರೇ ಹೋಗಿ ಅದನ್ನು ಸರಿಸಮಾನವಾಗಿ ಮೂರು ಪಾಲು ಮಾಡಿದ ಮೇಲೆ ಅದನ್ನು compromise ಮಾಡಿ, 2019ರಲ್ಲಿ ಅವರೇ ಶಿಲಾನ್ಯಾಸ ಮಾಡಿದ್ದನ್ನು ನಾವು ನೋಡುತ್ತೇವೆ. ಕೆಲಸ ಪ್ರಾರಂಭ ಮಾಡಿದರು. ಅದಾದ ನಂತರ 2025ರಲ್ಲಿ ಮೈಸೂರಿನಿಂದ ಹೋದ ಬಾಲರಾಮನನ್ನು ಆ ಮಂದಿರದಲ್ಲಿ ಪ್ರತಿಷ್ಠಾಪಿಸಿ, ಇಡೀ ದೇಶ ಆ ಕಡೆ ನೋಡುವಂತಾಯಿತು.

ಮಾನ್ಯ ಸಭಾಪತಿಯವರೆ, ಇಂದು ದುರಂತ ಏನೆಂದರೆ ಇವತ್ತು ಶ್ರೀ ಅರುಣ್ ಯೋಗಿರಾಜ್ ಎನ್ನುವವರು ಕೆತ್ತಿರುವ ಶ್ರೀರಾಮನ ಮೂರ್ತಿಯನ್ನು ನಾವು ಅಲ್ಲಿ ನೋಡುತ್ತಿದ್ದೇವೆ. ಆದರೆ ಇವತ್ತು ಇಡೀ ಜಗತ್ತಿನಲ್ಲಿ ಸುಮಾರು ರೂ.3,000 ದಿಂದ ರೂ.3,500 ಕೋಟಿಯಷ್ಟು ಹಣವನ್ನು ಭಕ್ತಾದಿಗಳು ಕೊಟ್ಟರು. 1992ರಲ್ಲಿ ಹಳ್ಳಿ ಹಳ್ಳಿಗಳಿಂದಲೂ ಇಟ್ಟಿಗೆ, ಮಣ್ಣು, ಕಲ್ಲನ್ನು ಸಂಗ್ರಹಿಸಿ, ದೇವಸ್ಥಾನ ಕಟ್ಟಲು ಕೊಟ್ಟರು. 1992-93ರಲ್ಲಿ ಎಂ.ಎಸ್. ರಾಮಯ್ಯ ಕಾಲೇಜಿನಿಂದ ಮಾನ್ಯ ಎಂ. ಆರ್. ಸೀತಾರಾಂ ಅವರು ಅಂದಿನ ಕಾಲಕ್ಕೆ ರೂ.1 ಲಕ್ಷ ಕೊಟ್ಟಿದ್ದರು. ಅದಕ್ಕೆ ಲೆಕ್ಕ ಸಿಗಲಿಲ್ಲ. ಅದನ್ನು ಬಿಡಿ, ನಾವು ಯಾರೂ ಅದರ ಲೆಕ್ಕವನ್ನು ಕೇಳುತ್ತಿಲ್ಲ. ಆದರೆ ಇವತ್ತು ರೂ.3,500 ಕೋಟಿಯಷ್ಟು ಹಣವನ್ನು ದೇವಸ್ಥಾನ ಕಟ್ಟಲು ಕೊಟ್ಟರು. ಆದರೆ ದೇವಸ್ಥಾನದಲ್ಲಿ ಏನು ಮಾಡಬೇಕು ಎನ್ನುವುದರ ಬಗ್ಗೆ ಬಹಳ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕಿತ್ತು. ಒಂದು ಕಾರ್ಯಕ್ರಮ ಆದ ಮೇಲೆ ರೂ.2150 ಕೋಟಿಗಳಲ್ಲಿ ದೇವಸ್ಥಾನವನ್ನು ಕಟ್ಟಿದರು. ಆದರೆ ದೇವಸ್ಥಾನ ಕಟ್ಟಿದ್ದರಲ್ಲಿ ರೂ.3,396 ಕೋಟಿ ಟ್ಯಾಕ್ಸ್ ಕಟ್ಟಿದ್ದಾರೆ. ಅದಕ್ಕೆ ಇಡೀ ಜಗತ್ತಿನಾದ್ಯಂತ ರೂ.3,500 ಕೋಟಿ ಕೊಟ್ಟಿದ್ದಾರೆ. ದೇಶದ ಬಹಳ ದೊಡ್ಡ ದೊಡ್ಡ ಶ್ರೀಮಂತರು

ಸಾಕಷ್ಟು ಹಣವನ್ನು ಕೊಟ್ಟಿದ್ದಾರೆ. ಅದರಲ್ಲಿ ಒಬ್ಬರೇ ರೂ.18.6 ಕೋಟಿ ಹಣ ಕೊಟ್ಟಿದ್ದಾರೆ. ಶ್ರೀ ದಿಲೀಪ್ ಕುಮಾರ್ ಕಲ್ಕಿ ಎಂಬುವವರು 101 ಕೆಜಿ ಚಿನ್ನ ಕೊಟ್ಟಿದ್ದಾರೆ. ಅದೇ ರೀತಿ ಒಂದು ಕಂಪನಿಯ ಸಿ.ಇ.ಓ ಒಬ್ಬರು 21 ಬೆಳ್ಳಿ ಇಟ್ಟಿಗೆಗಳನ್ನು ಕೊಟ್ಟಿದ್ದಾರೆ. ಈ ರೀತಿ ದೇಣಿಗೆ ಕೊಟ್ಟು ದೇವಸ್ಥಾನ ಕಟ್ಟಲಿಕ್ಕೆ ಅವಕಾಶ ಮಾಡಿಕೊಟ್ಟ ಜನರಿಗೆ ಯಾವ ರೀತಿಯ ಅನ್ಯಾಯವಾಯಿತು ಎಂದು ನಾನು ಹೇಳುತ್ತೇನೆ.

ರಾಮ ಮಂದಿರ ನಿರ್ಮಾಣಕ್ಕಾಗಿ ರೂ.3000 ಕೋಟಿ ದೇಣಿಗೆ ಬಂದಿದ್ದು, ಅದಕ್ಕೆ ಸಾರ್ವಜನಿಕವಾಗಿ ಲೆಕ್ಕ ಕೊಡಬೇಕಾಗಿತ್ತು. ಆದರೆ ಇವತ್ತು ಕೇಂದ್ರ ಸರ್ಕಾರ ಮಾಡಿದ ಮೇಲೆ ಅದರ ಜವಾಬ್ದಾರಿಯಿತ್ತು. ಏಕೆಂದರೆ ದೇವಸ್ಥಾನ ಕಟ್ಟುವುದಕ್ಕೆ 12 ಜನ ಸಮಿತಿ ಸದಸ್ಯರನ್ನು ಮಾಡಿದ್ದರು. ಅದರಲ್ಲಿ ಮಾನ್ಯ ಪ್ರಧಾನ ಮಂತ್ರಿಗಳ ಮಾಜಿ ಪ್ರಧಾನ ಕಾರ್ಯದರ್ಶಿಗಳೂ ಇದ್ದರು. ಆ 12 ಜನರೂ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರು. ಅವರು ಮಾಡಿದ lapses ನಿಂದಾಗಿ ಈ ದೇಶದ ಜನರಿಗೆ ದೊಡ್ಡ ವಂಚನೆಯನ್ನು ಮಾಡಿದ್ದಾರೆ. ನೋವು ಮಾಡಿದ್ದಾರೆ. ದುಡ್ಡು ಹೋದ ಪ್ರಶ್ನೆಯಲ್ಲ. ಯಾವುದೇ ಮಸೀದಿಯಲ್ಲಿರಬಹುದು, ಚರ್ಚ್‌ನಲ್ಲಿರಬಹುದು, ದೇವಸ್ಥಾನದಲ್ಲಿರಬಹುದು, ಗುರುದ್ವಾರದಲ್ಲಿರಬಹುದು; ಎಲ್ಲಿಯೂ ಹಣ ಪೋಲಾಗಬಾರದು. ಏಕೆಂದರೆ ಒಂದು ನಂಬಿಕೆಯಿಂದ ಜನ ದುಡ್ಡು ಕೊಟ್ಟಿದ್ದಾರೆ.

ನಾನು ಈ ಸದನದ ಮೂಲಕ ಶ್ರೀ ಅಭಿಷೇಕ್ ಉಪಾಧ್ಯಾಯ ಎನ್ನುವ ಪತ್ರಕರ್ತರನ್ನು ಅಭಿನಂದಿಸುತ್ತೇನೆ. Abhishek Upadhyay was the first visual viewer, who reported first on the Ayodhya Ram Mandir donation theft. ಅವರೇ ಇದನ್ನು ಮೊದಲು ಬರೆದದ್ದು. ಎಲ್ಲಾ ಜನರು ಅದರ ಬಗ್ಗೆ ಅನುಮಾನ ಪಟ್ಟರು. ಒಂದು ತಿಂಗಳು, ಎರಡು ತಿಂಗಳು ಅನುಮಾನ ಪಟ್ಟರು. ಆದರೆ ಏನೂ ಆಗಲಿಲ್ಲ. ಜೂನ್ 5ನೇ ತಾರೀಖಿಗೆ ವರದಿ ಬಂದಾಗ ಎಲ್ಲರೂ ನಗುವುದಕ್ಕೆ ಪ್ರಾರಂಭಿಸಿದರು. ಆಗ ಪುನಃ ಸಮಿತಿಯಲ್ಲಿದ್ದವರೇ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದರು. ಪುನಃ ಎಸ್ ಐ ಟಿ ಮಾಡಿದರು. ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಅಖಿಲೇಶ್ ಯಾದವ್‌ರವರು ದುಡ್ಡೆಲ್ಲಾ ಕರ್ನಾಟಕ್ಕೆ ಹೋಯಿತು ಎಂದು ಹೇಳಿದರು. ನಮ್ಮ ಮೇಲೆ ಏಕೀ ಆಪಾದನೆ? ನಾವು ದೇವಸ್ಥಾನ ಕಟ್ಟುವುದಕ್ಕೆ ಹಣ ಕೊಟ್ಟಿದ್ದೇವೆಯೇ ವಿನಃ ಅಲ್ಲಿಂದ ಹಣವನ್ನು ಹೊಡೆದಿಲ್ಲ. ಅಲ್ಲಿ ಲೋಕಲ್ ಲೀಡರ್ ಯಾರು ಆ ಸಮಿತಿಯಲ್ಲಿದ್ದರೋ, ಅವರ ಮೇಲೆ ಆಪಾದನೆ ಬಂದಿತ್ತು.

ಕರ್ನಾಟಕಕ್ಕೆ ದುಡ್ಡು ಹೋಗಿದೆ ಎಂದು ಶ್ರೀ ಅಖಿಲೇಶ್ ಯಾದವ್ ಅವರು ಹೇಳಿರುವುದಕ್ಕೆ ನಾನು ಹೇಳುತ್ತಿದ್ದೇನೆ. ಇದರಿಂದಾಗಿ ಕರ್ನಾಟಕದ ಜನತೆಗೆ ಅವಮಾನ ಆಗಿದೆ. ಪ್ರಧಾನ ಮಂತ್ರಿಗಳಿರಬಹುದು ಅಥವಾ ಕೇಂದ್ರ ಗೃಹ ಸಚಿವರಿರಬಹುದು, ಯಾರೂ ಇದರ ಬಗ್ಗೆ ಚಕಾರ ಎತ್ತಲಿಲ್ಲ. ಒಂದು ಹೇಳಿಕೆಯನ್ನೂ ಕೊಡಲಿಲ್ಲ. ಜೂನ್ 15ಕ್ಕೆ ಎಸ್ ಐ ಟಿ ರಚನೆ ಮಾಡುತ್ತಾರೆ. ಆಗಸ್ಟ್ 17ನೇ ತಾರೀಖಿಗೆ ಕ್ಲೀನ್‌ಚಿಟ್ ಕೊಟ್ಟರು. ಇದು ಯಾವ ರೀತಿ ಸಾಧ್ಯ? ಇಂತಹ ಪ್ರಸಂಗಗಳು ಇಡೀ ದೇಶದಲ್ಲಿಯೇ ಅನುಮಾನ ಮೂಡಿಸಿದೆ.

(ಮುಂದು)

(846) 24-08-2026 (4.50) ಕೆಜಿ-ಬಿಎನ್‌ಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿಂತು ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

**ಶ್ರೀ ಕೆ.ಶಿವಕುಮಾರ್ (ಮುಂದು):-**

ಮಾನ್ಯ ಸಭಾಪತಿಯವರೇ, ತಾವು ನೋಡಿ. ಇವತ್ತು ಏನಾಗಿದೆ ಎಂದರೆ, violation of religion and moral law ಎಂದು ಏನಿತ್ತು, ನೈತಿಕವಾದಂತಹ ಒಂದು ಕಾನೂನು ಮತ್ತೆ ಒಂದು ಧರ್ಮಕ್ಕೆ ಅನ್ಯಾಯವಾಗಿದೆ. ಈ ತರಹದ ಪ್ರಸಂಗಗಳು ಇವತ್ತು ನಮ್ಮನ್ನು ಕೀಳುಮಟ್ಟಕ್ಕೆ ತಳ್ಳಿದೆ ಎನ್ನುವುದರ ಬಗ್ಗೆ ಎರಡನೆ ಮಾತಿಲ್ಲ. ಇವತ್ತು 'ಶ್ರೀ ರಾಮನೇ' mute spectator ಆಗಿಬಿಟ್ಟಿದ್ದಾರೆ. ಅಲ್ಲಿ ಗರ್ಭಗುಡಿಯಲ್ಲಿ ಇರುವಂತಹ 'ಶ್ರೀ ರಾಮ' ಒಂದು mute spectator ಆಗಿರುವಂತಹದ್ದನ್ನು ನಾವು ನೋಡುತ್ತಿದ್ದೇವೆ. ಏಕೆಂದರೆ, 250 ಕೆ.ಜಿ. ಚಿನ್ನ ಮತ್ತು ಬೆಳ್ಳಿ ಇದೆನ್ನೆಲ್ಲಾ ಕಾಣಿಕೆಯಾಗಿ ಕೊಟ್ಟಿದ್ದರು. ಇದನ್ನು ನಾನು ಹೇಳುತ್ತಿಲ್ಲ. ಇದನ್ನು ಇವತ್ತು organised ಆಗಿ ಲೂಟಿ ಮಾಡಿರುವುದನ್ನು ನೋಡುತ್ತಿದ್ದೇವೆ. ಅಲ್ಲಿನ ಕಾಣಿಕೆಯ ಹಣವನ್ನು ಎಣಿಸುವುದಕ್ಕೆ ಇಟ್ಟಿದ್ದ 8 ಜನರನ್ನು ಒಂದು ದಿವಸವೂ frisk ಮಾಡಲಿಲ್ಲ. ಒಂದು ದಿವಸವೂ ಸಹ C.C.T.V. camera ಅನ್ನು ಹಾಕಲಿಲ್ಲ. ಒಂದು ದಿವಸವೂ ಸಹ ಅವರಿಗೆ biometric compulsory ಮಾಡಲಿಲ್ಲ. ಅವರ ಮೇಲೆ ಒಂದು ದಿವಸವೂ ಸಹ ನಿಗಾ ಇಡಲಿಲ್ಲ. Toilet ನಲ್ಲಿ bundle-bundle ಹಣ ಸಿಕ್ಕಿದ ಸಂದರ್ಭದಲ್ಲಿ ಇಲ್ಲಿ ಹಣವನ್ನು ಲೂಟಿ ಹೊಡೆಯುತ್ತಿದ್ದಾರೆಂದು ಗೊತ್ತಾಯಿತು. ಇವತ್ತು ಆ ಹಣ ಎಲ್ಲಿಗೆ ಹೋಗಿದೆ ಎಂದು ನೋಡಿದರೆ, ಇವತ್ತು bundle-bundle ದುಡ್ಡು ಬಂತು. ಮೊದಲನೆ ದಿವಸ ಅಲ್ಲಿ ನೋಡಿದಾಗ, 5 ಲಕ್ಷ ರೂಪಾಯಿಗಳು ಹೋಗಿತ್ತು. ಈಗ 50 ರಿಂದ 70 ಕೋಟಿ ರೂಪಾಯಿಗಳು ಲೂಟಿಯಾಗಿದ್ದು, 200 ಕೋಟಿ ರೂಪಾಯಿಗಳಷ್ಟು ಪೋಲಾಗಿದೆ ಎಂದು estimate ಬಂದಿದೆ ಎಂದು ಹೇಳುತ್ತಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಬೇಗ ಮಾತನಾಡಿ ಮುಗಿಸಿ.

**ಶ್ರೀ ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ತಾವು ಇದನ್ನು ಗಮನಿಸಬೇಕು. ಈ 8 ಜನ ಮಹಾಶಯರು ಏನು ಮಾಡಿದ್ದಾರೆಂದು ನೋಡಿದರೆ, ಅವರು 30 account ಗಳನ್ನು ತೆರೆದು 50 account ಗಳಲ್ಲಿ ಹಣವನ್ನು ಹಾಕಿ ಅದನ್ನು 30 ಕಂಪನಿಗಳಲ್ಲಿ shares ನಲ್ಲಿ ಹಾಕಿದ್ದಾರೆ. ಇದು ಎಂತಹ ದುರಂತವಾಗಿದೆ?

ಈ ದೇಶದ ಬಡವ, ಬಲ್ಲಿದ, ಭಕ್ತಾಧಿಗಳು ಹೋಗಿ ಕಾಣಿಕೆ ಹುಂಡಿಗೆ ಹಾಕಿದ ಹಣವನ್ನು ಯಾರೋ ಕದ್ದು ತೆಗೆದುಕೊಂಡು ಹೋಗಿ 30 ಕಂಪನಿಗಳ shares ನಲ್ಲಿ ಹಾಕಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ದಯವಿಟ್ಟು ಬೇಗ ಮಾತನಾಡಿ ಮುಗಿಸಿ.

**ಶ್ರೀ ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಇದು ಅವಮಾನದ ಸಂಗತಿ. ಇವತ್ತು ಇಡೀ ಸದನ ಇದನ್ನು ಖಂಡಿಸಬೇಕು. ಇವತ್ತಿನ ದಿವಸ ಆ ಹಣವನ್ನು ಬಿಡಿಸುವುದಕ್ಕೆ ಆಗಲಿಲ್ಲ. ಈ ಪ್ರಸಂಗವನ್ನು ಇಡೀ ಜಗತ್ತು ನೋಡುತ್ತಿದೆ. ಈ ಜಗತ್ತು ನೋಡುತ್ತಿರುವುದನ್ನು ನಾವು ಗಮನಿಸಿದಾಗ, ಮಾನ್ಯ ಪ್ರಧಾನ ಮಂತ್ರಿಯವರು ಏನು ಮಾಡಬೇಕಾಗಿತ್ತು?

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ದಯವಿಟ್ಟು ಬೇಗ ಮಾತನಾಡಿ ಮುಗಿಸಿ. ಬೇರೆ ಸದಸ್ಯರಿಗೆ ಅವಕಾಶ ಕೊಡಬೇಕು. ಹಾಗಾಗಿ, ತಾವು ಬೇಗ ಮುಗಿಸಿ.

**ಶ್ರೀ ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತಿದ್ದೇನೆ. ನನಗೆ ಬೇರೆ ಎಲ್ಲಾ ಸದಸ್ಯರು ಸ್ವಲ್ಪ ಸಹಕಾರ ಕೊಡುತ್ತಾರೆ. ಇವತ್ತು ಆ ಹಣವನ್ನು 30 account ಗಳಲ್ಲಿ ಹಾಕಿಕೊಂಡಿದ್ದಾರೆ. ತಾವು ಇದನ್ನು ನೋಡಬಹುದು. ಏಕೆಂದರೆ, ಇವತ್ತು ವಿಧಾನ ಪರಿಷತ್ತಿನ C.C.T.V. footage ಅನ್ನು ತೆಗೆದರೆ, 180 ದಿವಸಗಳ ಮಾಹಿತಿ ಸಿಗುತ್ತದೆ. ಅದನ್ನು ಓಪನ್ ಮಾಡಿ ನೋಡಿದರೆ, ಯಾವತ್ತು ಏನಾಗಿದೆ ಎಂದು ಗೊತ್ತಾಗುತ್ತದೆ. ಆದರೆ, ರಾಮಮಂದಿರದಲ್ಲಿ ಬರಿ 40 ದಿವಸಗಳ C.C.T.V. footage ಮಾತ್ರ ಇದೆ. ಈ lapse ಅನ್ನು ಯಾರು ಮಾಡಿದರು? ಇವತ್ತು ಅಲ್ಲಿ 180 ದಿವಸಗಳ C.C.T.V. footage ಇದ್ದಿದ್ದರೆ, ಇನ್ನೂ ಕೋಟ್ಯಾಂತರ ರೂಪಾಯಿಗಳನ್ನು ಹೊಡೆದಿರುವುದು ಗೊತ್ತಾಗುತ್ತಿತು. ಆದರೆ, ಯಾರ ಬಗ್ಗೆಯೂ ಕ್ರಮ ತೆಗೆದುಕೊಂಡಿಲ್ಲ. ಎಲ್ಲರಿಗೂ clean chit ಕೊಟ್ಟಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ದಯವಿಟ್ಟು ಬೇಗ ಮಾತನಾಡಿ ಮುಗಿಸಿ.

**ಶ್ರೀ ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಆಯಿತು. ಶ್ರೀ ಅನಿಲ್ ಮಿಶ್ರಾ ಎನ್ನುವವರು ಯಾರು ಇದ್ದರು, ಅವರ ಮೇಲೆ ಇನ್ನು ವಿಚಾರಣೆ ನಡೆಯುತ್ತಿದೆ. ಯಾವಾಗ S.I.T. (Special Investigation Team) ಯವರು ವಿಚಾರಣೆ ಮಾಡುವುದಕ್ಕೆ ಪ್ರಾರಂಭ ಮಾಡಿದರೋ, ನಾವು ಅದನ್ನು ಹೇಳದರೆ, ಇವತ್ತು ಸಮಾಜವಾದಿ ಪಕ್ಷದಲ್ಲಿದ್ದಂತಹ ಶ್ರೀ ಪಾಂಡೆಯವರು ಹೇಳದ್ದನ್ನು ಕೇಳದರೆ, ಈ 8 ಜನರು involve ಆಗಿರುವುದರಿಂದಲೇ ಇವತ್ತು ವಿಚಾರಣೆ ನಡೆಯುತ್ತಿದೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು conclude ಮಾಡಿ.

**ಶ್ರೀ ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಏನು ಕೇಳುತ್ತಿದ್ದೇನೆಂದರೆ, ಇಷ್ಟೊಂದು ದೊಡ್ಡ ಹಗರಣವಾಗಿ ನೂರಾರು ಕೋಟಿ ರೂಪಾಯಿಗಳು ಪೋಲು ಆಗಿದ್ದರೂ ಸಹ, ಯಾರು ಆ ದೇವಸ್ಥಾನವನ್ನು ಶಿಲಾನ್ಯಾಸ ಮಾಡಿದ್ದು? ಅವರೇ ಆ ದೇವಸ್ಥಾನಕ್ಕೆ ಪಾಯ ಹಾಕಿದವರಾಗಿದ್ದಾರೆ. ಮಾನ್ಯ ಪ್ರಧಾನ ಮಂತ್ರಿಗಳು ಆ ದೇವರ ಪ್ರಾಣ ಪ್ರತಿಷ್ಟಾಪನೆ ಮಾಡಿದರು. ಇವತ್ತು ಆ ಕಾರ್ಯಕ್ರಮವನ್ನು ಉದ್ಘಾಟನೆ ಮಾಡುವುದಕ್ಕೆ ೧೩೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಮತ್ತು ಇವತ್ತಿನವರೆಗೂ ಅಲ್ಲಿನ ಕಾರ್ಯಕ್ರಮಗಳಿಗೆ ೩೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇಂತಹ ಒಂದು ಸನ್ನಿವೇಶದಲ್ಲಿ ಮಾನ್ಯ ಪ್ರಧಾನ ಮಂತ್ರಿಯವರು ಹಾಗೂ ಗೃಹ ಸಚಿವರು ಇದರಲ್ಲಿ ಯಾರು involve ಆಗಿದ್ದಾರೆ, ಅವರನ್ನು ಕೂಡಲೇ ಅರೆಸ್ಟ್ ಮಾಡಿ C.B.I. enquiry ಮಾಡಿಸಬೇಕು. ನಮ್ಮ ರಾಜ್ಯದಲ್ಲಿ ೬೦,೦೦೦ ದೇವಸ್ಥಾನಗಳು ಇವೆ. ಈ ದೇಶದಲ್ಲಿ ಮೂರು million ದೇವಸ್ಥಾನಗಳು ಇವೆ. ಎಲ್ಲಿಯೂ ಸಹ ಈ ರೀತಿ ಕಳ್ಳತನ ಆಗಬಾರದು. ಈ ರೀತಿ ಮಸೀದಿಗಳಲ್ಲಿಯೂ ಆಗಬಾರದು. ಮಂದಿರಗಳಲ್ಲಿಯೂ ಸಹ ಆಗಬಾರದು. ಏಕೆಂದರೆ, ಇದರಲ್ಲಿ ಜನರ ನಂಬಿಕೆ ಮತ್ತು ಹಣ ದೊಡ್ಡದು. ಹಾಗಾಗಿ, ಮಾನ್ಯ ಪ್ರಧಾನ ಮಂತ್ರಿಯವರು ಹಾಗೂ ಗೃಹ ಸಚಿವರು ಇದುವರೆಗೂ ಈ ವಿಷಯದ ಬಗ್ಗೆ ಮಾತನಾಡದಿರುವುದು ತಪ್ಪು. ಇದರ ಬಗ್ಗೆ ಅವರು ಮಾತನಾಡಿ ಇದರಲ್ಲಿ ಯಾರು involve ಆಗಿದ್ದಾರೆ,,

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಕುಳಿತುಕೊಳ್ಳಿ. ಶ್ರೀ ಎನ್.ಎಸ್.ಬೋಸರಾಜುರವರೇ, ತಾವು ಪ್ರಾರಂಭ ಮಾಡಿ.

**ಶ್ರೀ ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಅವರ ವಿರುದ್ಧ ಕ್ರಮವನ್ನು ತೆಗೆದುಕೊಂಡು ಈ ದೇಶದ ಬಹುತೇಕ ಜನರ ನಂಬಿಕೆ, 'ಶ್ರೀ ರಾಮನ' ಮೇಲೆ ಇದ್ದಂತಹ ಭಕ್ತಿ ಮತ್ತು ನಂಬಿಕೆಗೆ ಚ್ಯುತಿ ಬರದಂತೆ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರುಗಳು ಮಾತನಾಡಿದಂತೆ, 'ರಾಮ ಮಂದಿರ' ನಿರ್ಮಾಣಕ್ಕಾಗಿ ಇಡೀ ರಾಷ್ಟ್ರದಲ್ಲಿ, ಕರ್ನಾಟಕವು ಸೇರಿದಂತೆ ಲಕ್ಷಾಂತರ ಭಕ್ತಾಧಿಗಳು ಅಲ್ಲಿಗೆ ನೀಡಿರುವಂತಹ ದೇಣಿಗೆ ಹಾಗೂ ಕಾಣಿಕೆ ದುರುಪಯೋಗ ಆಗಿರುವುದು ಈಗಾಗಲೇ ಜನರಿಗೆ ಗೊತ್ತಾಗಿದೆ. ಆದರೆ, ಇದರ ಬಗ್ಗೆ ಇದುವರೆಗೂ ಕೇಂದ್ರ ಸರ್ಕಾರವಾಗಲಿ ಅಥವಾ ಅಲ್ಲಿನ ರಾಜ್ಯ ಸರ್ಕಾರವಾಗಲಿ ಯಾವುದೇ ಒಂದು clarity ಅನ್ನು ಕೊಟ್ಟಿಲ್ಲ. ಅಂದ ಮೇಲೆ ಇವರು ಯಾವ ರೀತಿ ಲೂಟಿ

ಮಾಡಿದ್ದಾರೆ? ಇದಕ್ಕೆ ಯಾರು ಕಾರಣ ಎಂಬುದನ್ನು ಈ ದೇಶದ ಜನರು ಇವತ್ತು ಕೇಳುತ್ತಿದ್ದಾರೆ? ಇದರ ಹಿನ್ನೆಲೆಯಲ್ಲಿ ಯಾರು ಇದ್ದಾರೆ? ಇವತ್ತು ಯಾರ support ನಿಂದ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಭಕ್ತಾಧಿಗಳು ನೀಡಿರುವಂತಹ ಹಣ ದುರುಪಯೋಗವಾಗಿರುವಂತಹದ್ದನ್ನು ಈ ದೇಶದ ಪ್ರಧಾನ ಮಂತ್ರಿಯವರು ಸ್ಪಷ್ಟಪಡಿಸಬೇಕಾಗಿದೆ. ಈ ವಿಷಯದ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಯವರು ಇವತ್ತಿನವರೆಗೆ ಯಾವುದೇ ಸ್ಪಷ್ಟೀಕರಣವನ್ನು ನೀಡಿರುವುದಿಲ್ಲ. ಲೋಕಸಭೆಯಲ್ಲಿ ಮತ್ತು ರಾಜ್ಯಸಭೆಯಲ್ಲಿ ಜನಪತ್ರಿನಿಧಿಗಳು ಇದರ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ಆದರೂ ಸಹ, ಇವತ್ತಿನವರೆಗೂ ಜವಾಬ್ದಾರಿಯನ್ನು ಹೊತ್ತಿರುವಂತಹ ಮಾನ್ಯ ಪ್ರಧಾನ ಮಂತ್ರಿಯವರಾಗಲಿ ಅಥವಾ ಆ ರಾಜ್ಯದ ಮುಖ್ಯಮಂತ್ರಿಯವರಾಗಲಿ ಜವಾಬ್ದಾರಿಯುತವಾಗಿ ನಡೆದುಕೊಂಡಿರುವುದಿಲ್ಲ. ಈ ಲೂಟಿ ಮಾಡಿರುವಂತಹ ಹಣ ಎಲ್ಲಿಗೆ ಹೋಗಿದೆ ಎಂಬುದು ಬಯಲಾಗಬೇಕಾಗಿದೆ.

ಮಾನ್ಯ ಸಭಾಪತಿಯವರೇ, ನಾನು ಸಹ ಒಂದು ಲಕ್ಷ ರೂಪಾಯಿಗಳ ಕಾಣಿಕೆಯನ್ನು ನೀಡಿದ್ದೇನೆ. ಅದರ ರಶೀದಿ ನನ್ನ ಬಳಿ ಇದೆ. ಶ್ರೀ ಪೇಜಾವರ ಸ್ವಾಮಿಜೀಯವರು ಬಂದು ರಾಯಚೂರಿನಲ್ಲಿ ಕಾಣಿಕೆ ಕೇಳಿದಾಗ, ನಾನೇ ಮೊಟ್ಟ ಮೊದಲ ಬಾರಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇನೆ. ಆದರೆ, ಈ ಹಣವನ್ನು ಲೂಟಿ ಮಾಡಿರುವವರು ಯಾರು? ಜನಪ್ರತಿನಿಧಿಗಳು ಆಗಿರುವಂತಹವರು ಯಾರು? ಈ ದೇಶದ ಗೃಹ ಸಚಿವರಾಗಿರುವಂತಹವರು ಒಂದು ವರ್ಷದ ಮೊದಲೇ ಲೋಕಸಭಾ ಚುನಾವಣೆಗೆ ಹೋಗಬೇಕಾದರೆ, ಪ್ರಚಾರವನ್ನು ಪ್ರಾರಂಭ ಮಾಡಿದರು. ಎಲ್ಲಾ ಕಡೆಯೂ flight ಗಳನ್ನು ಹಾಗೂ ರೈಲುಗಳನ್ನು ಹಾಕುತ್ತಿದ್ದೇವೆ, ಎಲ್ಲರೂ ಅಯೋಧ್ಯೆಗೆ ಬಂದು ಹುಂಡಿಗೆ ಹಣವನ್ನು ಹಾಕಬೇಕು, ನಾವು ಚುನಾವಣೆಯಲ್ಲಿ ಗೆಲ್ಲಬೇಕೆಂದು ಇಡೀ ದೇಶದಲ್ಲಿ ಮತ್ತು ರಾಜ್ಯದಲ್ಲಿ ಸಾಕಷ್ಟು ಪ್ರಚಾರ ಮಾಡಿ, ಈ ಹುಂಡಿಗೆ ಬಂದಿರುವಂತಹ ಹಣವನ್ನು ಅವರು ಲೂಟಿ ಮಾಡಿದ್ದಾರೆ. ಈ ಹಣವನ್ನು ಯಾರು ಲೂಟಿ ಮಾಡಿದ್ದಾರೆಂಬ ಮಾಹಿತಿಯನ್ನು ಜನರಿಗೆ ಕೊಡಬೇಕಾಗಿರುವಂತಹ ಜವಾಬ್ದಾರಿ ಮಾನ್ಯ ಪ್ರಧಾನ ಮಂತ್ರಿಯವರ ಹಾಗೂ ಕೇಂದ್ರದ ಮಾನ್ಯ ಗೃಹ ಸಚಿವರ ಮೇಲೆ ಇದೆ ಎಂದು ಇವತ್ತು ಜನರು ಮಾತನಾಡುತ್ತಿದ್ದಾರೆ. ಇವತ್ತು ಸಾರ್ವಜನಿಕವಾಗಿ ಎಲ್ಲರಿಗೂ ಅಯೋಧ್ಯೆಯ 'ಶ್ರೀ ರಾಮನ' ಮೇಲೆ ಇರಬಹುದು, ಬೇರೆ ಬೇರೆ ದೇವಸ್ಥಾನಗಳ ಮೇಲೆ ಇರುವಂತಹ ನಂಬಿಕೆಯು ಈಗ ನಡೆದಿರುವಂತಹ ಘಟನೆಯಿಂದ ಆ ನಂಬಿಕೆ ಹೊರಟು ಹೋಗಿದೆ. ಇದಕ್ಕೆ ಕೇಂದ್ರ ಸರ್ಕಾರ ತಕ್ಷಣ ಸ್ಪಂದಿಸಬೇಕು. ಇಲ್ಲದಿದ್ದರೆ, ಮಾನ್ಯ ಪ್ರಧಾನ ಮಂತ್ರಿಗಳು ಹಾಗೂ ಕೇಂದ್ರ ಗೃಹ ಸಚಿವರು ಇದಕ್ಕೆ ಕಾರಣರು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ವಿರೋಧ ಪಕ್ಷದ ನಾಯಕರು ಈ ಸದನದಲ್ಲಿ ಯಾವುದೋ ಸಣ್ಣಪುಟ್ಟ ವ್ಯವಹಾರದ

ಬಗ್ಗೆ ಕೇಳುತ್ತಿದ್ದಾರೆ. ವಿರೋಧ ಪಕ್ಷದ ನಾಯಕರಿಗೆ ಮಾನ್ಯ ಸಚಿವರಾದ ಬಿ.ನಾಗೇಂದ್ರ ಇವರ ಬಗ್ಗೆ ಮಾತನಾಡುವುದಕ್ಕೆ ನೈತಿಕತೆ ಇಲ್ಲ. ಇವರು ಕೇವಲ ರಾಜಕೀಯ ಮಾಡುವಂತಹದ್ದು, ನಾಡಿನ ಜನರ ದಾರಿ ತಪ್ಪಿಸುವಂತಹದ್ದು, ಕೇವಲ ಅಧಿಕಾರ ಪಡೆಯುವುದಕ್ಕಾಗಿ ಈ ರೀತಿ ಅನೇಕ.,

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ,... (ಗೊಂದಲ)

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸದಸ್ಯರಾದ ಎನ್.ಎಸ್.ಬೋಸರಾಜುರವರು ಮಾತನಾಡುತ್ತಿದ್ದಾರೆ. ಅವರು yield ಆಗಿಲ್ಲ. ಅವರು ಮಾತನಾಡುತ್ತಿದ್ದಾರೆ. ಅವರಿಗೆ ಅವಕಾಶ ಕೊಡಿ. ತದನಂತರ ತಾವು ಮಾತನಾಡಿ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರು ಲೂಟಿ ಮಾಡುತ್ತಿದ್ದಾರೆ. ಸಾವಿರಾರು ಕೋಟಿ ರೂಪಾಯಿಗಳನ್ನು ಲೂಟಿ ಮಾಡಿದ್ದಾರೆ. ಅದರ ಜವಾಬ್ದಾರಿಯನ್ನು ಕೇಂದ್ರ ಸರ್ಕಾರ ಹೊರಬೇಕು.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಿಮ್ಮ ಸದಸ್ಯರು ಬಾವಿಯಲ್ಲಿ ನಿಂತುಕೊಂಡು ಮಾತನಾಡುವುದು ಸರಿ ಕಾಣುವುದಿಲ್ಲ. ದಯವಿಟ್ಟು, ಮಾನ್ಯ ಸದಸ್ಯರಾದ ಎನ್.ಎಸ್.ಬೋಸರಾಜು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರಿಗೆ ತಾಕತ್ತು ಇದ್ದರೆ, ಅಯೋಧ್ಯ ಬಗ್ಗೆ ಮಾತನಾಡಲಿ. ಅವರು ಅದರ ಬಗ್ಗೆ ಚರ್ಚೆ ಮಾಡಲಿ. ಸಿ.ಬಿ.ಐ. ನವರು ಏಕೆ ಎಲ್ಲವನ್ನು ಮಾಡಬೇಕು?

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸಭಾನಾಕರು ಹಾಗೂ ಆಡಳಿತ ಪಕ್ಷದ ಕೆಲವು ಸದಸ್ಯರು ಒಟ್ಟಿಗೆ ಮಾತನಾಡತೊಡಗಿದರು)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರು ಲೂಟಿ ಮಾಡಿದ್ದಾರೆ. ಇದಕ್ಕೆ ಮಾನ್ಯ ಪ್ರಧಾನ ಮಂತ್ರಿಯವರು ಜವಾಬ್ದಾರಿ ಹೊರಬೇಕು. ಇಡೀ ಹುಂಡಿಯನ್ನು ಲೂಟಿ ಮಾಡಿರುವಂತಹವರು ಅವರು.,

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಅವರು yield ಆಗಿಲ್ಲ, ಬಿಡಿ. ತಮಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ತಾವು ಆಗ ಮಾತನಾಡಿ. ತಾವು ನಿಮ್ಮ ಸದಸ್ಯರಿಗೆ ಬಾವಿಯಿಂದ ಅವರ

ಜಾಗಗಳಿಗೆ ಬಂದು ಕುಳಿತುಕೊಳ್ಳುವುದಕ್ಕೆ ಹೇಳಿ. ಅವರು yield ಆಗಿಲ್ಲ. ತಾವು ನಿಮ್ಮ ಸದಸ್ಯರಿಗೆಲ್ಲಾ ಮನವಿ ಮಾಡಿ. ದಯವಿಟ್ಟು, ವಿರೋಧ ಪಕ್ಷದ ನಾಯಕರೇ, ತಾವು ನಿಮ್ಮ ಸದಸ್ಯರಿಗೆ ಹೇಳಬೇಕು.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರು ಸಾವಿರಾರು ಕೋಟಿ ರೂಪಾಯಿಗಳನ್ನು ಲೂಟಿ ಮಾಡಿ ಇಲ್ಲಿ ಮಾತನಾಡುತ್ತಾರೆ. ಅವರಿಗೆ ನೈತಿಕತೆ ಇಲ್ಲ.

**(ಗೊಂದಲ)**

**ಉಪ ಸಭಾಪತಿಯವರು:-** ದಯವಿಟ್ಟು. ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದ ಕೆಲವು ಮಾನ್ಯ ಸದಸ್ಯರು ಒಟ್ಟಿಗೆ ಎದ್ದು ಮಾತನಾಡತೊಡಗಿದರು)**

(ಮುಂದು)

(847) 24.08.2026/5.00/ಎಂವಿ-ಬಿಎನ್ಎಸ್ **(ಉಪ ಸಭಾಪತಿಯವರ ಉಪಸ್ಥಿತಿ)**

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಅವರಿಗೆ ತಾಕತ್ತು ಇದ್ದರೆ ಚರ್ಚೆಗೆ ಬರಲಿ, ನಾವು ಅದಕ್ಕೆ ಉತ್ತರ ಕೊಡುವುದಕ್ಕೆ ತಯಾರಿದ್ದೇವೆ. ಭ್ರಷ್ಟಾಚಾರದ ಬಗ್ಗೆ ಬಿ.ಜೆ.ಪಿ.ಯವರಿಂದ ಪಾಠ ಹೇಳಿಸಿಕೊಳ್ಳುವಂಥದ್ದು ಇಲ್ಲ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ತಮ್ಮ ಪೀಠದಿಂದ ಎದ್ದು ನಿಂತರು)**

**ಉಪ ಸಭಾಪತಿಯವರು:-** ದಯವಿಟ್ಟು ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರೆ, ನಾನು ಹೇಳುವುದನ್ನು ತಾವು ಸ್ವಲ್ಪ ಕೇಳಿ.

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ನಿರಂತರವಾಗಿ ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಶ್ರೀರಾಮನ ಹುಂಡಿಯನ್ನು ಲೂಟಿ ಹೊಡೆದ ಬಿ.ಜೆ.ಪಿ.ಗೆ ಧಿಕ್ಕಾರ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ನಾನು ಹೇಳುವುದನ್ನು ಕೇಳಿ. ತಾವೆಲ್ಲರೂ ಬಾವಿಗೆ ಇಳಿದುಬಿಟ್ಟು, House is not in order.

**(ಗೊಂದಲ)**

**ಡಾ: ಯತೀಂದ್ರ. ಎಸ್:-** ಈಗ ಮಾನ್ಯ ಸಭಾಪತಿಯವರು ನಿಂತುಕೊಂಡಿದ್ದಾರೆ. ಮಾನ್ಯ ಸಭಾಪತಿಯವರು ನಿಂತುಕೊಂಡಾಗ ಎಲ್ಲರೂ ಕುಳಿತುಕೊಳ್ಳಬೇಕು. At least ತಮ್ಮ ಜಾಗದಲ್ಲಿ silent ಆಗಿ ಕುಳಿತುಕೊಳ್ಳಿ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರು yield ಆಗಿಲ್ಲ. ಅವರು yield ಆದರೆ ಆಗ ನಿಮಗೂ ಸಹ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಆಗ ನೀವು ಚರ್ಚೆಯಲ್ಲಿ ಭಾಗವಹಿಸಿ. ಈಗ ಅವರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ರೀತಿಯಾದರೆ ಆಗುವುದಿಲ್ಲ. ಆದುದರಿಂದ, ತಾವುಗಳು ದಯವಿಟ್ಟು ಸಹಕಾರ ನೀಡಬೇಕು.

**(ಗೊಂದಲ)**

**ಡಾ: ಯತೀಂದ್ರ. ಎಸ್:–** ದಯವಿಟ್ಟು ಮಾನ್ಯ ಉಪ ಸಭಾಪತಿಯವರು ನಿಂತುಕೊಂಡಾಗ ಸ್ವಲ್ಪ ಸುಮ್ಮನೆ ಇರಬೇಕು. ಈಗ ಮಾನ್ಯ ಉಪ ಸಭಾಪತಿಯವರು ನಿಂತುಕೊಂಡಿದ್ದಾರೆ. ತಾವುಗಳು ಮಾನ್ಯ ಉಪ ಸಭಾಪತಿಗಳಾಗಾದರೂ ಗೌರವ ಕೊಡಿ.

**ಉಪ ಸಭಾಪತಿಯವರು:–** ಮಾನ್ಯ ಎನ್.ಎಸ್. ಬೋಸರಾಜುರವರು ಈಗ ತಾವು ಮಾತನಾಡಿ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವತ್ತು ಇದಕ್ಕೆ ಮಾನ್ಯ ಕೇಂದ್ರ ಸರ್ಕಾರದ ಜವಾಬ್ದಾರಿ ಇದೆ. ಇದನ್ನು ಇಡೀ ದೇಶದ ಜನರು ನೋಡುತ್ತಿದ್ದಾರೆ. ಏನು ಲೂಟಿ ಆಗಿದೆ, ಇದನ್ನು ಮಾಡಿದವರು ಯಾರು? ಅದರ ಹಿಂದೆ ಯಾರಿದ್ದಾರೆಂದು ಕೇಂದ್ರ ಸರ್ಕಾರ ಸ್ಪಷ್ಟೀಕರಣ ಕೊಡಬೇಕಾಗಿದೆ. ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಮಾಡಿದ್ದೇವೆಂದು ಪ್ರಚಾರ ಮಾಡಿಕೊಂಡು ರಾಮಮಂದಿರಕ್ಕೆ ಸಂಬಂಧಪಟ್ಟಂತೆ ಬಿ.ಜೆ.ಪಿ.ಯವರು ರಾಜಕೀಯ ಲಾಭ ಮಾಡಿಕೊಂಡಿದ್ದಾರೆ. ಅವರು ಹಣವನ್ನು ಲೂಟಿ ಮಾಡಿದ್ದಾರೆ. ಅವರು ಲೂಟಿ ಮಾಡಿರತಕ್ಕಂತಹವರು. ಅವರು ನಾಚಿಕೆ ಇಲ್ಲದಂತಹವರು. ಅದನ್ನು ಆರ್.ಎಸ್.ಎಸ್. ನವರು ಲೂಟಿ ಮಾಡಿದ್ದಾರೆ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ತಮ್ಮ ಪೀಠದಿಂದ ಎದ್ದು ನಿಂತರು)**

**ಉಪ ಸಭಾಪತಿಯವರು:–** ಇದು ಸರಿಯಲ್ಲ. ತಾವುಗಳು ದಯಮಾಡಿ ಒಂದು ನಿಮಿಷ ಸುಮ್ಮನಿರಬೇಕು. ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಚರ್ಚೆಯಲ್ಲಿ ಭಾಗವಹಿಸುವುದಾದರೆ ನಿಮಗೆ ಅವಕಾಶ ಮಾಡಿಕೊಡುತ್ತೇನೆ. ಅಲ್ಲಿಯವರೆಗೂ **(ಗೊಂದಲ)** ನಿಮ್ಮ ಸಹಕಾರ ಅಗತ್ಯವಿದೆ. ದಯಮಾಡಿ ತಾವುಗಳು ಸ್ವಲ್ಪ ಸುಮ್ಮನೆ ಇರಬೇಕು. ಈಗ ಮಾನ್ಯ ಸದಸ್ಯರು ತಮ್ಮ ಚರ್ಚೆಯನ್ನು ಮುಂದುವರೆಸುತ್ತಾರೆ. ನಿಮಗೂ ಅವಕಾಶ ಮಾಡಿಕೊಡುತ್ತೇನೆ. ಈಗ ಮಾನ್ಯ ಎನ್.ಎಸ್. ಬೋಸರಾಜುರವರು ಮಾತನಾಡಿ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ....

(ಗೊಂದಲ)

**ಉಪ ಸಭಾಪತಿಯವರು:-** ತಾವು ಮೈಕ್ ಹಾಕಿಕೊಂಡು ಮಾತನಾಡಿ.

(ಗೊಂದಲ)

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, **(ಗೊಂದಲ)** ಅವರು ಉತ್ತರ ಕೊಡಬೇಕು. ಅದನ್ನು ಏನು ಮಾಡಿದರು ಮತ್ತು ಏನಾಯಿತು ಎಂಬ ಹಿನ್ನೆಲೆಯಲ್ಲಿ ಅದಕ್ಕೆ ಸಿ.ಬಿ.ಐ. enquiry ಆಗಬೇಕು. ಅವರು ದೇಶದ ಜನತೆಗೆ ಮಾಹಿತಿ ಕೊಡಬೇಕು. ಅದರ ಹಿನ್ನೆಲೆಯಲ್ಲಿ ಇರತಕ್ಕಂತಹವರಿಗೆ ಕ್ರಮ ಕೈಗೊಳ್ಳಬೇಕೆಂಬುದು ನನ್ನ ಒತ್ತಾಯವಾಗಿದೆ.

(ಗೊಂದಲ)

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಯೋಧ್ಯೆ ಶ್ರೀರಾಮ ಮಂದಿರದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಹೃದಯಪೂರ್ವಕ ನಮಸ್ಕಾರಗಳನ್ನು ತಿಳಿಸುತ್ತೇನೆ.

(ಗೊಂದಲ)

**ಉಪ ಸಭಾಪತಿಯವರು:-** ತಾವುಗಳು ಈ ರೀತಿ ಮಾಡತಕ್ಕದ್ದಲ್ಲ. ತಾವುಗಳು ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ನೀಡುತ್ತೇನೆ. ಆದುದರಿಂದ, ತಾವುಗಳ ದಯವಿಟ್ಟು ಸಹಕರಿಸಿ. ಮಾನ್ಯ ವಿರೋಧ ಪಕ್ಷದ ನಾಯಕರೆ ತಮ್ಮ ಪಕ್ಷದ ಸದಸ್ಯರನ್ನು ಅವರ ಜಾಗಕ್ಕೆ ಬಂದು ಕುಳಿತುಕೊಳ್ಳುವುದಕ್ಕೆ ತಿಳಿಸಿ.

(ಗೊಂದಲ)

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣಕ್ಕಾಗಿ ಕರ್ನಾಟಕ ರಾಜ್ಯದ ಪ್ರತಿಯೊಂದು ಗ್ರಾಮ, ತಾಲ್ಲೂಕು ಮತ್ತು ನಗರಗಳಿಂದ ಲಕ್ಷಾಂತರ ಭಕ್ತಾಧಿಗಳು ಧಾರ್ಮಿಕ ಸಂಸ್ಥೆಗಳು ಹಾಗೂ ಸಾರ್ವಜನಿಕರು ತಮ್ಮ ಶ್ರದ್ಧೆ ಮತ್ತು ಭಕ್ತಿಯಿಂದ ಕೋಟ್ಯಂತರ ರೂಪಾಯಿಗಳ ನಿಧಿ, ದೇಣಿಗೆಯನ್ನು ಸಮರ್ಪಿಸಿದ್ದಾರೆ. ಆದರೆ, ಈ ನಿಧಿ ಸಂಗ್ರಹಣೆ ಹಾಗೂ ಹಸ್ತಾಂತರದ ಪ್ರಕ್ರಿಯೆಯಲ್ಲಿ ಭಾರಿ ಪ್ರಮಾಣದ ಹಣ ದುರುಪಯೋಗ ಮತ್ತು ನಕಲಿ ಜಾಲ ಪತ್ತೆಯಾಗಿದೆ ಎಂಬ ಗಂಭೀರ ಆರೋಪಗಳು ಕೇಳಿಬರುತ್ತಿವೆ. ಇದರಿಂದ ಸಾರ್ವಜನಿಕರಲ್ಲಿ ತೀವ್ರ ಅಸಮಾಧಾನ ಉಂಟಾಗಿದೆ. ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಸರ್ಕಾರ ಅನಾವರಣ ಮಾಡಿದಂತಹ ಶ್ರೀರಾಮ ಮಂದಿರ. ಅದಕ್ಕೆ ಅವರು ಮೊದಲು ನೈತಿಕ ಹೊಣೆ ಹೊತ್ತು ಮತ್ತು ಮಾನವೀಯತೆಯಿಂದ ಶ್ರೀ ನರೇಂದ್ರ ಮೋದಿಯವರು ತಮ್ಮ ರಾಜೀನಾಮೆ ನೀಡಬೇಕು. ಬಿ.ಜೆ.ಪಿ.ಯವರು ಇಂತಹ ದುಷ್ಟಶಕ್ತಿಗಳನ್ನು ಎದುರಿಗೆ ಇಟ್ಟುಕೊಂಡು ರಾಜಕೀಯ ಮಾಡುತ್ತಾರೆ. ಅವರಿಗೆ ನಾಚಿಕೆ ಆಗಬೇಕು. ಅವರು ಸಚಿವರಾದ ಬಿ.ನಾಗೇಂದ್ರರವರ ಬಗ್ಗೆ ಮಾತನಾಡುತ್ತಾರೆ. ಅವರು ನಾಲಾಯಕರು.

**(ಗೊಂದಲ)**

**ಉಪ ಸಭಾಪತಿಯವರು:–** ಬಾವಿಯಲ್ಲಿ ನಿಂತು ಮಾತನಾಡಿದ್ದು, ಯಾವುದೂ ಕಡತಕ್ಕೆ ಹೋಗತಕ್ಕದ್ದಲ್ಲ. ಅದು ಯಾವುದೂ ಕಡತಕ್ಕೆ ಹೋಗಬಾರದು.

**(ಗೊಂದಲ)**

**(ಮಾನ್ಯ ಉಪಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಮಾತನಾಡಿದ ನಡವಳಿಗಳನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಶ್ರೀ ತಿಪ್ಪಣ್ಣಪ್ಪ ಕಮಕನೂರ:–** ಮಾನ್ಯ ಸಭಾಪತಿಯವರೇ, ರಾಜ್ಯದ ಹಲವಾರು ಭಾಗಗಳಲ್ಲಿ. ವಿಶೇಷವಾಗಿ ಕರಾವಳಿ ಭಾಗದ ಉತ್ತರ ಕನ್ನಡ ಮತ್ತು ಸಂಘಟನೆಗಳು ನೀಡಿರುವ ಸಾರ್ವಜನಿಕರ ಕೋಟ್ಯಂತರ ರೂಪಾಯಿ ದೇಣಿಗೆ ಸಂಗ್ರಹವನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಸನ್ಮಾರ್ಗದಿಂದ ಅಧಿಕೃತವಾಗಿ ಮತ್ತು ಅನಧಿಕೃತವಾಗಿ ಸಂಗ್ರಹವಾದ ಒಟ್ಟು ಮೊತ್ತವೆಷ್ಟು? ಅದರಲ್ಲಿ ಅಯೋಧ್ಯೆಯ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಟ್ರಸ್ಟ್‌ಗೆ ಜಮೆಯಾದ ಮೊತ್ತವೆಷ್ಟು? ಎಂಬ ಬಗ್ಗೆ ಯಾವುದೇ ಅಧಿಕೃತ ಲೆಕ್ಕಪರಿಶೋಧನೆ ಪಾರದರ್ಶಕ ವರದಿ ಲಭ್ಯವಿಲ್ಲ. ಶ್ರೀರಾಮ ಮಂದಿರ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಡೆದ ಜಮೀನು ಖರೀದಿ ಮತ್ತು ಇತರೆ ಚಟುವಟಿಕೆಗಳಲ್ಲಿ ರಾಜ್ಯದಿಂದ ಸಂಗ್ರಹವಾದ ಭಕ್ತರ ದೇಣಿಗೆ ಮತ್ತು ಹಣ ದುರ್ಬಳಕೆಯಾಗಿದೆ ಎಂಬ ಅನುಮಾನಗಳು ವ್ಯಾಪಕವಾಗಿದೆ. ರಾಜ್ಯದ ವಿವಿಧ ದೇವಾಲಯಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಡೆದ ನಿಧಿಯ ಸಂಗ್ರಹಣೆಯ ಅಭಿಯಾನಕ್ಕೆ ಸಂಬಂಧಿಸಿದಂತೆ ಧಾರ್ಮಿಕ ದತ್ತಿ ಇಲಾಖೆಯಿಂದ ಯಾವುದೇ ಸೂಕ್ತ ಮಾರ್ಗಸೂಚಿ ಅಥವಾ ನಿಯಂತ್ರಣದ ಕ್ರಮಗಳನ್ನು ಅನುಸರಿಸಲಾಗಿಲ್ಲ. ಭಕ್ತಾಧಿಗಳ ಧಾರ್ಮಿಕ ಭಾವನೆಗಳ ಜೊತೆಯಲ್ಲಿ ಚೆಲ್ಲಾಟವಾಡಿ, ಹಣ ವಸೂಲಿಯ ನಕಲಿ ಸಂಗ್ರಹಗಾರರು, ಮಧ್ಯವರ್ತಿಗಳು, ಹಾಗೂ ಸಂಘಟನೆಗಳ ವಿರುದ್ಧ ತಕ್ಷಣವೇ ಎಫ್. ಐ.ಆರ್ ದಾಖಲಿಸಿ, ಇದಕ್ಕೆ ಸಿ.ಐ.ಡಿ. ಅಥವಾ ಪ್ರತ್ಯೇಕ ಎಸ್.ಐ.ಟಿ.ಯ ಮೂಲಕ ಸಮಗ್ರ ತನಿಖೆ ನಡೆಸಬೇಕು. ಕರ್ನಾಟಕ ರಾಜ್ಯದಿಂದ ಸಂಗ್ರಹವಾದ ಒಟ್ಟು ನಿಧಿಯ ಪ್ರಮಾಣ ಮತ್ತು ಅದರ ವಿನಿಯೋಗದ ಕುರಿತು ಸರ್ಕಾರ ಸಾರ್ವಜನಿಕವಾಗಿ ಶ್ವೇತಪತ್ರ ಹೊರಡಿಸಬೇಕು. ದೇಣಿಗೆ ನೀಡಿ ರಸೀದಿ ಪಡೆದಿರುವ ಅಥವಾ ವಂಚನೆಗೊಳಗಾದ ಭಕ್ತರು ದೂರು ನೀಡಲು ಗೃಹ ಇಲಾಖೆಯಿಂದ ಪ್ರತ್ಯೇಕ ದೂರು ಸ್ವೀಕಾರ ಕೋಶವನ್ನು ಆರಂಭಿಸಬೇಕು. ಭಕ್ತರ ಪವಿತ್ರ ಕಾಣಿಕೆ ಮತ್ತು ದೇಣಿಗೆಯ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಕ್ಷಮಾರ್ಹವಲ್ಲ. ಇದು ಅಪರಾಧ. ಈ ವಿಷಯವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ, ವಂಚಕರನ್ನು ಬಂಧಿಸಬೇಕು. ಪ್ರತಿಯೊಂದು ರಾಜ್ಯಗಳಿಗೂ ಸಾರ್ವಜನಿಕ ಹಣಕ್ಕೆ ಪಾರದರ್ಶಕ ಲೆಕ್ಕವನ್ನು ಒದಗಿಸುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಬೇಕು. ತಕ್ಷಣವೇ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಕ್ರಮ ಕೈಗೊಳ್ಳಬೇಕು. ಈ ಪ್ರಕರಣದಲ್ಲಿ ಭಾಗಿಯಾದಂತಹ ಮತ್ತು ಮೇಲ್ನೋಟಕ್ಕೆ ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಮತ್ತು ಗೃಹ ಸಚಿವರಾದ ಶ್ರೀ

ಅಮಿತ್ ಶಾ ರವರು ಈ ಇಬ್ಬರೂ ಸಹ ಶಾಮೀಲಾಗಿದ್ದಾರೆ. ಕೇಂದ್ರ ಸರ್ಕಾರದಲ್ಲಿ ಇವರು ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕು. ಈ ಪ್ರಕರಣ ಪೂರ್ತಿ ಸಿ.ಓ.ಡಿ. ತನಿಖೆಯಾಗಬೇಕೆಂದು ಹೇಳುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಉಪ ಸಭಾಪತಿಯವರು:-** ಶ್ರೀ ಎಂ.ಆರ್. ಸೀತಾರಾಂ ಮತ್ತು ಶ್ರೀಮತಿ ಎ.ವಿ. ಗಾಯತ್ರಿ ಶಾಂತೇಗೌಡ, ಶ್ರೀ ಎಂ.ಎಲ್. ಅನಿಲ್ ಕುಮಾರ್, ಶ್ರೀ ರಾಜೇಂದ್ರ ರಾಜಣ್ಣರವರು ಮಾತನಾಡುವುದು.

**(ಈ ಹಂತದಲ್ಲಿ ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ)**

**(ಗೊಂದಲ)**

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಇವತ್ತು ದೇಶದಲ್ಲಿ ಶ್ರೀರಾಮ ಮಂದಿರ ಆಗಬೇಕೆಂದು ರಾಮನ ಭಕ್ತರು ಒಂದು ಆಸೆಯನ್ನು ಇಟ್ಟುಕೊಂಡಿದ್ದರು. ಇಡೀ ದೇಶದಲ್ಲಿ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಒಂದು ದೊಡ್ಡ ಭಾವನಾತ್ಮಕ ಸಂಬಂಧದ ಜೊತೆಗೆ ಹೊರಟಿರುವಂತಹ ರಾಮ ಮಂದಿರದಿಂದ ದೇಶದಲ್ಲಿ ಬದಲಾವಣೆ ಕಾಣುತ್ತೇವೆಂದು ಮತ್ತು ಶ್ರೀರಾಮನ ದೇವಸ್ಥಾನವನ್ನು ಕಾಣುತ್ತೇವೆಂದು ನಾವೆಲ್ಲರೂ ಇಡೀ ದೇಶದ 145 ಕೋಟಿ ಜನಸಂಖ್ಯೆಗೆ ಬಹಳ ದೊಡ್ಡ ಆಸೆ ಇತ್ತು. ಇವತ್ತು ಇದರಲ್ಲಿ ಯಾರು ಭಾಗಿಯಾಗಿದ್ದಾರೆಂದು ಹೇಳಿದ್ದಾರೆ, ಮತ್ತೆ ಶ್ರೀ ಮಹಿಪಾಲ್ ಸಿಂಗ್‌ರವರನ್ನು ಆ ಸಮಿತಿಯಿಂದ ತೆಗೆದಿದ್ದಾರೆ. ಇದಕ್ಕೆ ಈ ದೇಶದ ಪ್ರಧಾನಮಂತ್ರಿಗಳಾಗಿರುವಂತಹ ಶ್ರೀ ನರೇಂದ್ರ ಮೋದಿಯವರು ಮತ್ತು ಗೃಹ ಸಚಿವರಾದ ಶ್ರೀ ಅಮಿತ್ ಶಾ ರವರು ನೇರ ಹೊಣೆಗಾರರಾಗಿದ್ದಾರೆ. ಇದರಲ್ಲಿ ಏನೂ ಎರಡು ಮಾತಿಲ್ಲ. ಇವತ್ತು ಎಲ್ಲೆಲ್ಲಿ ಚುನಾವಣೆ ನಡೆದಿದೆ ಮತ್ತು ಯಾವ್ಯಾವ ರಾಜ್ಯದಲ್ಲಿ ಬಿ.ಜೆ.ಪಿ. ಅಧಿಕಾರಕ್ಕೆ ಬಂದಿದೆ ಅದಕ್ಕೆ ಈ ರಾಮಮಂದಿರದ ಲೂಟಿಯಿಂದಲೇ ನಡೆದಿದೆ ಎಂದು ಈ ಸದನದ ಮೂಲಕ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಶ್ರೀ ನರೇಂದ್ರ ಮೋದಿಯವರು ಮತ್ತು ಶ್ರೀ ಅಮಿತ್ ಶಾ ರವರು ಕೂಡಲೇ ರಾಜೀನಾಮೆ ಕೊಡಬೇಕು. ಇವತ್ತು ಏನು ಉತ್ತರ ಪ್ರದೇಶದ ಮುಖ್ಯಮಂತ್ರಿಗಳಾದ ಶ್ರೀ ಯೋಗಿ ಆದಿತ್ಯನಾಥ್‌ರವರು ರಾಮನ ಭಕ್ತ ಎಂದು ಖಾವಿ ಬಟ್ಟೆಯನ್ನು ಹಾಕಿಕೊಳ್ಳುತ್ತಾರೆ. ಅವರು ಇವತ್ತು ದೇಶದ ಜನರ ದಾರಿ ತಪ್ಪಿಸುವಂತಹ ಕೆಲಸ ಮಾಡುತ್ತಿದ್ದಾರೆ. ಈ ಸಮಯದಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿಗಳು ಕೂಡಲೇ ರಾಜೀನಾಮೆ ಕೊಡಬೇಕು. ಅವರು ಖಾವಿ ಬಟ್ಟೆ ಹಾಕಿಕೊಂಡು ದೇಶದ ಜನರಿಗೆ ಯಾಮಾರಿಸುವುದಕ್ಕೆ ಹೊರಟಿದ್ದಾರೆ. ಇಂತಹ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ನಾನು ದೇಶದ ಕಾವಲು ಕಾಯುತ್ತೇನೆಂದು ಹೇಳುತ್ತಾರೆ. ಈ ರೀತಿ ಕಾವಲು ಕಾಯುವಂತಹವರು ಶ್ರೀರಾಮನ ಹುಂಡಿಯನ್ನು ಲೂಟಿ ಮಾಡುವುದಕ್ಕೆ ಏಕೆ ಬಿಟ್ಟಿದ್ದಾರೆ? ಇವತ್ತು ಅದರಲ್ಲಿ ಅವರ ಪಾಲುದಾರಿಕೆ ಏನೆಂದು ಕೇಳುವುದಕ್ಕೆ ಬಯಸುತ್ತೇನೆ? ಕಾವಲುಗಾರರಾದ ಮಾನ್ಯ ಪ್ರಧಾನ ಮಂತ್ರಿಗಳು ಎಷ್ಟು ಲೂಟಿ ಹೊಡೆದಿದ್ದಾರೆ? ಮತ್ತೆ ಮಾನ್ಯ ಕೇಂದ್ರ ಗೃಹ ಸಚಿವರಾದ ಶ್ರೀ ಅಮಿತ್ ಶಾ ರವರು ಎಷ್ಟು ಲೂಟಿ ಹೊಡೆದಿದ್ದಾರೆ? ಎಂಬುದನ್ನು ಜನರ ಮುಂದೆ ಇಡಬೇಕು. ಇವತ್ತು ಏನು ಬಿ.ಜೆ.ಪಿ.ಯವರು ಜೈ ಶ್ರೀರಾಮ್ ಎಂದುಕೊಂಡು ಪ್ರತಿಭಟನೆ ಮಾಡುತ್ತಿದ್ದಾರೆ,

ಅವರೆಲ್ಲರಿಗೂ ಸಹ ನಾಚಿಕೆಯಾಗಬೇಕು. ಇವತ್ತಿನ ದಿವಸ ರಾಜ್ಯದಲ್ಲಿ ಬರಗಾಲವಿದೆ ಮತ್ತೆ ಜನರು ಬರಗಾಲವನ್ನು ಎದುರಿಸುತ್ತಿದ್ದಾರೆ. ಆದರೆ, ಅವರು ಇದನ್ನು ಬಿಟ್ಟುಬಿಟ್ಟಿದ್ದಾರೆ. ಅವರಿಗೆ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಧೈರ್ಯವಿಲ್ಲವೆ ಎಂದು ಕೇಳುವುದಕ್ಕೆ ಬಯಸುತ್ತೇನೆ. ಅವರಿಗೆ ಧೈರ್ಯ ತಾಕತ್ತು ಮತ್ತು ಧಮ್ ಇದೆಯೇ? ಅದರ ಬಗ್ಗೆ ಮಾತನಾಡುವುದಕ್ಕೆ ಏಕೆ ಅವಕಾಶ ಮಾಡಿಕೊಡುತ್ತಿಲ್ಲವೆಂದು ಕೇಳುವುದಕ್ಕೆ ಬಯಸುತ್ತೇನೆ. ಇವತ್ತು ಬಿ.ಜೆ.ಪಿ. ಸದಸ್ಯರನ್ನು ಇಡೀ ದೇಶದ ಮತ್ತು ರಾಜ್ಯದ ಜನರು ನೋಡುತ್ತಿದ್ದಾರೆ. ಇವತ್ತು ಶ್ರೀರಾಮನ ಹುಂಡಿಯ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಲಿ. ಅದನ್ನು ಬಿಟ್ಟು ಈ ರೀತಿ ಸತ್ಯಕ್ಕೆ ದೂರವಾದ ಮತ್ತು ಪ್ರತಿಭಟನೆಗಳನ್ನು ಮಾಡುತ್ತಿರುವುದರಿಂದ ಅವರಿಗೆ ನಾಚಿಕೆಯಾಗಬೇಕು. ಇದನ್ನು ಕರ್ನಾಟಕದ ಜನರು ನೋಡುತ್ತಿದ್ದಾರೆ. ದೇಶದ ಪ್ರಧಾನ ಮಂತ್ರಿಗಳು ತಮ್ಮ ಪಕ್ಷದ ಸದಸ್ಯರಿಗೆ ಬುದ್ಧಿ ಹೇಳಲಿ. ಅವರಿಗೆ ಬುದ್ಧಿ ಹೇಳಿ ಚರ್ಚೆಗೆ ಅವಕಾಶ ಮಾಡಿಕೊಡಲಿ. ತಾವುಗಳು ಭ್ರಷ್ಟಾಚಾರದಲ್ಲಿ ಪಾಲ್ಗೊಂಡಿದ್ದೀರಿ. ಹುಂಡಿಯಲ್ಲಿ ತಮ್ಮಗಳ ಪಾಲುದಾರಿಕೆ ಇದೆ.

(ಮುಂದು)

(848) 24.08.2026 ವೈಎಲ್-ಎಂಡಿ 5.10 (ಉಪ ಸಭಾಪತಿಯವರ ಉಪಸ್ಥಿತಿ)

ಶ್ರೀ ಬಸನಗೌಡ ಬಾದರ್ಲಿ (ಮುಂದು):-

ಖಂಡಿತವಾಗಿ ಶ್ರೀರಾಮನ ಹುಂಡಿಯ ಹಣ ಕಳವುವಾಗಿರುವ ಬಗ್ಗೆ ಈ ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಪಾಲುಗಾರಿಕೆ ಇದೆ. ಗಡಿಪಾರು ಆಗಿದ್ದಂಥ ಶ್ರೀ ಅಮಿತ್ ಶಾರವರು ಈ ದೇಶದ ಗೃಹ ಸಚಿವರಾಗಿದ್ದಾರೆ. ಇದು ಈ ದೇಶದ ಅರಾಜಕತೆಯಾಗಿದೆ. ಕೂಡಲೇ ಇವರಿಬ್ಬರೂ ರಾಜೀನಾಮೆ ಕೊಟ್ಟು, ಈ ದೇಶದ ಜನತೆಯಲ್ಲಿ ಕ್ಷಮೆಯಾಚಿಸಬೇಕು. ಅಂತರರಾಷ್ಟ್ರೀಯ ಮಟ್ಟದಲ್ಲಿ ದೊಡ್ಡದಾಗಿ ಚರ್ಚೆ ನಡೆಯುತ್ತಿದೆ. ಈ ಸದನದಲ್ಲಿ ನಿಂತುಕೊಂಡು ಬಿ.ಜೆ.ಪಿ.ಯವರು 'ಜೈ ಶ್ರೀರಾಮ್' ಎಂದು ಘೋಷಣೆ ಕೂಗುತ್ತಿದ್ದು, ಶ್ರೀರಾಮನ ಹುಂಡಿಯ ಹಣವನ್ನು ಕಳವು ಮಾಡಿದ್ದಾರೆ. ಇಂತಹ ಬಿ.ಜೆ.ಪಿ. ಸದಸ್ಯರನ್ನು ಈ ರಾಜ್ಯದ ಜನರು ನೋಡುತ್ತಿದ್ದು, ಇದರ ಬಗ್ಗೆ ಮುಕ್ತವಾಗಿ ಚರ್ಚಿಸಲು ಅವಕಾಶ ಮಾಡಿಕೊಡಬೇಕೆಂದು ಹೇಳುತ್ತಾ, ನನಗೆ ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕಲ್ಪಿಸಿದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಮ್ಮ ಸ್ನೇಹಿತರು ಒಳ್ಳೆಯ ಘೋಷಣೆಯನ್ನು ಕೂಗುತ್ತಿದ್ದಾರೆ. ಅವರುಗಳು ಯಾವತ್ತು ರಾಮ-ಸೀತೆಯನ್ನು ಒಟ್ಟಿಗೆ ನೋಡಿಯೇ ಇಲ್ಲ. ಯಾವಾಗಲೂ 'ಜೈ ಶ್ರೀರಾಮ್' ಎಂದು ಘೋಷಣೆ ಕೂಗುತ್ತಿದ್ದಾರೆ ವಿನಃ, 'ಸೀತಾರಾಮ' ಎಂದು ಅವರ ಬಾಯಿಯಿಂದ ಬರಲೇ ಇಲ್ಲ. ಇವತ್ತು ಸೀತೆಯಿಂದ ರಾಮನನ್ನು ಬೇರ್ಪಡಿಸಿದ್ದಕ್ಕೆ ಇಡೀ ಪ್ರಪಂಚ ತಲೆತಗ್ಗಿಸುವಂಥ ಕೆಲಸವಾಗಿದೆ.

**(ಈ ಹಂತದಲ್ಲಿ ಬಾವಿಯಲ್ಲಿ ಧರಣಿ ನಿರತರಾಗಿದ್ದ ವಿರೋಧ ಪಕ್ಷದ ಮಾನ್ಯ ಸದಸ್ಯರು ನಿರಂತರವಾಗಿ ಗೋವಿಂದ, ಗೋವಿಂದ ಎಂದು ಘೋಷಣೆ ಕೂಗುತ್ತಿದ್ದರು)**

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್):-** ಮಾನ್ಯ ಸಭಾಪತಿಯವರೇ, ಗೋವಿಂದ ಅಲ್ಲ! ರಾಮನ ಹುಂಡಿ ಗೋವಿಂದ; ಅಲ್ಲಿರತಕ್ಕಂಥ ಜಮೀನು ಗೋವಿಂದ; ಅಂಗಡಿಗಳ ಜಾಗ ಗೋವಿಂದ; ರಾಮನ ಜಾಗವನ್ನು ರಿಯಲ್ ಎಸ್ಟೇಟ್‌ಗೆ ಬಳಸಿದರು. ಪೂರ್ವನಿಯೋಜಿತವಾಗಿ ಸಾವಿರಾರು ಅಂಗಡಿ ಮುಂಗಟ್ಟುಗಳಿರುವ ಜಾಗವನ್ನು ಕಡಿಮೆ ಬೆಲೆಗೆ ಖರೀದಿಸಿ, ರೈತರ ಜಮೀನನ್ನು ಕಡಿಮೆ ಬೆಲೆಗೆ ಖರೀದಿಸಿ, ಸಾವಿರಾರು ಕೋಟಿ ರೂಪಾಯಿ ಲೂಟಿ ಮಾಡಿದ್ದಾರೆ. ಹೆಣ್ಣಿನ ಬಗ್ಗೆ, ನಮ್ಮ ಸಂಸ್ಕೃತಿ ಬಗ್ಗೆ, ಸಂವಿಧಾನದ ಬಗ್ಗೆ ಗೌರವ ಇಲ್ಲ. ಇಡೀ ಪ್ರಪಂಚದಲ್ಲಿಯೇ ನಮ್ಮ ದೇವರುಗಳ ಹೆಸರಿನಲ್ಲಿ, ನಮ್ಮ ಸಂಸ್ಕೃತಿಯನ್ನು ತಲೆತಗ್ಗಿಸುವಂಥ ಕೆಲಸ ಮಾಡಿದ್ದಾರೆ. ಏಕೆಂದರೆ, ಕಾಶ್ಮೀರದಿಂದ ಕನ್ಯಾಕುಮಾರಿವರೆಗೂ ಜಾತಿ, ಮತ, ಭೇದವಿಲ್ಲದೇ ಅಯೋಧ್ಯೆಯ ಶ್ರೀ ರಾಮಮಂದಿರ ನಿರ್ಮಾಣಕ್ಕಾಗಿ ಇಟ್ಟಿಗೆಯಿಂದ ಹಿಡಿದು ಆಭರಣದವರೆಗೂ ಈ ದೇಶದ ಜನರು ಕಾಣಿಕೆಯಾಗಿ ನೀಡಿದ್ದು, ಅದೆಲ್ಲವೂ ಎಲ್ಲಿಗೆ ಹೋಗಿತ್ತು? ಎಂದು ಕೇಳಿದರೆ, ಇವರಿಗೆ ಹೇಳುವುದಕ್ಕೆ ಆಗುತ್ತಿಲ್ಲ, ಅದರ ಬಗ್ಗೆ ಗೊತ್ತು ಇಲ್ಲ. ಇವತ್ತು ನಮ್ಮ ಮುಂದೆ ಎರಡು-ಮೂರು ವಿಚಾರಗಳಿವೆ. ಮೊದಲನೆಯದಾಗಿ, ಅಲ್ಲಿನ ಯೋಗಿ ಆದಿತ್ಯನಾಥ್‌ರವರ ಸರ್ಕಾರ. ಎರಡನೆಯದಾಗಿ, ಅಲ್ಲಿಯ ಗೃಹ ಸಚಿವರು. ಮೂರನೆಯದಾಗಿ, ಈ ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಸರ್ಕಾರ. ಇವರೇ ಶ್ರೀ ರಾಮಮಂದಿರ ದೇವಸ್ಥಾನದ ಶಿಲಾನ್ಯಾಸದಿಂದ ಹಿಡಿದು ವೈಯಕ್ತಿಕವಾಗಿ ಪೂಜೆ ಮಾಡಿ, ಉದ್ಘಾಟನೆ ಮಾಡುವ ಮೂಲಕ ಬಾವುಟ ಸಹ ಹಿಡಿದಿದ್ದಾಗಿತ್ತು. ಇಷ್ಟೆಲ್ಲಾ ಪೂಜೆ ಮಾಡಿದ ಮೇಲೆ ಅಲ್ಲಿಗೆ ಹೋಗಿರುವಂಥ ಸಾವಿರಾರು ಕೋಟಿ ರೂಪಾಯಿ ಲೂಟಿ ಏನಿದೆ, ಅದು ನಮ್ಮ ಭಾರತದ ಹಿಂದೂಗಳಿಗೆ ಆಗಿರುವಂಥ ನೋವು, ಅವಮಾನವಾಗಿದೆ. ಸಾವಿರಾರು ಕೋಟಿ ಎಲ್ಲಿಗೆ ಹೋಗಿದೆ ಎಂದು ಹೇಳುವಂಥ ನೈತಿಕತೆಯಿಲ್ಲ. ಇವತ್ತು ರಾಜ್ಯದಲ್ಲಿ ಬರಗಾಲ ತಾಂಡವವಾಡುತ್ತಿದ್ದು, ನಮ್ಮದೇ ಆದ್ದಂತಹ ಈ ಸದನದ Rules of Procedure and Conduct of Business book ಇದ್ದರೂ, ಅದರ ಆಧಾರದ ಮೇಲೆ ವಿಚಾರಗಳನ್ನು ಚರ್ಚೆ ಮಾಡಲು ತಯಾರಿಲ್ಲ. ಏಕೆಂದರೆ, ಈ ಸದನದಲ್ಲಿಯೇ ವಿಚಾರಗಳನ್ನು ಚರ್ಚೆಗೆ ತೆಗೆದುಕೊಂಡರೆ, ಎಲ್ಲಾ ಮಾಹಿತಿ ಹೊರಗೆ ಬರುತ್ತದೆ. ಏಕೆಂದರೆ, ಸುಳ್ಳು ಮಾಹಿತಿಯನ್ನು ಜನರಿಗೆ ಹೇಳುವುದಷ್ಟೇ ಗೊತ್ತಿರುತ್ತದೆ ವಿನಃ ವಾಸ್ತವಿಕ ಕಟ್ಟು ಸತ್ಯ ಹೇಳುವುದಕ್ಕೆ ಯಾವತ್ತು ಸಾಧ್ಯವಿಲ್ಲ. ಹಾಗಾಗಿ, ರಾಮನ

ದೇವಸ್ಥಾನವನ್ನು ರಿಯಲ್ ಎಸ್ಟೇಟ್‌ಗೆ ಬಳಸಿಕೊಂಡ ಈ ದೇಶದ ಹೇಡಿಗಳು ಯಾರೆಂದರೆ ಬಿ.ಜೆ.ಪಿ.ಯವರು. ರಿಯಲ್ ಎಸ್ಟೇಟ್‌ನಲ್ಲಿ ಹಣವನ್ನು ಮಾಡಿ, ಬಡವರ ಜಮೀನು, ಅಂಗಡಿಗಳು ಒಳಗೊಂಡ ಹಾಗೆ ಅಲ್ಲಿರತಕ್ಕಂಥ ಜಮೀನು ಕೊಂಡವರಿಗೆ ಆ ಜನರು ನೀಡಿದಂಥ ಶಿಕ್ಷೆ ಏನೆಂದರೆ, ಪಾರ್ಲಿಮೆಂಟ್ ಚುನಾವಣೆಯಲ್ಲಿ ಅವರನ್ನು ಸೋಲಿಸಿ, ಮನೆಗೆ ಕಳುಹಿಸಿದ್ದಾರೆ. ರಾಮನಿಂದ ಯಾವ ರೀತಿ ಸೀತೆಯನ್ನು ಬೇರ್ಪಡಿಸಿದ್ದಾರೆ, ಅದೇ ನಿಟ್ಟಿನಲ್ಲಿ ಮುಂಬರುವ ಚುನಾವಣೆಯಲ್ಲಿ ಈ ರಾಜ್ಯದ ಜನರು ಅಧಿಕಾರದಿಂದ ತೆಗೆಯುವುದು ಕಟ್ಟು ಸತ್ಯ ಎಂದು ಹೇಳುತ್ತಾ, ಇವತ್ತು ನಮ್ಮ ಸಂಸ್ಕೃತಿಗೆ, ದೇವರುಗಳಿಗೆ ಅನ್ಯಾಯ ಬಗೆದವರಿಗೆ ಯಾರಿಗೂ ಉಳಿಗಾಲವಿಲ್ಲ. ಇವತ್ತು ರೂ. 1,500 ಕೋಟಿ, ರೂ. 2,150 ಕೋಟಿ ರಿಯಲ್ ಎಸ್ಟೇಟ್ ಮಾಡಿದ್ದಾರೆ. ಇದಕ್ಕೆ ಯಾರು ಹೊಣೆಗಾರರೆಂದರೆ, ಈ ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ, ಅಲ್ಲಿಯ ಸ್ಥಳೀಯ ಮುಖ್ಯಮಂತ್ರಿಗಳಾದ ಶ್ರೀ ಯೋಗಿ ಆದಿತ್ಯನಾಥ್ ಮತ್ತು ಅಲ್ಲಿಯ ಗೃಹ ಸಚಿವರಾದ ಶ್ರೀ ಅಮಿತ್ ಶಾ ರವರಾಗಿದ್ದು, ಈ 3 ಮಂದಿ ಅದರ ಹೊಣೆಗಾರಿಕೆಯನ್ನು ಹೊರಬೇಕು. ಇಲ್ಲದಿದ್ದರೆ, ಈ ರಾಜ್ಯದಲ್ಲಿ 12 ವರ್ಷಗಳಿಂದ ಏನೇನು ಆಗಿದೆ, ಅದೆಲ್ಲವನ್ನೂ ಈ ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಪ್ರೆಸ್ ಮುಂದೆ ನಿಂತುಕೊಂಡು, ಈ ದೇಶದ ಜನರಿಗೆ ಹೇಳಬೇಕು. ರಾಮಮಂದಿರದ ಹಣ ಎಲ್ಲಿಗೆ ಹೋಗಿದೆ ಎಂಬುದನ್ನು ಹೇಳಬೇಕು. ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವ ಮೂಲಕ ಜೈಲಿಗೆ ಕಳುಹಿಸಬೇಕೆಂದು ಈ ಸದನದ ಮೂಲಕ ಒತ್ತಾಯ ಮಾಡುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಶರಣಗೌಡ ಬಯ್ಯಾಪುರ.

**(ಈ ಹಂತದಲ್ಲಿ ಮಾನ್ಯ ಸದಸ್ಯರು ಸ್ವಸ್ಥಾನದಲ್ಲಿ ಹಾಜರಿರಲಿಲ್ಲ)**

**ಉಪ ಸಭಾಪತಿಯವರು:-** ಮಾನ್ಯ ಭೀಮರಾವ್ ಬಸವರಾಜ ಪಾಟೀಲ್.

**(ಈ ಹಂತದಲ್ಲಿ ಮಾನ್ಯ ಸದಸ್ಯರು ಸ್ವಸ್ಥಾನದಲ್ಲಿ ಹಾಜರಿರಲಿಲ್ಲ)**

**ಉಪ ಸಭಾಪತಿಯವರು:-** ಶ್ರೀ ಮಂಜುನಾಥ್ ಭಂಡಾರಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರು ಸ್ವಸ್ಥಾನದಲ್ಲಿ ಹಾಜರಿರಲಿಲ್ಲ)**

**ಶ್ರೀ ಎಫ್.ಹೆಚ್.ಜಕ್ಕಪ್ಪನವರ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕಲ್ಪಿಸಿದಕ್ಕಾಗಿ ಧನ್ಯವಾದಗಳು. ಅಯೋಧ್ಯೆಯ ಶ್ರೀರಾಮ ಮಂದಿರ ದೇವಾಲಯದಲ್ಲಿ ನಡೆದಂಥ ಚಾರಿತ್ರಿಕ ಹುಂಡಿ ಕಳವು ಬಗ್ಗೆ ಮಾತನಾಡಬಯಸುತ್ತೇನೆ. ಅಯೋಧ್ಯೆ ಶ್ರೀರಾಮ ದೇವಾಲಯದ ಬಗ್ಗೆ ಯಾವುದೇ ತಕರಾರು ಇಲ್ಲ, ಅದನ್ನು ಗೌರವಿಸುತ್ತೇವೆ. ದೇವಸ್ಥಾನದ ಕಟ್ಟಡವನ್ನು ನಿರ್ಮಾಣ ಮಾಡುವಾಗ ಎಲ್ಲಾ ಭಾರತೀಯರು ಅದಕ್ಕೆ

ಬೆಂಬಲವನ್ನು ಕೊಟ್ಟಿದ್ದಾರೆ. ಅಯೋಧ್ಯೆಯಲ್ಲಿ ಶ್ರೀರಾಮ ದೇವಾಲಯವನ್ನು ನಿರ್ಮಿಸುವಾಗ ಇಟ್ಟಿಗೆಯಿಂದ ಕಟ್ಟುತ್ತೇವೆ ಎಂದು ಸಾವಿರಾರು ಲಕ್ಷ ಇಟ್ಟಿಗೆಯನ್ನು ತೆಗೆದುಕೊಂಡು ಹೋಗಿದ್ದು, ಇಟ್ಟಿಗೆಯಿಂದ ಆ ದೇವಾಲಯವನ್ನು ನಿರ್ಮಿಸದೇ, ಕಲ್ಲಿನಿಂದ ನಿರ್ಮಿಸಿದ್ದಾರೆ. ಮತ್ತೊಂದು ಆಶ್ಚರ್ಯಕರ ಸಂಗತಿವೇನೆಂದರೆ, ಬಾಲ ರಾಮನ ಮೂರ್ತಿ ಕಲ್ಲನ್ನು ಈ ಜಗತ್ತಿನಲ್ಲಿಯೇ ಹುಡುಕಿದಾಗ ಕರ್ನಾಟಕದ ದಲಿತರ ಭೂಮಿಯಾದ ಜಯಪುರ ಎಂಬ ಹೋಬಳಿಯಲ್ಲಿ ಆ ಒಂದು ಕಲ್ಲು ಸಿಕ್ಕಿತ್ತು. ಆ ಕಾರಣಕ್ಕಾಗಿ ಇಡೀ ನಾಡಿನಾದ್ಯಂತ ಪ್ರತಿದಿನ ಸುಮಾರು 25,000 ಭಕ್ತರು ಕರ್ನಾಟಕದ ದಲಿತರ ಜಮೀನಿನಲ್ಲಿ ಸಿಕ್ಕ ಕಲ್ಲಿಗೆ ಶರಣು ಮಾಡುತ್ತಿರುವುದಕ್ಕೆ ಅಭಿಮಾನವನ್ನು ವ್ಯಕ್ತಪಡಿಸುತ್ತೇನೆ. ಈ ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು Trust ನೇಮಕ ಮಾಡುವಾಗ ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪಿನಂತೆ 8 ಜನ ಆರ್.ಎಸ್.ಎಸ್. ಪ್ರಚಾರಕರನ್ನು Trustee ಗಳಾಗಿ ನೇಮಿಸಿದ್ದಾರೆ. ಎಲ್ಲರೂ ಒಂದೇ ಜಾತಿಗೆ ಸೇರಿದವರಾಗಿದ್ದು, ಯಾರು ಕೂಡ ಬೇರೆ ಜಾತಿಗೆ ಸೇರಿಲ್ಲ. ಹಾಗಾದರೆ, ಇಲ್ಲಿ ಉದ್ಭವಿಸುವಂಥ ಪ್ರಶ್ನೆಯೇನೆಂದರೆ, ಕೋಟಿಗಟ್ಟಲೆ ಹಣ ಬರುತ್ತಿದ್ದು, ಶ್ರೀ ಚಂಪತ್‌ರಾಯರ ಮೇಲೆ ಬಂದಿರುವ ಆರೋಪವನ್ನು ಯು.ಪಿ. ಸರ್ಕಾರ ನೇಮಿಸಿದಂಥ S.I.T. (Special Investigation Team) ಯವರು ತನಿಖೆ ಮಾಡಿದ್ದು, ಆ ತನಿಖಾ ವರದಿ ಪ್ರಕಾರ ಯಾರು ಆ ಹಣವನ್ನು ಅಪಹರಣ ಮಾಡಿದ್ದಾರೆ ಎಂದರೆ, 'ಹಣ ಎಣಿಕೆ ಮಾಡಿದವರೇ, ಹಣವನ್ನು ಲೂಟಿ ಮಾಡಿದ್ದಾರೆ' ಎನ್ನುವಂಥ ವಿಚಾರವನ್ನು ಕೇಳಿದಾಗ ನಾಚಿಗೇಡಿನ ಪ್ರಸಂಗವಾಗಿದೆ. ಆ ಎಲ್ಲಾ ಹಣ ಎಣಿಕೆದಾರರನ್ನು ಶ್ರೀ ಚಂಪತ್‌ರಾಯರೇ ನೇಮಕ ಮಾಡಿರುವಂಥ ವಿಚಾರವು ಬಹಳ ಮುಖ್ಯವಾಗಿದೆ. ಎಷ್ಟರ ಮಟ್ಟಿಗೆ ದರೋಡೆ ನಡೆದಿದೆ ಎಂದರೆ, ದೇವಾಲಯದ ಟ್ರಸ್ಟ್‌ಗಳವರು ರೂ.2 ಕೋಟಿಗಳಿಗೆ ಬೆಲೆ ಬಾಳುವ ಜಮೀನನ್ನು ರೂ.18.5 ಕೋಟಿಗಳಿಗೆ ಕೊಟ್ಟಿರುವಂಥ ದೊಡ್ಡ ಹಗರಣ ನಡೆದಿದ್ದು, ಇದಕ್ಕೆ ಯಾರು ಸಂಬಂಧ ಎಂಬುದನ್ನು ಬಹಳ ಮುಖ್ಯವಾಗಿ ಚರ್ಚೆ ಮಾಡಬೇಕಾಗಿದೆ. ಇನ್ನೊಂದು ಬಹಳ ಮುಖ್ಯವಾದ ವಿಚಾರವೇನೆಂದರೆ, S.I.T. ತನಿಖೆ ಬಗ್ಗೆ ಸಮಾಜವಾದಿ ಪಕ್ಷದ ಮುಖ್ಯಸ್ಥರಾದ ಶ್ರೀ ಅಖಿಲೇಶ್ ಯಾದವ್‌ರವರು ಕರ್ನಾಟಕದ ಪಾತ್ರ ಬಹಳ ದೊಡ್ಡದಾಗಿದೆ ಎನ್ನುವಂಥ ವಿಚಾರವನ್ನು ಹೇಳಿದರು. ಅದರಲ್ಲಿಯೂ ಕರ್ನಾಟಕದ ಪಾತ್ರಕ್ಕಿಂತ ಹೆಚ್ಚಾಗಿ ಹುಬ್ಬಳ್ಳಿಯವರ ಪಾತ್ರ ಬಹಳ ಇದೆ ಎನ್ನುವಂಥದು ಬಹಳ ಮುಖ್ಯವಾದ ವಿಚಾರವಾಗಿದೆ. ಹುಬ್ಬಳ್ಳಿಯ ಗೋಪಾಲ್ ಜಿ ಭಟ್ ಎಂಬುವವರಿಗೂ ಹಾಗೂ ಶ್ರೀ ಪ್ರಹ್ಲಾದ್ ಜೋಶಿ ಎಂಬುವವರಿಗೂ ಇರುವ ಸಂಬಂಧವೇನು? ಇವೆಲ್ಲವೂ ಹೊರಗೆ ಬರಬೇಕು. ಈ ರೀತಿ ಬಿ.ಜೆ.ಪಿ.ಯವರು ಸದನದಲ್ಲಿ ಸುಮ್ಮನೆ ಮಾತನಾಡುವುದಲ್ಲ, ಸುಮ್ಮನೆ 'ಜೈ ಶ್ರೀರಾಮ್' ಎಂದು ಘೋಷಣೆ

ಕೂಗುವುದಲ್ಲ. ಜೈ ಶ್ರೀರಾಮ್ ಎಂದು ಹೇಳುತ್ತಿದ್ದು, ಜೈ ಶ್ರೀರಾಮನ ಹುಂಡಿಯ ಹಣವನ್ನು ಕಳವು ಮಾಡಿರುವುದಕ್ಕೆ ನಾಚಿಕೆಯಾಗಬೇಕು. ಆ ಕಾರಣಕ್ಕಾಗಿ ಜೈ ಶ್ರೀರಾಮ್ ಎನ್ನುವಂಥ ನೈತಿಕ ಹಕ್ಕು ಅವರಿಗೆ ಇಲ್ಲ. ಇವತ್ತಿನಿಂದ ಜೈ ಶ್ರೀರಾಮ್ ಎಂದು ಅವರ ಬಾಯಿಯಿಂದ ಹೇಳುವುದು ಬೇಡ. ಶ್ರೀ ಪ್ರಹ್ಲಾದ್ ಜೋಶಿ, ಗೋಪಾಲ್ ಜಿ ಭಟ್ ಏನು ಕಳವು ಮಾಡಿದ್ದಾರೆ ಎಂಬುದನ್ನು ಜಗತ್ತಿಗೆ ಹೇಳಬೇಕು. ಅಯೋಧ್ಯೆ ಶ್ರೀರಾಮನ ಹುಂಡಿಯ ಹಣವನ್ನು ಕಳವು ಮಾಡಿದ್ದಾರೆ, ಅಂಥವರಿಗೆ ಆ ಶ್ರೀರಾಮನೇ ಶಿಕ್ಷೆ ನೀಡುತ್ತಾನೆ.

ಮೊನ್ನೆ ದಿವಸ ಹುಬ್ಬಳ್ಳಿಯಲ್ಲಿ ನಾಟಕ ನಡೆದಿದ್ದು, ಅಲ್ಲಿ ಶ್ರೀ ಸಾಯಿರಾಮ ಎಂಬ ದೇವಾಸ್ಥಾನ ಇದ್ದು, ಅಲ್ಲಿಗೆ ಆರ್.ಎಸ್.ಎಸ್. ಕಾರ್ಯಕರ್ತರು ಹೋಗಿ, ಶ್ರೀ ಮುತಾಲಿಕ್ ದೇಸಾಯಿ ನೇತೃತ್ವದಲ್ಲಿ ಬಹಳ ಹಣ ದುರುಪಯೋಗವಾಗಿದೆ ಎಂದು ಆ ಟ್ರಸ್ಟ್‌ನ್ನು ಲಾಕ್ ಮಾಡಿದರು. ಬಿ.ಜೆ.ಪಿ.ಯ ಆರ್.ಎಸ್.ಎಸ್. ಮನುವಾದಿಗಳಿಗೆ ದೇವಾಲಯದ ಹುಂಡಿಯೇ ಎ.ಟಿ.ಎಂ. ಆಗಿದೆ. ದೇವಾಲಯದ ಹುಂಡಿಯನ್ನು ಎ.ಟಿ.ಎಂ. ಆಗಿ ಉಪಯೋಗಿಸಿಕೊಂಡು, ಈ ದೇಶದಲ್ಲಿ ದ್ವೇಷ ಬೆಳೆಸುವಂಥವರಾಗಿದ್ದು, ಅವರಿಗೆ ಧಿಕ್ಕಾರ ಹಾಕಬೇಕು. ಅವರಿಗೆ ಶ್ರೀರಾಮನ ಹೆಸರು ಮಾತ್ರವಲ್ಲ, ಯಾವ ದೇವರ ಹೆಸರನ್ನು ಸಹ ಹೇಳಲಿಕ್ಕೆ ಯೋಗ್ಯತೆ ಇಲ್ಲ ಎನ್ನುವಂಥ ಮಾತನ್ನು ಹೇಳುತ್ತಾ, ಅಯೋಧ್ಯೆಯ ಶ್ರೀರಾಮ ದೇವಸ್ಥಾನದ ಹುಂಡಿಯ ಹಣ ಕಳವುವಾಗಿರುವುದನ್ನು ಪ್ರಶ್ನಿಸುತ್ತಾ, ಈ ಸದನದಲ್ಲಿರುವ ಬಿ.ಜೆ.ಪಿ.ಯವರು ಮನುವಾದಿಗಳು, ಸನಾತನಿಗಳು ದೇವರ ವಿರೋಧಿಗಳು ಎನ್ನುವಂಥ ಮಾತನ್ನು ಹೇಳುತ್ತಾ, ನನಗೆ ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತಾ, ನನ್ನ ಮಾತನ್ನು ಮುಗಿಸುತ್ತಿದ್ದೇನೆ.

(ಮುಂದು)

(849) 24.08.2026/5.20/ಎಸ್‌ಕೆ-ಎಂಡಿ (ಉಪ ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರು ಮತ್ತು ಮಾನ್ಯ ಸದಸ್ಯರುಗಳಾದ ಶ್ರೀ ಸಿ.ಟಿ.ರವಿ, ಶ್ರೀ ಎಸ್.ಎಲ್.ಭೋಜೇಗೌಡ, ಶ್ರೀ ಎಸ್.ವ್ಹಿ.ಸಂಕನೂರ, ಶ್ರೀ ಹೆಚ್.ಎಸ್.ಗೋಪಿನಾಥ್, ಶ್ರೀ ಪಿ.ಹೆಚ್.ಪೂಜಾರ್ ಇವರುಗಳನ್ನು ಹೊರತುಪಡಿಸಿ ಇನ್ನುಳಿದ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಉಪ ಸಭಾಪತಿಯವರು:-** ಶ್ರೀಮತಿ ಬಲ್ಕೀಸ್ ಬಾನು

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀಮತಿ ಬಲ್ಕೀಸ್ ಭಾನುರವರು ಸದನದಲ್ಲಿ ಹಾಜರಿರಲಿಲ್ಲ)**

**ಉಪ ಸಭಾಪತಿಯವರು:-** ಶ್ರೀ ಎಂ ನಾಗರಾಜುರವರೇ ತಾವು ಮಾತನಾಡಿ.

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಸ್ನೇಹಿತರೆಲ್ಲರೂ ತಂದಿರುವಂತಹ ಪ್ರಮುಖವಾದ ವಿಚಾರದ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ನಾವೆಲ್ಲರೂ ಶ್ರೀರಾಮನ ಬಗ್ಗೆ ಮಾತನಾಡುತ್ತಿದ್ದೇವೆ. ನಾವೆಲ್ಲರೂ ಹಿಂದೂಗಳು ಆಗಿರುವಂಥವರು. ಈ ದೇಶದ ಹಿಂದೂ ನಾಗರೀಕರಾಗಿ, ನಾವೆಲ್ಲರೂ ಹಿಂದೂಗಳನ್ನು ಪ್ರೀತಿ ಮಾಡುವಂತಹವರು. ನಾವು ದ್ವೇಷ ಮಾಡುವಂತಹ ಹಿಂದೂಗಳಲ್ಲ. ಪ್ರೀತಿ, ವಿಶ್ವಾಸ, ದೇವರು ಎಂದು ಆದರ್ಶವಾಗಿಟ್ಟುಕೊಂಡು ಕೆಲಸ ಮಾಡುವಂತಹ ಸತ್ಯದ ಪ್ರತೇಕವೇ ಶ್ರೀರಾಮ ಎಂದು ಹೇಳುತ್ತಿದ್ದೇನೆ. ಆ ಶ್ರೀರಾಮನ ಹೆಸರಿನಲ್ಲಿ ರಾಜಕೀಯ ಮಾಡುವಂಥದ್ದು ಮತ್ತು ಶ್ರೀ ರಾಮನ ಹೆಸರಿನಲ್ಲಿ ದುಡ್ಡನ್ನು ದುರಪಯೋಗ ಪಡಿಸಿಕೊಳ್ಳುವಂಥದ್ದು. ಶ್ರೀರಾಮನ ಆಸ್ತಿಗಳು, ಹುಂಡಿಯನ್ನು ಕಳ್ಳತನ ಮಾಡುವಂತಹದ್ದು. ಅದಕ್ಕೆ accountability ಇಲ್ಲದೇ ರೀತಿಯಲ್ಲಿ ನಡೆದುಕೊಳ್ಳುವಂತಹದ್ದು. ಆ ರಾಮನು ಕೂಡ ಇದನ್ನು ಸಹಿಸವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಶ್ರೀರಾಮನ ಹೆಸರು ಹೇಳಬೇಕೆಂದರೆ, ಭಕ್ತಿ, ಗೌರವ ಇಟ್ಟುಕೊಂಡು ಮತ್ತು ಹೃದಯದಿಂದ ಹೇಳಬೇಕು. ಕೇವಲ ಚುನಾವಣೆಗೋಸ್ಕರ ಶ್ರೀರಾಮನ ಬೀದಿಯಲ್ಲಿ ನಿಂತು ಇವರು ಲಕೋಟೆಯಲ್ಲಿ ದುಡ್ಡು ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡುತ್ತಾರಾ, ಎ.ಟಿ.ಎಂ. ಮಾಡಿಕೊಂಡಿರುವಂತಹ ಇವರಿಗೆ ಆ ಶ್ರೀರಾಮನ ಹೆಸರಿನಲ್ಲಿ ಇಷ್ಟೊಂದು ಅಸತ್ಯ ನಡೆಯುತ್ತಿರಬೇಕಾದರೆ, ಅವರು ಏಕೆ ಇರಬೇಕೆಂದು ಕೇಳುತ್ತಿದ್ದಾರೆ. ಅವರು ಶ್ರೀರಾಮನ ಹೆಸರಿನಲ್ಲಿ ರಾಜಕೀಯ ಮಾಡಿದ್ದಾದರೆ, ನಿಜವಾಗಲೂ ಮನುಕುಲಕ್ಕೆ ವಿರೋಧ ಇರುವಂತಹ ಜನ.

**ಉಪ ಸಭಾಪತಿಯವರು:-** ಮಾನ್ಯ ನಾಗರಾಜುರವರೇ, ತಾವು ಪೀಠವನ್ನು ನೋಡಿಕೊಂಡು ಮಾತನಾಡಿ.

**ಶ್ರೀ ಎಂ. ನಾಗರಾಜು:-** ಶ್ರೀರಾಮನ ಮನುಕುಲಕ್ಕೆ ಆದರ್ಶವಾಗಿರುವಂತಹ ಒಬ್ಬ ದೇವರನ್ನು ರಾಜಕೀಯ ತೆವಲಿಗೋಸ್ಕರ ಉಪಯೋಗ ಮಾಡಿಕೊಂಡು ಮತ್ತು ವೋಟಿಗೋಸ್ಕರ ಉಪಯೋಗ ಮಾಡಿಕೊಂಡು ಮತ್ತು ಕೇವಲ ಎ.ಟಿ.ಎಂ. ಗೋಸ್ಕರ ಉಪಯೋಗ ಮಾಡಿಕೊಂಡು, ಈ ದೇಶವನ್ನು ಶ್ರೀ ರಾಮನ ಹೆಸರಿನಲ್ಲಿ ಹಿಂದೂ ಮುಸ್ಲಿಂರನ್ನು ಬೇರೆ ಮಾಡುವಂತಹ ಮತ್ತು ದರೋಡೆಕೋರರ ರೀತಿಯಲ್ಲಿ ನಡೆದುಕೊಳ್ಳುತ್ತೀರಲ್ಲ, ಅವರನ್ನು ಹೇಗೆ ಒಪ್ಪುವುದಕ್ಕೆ ಸಾಧ್ಯ ಎನ್ನುವ ಮಾತನ್ನು ಹೇಳುತ್ತೇನೆ. ಈ ದೇಶದ ಸಂವಿಧಾನದ ಮೇಲೆ ನಂಬಿಕೆ ಇರಬೇಕು. ಶ್ರೀರಾಮನ ಆದರ್ಶವನ್ನು ಇಟ್ಟುಕೊಂಡು ನಡೆಯಬೇಕು. ಮಹಾತ್ಮ ಗಾಂಧಿಯವರ ಆದರ್ಶ ಮತ್ತು ಶ್ರೀರಾಮನ ಆದರ್ಶ ಮೈಗೂಡಿಸಿಕೊಂಡು ಕೆಲಸ ಮಾಡುವಂತಹವರು ಕಾಂಗ್ರೆಸ್‌ನವರು ಎಂಬ ಮಾತನ್ನು ಹೇಳುತ್ತೇನೆ. ಇವರು ಕೋಮುವಾದಿಗಳ ಕೇವಲ ಸಮಾಜವನ್ನು ನೋಡಿರಲಿಲ್ಲ. ಅದರಲ್ಲಿ ಕೇವಲ ರಾಜಕೀಯ ಮಾಡಲಿಲ್ಲ. ಸಮಾಜವನ್ನು ನೋಡಿ ರಾಜಕೀಯ ಮಾಡಲಿಲ್ಲ. ಶ್ರೀರಾಮನನ್ನು ಬೀದಿಗೆ ತಂದಿಟ್ಟು, ಶ್ರೀರಾಮನ ಹೆಸರಿನಲ್ಲಿ ಕಳ್ಳತನ ಮಾಡಿಕೊಂಡು ರಾಜಕಾರಣ ಮಾಡಿದಿರಿ. ಶ್ರೀರಾಮನ ದೇವಸ್ಥಾನ ಕಾಮಗಾರಿ ಇನ್ನೂ ಪೂರ್ಣಗೊಂಡಿರಲಿಲ್ಲ. ಪಾರ್ಲಿಮೆಂಟ್ ಚುನಾವಣೆಗೋಸ್ಕರ ದೇವಸ್ಥಾನವನ್ನು ಉದ್ಘಾಟನೆ ಮಾಡಿದರು. ಏತಕ್ಕೆ ಈ ರೀತಿ ಮಾಡಿದಿರಿ?

ಶ್ರೀರಾಮನಿಗೆ ಅವಮಾನ ಮಾಡಿದರೆ, ಈ ದೇಶಕ್ಕೆ ಅವಮಾನ ಮಾಡಿದಂತೆ. ಶ್ರೀರಾಮನ ಭಕ್ತನಿಗೆ ಅವಮಾನ ಮಾಡಿದರೆ ಇಡೀ ಹಿಂದೂಗಳಿಗೆ ಅವಮಾನ ಮಾಡಿದಂತೆ. ನಿಜವಾದ ಶ್ರೀರಾಮನ ಭಕ್ತ ಎನ್ನುವಂತಹವನು, ನಿಜವಾಗಲೂ ಎಲ್ಲರನ್ನೂ ಪ್ರೀತಿ ಮಾಡುವ ಶ್ರೀರಾಮನ ಭಕ್ತ. ನಿಜವಾದ ಹಿಂದೂ ಎಂದರೆ ಎಲ್ಲರನ್ನು ಪ್ರೀತಿ ಮಾಡುವವನು. ಮುಸಲ್ಮಾನರನ್ನು ಪ್ರೀತಿ ಮಾಡುವನು. ಆದರೆ ಇವರು ಏನು ಮಾಡುತ್ತಿದ್ದಾರೆ ಎಂದರೆ ಶ್ರೀರಾಮನ ಹೆಸರಿನಲ್ಲಿ ಹಿಂದೂ ಮುಸ್ಲಿಂರನ್ನು ಬೇರೆ ಬೇರೆ ಮಾಡುತ್ತೀರಿ. ಶ್ರೀರಾಮನ ಹೆಸರಿನಲ್ಲಿ ದೇಶವನ್ನು ಹೊಡೆಯುತ್ತೀರಿ. ಶ್ರೀರಾಮನ ಹೆಸರಿನಲ್ಲಿ ಲೂಟಿ ಹೊಡೆಯುತ್ತೀರಿ. ಶ್ರೀರಾಮನ ಹೆಸರಿನಲ್ಲಿ ಹುಂಡಿಯನ್ನು ಕಳ್ಳತನ ಮಾಡುತ್ತೀರಿ. ಶ್ರೀರಾಮನ ಹೆಸರಿನಲ್ಲಿ ರಾಜಕೀಯ ಮಾಡುತ್ತೀರಿ. ಶ್ರೀರಾಮನ ಹೆಸರಿನಲ್ಲಿ ಎಲ್ಲವನ್ನೂ ಹೊಡೆಯುವಂತಹವರು, ಈ ದೇಶದಲ್ಲಿ ಮಾರಕ ಶಕ್ತಿಗಳು ಯಾರಾದರೂ ಇದ್ದರೆ ಇವರು ಮತ್ತು ಇವರ ಲೀಡರ್ ಆಗಿರುವಂತಹ ಶ್ರೀ ಅಮಿತ್ ಶಾ ಮತ್ತು ಶ್ರೀ ನರೇಂದ್ರ ಮೋದಿಯವರು ಎಂದು ನೇರವಾಗಿ ನಾನು ಅಪಾದನೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಇಷ್ಟೊಂದು ದೊಡ್ಡ ಕಳ್ಳತನವಾದರೆ ಅದು ದುಡ್ಡಿನ ಕಳ್ಳತನವಲ್ಲ. ಶ್ರೀರಾಮ ಭಕ್ತರಿಗೆ ಕೊಟ್ಟಿರುವಂತಹ ನಂಬಿಕೆಯನ್ನು ಕಳ್ಳತನ ಮಾಡಿದ್ದಾರೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ನಂಬಿಕೆಯ ಕಳ್ಳತನವನ್ನು ನಾವು ಸಹಿಸುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ. ನಂಬಿಕೆ ಎನ್ನುವಂತಹದ್ದು ಈ ದೇಶದ ಬಹು ದೊಡ್ಡ ಶಕ್ತಿ, ಮನುಕುಲದ ಶಕ್ತಿ ಎನ್ನುವ ನಂಬಿಕೆಯ ಮಾತನ್ನು ಹೇಳುತ್ತೇನೆ. ಆ ನಂಬಿಕೆಯನ್ನು ಕಳ್ಳತನ ಮಾಡಿದಿರಿ. ಮನುಕುಲದ ನಂಬಿಕೆಯನ್ನು ಕಳ್ಳತನ ಮಾಡಿರುವಂತಹವರು. ಶ್ರೀರಾಮನಿಗೆ ಅವಮಾನ ಮಾಡಿದಂತಹವರಿಗೆ ಧಿಕ್ಕಾರ ಎನ್ನುವ ಕೊಡದೇ ಬೇರೆ ಇನ್ನೇನು ಹೇಳಬೇಕೆಂಬ ಮಾತನ್ನು ಹೇಳುತ್ತಿದ್ದೇನೆ. ಅಯೋಧ್ಯೆಯಲ್ಲಿ ಮೊನ್ನೆ ನಡೆದಂತಹ ಚುನಾವಣೆಯಲ್ಲಿ ಇವರು ಸೋತು ಬಿಟ್ಟರು. ಅಯೋಧ್ಯೆಯಲ್ಲಿ ಏತಕ್ಕೆ ಸೋತು ಬಿಟ್ಟರು ಎಂದರೆ ಶ್ರೀರಾಮನೂ ಕೂಡ ಇಷ್ಟಪಡಲಿಲ್ಲ. ಶ್ರೀರಾಮನು ಕೂಡ ಇವರನ್ನು ತಿರಸ್ಕಾರ ಮಾಡಿದ. ಅಯೋಧ್ಯೆಯಲ್ಲಿ ನಡೆದ ಚುನಾವಣೆಯಲ್ಲಿ ಸೋತು ಬಿಟ್ಟಿರಿ. ಇನ್ನೂ ಬುದ್ಧಿ ಬಂದಿಲ್ಲ ಎಂದರೆ ನಾನು ಇವರಿಗೆ ಏನು ಹೇಳಬೇಕು? ಇವತ್ತು ನಾನು ಹೇಳುತ್ತಿದ್ದೇನೆ ಎಂಬುದನ್ನು ಕೇಳಿ. ಶ್ರೀರಾಮ ಎಂದರೆ ಆದರ್ಶ ಪುರುಷ ಎಂದು ಹೇಳುತ್ತೇನೆ. ಆ ಆದರ್ಶ ಪುರುಷನ ಹೆಸರಿನಲ್ಲಿ ರಾಜಕಾರಣ ಮಾಡುವಂತಹದ್ದು. ದೇವಸ್ಥಾನದ ಹೆಸರಿನಲ್ಲಿ ರಾಜಕಾರಣ ಮಾಡುವಂತಹದ್ದು. .... ಶ್ರೀರಾಮನ ಹೆಸರಿನಲ್ಲಿ ಹುಂಡಿ ಲೂಟಿ ಮಾಡುತ್ತೀರಲ್ಲ, ಆ ತಿಮಿಂಗಿಲಗಳಿಗೆ ನಾನು ಏನು ಹೇಳಬೇಕಾಗುತ್ತದೆ? ಹಾಗಾಗಿ ಇವರು ದಂಡ ಪಿಂಡಗಳು, ದಂಡ ಪಿಂಡಗಳು ಎಂದು ಕರೆಯಬೇಕಾಗುತ್ತದೆ. ಶ್ರೀರಾಮನ ಹುಂಡಿಯನ್ನು ತಿಂದ "ಬಿ.ಜೆ.ಪಿ., ದಂಡ ಪಿಂಡಗಳು" ಎಂದು ಹೇಳಬೇಕಾಗುತ್ತದೆ. ದಯವಿಟ್ಟು ಮನುಕುಲಕ್ಕೆ ಅವಮಾನ ಮಾಡಬೇಡಿ. ಶ್ರೀರಾಮ ಭಕ್ತರಿಗೆ ಅವಮಾನ ಮಾಡಬೇಡಿ. ಈ ದೇಶಕ್ಕೆ ಅವಮಾನ ಮಾಡಬೇಡಿ. ಶ್ರೀರಾಮ ಎನ್ನುವವನು ಆದರ್ಶ ಪುರುಷ. ಎಲ್ಲರಿಗೂ ಪ್ರೀತಿ ಮಾಡುವಂತಹವರು. ಕೇವಲ ಹಿಂದೂಗಳಿಗೆ ಮಾತ್ರವಲ್ಲ. ಇಡೀ ಮನುಕುಲಕ್ಕೆ ಪ್ರೀತಿಯಾಗಿರುವ ದೇವರನ್ನು ಇವರು ರಾಜಕೀಯ ತೇವಲಿಗೋಸ್ಕರ ಈ ತರಹ ಬೀದಿಗೆ ತೆಗೆದುಕೊಂಡು ಬಂದು ಮಾಡುತ್ತೀರಲ್ಲ, ಇದನ್ನು ನಾನು ಒಪ್ಪಿಕೊಳ್ಳುವುದಕ್ಕೆ

ಸಾಧ್ಯವಿಲ್ಲ. ದಯವಿಟ್ಟು, ಹಿಂದೂತ್ವ ಮತ್ತು ಹಿಂದೂ ಧರ್ಮದಲ್ಲಿ ನಂಬಿಕೆಯಿದ್ದರೆ ಹಾಗೂ ಈ ನಾಡಿನಲ್ಲಿ ನಂಬಿಕೆಯಿದ್ದರೆ ಸಂವಿಧಾನದಲ್ಲಿ ನಂಬಿಕೆಯಿದ್ದರೆ ಆ ಹುಂಡಿಗೆ ಲೆಕ್ಕ ಕೊಡಿ ಎಂಬ ಮಾತನ್ನು ಹೇಳುತ್ತಿದ್ದೇನೆ. ಅದಕ್ಕೆ ಯಾರು ಜವಾಬ್ದಾರರಿದ್ದವರನ್ನು ಒದ್ದು ಹೊಡೆದು ಒಳಗಡೆ ಹಾಕುವಂತಹ ಕೆಲಸವನ್ನು ಮಾಡಿ. ಈ ದೇಶದ ಗೃಹ ಸಚಿವರು ಉತ್ತರ ಕೊಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಇವರು ದೇವಸ್ಥಾನವನ್ನು ಎ.ಟಿ.ಎಂ. ಅನ್ನಾಗಿ ಮಾಡಿಕೊಳ್ಳುವುದು. ದೇವಸ್ತಾನದಲ್ಲಿ ದುಡ್ಡು ಮಾಡಿಕೊಳ್ಳುವುದು. ಸಾವಿನಲ್ಲಿ ರಾಜಕೀಯ ಮಾಡಿಕೊಳ್ಳುವುದು.

**ಉಪ ಸಭಾಪತಿಯವರು:-** ಮಾನ್ಯ ಎಂ. ನಾಗರಾಜುರವರೇ, ತಾವು ತಮ್ಮ ಮಾತನ್ನು ಮುಗಿಸಿ.

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದೇವರಲ್ಲಿ ರಾಜಕೀಯ ಮಾಡುವುದು. ಹಿಂದೂ ಮುಸ್ಲಿಂರನ್ನು ಹೊಡೆಯುವುದು. ಎಲ್ಲದರಲ್ಲಿ ರಾಜಕೀಯ ಮಾಡುತ್ತೀರಲ್ಲ. ಈ ದೇಶದ ಭವಿಷ್ಯವನ್ನು ಹಾಳು ಮಾಡಬೇಡಿ. ನಾನು ತಮ್ಮ ಮೂಲಕ ವಿರೋಧ ಪಕ್ಷದವರಿಗೆ ವಿನಂತಿ ಮಾಡುವುದೇನೆಂದರೆ, ಈ ದೇಶಕ್ಕೋಸ್ಕರ ಶ್ರೀರಾಮನ ಭಕ್ತರಿಗೋಸ್ಕರ ಸತ್ಯವನ್ನು ಹೇಳಿ. ಅಸತ್ಯವನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ನಾನು ಹೇಳುವುದನ್ನು ಕೇಳಿ. ಶ್ರೀ ರಾಮನ ಹೆಸರಿನಲ್ಲಿ ಎಷ್ಟೇ ದ್ರೋಹ ಮಾಡಿದರೂ ಆ ಶ್ರೀರಾಮನ ಶಾಪ ಇವರ ಮೇಲೆ ಇರುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಆ ಕಾರಣಕ್ಕೋಸ್ಕರ ಹೇಳುವುದೇನೆಂದರೆ, ಈ ದೇಶಕ್ಕೋಸ್ಕರ, ಮತ್ತು ಮನುಕುಲಕ್ಕೋಸ್ಕರ ಮತ್ತು ನಂಬಿಕೆಯಲ್ಲಿರುವಂತಹ ಶ್ರೀ ರಾಮನ ಭಕ್ತರ ನಂಬಿಕೆಗೆ ಕಳ್ಳತನ ಮಾಡಿರುವುದಕ್ಕೆ ಇವರು ಕ್ಷಮೆ ಕೇಳಬೇಕು. ಈ ದೇಶದ ಕ್ಷಮೆ ಕೇಳಬೇಕು. ಶ್ರೀ ನರೇಂದ್ರ ಮೋದಿ ಮತ್ತು ಶ್ರೀ ಅಮಿತ್ ಷಾ ಅವರ ಜೊತೆಗೆ ಇವರೆಲ್ಲರೂ ಕ್ಷಮೆ ಕೇಳಬೇಕೆಂಬ ಮಾತನ್ನು ಹೇಳಬಯಸುತ್ತೇನೆ. ಈ ದೇಶ ಇವರನ್ನು ಕ್ಷಮಿಸುವುದಿಲ್ಲ. ಬಹಳ ದಿನಗಳು ಇನ್ನೂ ದೂರು ಇಲ್ಲ. ಅಯೋಧ್ಯೆ ಚುನಾವಣೆಯಲ್ಲಿ ಸೋತಿದ್ದೀರಿ. ಮುಂದಿನ ಪಾರ್ಲಿಮೆಂಟ್ ಚುನಾವಣೆಯಲ್ಲಿ ಇಡೀ ದೇಶದಲ್ಲಿಯೇ ಇವರು ಸೋಲುತ್ತಾರೆ. ಆ ಶಾಪ ನಮ್ಮದಲ್ಲ. ಶ್ರೀರಾಮನ ಶಾಪ ಹಿಡಿದಿದೆ ಎನ್ನುವ ಮಾತನ್ನು ಹೇಳುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಎಂ. ನಾಗರಾಜುರವರೇ, ತಾವು ತಮ್ಮ ಮಾತನ್ನು ಮುಗಿಸಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಆ ಕಾರಣಕ್ಕೋಸ್ಕರ ಹೇಳುವುದೇನೆಂದರೆ, ಶ್ರೀರಾಮ ಇರಲಿ, ಶ್ರೀಕೃಷ್ಣ ಇರಲಿ ಯಾವುದೇ ಇದ್ದರೂ ಕೂಡ ಭಕ್ತಿಯಿಂದ ನೋಡಿಕೊಂಡು ಕೆಲಸ ಮಾಡಬೇಕು.

**ಉಪ ಸಭಾಪತಿಯವರು:-** ಮಾನ್ಯ ಎಂ. ನಾಗರಾಜುರವರೇ, ತಾವು ತಮ್ಮ ಮಾತನ್ನು ಮುಗಿಸಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಯದುವಂಶದಿಂದ ಬಂದಿರುವಂತಹವನು. ನಾನು ಕೂಡ ಶ್ರೀರಾಮನ ಭಕ್ತ. ಆದರೆ ನಾನು ಏತಕ್ಕೆ ಶ್ರೀರಾಮ ಭಕ್ತನಾಗಿದ್ದೇನೆಂದರೆ, ಮನುಕುಲವನ್ನು ತಿಳಿ ಮಾಡುವ ಶ್ರೀರಾಮನ ಭಕ್ತ. ಯುವಕರ ಸಮಾಜವನ್ನು ಹೊಡೆಯುವಂತಹ ಶ್ರೀರಾಮನ ಭಕ್ತನಲ್ಲ. ಶ್ರೀರಾಮನಿಗೆ ಅವಮಾನ ಮಾಡಬೇಡಿ. ಈ ದೇಶಕ್ಕೆ ಅವಮಾನ ಮಾಡಬೇಡಿ. ಮನುಷ್ಯನಿಗೆ ಅವಮಾನ ಮಾಡಬೇಡಿ. ಶ್ರೀರಾಮ ಭಕ್ತನಿಗೆ ಅವಮಾನ ಮಾಡಬೇಡಿ. ಇದನ್ನು ಕೂಡ ದೇವರು ಸಹಿಸುವುದಿಲ್ಲ ಎನ್ನುವ

ಮಾತನ್ನು ಹೇಳಬಯಸುತ್ತೇನೆ. ಕೂಡಲೇ ಮಾಡಿದಂತಹ ಎಲ್ಲಾ ಘೋರ ಅಪರಾಧಗಳಿಗೆ ಇವರ ಪ್ರಧಾನ ಮಂತ್ರಿಯವರು ಉತ್ತರ ಕೊಡಬೇಕು ಎನ್ನುವ ಮಾತನ್ನು ಹೇಳಬಯಸುತ್ತೇನೆ. ಒಂದು ವೇಳೆ ಕೊಡದಿದ್ದರೆ ಇವರಂಥ ಹೇಡಿಗಳು ಇಲ್ಲ ಎನ್ನುವ ಮಾತನ್ನು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

**ಉಪ ಸಭಾಪತಿಯವರು:-** ಶ್ರೀ ಶಿವಣ್ಣ ಬಿ.ಎಸ್.ರವರೇ, ತಾವು ಮಾತನಾಡಿ.

**ಶ್ರೀ ಶಿವಣ್ಣ ಬಿ.ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಇವತ್ತು ಜೈ ಶ್ರೀರಾಮ್ ಎನ್ನುವ ಬದಲು "ಜೈ ಭೀಮ್, ಜೈ ಸಂವಿಧಾನ" ಎಂದು ಹೇಳಿದರೆ ಮಾತ್ರ ಈ ಭಾರತಕ್ಕೆ ಬಿ.ಜೆ.ಪಿ., ಯವರು ಅಂಟಿಸಿರುವ ಈ ಶಾಪದ ವಿಮೋಚನೆ. ಇವತ್ತು ಬಿ.ಜೆ.ಪಿ. ಯವರು ತನ್ನ ಒಂದು ರಾಜಕಾರಣಕ್ಕೋಸ್ಕರ ಮತ್ತು ಚುನಾವಣೆಯಲ್ಲಿ ಗೆಲ್ಲುವುದಕ್ಕೋಸ್ಕರ ನಮ್ಮ ಅಹಿಂದಗಳನ್ನು divide ಮಾಡಿ ಮತ್ತು ಶೋಷಿತ ವರ್ಗಗಳಿಗೆ ಇವರು ಮಾಡುವ ಮಾಯ ಮಂತ್ರ ಮತ್ತು ಟೊಳ್ಳು ಮಾತುಗಳಿಗೆ ಮರಳಾಗಿ ಹನ್ನೆರಡು ವರ್ಷದಿಂದ ಇವರಿಗೆ ವೋಟು ಕೊಟ್ಟರು. ರಾಷ್ಟ್ರದಲ್ಲಿರುವ ಇವತ್ತು Gen Z ಗಳಿಗೆ ಗೊತ್ತಾಗುತ್ತಿದೆ. Gen Z ಯವರು ಇವತ್ತು ಬಿ.ಜೆ.ಪಿ.,ಯವರ ಬಣ್ಣವನ್ನು ಬಯಲು ಮಾಡುತ್ತಾರೆ. ಇವರ ಬಣ್ಣ Gen Z ಗಳಿಗೆ ಗೊತ್ತಾಗಿದೆ. ಶ್ರೀ ನರೇಂದ್ರ ಮೋದಿಯವರ ಸುಳ್ಳು ಮತ್ತು ಶ್ರೀ ಅಮಿತ್ ಶಾ ಅವರ ಸುಳ್ಳು ಹಾಗೂ ಯೋಗಿ ಅದಿತ್ಯಾನಾಥ್‌ರವರ ಸುಳ್ಳು ಎಂಬುದು ಗೊತ್ತಾಗಿದೆ. ಇವರು ನಯವಂಚಕರು ಹಾಗೂ ಇವರಿಗೆ ಯಾವುದೇ ರೀತಿಯ ನೈತಿಕತೆ ಇಲ್ಲ. ಎಲ್ಲಿಯ ತನಕ ಅಹಿಂದ ವರ್ಗಗಳು ಡಾ॥ ಬಿ.ಆರ್. ಅಂಬೇಡ್ಕರ್‌ರವರ ಸಂವಿಧಾನ ಅಚಲವಾದ ನಂಬಿಕೆ ಮತ್ತು ವಿಶ್ವಾಸವನ್ನು ಇಟ್ಟುಕೊಂಡು, ಈ ದುಷ್ಟ ಬಿ.ಜೆ.ಪಿ., ಆರ್.ಎಸ್.ಎಸ್. ಮನುವಾದಿಗಳ ವಿರುದ್ಧ ಹೋರಾಟ ಮಾಡುವುದಿಲ್ಲವೋ, ಅಲ್ಲಿಯ ತನಕ ವಿಧೇಯತೆಯಿಂದ ಶ್ರೀರಾಮನ ಹುಂಡಿ ಕೂಡ ಹೊಡೆಯುತ್ತೀರಿ. ಎ.ಟಿ.ಎಂ.ಗಳನ್ನು ಮಾಡುತ್ತೀರಾ. ಅಪರೇಷನ್ ಕಮಲಗಳನ್ನು ಮಾಡುತ್ತಾರೆ. ಎಲ್ಲಾ ರೀತಿಯ ಅನಾಚಾರ, ಅತ್ಯಾಚಾರ ಮಾಡುತ್ತಾರೆ. ದಯವಿಟ್ಟು, ನಮ್ಮ ಅಹಿಂದ ವರ್ಗಳು ರಾಷ್ಟ್ರದಾದ್ಯಂತ ಮಾನ್ಯ ರಾಹುಲ್ ಗಾಂಧಿಯವರ ನೇತೃತ್ವದಲ್ಲಿ " ಭಾರತೀಯ ಜೋಡೋ ಯಾತ್ರೆ" ಆಯಿತು. ಆ ಭಾರತ್ ಜೋಡೋ ಯಾತ್ರೆ ಈ ಒಂದು ಬಿ.ಜೆ.ಪಿ.ಯವರ ಬಣ್ಣವನ್ನು ಬಯಲು ಮಾಡಿದೆ. ಚುನಾವಣೆಯಿಂದ ನಮಗೆ ಹಿನ್ನೆಡೆಯಾಗಿರಬಹುದು. ಆದರೆ Gen-Z ಇವತ್ತಿನ ತಲೆಮಾರಿನ ಯುವಕರು, ವಿದ್ಯಾರ್ಥಿಗಳು ಮುಂದಿನ ಚುನಾವಣೆ 2029ರಲ್ಲಿ ಇವರ ಬಣ್ಣವನ್ನು ಬಯಲು ಮಾಡುತ್ತಾರೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಈ ವಿಷಯದ ಬಗ್ಗೆ ಮಾತನಾಡಿ.

**ಶ್ರೀ ಶಿವಣ್ಣ ಬಿ.ಎಸ್.:-** ಇವರು ಇದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ದಯವಿಟ್ಟು, ಶ್ರೀರಾಮ ಮಂದಿರದ ಹುಂಡಿ ಕಳ್ಳರನ್ನು ಭಾರತ ದೇಶದಿಂದ ಗಡಿಪಾರು ಮಾಡಬೇಕು. ಅಯೋಧ್ಯೆಯಲ್ಲಿರುವ ಶ್ರೀರಾಮ ಮಂದಿರದ ಹುಂಡಿ ಕಳ್ಳರನ್ನು ಗಡಿಪಾರು ಮಾಡಿದರೆ ಮಾತ್ರ ಈ ದೇಶದ ಪ್ರಜಾಪ್ರಭುತ್ವ ಮತ್ತು ಈ ದೇಶದ

ಸಂವಿಧಾನ ಗಟ್ಟಿಯಾಗುತ್ತದೆ ಎಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

**ಉಪ ಸಭಾಪತಿಯವರು:-** ತಮಗೆ ಧನ್ಯವಾದಗಳು. ಈಗ ಸದನವನ್ನು ಅರ್ಧಗಂಟೆ ಕಾಲ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 05 ಗಂಟೆ 28 ನಿಮಿಷದಲ್ಲಿ ಅರ್ಧಗಂಟೆ ಕಾಲ ಕಾಲಾವಧಿಗಾಗಿ ಮುಂದೂಡಲ್ಪಟ್ಟಿತು)**

(850) 24.08.2026, 5.50 TCH-AK (ಸಭಾಪತಿಯವರ ಉಪಸ್ಥಿತಿ)

**(ಸಂಜೆ 5 ಗಂಟೆ 25 ನಿಮಿಷದಿಂದ ಅರ್ಧ ಗಂಟೆ ಕಾಲಾವಧಿಗಾಗಿ ಮುಂದೂಡಲ್ಪಟ್ಟ ಸದನವು ಪುನಃ ಸಂಜೆ 5 ಗಂಟೆ 50 ನಿಮಿಷಕ್ಕೆ ಪ್ರಾರಂಭವಾಯಿತು)**

**(ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಾದರು)**

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳೆಲ್ಲರೂ ಸ್ವಸ್ಥಾನಗಳಲ್ಲಿ ಒಟ್ಟಿಗೆ ಎದ್ದು ನಿಂತು ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

## 19. ಪ್ರಕಟಣೆ

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮ 104ನೇ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ 24.08.2026ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿದೆಯೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿಯನ್ನು ನೀಡಬೇಕೆಂದು ಕೋರಿರುತ್ತಾರೆ.

01) 2026ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ಸಂಖ್ಯೆ.3) ವಿಧೇಯಕ

02) 2026ನೇ ಸಾಲಿನ ಕರ್ನಾಟಕ ಸಕಾಲ ಸೇವೆಗಳ (ತಿದ್ದುಪಡಿ) ವಿಧೇಯಕ

## 20. ಕಾರ್ಯದರ್ಶಿಯವರ ವರದಿ

**ಅ) ಕಾರ್ಯದರ್ಶಿ, ಕವಿಪ:-** ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1) ಕರ್ನಾಟಕ ಧನವಿನಿಯೋಗ (ಸಂಖ್ಯೆ.3) ವಿಧೇಯಕ, 2026

2) ಕರ್ನಾಟಕ ಸಕಾಲ ಸೇವೆಗಳ (ತಿದ್ದುಪಡಿ) ವಿಧೇಯಕ, 2026

**21. ಸಭೆಯ ಮುಂದಿಡಲಾದ ಕಾಗದಪತ್ರಗಳು**

**(ಮೂರನೇ ಪಟ್ಟಿ)**

****

I. **ಶ್ರೀ ಡಿ.ಕೆ. ಶಿವಕುಮಾರ್ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ,

(1) **ರಾಜ್ಯ ಹಣಕಾಸು ಸಂಸ್ಥೆಗಳ ಅಧಿನಿಯಮ 1951ರ ಪರಿಚ್ಛೇದ 38(3)ರ ಪ್ರಕಾರ**

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ 2025-26ನೇ ಸಾಲಿನ ವಾರ್ಷಿಕ ವರದಿ.

(2) **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ರ ಕಲಂ 68-ಸಿ (4) ರನ್ವಯ.**

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತಿದ್ದೇನೆ.

II. **ಡಾ: ಯತೀಂದ್ರ.ಎಸ್ (ಸಭಾನಾಯಕರು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಪರವಾಗಿ):- ಮಾನ್ಯ ಸಭಾಪತಿಯವರೇ,**

The Compensatory Afforestation Fund Act, 2016ರ ಸೆಕ್ಷನ್-29ರ ಪ್ರಕಾರ ಕರ್ನಾಟಕ ಪರಿಹಾರಾತ್ಮಕ ಅರಣ್ಯೀಕರಣ ನಿಧಿ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರದ (ಅಂಒPo) 2019-20, 2020-21, 2021-22 ಮತ್ತು 2022-23ನೇ ಸಾಲುಗಳ ವಾರ್ಷಿಕ ಮತ್ತು ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

**III. ಡಾ: ಯತೀಂದ್ರ.ಎಸ್, (ಸಭಾನಾಯಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 253 (3) ತಿದ್ದುಪಡಿ ಮತ್ತು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 262(3) ರಂತೆ**

1. ಕರ್ನಾಟಕ ರಾಜ್ಯದಲ್ಲಿನ ತಾಲ್ಲೂಕು ಪಂಚಾಯತಿಗಳ 2022-23ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಮೇಲೆ ಪ್ರತ್ಯೇಕ ಲೆಕ್ಕಪರಿಶೋಧನಾ (ಕ್ರೋಢಿಕೃತ) ವರದಿ.

2. ಬಳ್ಳಾರಿ ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಮೇಲೆ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

IV. **ಡಾ: ಯತೀಂದ್ರ ಸಿದ್ಧರಾಮಯ್ಯ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಕರ್ನಾಟಕ ನೀರು ಸರಬರಾಜು ಒಳಚರಂಡಿ ಮಂಡಳಿ (ಕೆಯುಡಬ್ಲ್ಯೂಎಸ್‌ಡಿಬಿ) ಮತ್ತು ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಹಣಕಾಸು ನಿಗಮ (ಕೆಯುಐಡಿಎಫ್‌ಸಿ ಸೇರಿದಂತೆ) ಬೆಂಗಳೂರು**

**ನಗರಾಭಿವೃದ್ಧಿ ಹೊರತುಪಡಿಸಿದಂತೆ ಸಚಿವರು):-** ಮಾನ್ಯ ಸಭಾಪತಿಯವರೇ,

(1) **ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರ ಕಲಂ 48(5) ಮತ್ತು 49 ರನ್ವಯ**

1. ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
3. ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.
4. ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.
5. ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.
6. ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.
7. ರಾಣೇಬೆನ್ನೂರು ನಗರಾಭಿವೃದ್ಧಿ ಪ್ರಾಧಿಕಾರದ 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
8. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.
9. ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.
10. ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.
11. ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
12. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
13. ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
14. ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
15. ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
16. ಚಾಮರಾಜನಗರ-ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.
17. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
18. ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

19. ಶಿರಾ ನಗರಾಭಿವೃದ್ಧಿ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
20. ಸಿಂಧನೂರು ನಗರಾಭಿವೃದ್ಧಿ ಪ್ರಾಧಿಕಾರದ 2022-23 ರಿಂದ 2024-25ನೇ ಸಾಲಿನ ವಾರ್ಷಿಕ ವರದಿಗಳು ಮತ್ತು 2022-23 ರಿಂದ 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
21. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು 2023-24ನೇ ಸಾಲಿನ ಲೆಕ್ಕತಪಾಸಣಾ ವರದಿ.
22. ಕೆ.ಜಿ.ಎಫ್ ನಗರಾಭಿವೃದ್ಧಿ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
23. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2024-25ನೇ ಸಾಲಿನ ಲೆಕ್ಕತನಿಖಾ ವರದಿ ಹಾಗೂ ಅನುಪಾಲನಾ ವರದಿ
24. ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
25. ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
26. ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ತೋರಣಗಲ್ಲು 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

**(2) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ 1961ರ ಕಲಂ 68ಡಿ, 68-ಡಿ (2) ಮತ್ತು 68-ಸಿ (4) ರನ್ವಯ**

1. ಶಹಾಪುರ ನಗರ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
2. ಕೃಷ್ಣರಾಜನಗರ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು 2020-21 ಮತ್ತು 2021-22 ಹಾಗೂ 2022-23 ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
3. ಜಮಖಂಡಿ ನಗರ ಯೋಜನಾ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ.
4. ಹುಣಸೂರು ನಗರ ಯೋಜನಾ ಪ್ರಾಧಿಕಾರದ 2022-23 ಮತ್ತು 2023-24ನೇ ಲೆಕ್ಕಪರಿಶೋಧನಾ ವರದಿ ಅನುಸರಣಾ ವರದಿಗಳು.

5. ಸಿಂದಗಿ ನಗರ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.
6. ಮೂಡಬಿದ್ರೆ ಯೋಜನಾ ಪ್ರಾಧಿಕಾರದ 2023-24 ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
7. ವಾಡಿ-ಶಹಾಬಾದ ನಗರ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.
8. ಕನಕಪುರ ನಗರ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.
9. ಆನೇಕಲ್ ನಗರ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.
10. ಚನ್ನಪಟ್ಟಣ ನಗರ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.
11. ನೆಲಮಂಗಲ ನಗರ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.
12. ಅಫಜಲಪುರ-ದೇವಲ ಗಾಣಗಾಪುರ ನಗರ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.
13. ಸುಳ್ಯ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.
14. ಚನ್ನರಾಯಪಟ್ಟಣ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
15. ಬೇಲೂರು-ಹಳೇಬೀಡು ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.
16. ಮಳವಳ್ಳಿ ಯೋಜನಾ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
17. ಮಾಗಡಿ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.
18. ಕುಣಿಗಲ್ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
19. ಮಾಲೂರು ನಗರ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
20. ತಿಪಟೂರು ನಗರ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
21. ಬಸವ ಕಲ್ಯಾಣ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.
22. ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
23. ಹೊಸಕೋಟೆ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ ಮತ್ತು

2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

24. ರಾಮದುರ್ಗ ನಗರ ಯೋಜನಾ ಪ್ರಾಧಿಕಾರದ 2024-25 ಮತ್ತು 2025-26ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2023-24 ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

25. ಸಾಗರ ಯೋಜನಾ ಪ್ರಾಧಿಕಾರದ 2022-23 ರಿಂದ 2025-26ನೇ ಸಾಲಿನ ವಾರ್ಷಿಕ ವರದಿ ಹಾಗೂ 2022-23 ರಿಂದ 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

26. ಕುಂದಾಪುರ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.

27. ಕಾಪು ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.

28. ಶಿರಸಿ ನಗರ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.

29. ಸುರಪುರ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.

30. ಮುಧೋಳ ನಗರ ಯೋಜನಾ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ ಮತ್ತು 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

31. ಪುತ್ತೂರು (ದಕ್ಷಿಣ ಕನ್ನಡ)ನಗರ ಯೋಜನಾ ಪ್ರಾಧಿಕಾರದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಸರಣಾ ವರದಿ ಮತ್ತು 2024-25ನೇ ಸಾಲಿನ ಕ್ಕಪರಿಶೋಧನಾ ವರದಿ ಹಾಗೂ  ಅನುಸರಣಾ ವರದಿಗಳು.

32. ಅರಸೀಕೆರೆ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.

33. ನಿಪ್ಪಾಣಿ ಯೋಜನಾ ಪ್ರಾಧಿಕಾರದ 2025-26ನೇ ಸಾಲಿನ ವಾರ್ಷಿಕ ವರದಿ.

34. ಗೌರಿಬಿದನೂರು ಯೋಜನಾ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಗಳನ್ನು ಮಂಡಿಸುತ್ತಿದ್ದೇನೆ.

**V.** **ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ,

**ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪರಿಚ್ಛೇದ 47 (4) ರನ್ವಯ** ಗುಲ್ಬರ್ಗಾ ವಿಶ್ವವಿದ್ಯಾಲಯ (ಕಲಬುರಗಿ) ಇದರ 2020-21ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಮಂಡಿಸುತ್ತಿದ್ದೇನೆ.

**VI. ಡಾ: ಯತೀಂದ್ರ.ಎಸ್ (ಸಭಾನಾಯಕರು, ಸಣ್ಣ ಕೈಗಾರಿಕೆ, ಸಾರ್ವಜನಿಕ ಉದ್ದಿಮೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**ಕಂಪನಿ ಕಾಯ್ದೆ 2013ರ ಕಲಂ 394 & 395 ರನ್ವಯ ಹಾಗೂ ಕಂಪನಿ ಕಾಯ್ದೆ 1956ರ ಅನುಚ್ಛೇದ 619ಎ (3) ರಪ್ರಕಾರ**

1. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ (2024-25ನೇ ಸಾಲಿನ) 65ನೇ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

2. ದಿ. ಮೈಸೂರು ಸಕ್ಕರೆ ಕಂಪನಿ ನಿಯಮಿತದ (2015-16ರ ಸಾಲಿನ) 82ನೇ ವಾರ್ಷಿಕ ವರದಿ ಮತ್ತು (2016-17ನೇ ಸಾಲಿನ) 83ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತಿದ್ದೇನೆ.

## 22. ವಿತ್ತೀಯ ಕಾರ್ಯಕಲಾಪ

**ಶ್ರೀ ಡಿ.ಕೆ. ಶಿವಕುಮಾರ್ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು)**:- ಮಾನ್ಯ ಸಭಾಪತಿಯವರೇ, 2026-27ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ಪೂರಕ ಅಂದಾಜುಗಳನ್ನೊಪ್ಪಿಸಲಾಯಿತು.

## 23. ಶಾಸನ ರಚನೆ

## ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

### ಎ) ಕರ್ನಾಟಕ ಧನವಿನಿಯೋಗ (ಸಂಖ್ಯೆ.03) ವಿಧೇಯಕ, 2026

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಡಿ.ಕೆ. ಶಿವಕುಮಾರ್ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ.03) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಡಿ.ಕೆ. ಶಿವಕುಮಾರ್ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):-** ಮಾನ್ಯ ಸಭಾಪತಿಯವರೇ, ಭಾರತದ ಸಂವಿಧಾನ ಅನುಚ್ಛೇದ 205(1) (ಎ) ರನ್ವಯ ಆರ್ಥಿಕ ವರ್ಷದಲ್ಲಿ ಹೆಚ್ಚಿನ ವೆಚ್ಚದ ಅವಶ್ಯಕತೆ ಉಂಟಾಗಿರುತ್ತದೆ. ಹೆಚ್ಚುವರಿ ವೆಚ್ಚದ ಮೊಬಲಗನ್ನು ರಾಜ್ಯದ ವಿಧಾನ ಮಂಡಲದ ಮುಂದೆ ಮಂಡಿಸಬೇಕಾಗಿರುತ್ತದೆ. 2026-27ನೇ ಸಾಲಿನ ಮೊದಲನೇ ಕಂತಿನ ಪೂರಕ ಅಂದಾಜಿನಲ್ಲಿ ರೂ.7,042.69 ಕೋಟಿಗಳನ್ನು ಒದಗಿಸಲು ಭಾರತದ ಸಂವಿಧಾನದ ಅನುಚ್ಛೇದ 205 (1) (ಎ) ರನ್ವಯ ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುತ್ತೇನೆ. 2026-27ನೇ ಸಾಲಿನ ಆಯವ್ಯಯದಲ್ಲಿ ಒಟ್ಟು ಅಭಿಯಾಚನೆ ಮಾಡಿದ ಮೊತ್ತವು ರೂ.4,67,249.52 ಕೋಟಿಗಳಾಗಿದ್ದು, ಪೂರಕ ಅಂದಾಜಿನ ಮೊದಲನೇ ಕಂತಿನಲ್ಲಿ ಒಟ್ಟು ರೂ.7,042 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಲಾಗಿರುತ್ತದೆ. ಒಟ್ಟು ಅಭಿಯಾಚನೆಯ ಮೊತ್ತದ ಶೇ.1.50 ರಷ್ಟಿರುತ್ತದೆ. ಇದರಲ್ಲಿ ರೂ.4,324.35 ಕೋಟಿಗಳು ರಾಜಸ್ವ ವೆಚ್ಚವಾಗಿದ್ದು, ರೂ.2,718.35 ಕೋಟಿಗಳು ಬಂಡವಾಳ ವೆಚ್ಚವಾಗಿರುತ್ತದೆ. ಈ ಹೆಚ್ಚುವರಿ ವೆಚ್ಚದಲ್ಲಿ ರೂ.2,648.38 ಕೋಟಿಗಳನ್ನು ಕೇಂದ್ರ ಸರ್ಕಾರದ ಸ್ವೀಕೃತಿ ಮತ್ತು ಲೆಕ್ಕ ಹೊಂದಾಣಿಕೆಗಳಿಂದ ಹಾಗೂ ರೂ.15.00 ಕೋಟಿಗಳನ್ನು Reserve Fundನಿಂದ ಭರಿಸಲಾಗುವುದರಿಂದ ನಿವ್ವಳ ಹೊರಹೋಗುವ ಮೊತ್ತ ರೂ.4,379.32 ಕೋಟಿಗಳು ಮಾತ್ರವಾಗಿರುತ್ತದೆ. ಈ ನಿವ್ವಳ ಮೊತ್ತವನ್ನು ರಾಜ್ಯದ ರಾಜಸ್ವ ಸ್ವಕೃತಿಗಳಿಂದ ಹಾಗೂ ಅಗತ್ಯವಿದ್ದಲ್ಲಿ ವೆಚ್ಚದ ಮರುಆದ್ಯತೆ ಮತ್ತು ವೆಚ್ಚದಲ್ಲಿನ ಸಂಭವನೀಯ ಉಳಿತಾಯ ಹಾಗೂ ಸಾಲದ ಮೂಲಕ ಭರಿಸಲಾಗುವುದು. ಪೂರಕ ಅಂದಾಜುಗಳ ಮೊದಲನೇ ಕಂತಿನಲ್ಲಿ ಈ ಪ್ರಮುಖ ಯೋಜನೆಗಳಾಗಿವೆ. ವಿಕಸಿತ ಭಾರತ್ ಗ್ಯಾರಂಟಿ ಫಾರ್ ರೋಜಗಾರ್ ಅಂಡ್ ಆಜೀವಿಕ ಮಿಷನ್ (VB-G RAM G) ರೂ.2,918.13 ಕೋಟಿಗಳು. ಇದು Centrally Sponsored Scheme ಆಗಿದೆ. ವಿಶೇಷವಾಗಿ ರಸ್ತೆಗಳ ಅಭಿವೃದ್ಧಿಗೋಸ್ಕರ ಬೆಂಗಳೂರು ನಗರಕ್ಕೆ ರೂ.1,000 ಕೋಟಿಗಳು, ಭಾರತ್ ಜೋಡೋ ಯುವ ಸಂಘಗಳಿಗೆ ಅನುದಾನಕ್ಕೆ ರೂ.781.00 ಕೋಟಿಗಳು, ಅಮೃತ್ ಯೋಜನೆಗೆ ರೂ.708.67 ಕೋಟಿಗಳು, ಗ್ರಾಮೀಣ ನೀರು

ಸರಬರಾಜು ಯೋಜನೆ-ಜಲಧಾರೆಯಡಿ ಕುಡಿಯುವ ನೀರಿಗೆ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೂ ಒಂದೊಂದು ಕೋಟಿ ರೂಪಾಯಿಗಳಂತೆ ಒಟ್ಟು ರೂ.289 ಕೋಟಿಗಳ ಅನುದಾನವನ್ನು ಕೊಡುತ್ತಿದ್ದೇವೆ. ರಸ್ತೆ ಸಾರಿಗೆ ನಿಗಮವು ಉಳಿಸಿಕೊಂಡಿರುವ ಸರ್ಕಾರದ ಮೋಟಾರು ವಾಹನ ತೆರಿಗೆಯನ್ನು ಷೇರು ಬಂಡವಾಳವಾಗಿ ಬದಲಾವಣೆಗೆ ರೂ.193.61 ಕೋಟಿಗಳು, ಪ್ರಧಾನ ಮಂತ್ರಿ ಆಯುಷ್ಮಾನ್ ಭಾರತ್ ಆರೋಗ್ಯ ಮೂಲಸೌಕರ್ಯಕ್ಕೆ ರೂ.152.82 ಕೋಟಿಗಳು, ಪ್ರಧಾನ ಮಂತ್ರಿ ಅವಾಸ್ ಯೋಜನೆ-ಗ್ರಾಮೀಣಕ್ಕೆ ರೂ.93.96 ಕೋಟಿಗಳು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ ರೂ.91.00 ಕೋಟಿಗಳು, ಕೆ.ಕೆ.ಆರ್.ಟಿ.ಸಿ ನಿಗಮದಡಿ ಬಸ್ ಖರೀದಿಗೋಸ್ಕರ ಅನುದಾನ ರೂ.76.00 ಕೋಟಿಗಳು. ಒಟ್ಟು ಇತರೆ ಯೋಜನೆಗಳಿಗೋಸ್ಕರ ರೂ.738.50 ಕೋಟಿಗಳು. ಒಟ್ಟು ಪೂರಕ ಅಂದಾಜುಗಳ ಮೊತ್ತ ರೂ.7,042.69 ಕೋಟಿಗಳಾಗಿದೆ. ಇವತ್ತು ಇದು ವಿಧಾನಸಭೆಯಿಂದ ಅನುಮೋದನೆಯಾಗಿ ಇಲ್ಲಿಗೆ ಬಂದಿದೆ. ಸದನವು ಇದನ್ನು ಅನುಮೋದಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ರ ಕರ್ನಾಟಕ ಧನವಿನಿಯೋಗ (ಸಂಖ್ಯೆ:03) ವಿಧೇಯಕವನ್ನು ಪರ್ಯಾಲೋಚಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

**ಖಂಡ 2 ಮತ್ತು 3**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ, "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3ನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

(ಮುಂದು)

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಮತ್ತು ಮಾನ್ಯ ಸದಸ್ಯರುಗಳಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ಶ್ರೀ ಸಿ.ಟಿ. ರವಿ ಮತ್ತು ಶ್ರೀ ಎಸ್.ಎಲ್. ಭೋಜೇಗೌಡರವರನ್ನು ಹೊರತುಪಡಿಸಿ ಇನ್ನುಳಿದ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿನಿರತರಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಡಿ.ಕೆ. ಶಿವಕುಮಾರ್ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ರ ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ರ ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಸದನದ ಅನುಮೋದನೆ ದೊರೆಯಿತು**

ಐ) **ಕರ್ನಾಟಕ ಸಕಾಲ ಸೇವೆಗಳ (ತಿದ್ದುಪಡಿ) ವಿಧೇಯಕ, 2026**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಡಿ.ಕೆ. ಶಿವಕುಮಾರ್ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಸಕಾಲ ಸೇವೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಡಿ.ಕೆ. ಶಿವಕುಮಾರ್ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಸಕಾಲ ವಿಚಾರದಲ್ಲಿ ಕೆಲವು ಸಣ್ಣ ತಿದ್ದುಪಡಿಗಳನ್ನು ತಂದಿದ್ದೇನೆ ಅದನ್ನು ಅಂಗೀಕರಿಸಬೇಕೆಂದು ತಮ್ಮಲ್ಲಿ ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ರ ಕರ್ನಾಟಕ ಸಕಾಲ ಸೇವೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು**

ಖಂಡ 2 ರಿಂದ 5 ರವರೆಗೆ

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

<u>ಪ್ರಸ್ತಾವದ ಅಂಗೀಕಾರ</u>

**ಶ್ರೀ ಡಿ.ಕೆ. ಶಿವಕುಮಾರ್ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ರ ಕರ್ನಾಟಕ ಸಕಾಲ ಸೇವೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2026ರ ಕರ್ನಾಟಕ ಸಕಾಲ ಸೇವೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು</u>

**ಸಭಾಪತಿಯವರು:–** ಮಾನ್ಯ ಉಪಮುಖ್ಯಮಂತ್ರಿಗಳಾದ ಡಾ: ಜಿ. ಪರಮೇಶ್ವರ್‌ರವರು ಒಂದು ಹೇಳಿಕೆಯನ್ನು ಕೊಡಲಿದ್ದಾರೆ.

**24. ರಾಜ್ಯದ ಬರ ಪರಿಸ್ಥಿತಿಯ ಕುರಿತು ಉಪಮುಖ್ಯಮಂತ್ರಿಗಳ ಹೇಳಿಕೆ**

**ಡಾ: ಜಿ. ಪರಮೇಶ್ವರ್ (ಉಪ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, . . .

**(ಸರ್ಕಾರದ ಹೇಳಿಕೆಯನ್ನು ಲಗತ್ತಿಸಲಾಗಿದೆ)**

(ಮುಂದು)

(852) 24-08-2026 6-10 KH/RN (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಡುತ್ತಾರೆ.

**25. ರಾಜ್ಯದ ಹಿತಾಸಕ್ತಿ ಹಾಗೂ ಬರದ ನಿರ್ವಹಣೆ ಕುರಿತು ಮುಖ್ಯಮಂತ್ರಿಗಳ ಹೇಳಿಕೆ**

**ಶ್ರೀ ಡಿ.ಕೆ.ಶಿವಕುಮಾರ್ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಬಂದ ಮೇಲೆ ಇದು ಮೊದಲನೇಯ ಅಧಿವೇಶನ. ನನ್ನ ಎಲ್ಲಾ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಬಹಳ ಗೌರವದಿಂದ ನಾವು ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ಹೊಸ ಆಲೋಚನೆಯನ್ನು ಮಾಡೋಣ ಎಂದು ನಾನು ಪ್ರಾರ್ಥನೆಯನ್ನು ಮಾಡಿದ್ದೇನೆ. ಎರಡು ಮನೆಯ ಮಾನ್ಯ ಸದಸ್ಯರುಗಳಿಗೆ ಯಾವುದೇ ರೀತಿಯ ಸಂಕುಚಿತ ಮನೋಭಾವನೆ ಇಲ್ಲ. ದ್ವೇಷ ಇಲ್ಲ. ನಾವೆಲ್ಲರೂ ಒಟ್ಟಿಗೆ ಸೇರಿ ಕೆಲಸ ಮಾಡೋಣ. ರಾಜ್ಯದಲ್ಲಿ ಚುನಾವಣೆ ಬಂದಾಗ ಎಲ್ಲರೂ ಸೇರಿ ಕೆಲಸ ಮಾಡೋಣ. ರಾಜ್ಯದಲ್ಲಿ ಅನೇಕ ಸಮಸ್ಯೆಗಳು ಇದ್ದು, ಅದರ ಬಗ್ಗೆ ಚರ್ಚೆ ಮಾಡೋಣ ಎಂದು ನಾವು ಮನವಿ ಮಾಡಿದ್ದೇವೆ. ಇಲ್ಲಿಯೂ ಕೂಡ ಒಂದರಿಂದ ಒಂದೂವರೆ ಗಂಟೆಗಳ ಕಾಲ ಅನೇಕ ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಇವತ್ತು ರಾಜ್ಯದಲ್ಲಿ ಬರ ಭೀಕರವಾಗಿ ಇದೆ. ಈಗಾಗಲೇ ಮಾನ್ಯ ಉಪ ಮುಖ್ಯಮಂತ್ರಿಯವರಾದ ಡಾ: ಜಿ.ಪರಮೇಶ್ವರ ರವರು ಸುದೀರ್ಘವಾದಂತಹ ಒಂದು ವರದಿಯನ್ನು ಕೊಟ್ಟಿದ್ದಾರೆ. ಈಗಾಗಲೇ 3 ವಿಭಾಗಗಳಲ್ಲಿ ನಾನು, ಮಾನ್ಯ ಜಿ.ಪರಮೇಶ್ವರರವರು ಮತ್ತು ನನ್ನ ಸಹದ್ಯೋಗಿಗಳು ಬೆಳಗಾವಿ, ಗುಲ್ಬರ್ಗಾ ಮತ್ತು ಚಿತ್ರಾದುರ್ಗಕ್ಕೆ ಭೇಟಿ ಕೊಟ್ಟು ಅಧ್ಯಯನ ಕೂಡ ಮಾಡಿದ್ದೇವೆ. ಎಲ್ಲಾ ನನ್ನ ಮಂತ್ರಿಮಂಡಲದ ಸಹದ್ಯೋಗಿಗಳನ್ನು ಇಡೀ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಕಳುಹಿಸಿ ಒಂದು ವರದಿಯನ್ನು ಕೂಡ ತರಿಸಿಕೊಂಡಿದ್ದೇನೆ. ಆ ಆಧಾರದ ಮೇಲೆ ಮಾನ್ಯ ಉಪ ಮುಖ್ಯಮಂತ್ರಿಗಳು ತಮ್ಮ ಮುಖಾಂತರ ರಾಜ್ಯದ ಜನತೆಗೆ ಮಂಡಿಸಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೂ ಕುಡಿಯುವ ನೀರಿನ ತೊಂದರೆಯಾಗಬಾರದು ಎಂದು ಒಂದೊಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಎಲ್ಲಾ ಜಿಲ್ಲಾಧಿಕಾರಿಯವರ ಹತ್ತಿರ ಪ್ರತ್ಯೇಕವಾದ ಹಣವನ್ನು ಇಟ್ಟಿದ್ದೇವೆ. ಇಂತಹ ಬರದ ಪರಿಸ್ಥಿತಿಯನ್ನು ನಮ್ಮ ವಿರೋಧ ಪಕ್ಷದ ಸ್ನೇಹಿತರು, ಎನ್.ಡಿ.ಎ., ಸದಸ್ಯರು ಚರ್ಚೆ ಮಾಡದೇ ಅವರಿಗೆ ರಾಜಕಾರಣವೇ ಬಹಳ ಮುಖ್ಯವಾಗಿದೆ. ಮಾನ್ಯ ಸದಸ್ಯರುಗಳು ಮಾನ್ಯ ಸಚಿವರಾದ ಬಿ.ನಾಗೇಂದ್ರರವರ ರಾಜೀನಾಮೆಯನ್ನು ಕೇಳುತ್ತಿದ್ದಾರೆ. ಅವರು ಕೇಳುವುದರಲ್ಲಿ ತಪ್ಪೇನೂ ಇಲ್ಲ. ಅವರು ಒಂದು ನೋಟಿಸ್ ಅನ್ನು ಕೊಟ್ಟು, ಇದರ ಬಗ್ಗೆ ಕುಳಿತುಕೊಂಡು ಚರ್ಚೆ ಮಾಡಿ ಏಕೆ ರಾಜೀನಾಮೆ ಕೊಡಬೇಕೆಂದು ಹೇಳಬಹುದಿತ್ತು. ಇದರ ಬಗ್ಗೆ ನಾನು ಕೂಡ ತನಿಖೆ ಮಾಡಿಸಿದ್ದೇನೆ. ಸಿ.ಓ.ಡಿ., ಯಿಂದ ವರದಿ ಕೂಡ ಬಂದಿದೆ. ಆ ಹಣವನ್ನು ಎಸ್.ಐ.ಟಿ., ಅಧಿಕಾರಿಗಳು ತೆಗೆದುಕೊಂಡಿದ್ದಾರೆ ಎಂದು ವಿವರಿಸುವುದಕ್ಕೆ ನಾನು ಬದ್ಧನಾಗಿದ್ದೇನೆ.

ಸಿ.ಬಿ.ಐ., ಮತ್ತು ಜಾರಿ ನಿರ್ದೇಶನಾಲಯದ ತನಿಖೆಗೂ ಕೊಟ್ಟಿದ್ದಾರೆ. ಅವರ ತನಿಖೆಯಲ್ಲಿಯೂ ಕೂಡ ನೇರವಾಗಿ ಮಾನ್ಯ ಸಚಿವರಾದ ನಾಗೇಂದ್ರರವರು ತಪ್ಪಿತಸ್ಥರು ಎಂದು ದಾಖಲೆಗಳಲ್ಲಿ ಬಂದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಚರ್ಚೆ ಮಾಡಬಹುದಾಗಿತ್ತು. ಗೌರವಾನ್ವಿತ ಮಾನ್ಯ ಸದಸ್ಯರುಗಳು ಬುದ್ಧಿವಂತರಾಗಿದ್ದು, ಇವರು ಹಿರಿಯರ ಛಾವಡಿಯಲ್ಲಿ ಅನುಭವಸ್ಥರಾಗಿದ್ದು, ಒಂದು ವಾರಕ್ಕಿಂತ ಹೆಚ್ಚು 8 ರಿಂದ 10 ದಿನಗಳ ಕಾಲ ವಿಧಾನಸಭೆ ಮತ್ತು ವಿಧಾನಪರಿಷತ್ತಿನಲ್ಲಿ ನೋಟಿಸ್ ಕೊಡದೇ, ಇದರ ಬಗ್ಗೆ ಚರ್ಚೆಯನ್ನು ಮಾಡದೇ ಈ ರೀತಿ ಪ್ರತಿಭಟನೆ ಮಾಡುತ್ತಿದ್ದಾರೆ. ಇದರ ಬಗ್ಗೆ ನನ್ನ ಉತ್ತರ ಸರಿಯಿಲ್ಲವೆಂದರೆ ಅವರು ಏನು ಬೇಕಾದರೂ ತೀರ್ಮಾನ ಮಾಡಬಹುದಾಗಿತ್ತು. ಇದರ ಬಗ್ಗೆ ಇವರು ಕೇಳುವಷ್ಟು ತಾಳ್ಮೆ ಇಲ್ಲದೇ, ಇವತ್ತು ಬಾವಿಗೆ ಬಂದು ಧರಣಿ ನಿರತರಾಗಿದ್ದಾರೆ. ಇವರಿಗೆ ರಾಜ್ಯದ ಹಿತದ ಬಗ್ಗೆ ಚಿಂತೆ ಇಲ್ಲ. ಆದ್ದರಿಂದಲೇ ಜನರು ಇವರನ್ನು ವಿರೋಧ ಪಕ್ಷದ ಸ್ಥಾನದಲ್ಲಿಟ್ಟಿದ್ದಾರೆ. ಇವತ್ತು ಕೆ.ಪಿ.ಎಸ್.ಸಿ., ವಿಚಾರದ ಬಗ್ಗೆ ಹೇಳಬೇಕಾದರೆ, ಅವರದೇ ಪಕ್ಷದ ಸದಸ್ಯರುಗಳು ಮತ್ತು ನಾಯಕರುಗಳು, ಆಗಿನ ಕಾಲದ ಮುಖ್ಯಮಂತ್ರಿಗಳು ಕೆ.ಪಿ.ಎಸ್.ಸಿ., ಅಧ್ಯಕ್ಷರನ್ನು ನೇಮಕ ಮಾಡಿದ್ದರು. ಅವರ ಕಾಲದಲ್ಲಿಯೇ ಎಲ್ಲಾ ರೀತಿಯ ಅನ್ಯಾಯಗಳು ಆಗಿದೆ. ಕೊನೆಗೆ ಅವರವರ internal fight ನಿಂದ, ಅವರನ್ನು ಗೌವರ್ನರ್‌ರವರು ಅಮಾನತ್ತಿನಲ್ಲಿ ಇಟ್ಟಿದ್ದರು. ಇದರ ಬಗ್ಗೆ ನಾವು ಸಿ.ಐ.ಡಿ.,ಯಿಂದ ತನಿಖೆ ಕೂಡ ಮಾಡಿಸಿದ್ದು, ಅದರಲ್ಲಿ ಸಾಬೀತಾಗಿದೆ. ಇದಕ್ಕೆ ಜಾರಿ ನಿರ್ದೇಶನಾಲಯ ಕೂಡ ಪ್ರವೇಶ ಮಾಡಿದ್ದು, ತನಿಖೆ ಮಾಡಲಿ. ಇದರಲ್ಲಿ ಯಾರ್ಯಾರು ತಪ್ಪಿತಸ್ಥರು ಇದ್ದಾರೆ. ಅವರು ಯಾರ್ಯಾರನ್ನು ನೇಮಕ ಮಾಡಿದ್ದರು. ಅವರೇ ಇವತ್ತು ತಪ್ಪಿತಸ್ಥರು ಆಗಿದ್ದಾರೆ. ಇದರ ಬಗ್ಗೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಿ ಎಂದು ಸಚಿವ ಸಂಪುಟಕ್ಕೆ ಅನುಮೋದನೆ ಕೊಡಲಾಗಿದೆ. ಆ ವಿಚಾರವನ್ನು ಇಲ್ಲಿ ಚರ್ಚೆ ಮಾಡಬೇಕಾಗುತ್ತದೆ. ವಿದ್ಯಾರ್ಥಿಗಳ ಮತ್ತು ಯುವಕರ ಭವಿಷ್ಯ ಇದೆಯಲ್ಲವೇ? ಇವತ್ತು ವಿದ್ಯಾರ್ಥಿಗಳು ಮತ್ತು ಯುವಕರು ಈ ದೇಶದ ಒಂದು ದೊಡ್ಡ ಆಸ್ತಿ. ಇವರಿಗೆ ನ್ಯಾಯ ಕೊಡಿಸುವುದಕ್ಕೆ ಇವರ ಕೈಯಲ್ಲಿ ಆಗಲಿಲ್ಲ. ಇಡೀ ರಾಷ್ಟ್ರದಲ್ಲಿ ಯುವಕರೆಲ್ಲಾ ಬಿ.ಜೆ.ಪಿ., ಸರ್ಕಾರದ ವಿರುದ್ಧ ಕೇಂದ್ರದಲ್ಲಿ ದಂಗೆ ಎದ್ದಿರುವುದನ್ನು ಇವರು ಗಮನಿಸಬೇಕು.

(ಮುಂದು)

(853) 24.8.2026 6.20 ಪಿಕೆ:ಆರ್‌ಎನ್ (ಸಭಾಪತಿಗಳ ಉಪಸ್ಥಿತಿ)

**ಶ್ರೀ ಡಿ.ಕೆ.ಶಿವಕುಮಾರ್(ಮುಂದು)**

ಸದನದಲ್ಲಿ ಇಂತಹ ವಿಷಯಗಳನ್ನು ಕೇಳುವುದಕ್ಕೆ ಇವರಿಗೆ ಮಾನಸಿಕ ಶಕ್ತಿ ಇಲ್ಲ. ಈ ದೇಶದ ಯುವಕರನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಸಂಸತ್ತಿನ ಹೊರಗೆ ಆದ ಪ್ರಕರಣದಲ್ಲಿ ಯುವಕರು, ಅಮಾಯಕರು, ಪೆಲ್ಲೆಟ್ ಗನ್‌ನಿಂದ ಫಾಸಿಗೆ ಒಳಗಾದವರು ಅವರು ಉದ್ಯೋಗಗಳನ್ನು ಬಯಸುತ್ತಿದ್ದಾರೆ. ಈ ದೇಶದ ಉದ್ದಗಲಕ್ಕೂ ಯುವಕರು ಉದ್ಯೋಗವಿಲ್ಲದೇ ನರಳುತ್ತಿದ್ದಾರೆ. ನಮ್ಮ ಸರ್ಕಾರ ಏನಾದರೂ ಮಾಡಿ ಅವರಿಗೆ ಉದ್ಯೋಗ

ಕೊಡಬೇಕೆಂದು ಈಗಾಗಲೇ 72,000 ಹುದ್ದೆಗಳನ್ನು ಸೃಷ್ಟಿ ಮಾಡಿ, ಅದರ ಮುಂದಿನ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದೆ. ಇಂತಹ ಸಂದರ್ಭದಲ್ಲಿ ಇಂತಹ ವಿಚಾರಗಳ ಬಗ್ಗೆ ಚರ್ಚೆ ಮಾಡಿ, ಸಲಹೆಗಳನ್ನು ಕೊಡುವುದು ಬಿಟ್ಟು, ಈ ರೀತಿ ಗಲಾಟೆ ಮಾಡುವುದರಿಂದ ಯುವಕರಿಗೆ ಏನು ಸಂದೇಶ ಕೊಡುತ್ತಿದ್ದಾರೆ, ಹೊಸ ಪೀಳಿಗೆಗೆ ಏನು ಸಂದೇಶ ಕೊಡುತ್ತಿದ್ದಾರೆ ಎಂಬುದರ ಬಗ್ಗೆ ಯೋಚನೆ ಮಾಡಬೇಕು. ನಾವು ಹೊಸ ಯುಗಕ್ಕೆ ಕಾಲಿಟ್ಟಿದ್ದೇವೆ. ಮಾನ್ಯ ಸಭಾಪತಿಗಳೆ, ವಿರೋಧ ಪಕ್ಷದವರು ವಿದ್ಯಾವಂತರಾಗಿದ್ದಾರೆ, ಬುದ್ಧಿವಂತರಾಗಿದ್ದಾರೆ, ಪ್ರಜ್ಞಾವಂತರಾಗಿದ್ದಾರೆ ಎಂದು ತಿಳಿದುಕೊಂಡಿದ್ದೆ. ಇವರಿಗೆ ರಾಜಕಾರಣ ಮುಖ್ಯವಾಗಿದೆಯೇ ಹೊರತು, ಈ ದೇಶದ ಯುವಕರ ಬಗ್ಗೆ ಚಿಂತನೆ ಇಲ್ಲ ಎಂದು ಹೇಳುವುದಕ್ಕೆ ನೋವಾಗುತ್ತಿದೆ.

ಮಾನ್ಯ ಸಭಾಪತಿಗಳೆ, ಕಾವೇರಿ ನೀರಿನ ಹಂಚಿಕೆಗೆ ಸಂಬಂಧಪಟ್ಟಂತೆ ಸಮಸ್ಯೆಗಳು ಬಂತು. ಎಲ್ಲಾ ವಿರೋಧ ಪಕ್ಷದ ನಾಯಕರು ಈ ನಿಟ್ಟಿನಲ್ಲಿ ಸಹಕಾರ ಕೊಟ್ಟರು. ಈ ಮಧ್ಯೆ ಸುಪ್ರಿಂ ಕೋರ್ಟ್‌ನಿಂದ ಒಂದು ಆದೇಶ ಬಂತು, ಗೆಜೆಟ್ ಆಯಿತು, ಮಳೆ ಇಲ್ಲ, ಬರಗಾಲದ ಇಂತಹ ಸಂದರ್ಭದಲ್ಲಿ ವಿರೋಧ ಪಕ್ಷದ ಸದಸ್ಯರು ಸರ್ಕಾರಕ್ಕೆ ಸಲಹೆ ಕೊಡಲಿ. ರೈತರನ್ನು ಬದುಕಿಸಬೇಕು ಅಲ್ಲವೇ? ರೈತರ ಕುರಿತಂತೆ ಯಾವರೀತಿ ಸಹಾಯ ಮಾಡಬೇಕು ಎಂಬ ಬಗ್ಗೆ ಮಾರ್ಗದರ್ಶನ ಕೊಡಬೇಕು. ಈಗಾಗಲೇ ಮೂರು ರಾಜ್ಯದ ಮುಖ್ಯಮಂತ್ರಿಗಳು ಸೇರಿ ಒಂದು ಸಭೆಯನ್ನು ಮಾಡಿದ್ದೇವೆ. ಮೊನ್ನೆ ನಾನು ಚೆನ್ನೈಗೆ ಹೋಗಿದ್ದೆ. ಕೇಂದ್ರದ ಗೃಹ ಮಂತ್ರಿಗಳು ನಮ್ಮನ್ನು ಕರೆದು, ರಾಜ್ಯಗಳ ಪರಿಸ್ಥಿತಿಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಅಲ್ಲಿ ನಾನು ಏನೆಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆಯೋ ಅವುಗಳನ್ನು ಸದನದಲ್ಲಿ ತಿಳಿಸಬೇಕಾದುದು ನನ್ನ ಕರ್ತವ್ಯವಾಗಿದೆ. ರಾಜ್ಯದ ಹಿತಕ್ಕೆ ಏನೆಲ್ಲಾ ಮಾಡಬೇಕು? ತಮಿಳುನಾಡಿಗೆ ಹೋಗಿ, ಮೇಕೆದಾಟು ಯೋಜನೆಯಿಂದ ಸಿಗುವ ನೀರು ತಮಿಳುನಾಡಿಗೆ ಮತ್ತು ಬೆಂಗಳೂರಿಗೆ ಕುಡಿಯುವ ನೀರಿನ ಸಲುವಾಗಿ ಉಪಯೋಗ ಮಾಡಿಕೊಳ್ಳಲಾಗುತ್ತದೆ ಎಂದು ನಾನು ಪ್ರತಿಪಾದನೆ ಮಾಡಿದ್ದೇನೆ. ಇಂತಹ ಅನೇಕ ವಿಷಯಗಳನ್ನು ಸದನದಲ್ಲಿ ಚರ್ಚೆ ಮಾಡಬೇಕಿತ್ತು.

ಮಾನ್ಯ ಸಭಾಪತಿಗಳೆ, ಕೇಂದ್ರ ಸರ್ಕಾರ ನೀರಾವರಿ ಯೋಜನೆಗಳಿಗೆ ರೂ. 5,400 ಕೋಟಿಗಳನ್ನು ಕೊಡುತ್ತದೆ ಎಂದು ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿಕೊಂಡಿದ್ದರೋ ಮತ್ತು ಅದನ್ನೇ ಮಾನ್ಯ ಬೊಮ್ಮಾಯಿಯವರು ಪ್ರತಿಪಾದನೆ ಮಾಡಿದ್ದರು. ಆ ಲೆಕ್ಕದಲ್ಲಿ ಒಂದು ರೂಪಾಯಿ ಹಣ ಕೂಡ ಬರಲಿಲ್ಲ. ಈ ವಿಚಾರದಲ್ಲಿ ಇವತ್ತಿಗೂ ಕೂಡ ಇವರು ಯಾರೊಬ್ಬರೂ ಸಹ ಮಾತನಾಡಲಿಲ್ಲ. ಈ ನಿಟ್ಟಿನಲ್ಲಿ ರಾಜ್ಯಕ್ಕೆ ನ್ಯಾಯ ಒದಗಿಸಕೊಡಬೇಕೆಂದು ಹೋರಾಟ ಮಾಡುತ್ತಿದ್ದೇವೆ. ನೀರಾವರಿ ಯೋಜನೆಗಳಿಗೆ ಇರಬಹುದು, ಅಭಿವೃದ್ಧಿಗೆ ಇರಬಹುದು, ಅಥವಾ ಹಣಕಾಸು ಆಯೋಗದಿಂದ ರಾಜ್ಯಕ್ಕೆ ಏನು ಅನ್ಯಾಯವಾಗಿದೆಯೋ ಆ ವಿಚಾರಗಳನ್ನು ಅನೇಕ ಸಂದರ್ಭಗಳಲ್ಲಿ, ಕೇಂದ್ರದ ಮಂತ್ರಿಗಳ ಮುಂದೆ, ಪ್ರಧಾನ ಮಂತ್ರಿಗಳ ಮುಂದೆ ಇಟ್ಟಿದ್ದೇನೆ. ಬರಗಾಲವನ್ನು ನಿರ್ವಹಣೆ ಮಾಡಲು ದಿಟ್ಟವಾದ ತೀರ್ಮಾನ ತೆಗೆದುಕೊಂಡಿದ್ದೇನೆ. ಗ್ರೇಟರ್ ಬೆಂಗಳೂರಿಗೆ ಸಂಬಂಧಪಟ್ಟಂತೆ ನಾವು ಅನೇಕ ವಿಚಾರಗಳ ಬಗ್ಗೆ ಚರ್ಚೆ ಮಾಡಬೇಕಿದೆ.

ಮಾನ್ಯ ಸಭಾಪತಿಗಳೆ, ಬಿಡದಿ ಟೌನ್‌ಶಿಪ್ ವಿಚಾರಕ್ಕೆ ಸಂಬಂಧಪಟ್ಟಂತೆ ಜೆಡಿ(ಎಸ್) ಮತ್ತು ಬಿ.ಜೆ.ಪಿ.ಯವರು ಕಪಟ ನಾಟಕವನ್ನು ಆಡುತ್ತಿದ್ದಾರೆ. ಎಲ್ಲವನ್ನೂ ಅವರೇ ಮಾಡಿದರು. 9 ಸಾವಿರ ಎಕರೆ ಜಾಗದಲ್ಲಿ 1 ಸಾವಿರ ಎಕರೆ ಜಾಗವನ್ನು ಸ್ವಾಧೀನಪಡಿಸಿಕೊಂಡಿದ್ದರು. ಇವತ್ತು ಆ ರೈತರಿಗೆ ಬರೆ ಹಾಕಿದ್ದಾರೆ, ಈ ನಿಟ್ಟಿನಲ್ಲಿ ಇವತ್ತು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲ. ನಾನು ಹಿಂದೆ ಉಪ ಮುಖ್ಯಮಂತ್ರಿ ಆಗಿದ್ದಾಗ, ಚರ್ಚೆ ಮಾಡೋಣ ಬನ್ನಿ ಎಂದು ಮಾನ್ಯ ಕುಮಾರಸ್ವಾಮಿಯವರನ್ನು ಕರೆದೆ. ಆಗ ಚರ್ಚೆಗೆ ಬರಲಿಲ್ಲ. ನಾನು ಮುಖ್ಯಮಂತ್ರಿ ಆದಮೇಲೆಯೂ ಕರೆದೆ. ನಮ್ಮ ಸಚಿವರಾದ ಮಾನ್ಯ ಬಾಲಕೃಷ್ಣ ಅವರನ್ನು ಕಳುಹಿಸಿ, ಅವರನ್ನು ಕರೆಸುವುದಕ್ಕೆ ಸಿದ್ಧನಿದ್ದೇನೆ. ಆ ವಿಷಯಗಳು ಸದನಗಳ ಮುಂದೆ ಚರ್ಚೆ ಆಗಬೇಕಿತ್ತು. ಗುಪ್ತವಾದ ವಿಚಾರಗಳ ಬಗ್ಗೆ ಇಲ್ಲಿ ಚರ್ಚೆ ಆಗಬೇಕಿತ್ತು. ಆ ರೈತರಿಗೆ ಅನ್ಯಾಯವಾಗಿದೆ. ಆಗ ಒಂದು ಎಕರೆಗೆ ರೂ. 25 ಲಕ್ಷ, ರೂ. 45 ಲಕ್ಷಗಳನ್ನು ಕೊಡುತ್ತೇವೆ ಎಂದು ಘೋಷಣೆ ಮಾಡಿದ್ದರು. ಆದರೆ ಇವತ್ತು ನಾವು, ಒಂದು ಎಕರೆಗೆ ರೂ. 2.50 ಕೋಟಿಯಿಂದ ರೂ. 3.00 ಕೋಟಿವರೆಗೆ ಪರಿಹಾರ ಕೊಡುತ್ತೇವೆ ಎಂದು ಹೇಳಿ, ರೈತರ ವಿಶ್ವಾಸ ಪಡೆದುಕೊಂಡು ಕೆಲಸವನ್ನು ಮಾಡುತ್ತಿದ್ದೇವೆ. ಬಲವಂತವಾಗಿ ರೈತರಿಂದ ಜಮೀನು ಪಡೆದುಕೊಳ್ಳುವುದಕ್ಕೆ ನಾವು ತಯಾರಿಲ್ಲ. ಬಿಡದಿ ಆಗಿರಬಹುದು, ಹಾರೋಹಳ್ಳಿ ಆಗಿರಬಹುದು ಅಥವಾ ಬೆಂಗಳೂರಿನ ಸುತ್ತಮುತ್ತ ಏನು ಜಾಗವನ್ನು ಸ್ವಾಧೀನಪಡಿಸಿಕೊಳ್ಳಲಾಯಿತೋ ಅದು ಅವರ ಕಾಲದಲ್ಲೇ ಆಗಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಬಿ.ಜೆ.ಪಿ. ಸರ್ಕಾರದ ಕಾಲದಲ್ಲಿ ಎಷ್ಟು ಭೂಸ್ವಾಧೀನವಾಯಿತು ಎನ್ನುವುದೂ ಗೊತ್ತಿದೆ. ಬಿ.ಜೆ.ಪಿ., ಜೆ.ಡಿ.(ಎಸ್) ಸರ್ಕಾರಗಳ ಕಾಲದಲ್ಲೇ ರೈತರಿಗೆ ಅನ್ಯಾಯವಾಗಿದೆ. ನಾವು ಇವತ್ತು ರೈತರಿಗೆ ನ್ಯಾಯ ಒದಗಿಸಿ ಕೊಡಬೇಕಿದೆ. ಕೇಂದ್ರದಲ್ಲಿ ಯು.ಪಿ.ಎ. ಸರ್ಕಾರ ಇದ್ದಾಗ, ಒಂದಕ್ಕೆ ಡಬ್ಬಲ್ ಕೊಡಬೇಕು, ಒಂದಕ್ಕೆ ಮೂರರಷ್ಟು ಕೊಡಬೇಕು, ಒಂದಕ್ಕೆ ನಾಲ್ಕರಷ್ಟು ಕೊಡಬೇಕು ಎಂದು ತೀರ್ಮಾನವಾಯಿತು. ಶ್ರೀಮತಿ ಸೋನಿಯಾ ಗಾಂಧಿಯವರ ನೇತೃತ್ವದಲ್ಲಿ, ಮಾನ್ಯ ಮನಮೋಹನ್ ಸಿಂಗ್‌ರವರ ಕಾಲದಲ್ಲಿ ಇಂತಹ ಐತಿಹಾಸಿಕ ತೀರ್ಮಾನವಾಯಿತು. ಯಾವ ರೈತರು ಭೂಮಿಯನ್ನು ಕಳೆದುಕೊಂಡಿದ್ದಾರೋ, ರಾಜ್ಯದ ಅಭಿವೃದ್ಧಿಗೆ ಯಾರು ಸಹಾಯ ಮಾಡುತ್ತಿದ್ದಾರೋ, ಅಂಥರಿಗೆ ಸಹಾಯ ಮಾಡಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಗಳೆ, ಮತದಾರರ ಪಟ್ಟಿಯ ಪ್ರಕ್ರಿಯೆಯಲ್ಲಿ ಅನ್ಯಾಯವಾಗುತ್ತಿದೆ. ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ, ಪಂಗಡದವರು, ಬಡವರು ಹಾಗೂ ಯಾರು ಅವಿದ್ಯಾವಂತರಾಗಿದ್ದಾರೋ ಅವರ ಮತದಾನದ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ಹೊರಟಿದ್ದಾರೆ. ಈ ವಿಚಾರದಲ್ಲಿ ಸರ್ಕಾರ, ಯಾವುದೇ ಪಕ್ಷದವರಾಗಲಿ, ಮುಂದಕ್ಕೆ ಅವರಿಗೆ ತೊಂದರೆ ಆಗಬಾರದೆಂದು, ಎಸ್.ಐ.ಆರ್. ವಿಚಾರದಲ್ಲಿ ಜನರಲ್ಲಿ ಜಾಗೃತಿಯನ್ನು ಮೂಡಿಸುವ ಕೆಲಸ ಮಾಡುತ್ತಿದೆ. ಪ್ರತಿಯೊಂದು ಹಂತದಲ್ಲೂ ಅವರಿಗೆ ಸಹಾಯ ಮಾಡುತ್ತಿದ್ದೇವೆ. ಇದರ ಬಗ್ಗೆ ಚರ್ಚೆ ಮಾಡಬೇಕು. ಇವತ್ತು ಇಡೀ ದೇಶದಲ್ಲಿ, ಎಸ್.ಐ.ಆರ್. ವಿಚಾರವಾಗಿ, ಮತದಾನದ ಹಕ್ಕನ್ನು ಉಳಿಸಬೇಕು ಎಂದು ಹೋರಾಟ

ಮಾಡುತ್ತಿದೆ ಎಂದರೆ ಅದು ನಮ್ಮ ಸರ್ಕಾರವಾಗಿದೆ. ನನ್ನ ಸರ್ಕಾರ ಇವತ್ತು ಏಳುವರೆ ಕೋಟಿ ಕನ್ನಡಿಗರ ಹಿತವನ್ನು ಕಾಯಲು, ಕೆಲಸ ಮಾಡಲು ಸಂಕಲ್ಪ ಮಾಡಿದೆ. ನನಗೆ ರಾಜಕಾರಣ ಮುಖ್ಯವಲ್ಲ. ಟೀಕೆಗಳನ್ನು ನಾನು ಸ್ವಾಗತ ಮಾಡುತ್ತೇನೆ, ಅದು ತಪ್ಪು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಈ ಮನೆಯ ನಿಯಮಗಳೇನಿವೆ, ನಾವೇನು ಕಾನೂನುಗಳನ್ನು ಮಾಡಿಕೊಂಡಿದ್ದೇವೆಯೋ ಅದರ ಪ್ರಕಾರ ಚರ್ಚೆ ಮಾಡಲಿ. ಅನೇಕ ಸಂದರ್ಭದಲ್ಲಿ ಮಾಧ್ಯಮದವರೂ ಕೂಡ ನಮಗೆ ಮಾರ್ಗದರ್ಶನ ಮಾಡುತ್ತಾರೆ. ಅದನ್ನೂ ಕೂಡ ನಾನು ಸ್ವಾಗತ ಮಾಡುತ್ತೇನೆ. ಈ ನಿಟ್ಟಿನಲ್ಲಿ ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ. ಇವತ್ತೇನೂ ಎನ್.ಡಿ.ಎ. ಪಕ್ಷದ ಸದಸ್ಯರೂ ಎರಡೂ ಮನೆಗಳಲ್ಲಿ ನಡೆದುಕೊಳ್ಳುತ್ತಿರುವ ನೀತಿಯನ್ನು ರಾಜ್ಯದ ಜನ ಕ್ಷಮಿಸುವುದಿಲ್ಲ. ಇವತ್ತೇನು ಇವರ ಸಂಖ್ಯೆ ಇದೆಯೋ ಆ ಸಂಖ್ಯೆ ಮುಂದಿನ ದಿನಗಳಲ್ಲಿ ಅರ್ಧ ಆಗುತ್ತದೆ ಎಂದು ಹೇಳುತ್ತೇನೆ. 150ಕ್ಕೂ ಹೆಚ್ಚು ಸೀಟುಗಳನ್ನು ಪಡೆದು ಮತ್ತೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುತ್ತದೆ ಎನ್ನುವ ವಿಶ್ವಾಸ ಇದೆ. ಸದನಗಳಲ್ಲಿ ಚರ್ಚೆ ಮಾಡದೇ ಕಪಟ ನಾಟಕವಾಡುತ್ತಿದ್ದಾರೆ. ಎಷ್ಟು ಬೇಕಾದರೂ ಹೋರಾಟ ಮಾಡಲಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇವರನ್ನು ಕ್ಷಮಿಸುವುದಕ್ಕೆ ಸಾಧ್ಯವೇ ಇಲ್ಲ. ನಾನು ಏನೋ ಅಂದುಕೊಂಡಿದ್ದೆ, ಮಾನವೀಯತೆಯಿಂದ ನಡೆದುಕೊಳ್ಳುತ್ತಾರೆ ಎಂದುಕೊಂಡಿದ್ದೆ. ಆದರೆ ಇವರಿಗೆ ರಾಜಕಾರಣವೇ ಮುಖ್ಯವಾಗಿದೆ, ರಾಜ್ಯದ ಅಭಿವೃದ್ಧಿ ಮುಖ್ಯವಲ್ಲ ಎಂದು ತೋರಿಸುತ್ತಿದ್ದಾರೆ. ಇವರ ಕಾಲದಲ್ಲಿ ಏನೇನು ನಡೆಯಿತು ಎಂದು ದೊಡ್ಡ ಪಟ್ಟಿಯನ್ನು ಕೊಡಬಲ್ಲೆ. ನಾನು ಇಲ್ಲಿ ರಾಜಕಾರಣಕ್ಕೋಸ್ಕರ ಚರ್ಚೆ ಮಾಡುವುದಿಲ್ಲ. ಜನರ ಹಿತ ಮುಖ್ಯ, ಜನರ ಕಲ್ಯಾಣ ಮುಖ್ಯ, ಯುವಕರ ಭವಿಷ್ಯ ಮುಖ್ಯ, ರೈತರ ಸಮಸ್ಯೆ ಮುಖ್ಯ. ನೆಲ, ಜಲ, ಭಾಷೆ, ಯುವಕರ ಭವಿಷ್ಯ ಮುಖ್ಯ. ಸದನದ ಸಮಯವನ್ನು ಹಾಳು ಮಾಡಿ ರಾಜ್ಯಕ್ಕೆ ದ್ರೋಹ ಬಗೆದಿದ್ದಾರೆ. ಮುಂದಿನ ದಿನಗಳಲ್ಲಿ ಜನ ಸರಿಯಾದ ಉತ್ತರವನ್ನು ಕೊಡುತ್ತಾರೆ ಎನ್ನುವ ಆತ್ಮ ವಿಶ್ವಾಸ ನನಗೆ ಇದೆ. ಮಾನ್ಯ ಸಭಾಪತಿಗಳೆ, ಈ ಸಂದೇಶವನ್ನು ತಮ್ಮ ಮೂಲಕ ರಾಜ್ಯದ ಜನತೆಗೆ ತಿಳಿಸಬಯಸುತ್ತಿದ್ದೇನೆ. ಮಾನ್ಯ ಉಪ ಮುಖ್ಯಮಂತ್ರಿಗಳು ಬರದ ಬಗ್ಗೆ ಪ್ರಸ್ತಾಪ ಮಾಡಿದರು. ನಮ್ಮ ಬೇಡಿಕೆಗಳನ್ನು ತಿಳಿಪಡಿಸಲು ನೀವು ಅನುವು ಮಾಡಿಕೊಟ್ಟಿದ್ದೀರಿ. ನಾನು ತಮಗೆ ವಂದನೆ ಸಲ್ಲಿಸಬಯಸುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಬಾವಿಯೊಳಗೆ ನಿಂತು ಹೇಳುವುದು ಯಾವುದೂ ಕಡತಕ್ಕೆ ಹೋಗುವುದಿಲ್ಲ. ಈಗ ನಾನು ಸಾರಂಶವನ್ನು ಓದುತ್ತೇನೆ.

(ಮುಂದು)

(854) 24-8-2026 6.30 ಡಿಎಸ್-ವಿಕೆ (ಸಭಾಪತಿಯವರ ಉಪಸ್ಥಿತಿ)

## 26. ಸಾರಾಂಶ

**ಸಭಾಪತಿಯವರು:-** ವಿಧಾನ ಪರಿಷತ್ತಿನ 159ನೇ ಅಧಿವೇಶನದ ಉಪವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನವು ದಿನಾಂಕ 13.08.2026ರಿಂದ 24.08.2026ರವರೆಗೆ ಒಟ್ಟು 08 ದಿನಗಳು ಅಂದರೆ, 25 ಗಂಟೆ 30 ನಿಮಿಷಗಳ ಕಾಲ ನಡೆಸಲಾಗಿರುತ್ತದೆ.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಒಟ್ಟು 15 ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ದಿನಾಂಕ:14.08.2026 ರಂದು ನಡೆದ ವಿಧಾನ ಪರಿಷತ್ತಿನ ಸಭಾಪತಿ ಸ್ಥಾನದ ಚುನಾವಣೆಯಲ್ಲಿ ಮಾನ್ಯ ಶಾಸಕರಾದ ನನ್ನನ್ನು (ಶ್ರೀ ಸಲೀಂ ಅಹ್ಮದ್) ಸಭಾಪತಿಯವರನ್ನಾಗಿ ಚುನಾಯಿಸಲಾಯಿತು.

ದಿನಾಂಕ:18.08.2026 ರಂದು ನಡೆದ ವಿಧಾನ ಪರಿಷತ್ತಿನ ಉಪ ಸಭಾಪತಿ ಸ್ಥಾನದ ಚುನಾವಣೆಯಲ್ಲಿ ಮಾನ್ಯ ಶಾಸಕರಾದ ಡಾ: ಉಮಾಶ್ರೀ ಅವರನ್ನು ಉಪ ಸಭಾಪತಿಯವರನ್ನಾಗಿ ಸರ್ವಾನುಮತದಿಂದ ಚುನಾಯಿಸಲಾಯಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು 1, 2 ಮತ್ತು 3ನೇ ಪಟ್ಟಿಗಳನ್ನು ಮಂಡಿಸಲಾಯಿತು.

2026-27ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತನ್ನು ಒಪ್ಪಿಸಲಾಯಿತು.

2025-26ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ 44ನೇ ವರದಿ, ಕರ್ನಾಟಕ ವಿಧಾನಮಂಡಲದ ಸಾರ್ವಜನಿಕ ಉದ್ದಿಮೆಗಳ ಸಮಿತಿಯ 139ನೇ ಹಾಗೂ 140ನೇ ವರದಿ, ವಿಧಾನ ಪರಿಷತ್ತಿನ 2025-26ನೇ ಸಾಲಿನ ಹಕ್ಕುಬಾಧ್ಯತಾ ಸಮಿತಿಯ 105ನೇ ವರದಿ, ರಾಜ್ಯದಲ್ಲಿ ಖಾಸಗಿ ಅನುದಾನಿತ/ಅನುದಾನ ರಹಿತ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣಕ್ಕೆ

ಸಂಬಂಧಿಸಿದಂತೆ ಹೊರಡಿಸಿರುವ ಸರ್ಕಾರಿ ಆದೇಶ ಸಂಖ್ಯೆ:ಇಡಿ/709/ಪಿಜಿಸಿ/2017, ದಿನಾಂಕ:08.03.2018ರಲ್ಲಿ ಉಲ್ಲೇಖಿಸಲಾಗಿರುವ ಶಾಲೆಗಳ ಮಾನ್ಯತೆ ನವೀಕರಣದ ನಿಯಮಗಳನ್ನು ಸಡಿಲಿಸಿ ವಿನಾಯಿತಿ ನೀಡುವ ಸಂಬಂಧ ಪರಿಶೀಲಿಸಿ, ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಮಧ್ಯಂತರ ವರದಿ, 2025-26ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ 45ನೇ ವರದಿ ಹಾಗೂ ಕರ್ನಾಟಕ ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ 2025-26ನೇ ಸಾಲಿನ 2ನೇ ವರದಿಗಳನ್ನು ಒಪ್ಪಿಸಲಾಯಿತು.

ಖಂಡನಾ ನಿರ್ಣಯವನ್ನು ಸದನದಲ್ಲಿ ಮಂಡಿಸಿ ಅಂಗೀಕರಿಸಲಾಯಿತು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ಹಾಗೂ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ಚುನಾವಣೆ ನಡೆಸುವ ಬದಲು ಮಾನ್ಯ ಶಾಸಕರನ್ನು ನಾಮನಿರ್ದೇಶಿಸಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಬಗ್ಗೆ ಪ್ರಸ್ತಾವವನ್ನು ಮಂಡಿಸಿ, ಸದನದ ಸಹಮತಿಯನ್ನು ಪಡೆಯಲಾಯಿತು.

ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಗೆ, ಪ್ರೌಢ ಶಾಲೆಯಿಂದ ಪದವಿ ಪೂರ್ವ ಕಾಲೇಜುಗಳಿಗೆ ಪದೋನ್ನತಿ ಹೊಂದಿದ ಶಿಕ್ಷಕರುಗಳು ಹಾಗೂ 10, 15, 20, 25 ಮತ್ತು 30 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿ ಸೌಲಭ್ಯಗಳನ್ನು ಪಡೆದಿರುವ ಶಿಕ್ಷಕರುಗಳ ನಡುವಿನ ವೇತನ ತಾರತಮ್ಯವನ್ನು ಸರಿಪಡಿಸುವ ಕುರಿತು ರಚಿಸಲಾಗಿರುವ ವಿಶೇಷ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ:02.06.2026ರಿಂದ 06 ತಿಂಗಳುಗಳ ಕಾಲಾವಕಾಶವನ್ನು ಹಾಗೂ ರಾಜ್ಯದಲ್ಲಿ 2020-21ನೇ ಸಾಲಿನಲ್ಲಿ ಹೊಸದಾಗಿ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳಿಗೆ ಮೂಲ ಸೌಕರ್ಯಗಳಿಲ್ಲದಿದ್ದರೂ ಅನುಮತಿ ನೀಡಿ, ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಅವರು ಹೊರಡಿಸಿರುವ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವ ವಿಷಯವನ್ನು ಪರಿಶೀಲಿಸಿ, ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯ ಅವಧಿಯನ್ನು ದಿನಾಂಕ:14.07.2026ರಿಂದ ಮುಂದಿನ 12 ತಿಂಗಳವರೆಗೆ ಕಾಲಾವಕಾಶವನ್ನು ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸಲಾಗಿರುವ ಪ್ರಸ್ತಾವವನ್ನು ಸದನದಲ್ಲಿ ಮಂಡಿಸಿ, ಸದನದ ಸಹಮತಿಯನ್ನು ಪಡೆಯಲಾಯಿತು.

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 16 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ ಹಾಗೂ ಒಂದು ವಿಧೇಯಕವನ್ನು ಹಿಂಪಡೆಯಲಾಗಿರುತ್ತದೆ.

ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 1,210 ಪ್ರಶ್ನೆಗಳನ್ನು ಸ್ವೀಕರಿಸಲಾಗಿರುತ್ತದೆ. ಅದರಲ್ಲಿ 120 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಹಾಗೂ 1,090 ಪ್ರಶ್ನೆಗಳನ್ನು ಚುಕ್ಕೆ ರಹಿತ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 84 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಗಿರುತ್ತದೆ. ಲಿಖಿತ ಮೂಲಕ ಉತ್ತರಿಸುವ ಒಟ್ಟು 610 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 72ರಡಿಯಲ್ಲಿ 105 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 07 ಸೂಚನೆಗಳಿಗೆ ಸದನದಲ್ಲಿ ಚರ್ಚಿಸಿ ಉತ್ತರಿಸಲಾಯಿತು.

ನಿಯಮ 330ರಡಿಯಲ್ಲಿ 72 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 03 ಸೂಚನೆಗಳಿಗೆ ಸದನದಲ್ಲಿ ಚರ್ಚಿಸಿ ಉತ್ತರಿಸಲಾಯಿತು.

ಶೂನ್ಯ ವೇಳೆ ಪ್ರಸ್ತಾವನೆಯ ಒಟ್ಟು 34 ಸೂಚನೆಗಳ ಪೈಕಿ 04 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 10 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಉಪ ಮುಖ್ಯಮಂತ್ರಿಗಳಿಗೆ, ಮಾನ್ಯ ಸಭಾನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ ಹಾಗೂ ಎಲ್ಲಾ ಶಾಸಕರುಗಳಿಗೆ, ಪತ್ರಿಕಾ ಹಾಗೂ ಮಾಧ್ಯಮ ವರದಿಗಾರರಿಗೆ, ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರ ವರ್ಗದವರಿಗೆ ಮತ್ತು ಸರ್ಕಾರದ ಎಲ್ಲಾ ಅಧಿಕಾರಿ/ನೌಕರ ವೃಂದದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಣೆ ಮಾಡುತ್ತೇನೆ.

(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಸರ್ಕಾರದ ವಿರುದ್ಧ ನಿರಂತರವಾಗಿ ಘೋಷಣೆಗಳನ್ನು ಕೂಗುತ್ತಿದ್ದರು)

**(ಸದನವು ರಾಷ್ಟ್ರಗೀತೆಯೊಂದಿಗೆ ಸಂಜೆ 6 ಗಂಟೆ 36 ನಿಮಿಷಕ್ಕೆ ಅನಿರ್ದಿಷ್ಟ ಕಾಲಾವಧಿಯವರೆಗೆ ಮುಂದೂಡಲ್ಪಟ್ಟಿತು)**

**[XXX] ಈ ಚಿಹ್ನೆಯು ಮಾನ್ಯ ಸಭಾಪತಿಯವರು ಕಡತದಿಂದ ತೆಗೆದುಹಾಕಲಾದ ಪದಗಳು ಎಂಬುದನ್ನು ಸೂಚಿಸುತ್ತದೆ.**